ಶುಕ್ರವಾರ, ಜೂನ್ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 176 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸಿನಿಮಾಟೋಗ್ರಫಿ ಕಾಯ್ದೆ 1952ಕ್ಕೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ರೂಪಿಸಿರುವ ಕರಡು ಮಸೂದೆಯ ಸುತ್ತಮುತ್ತ...



ಆಳ-ಅಗಲ ವಿರಾಟ್ ಕೊಹ್ಲಿ ಪಟ್ಟಕ್ಕೆ ಸಂಚಕಾರ?

12ನೇ ತರಗತಿ: ಜುಲೈ 31ರೊಳಗೆ ಫಲಿತಾಂಶ ಪ್ರಕಟಿಸಿ - 'ಸುಪ್ರೀಂ' 11

ಚುನಾವಣೆಗೆ ನಿಲ್ಲುವ ಆಲೋಚನೆ ಇಲ್ಲ: ಚೇತನ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,699 ▲	15,790 ▲	₹48,560 (ಬೆಂಗಳೂರು)	₹70,100 (ಬೆಂಗಳೂರು)	74.18 ▲

ರಾಜ್ಯ ಕೋವಿಡ್ ಅಂಕಿ–ಅಂಶ

28,23,444 ▲	ಒಟ್ಟು ಸೋಂಕಿತರು (28,19,465 ನಿನ್ನೆಯ ವಿವರ)
1,10,523 ▼	ಸಕ್ರಿಯ ಪ್ರಕರಣಗಳು
26,78,437 ▲	ಗುಣಮುಖರಾದವರು
34,425 ▲	ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	3,979	▼
ಗುಣಮುಖ	9,768	▲
ಸಾವು	138	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಒಳ ಪುಟ

ಕೋವಿಡ್: ದೃಢ ಪ್ರಮಾಣ ಶೇ 2.46ಕ್ಕೆ ಇಳಿಕೆ 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕಾಂಗ್ರೆಸ್‌ನಲ್ಲೂ 'ಸಿ.ಎಂ' ರಗಳೆ

ನಾಯಕರ ಮಧ್ಯೆ ಶುರುವಾಯ್ತು ಪೈಪೋಟಿ • ಸುರ್ಜೇವಾಲಾ ಎಚ್ಚರಿಕೆಗೆ ಸಡ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತಾರೂಢ ಬಿಜೆಪಿಯಲ್ಲಿ ನಾಯಕತ್ವ ಗೊಂದಲದ ಬಿಸಿ ಆರಿಲ್ಲ. ಅತ್ತ ವಿರೋಧ ಪಕ್ಷವಾದ ಕಾಂಗ್ರೆಸ್‌ನಲ್ಲಿ ಮೇಲ್ನೋಟಕ್ಕಾದರೂ ಒಮ್ಮನಸ್ಸಿನಿಂದ ಕೂಡಿ ಕೆಲಸ ಮಾಡುತ್ತಿದ್ದಾರೆ ಎಂದು ತೋರಿಸಿಕೊಳ್ಳುತ್ತಿದ್ದ ನಾಯಕರ ಮಧ್ಯದ ಪೈಪೋಟಿ ಬೀದಿಗೆ ಬಂದಿದೆ.

ವಿಧಾನಸಭೆ ಚುನಾವಣೆಗೆ ಇನ್ನೂ 1 ವರ್ಷ 10 ತಿಂಗಳು ಬಾಕಿ ಇರುವಾಗಲೇ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬ ಕಿಚ್ಚು ಕಾಂಗ್ರೆಸ್‌ನ ಮನೆಯಲ್ಲಿ ಒಡಕಿನ ಧ್ವನಿ ಹೊರಡಿಸಿದ್ದು, ನಿತ್ಯದ ರಗಳೆಯಾಗಿ ಮಾರ್ಪಟ್ಟಿದೆ.

ಸಿದ್ದರಾಮಯ್ಯ ಮತ್ತೆ ಮುಖ್ಯ-ಮಂತ್ರಿಯಾಗಬೇಕು ಎಂದು ಕೆಲವು ಶಾಸಕರು ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ, 'ಭವಿಷ್ಯದ ನಾಯಕತ್ವ'ಕ್ಕೆ ಈಗಲೇ ರೂಪು ನೀಡಲು ಶುರುವಿಟ್ಟಿದ್ದಾರೆ. ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಎಚ್ಚರಿಕೆ ನೀಡಿದ ನಂತರವೂ ಸಿದ್ದರಾಮಯ್ಯ ಪರ ಲಾಬಿ ಮಾಡುವವರು ಸುಮ್ಮನಾಗಿಲ್ಲ; ಅದರ ಬದಲು ಮತ್ತಷ್ಟು ಶಾಸಕರು ಧ್ವನಿ ಸೇರಿಸಲು ಆರಂಭಿಸಿದ್ದಾರೆ. ಇದು ಕಾಂಗ್ರೆಸ್‌ನಲ್ಲಿ ಎಲ್ಲೂ ಸರಿ ಇಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸತೊಡಗಿದೆ.

'ಭಾವಿ ಮುಖ್ಯಮಂತ್ರಿ' ಎಂದು ಶಾಸಕರು ಬಿಂಬಿಸುತ್ತಿರುವುದು ಅವರ ವೈಯಕ್ತಿಕ ಅಭಿಪ್ರಾಯ' ಎಂದಷ್ಟೇ ಹೇಳಿ, ಆ ಧ್ವನಿ ಮತ್ತಷ್ಟು ಗಟ್ಟಿಯಾಗುವಂತೆ ಮಾಡಿದ್ದ ಸಿದ್ದರಾಮಯ್ಯ, ಇದು ತಾರಕಕ್ಕೇರುವುದು ಗೊತ್ತಾಗುತ್ತಿದ್ದಂತೆ, 'ಇಂಥ ಹೇಳಿಕೆ ಕೊಡಬೇಡಿ' ಎಂದು ಶಾಸಕರಲ್ಲಿ ಮನವಿ ಮಾಡಿದ್ದಾರೆ.

'ಶಾಸಕರ ಹೇಳಿಕೆಗಳನ್ನು ಶಾಸಕಾಂಗ ಪಕ್ಷದ ನಾಯಕರು ನೋಡಿಕೊಳ್ಳುತ್ತಾರೆ. ಅವರು ನೋಡಿಕೊಳ್ಳದಿದ್ದರೆ, ಆ ಬಗ್ಗೆ ಗಮನ ಹರಿಸಲು ಕಾಂಗ್ರೆಸ್ ಪಕ್ಷ ಬದುಕಿದೆ' ಎಂದು ಪ್ರತಿಪಾದಿಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಈ ರಗಳೆ ಬಗೆಹರಿಸುವ ಹೊಣೆಯನ್ನು ಸಿದ್ದರಾಮಯ್ಯನವರ ಹೆಗಲಿಗೆ ಹಾಕಿದ್ದರು.ಈ ಬೆನ್ನಲ್ಲೇ, ಯಾರೂ ಮಾತನಾಡಬೇಡಿ ಎಂದು ಸಿದ್ದರಾಮಯ್ಯನವರೇ ಹೇಳಿದ್ದಾರೆ.

'ಮುಂದಿನ ಚುನಾವಣೆಯಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಮತ್ತೆ ಮತ್ತೆ ಸ್ಪಷ್ಟಪಡಿಸಿದರೂ, ಈಗಿನಿಂದಲೇ 'ನಾಯಕನ ಪ್ರತಿಷ್ಠಾಪನೆ'ಗೆ ಸಿದ್ದರಾಮಯ್ಯ ಬೆಂಬಲಿಗರು ಮುಂದಾಗಿದ್ದಾರೆ' ಎಂಬ ಅಭಿಪ್ರಾಯ ಕಾಂಗ್ರೆಸ್ ವಲಯದಲ್ಲಿ ಬಲಗೊಳ್ಳುತ್ತಿದೆ.

6ನೇ ಪುಟ ನೋಡಿ

'ಮುಂದಿನ ಮುಖ್ಯಮಂತ್ರಿ' ಹೇಳಿಕೆ ಬೇಡ: ಸಿದ್ದರಾಮಯ್ಯ

ಬೆಂಗಳೂರು: ಮುಂದಿನ ಮುಖ್ಯಮಂತ್ರಿ ಕುರಿತು ಇನ್ನು ಮುಂದೆ ಯಾರೊಬ್ಬರೂ ಬಹಿರಂಗ ಹೇಳಿಕೆ ನೀಡಬಾರದು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶಾಸಕರಲ್ಲಿ ಮನವಿ ಮಾಡಿದ್ದಾರೆ.

'ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷ ಬಾಕಿ ಇದೆ. ಹೀಗಾಗಿ, ಮುಂದಿನ ಮುಖ್ಯಮಂತ್ರಿ ಎಂದು ಈಗಲೇ ಹೇಳಿಕೆ ನೀಡಬಾರದು. ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಚುನಾವಣೆ ಬಳಿಕ ಶಾಸಕರ ಅಭಿಪ್ರಾಯ ಪಡೆದು ಹೈಕಮಾಂಡ್ ನಿರ್ಧರಿಸುತ್ತದೆ. ಹೈಕಮಾಂಡ್ ತೀರ್ಮಾನವೇ ಅಂತಿಮ' ಎಂದು ಹೇಳಿದ್ದಾರೆ.

ಸೋತವರೂ ಮುಖ್ಯಮಂತ್ರಿ ಆಗಿದ್ದಾರೆ: ಡಿಕೆಶಿ

ಬೆಂಗಳೂರು: 'ಚುನಾವಣೆಗೆ ಸ್ಪರ್ಧಿಸುವ 224 ಜನರಲ್ಲಿ ಗೆಲ್ಲುವವರ ಜತೆಗೆ, ಸೋತವರು ಕೂಡ ಮುಖ್ಯಮಂತ್ರಿ ಆಗಿರುವುದನ್ನು ರಾಜ್ಯ ರಾಜಕೀಯದ ಇತಿಹಾಸದಲ್ಲಿ ನೋಡಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ದೇವರಾಜ ಅರಸು ಅವರು ಚುನಾವಣೆಯಲ್ಲಿ ಗೆದ್ದಿರಲಿಲ್ಲ, ಆದರೂ ಮುಖ್ಯಮಂತ್ರಿ ಆಗಲಿಲ್ಲವೇ. ರಾಮಕೃಷ್ಣ ಹೆಗಡೆ ಅವರು ಚುನಾವಣೆಗೆ ಸ್ಪರ್ಧಿಸಿರಲಿಲ್ಲ, ಆದರೂ ಮುಖ್ಯಮಂತ್ರಿ ಆಗಲಿಲ್ಲವೇ' ಎಂದು ಪ್ರಶ್ನಿಸಿದರು.

6ನೇ ಪುಟ ನೋಡಿ

ಕ್ಷೇತ್ರ ಮರುವಿಂಗಡಣೆ ನಂತರ ಚುನಾವಣೆ

ಕಾಶ್ಮೀರ ನಾಯಕರಿಗೆ ಭರವಸೆ

ಕ್ಷೇತ್ರಗಳ ಮರುವಿಂಗಡಣೆ ತ್ವರಿತವಾಗಿ ಆದರೆ, ಚುನಾವಣೆಯೂ ಶೀಘ್ರದಲ್ಲೇ ನಡೆಯಲಿದೆ. ಚುನಾಯಿತ ಸರ್ಕಾರ ಇದ್ದರೆ ಅಭಿವೃದ್ಧಿಗೆ ವೇಗ ದೊರೆಯುತ್ತದೆ

ನರೇಂದ್ರ ಮೋದಿ
ಪ್ರಧಾನಿ

ಇಲ್ಲಿ ಪರಸ್ಪರ ವಿಶ್ವಾಸ ಕಳೆದುಹೋಗಿದೆ. ಜಮ್ಮು-ಕಾಶ್ಮೀರಕ್ಕೆ ಮರಳಿ ರಾಜ್ಯದ ಸ್ಥಾನಮಾನ ನೀಡುವುದರಿಂದ ವಿಶ್ವಾಸವನ್ನು ಮರುಸ್ಥಾಪಿಸುವ ಕೆಲಸ ಆರಂಭವಾಗಬೇಕು

ಫಾರೂಕ್ ಅಬ್ದುಲ್ಲಾ
ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ

ನವದೆಹಲಿ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಯ ನಂತರ ಚುನಾವಣೆ ನಡೆಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ' ಎಂದು ಪೀಪಲ್ಸ್ ಕಾನ್ಫರೆನ್ಸ್ ಮುಖಂಡ ಮುಜಫ್ಫರ್ ಹುಸೇನ್ ಬೇಗ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಗುರುವಾರ ನಡೆದ ಜಮ್ಮು ಮತ್ತು ಕಾಶ್ಮೀರದ ಸರ್ವಪಕ್ಷಗಳ ಮುಖಂಡರ ಸಭೆಯ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ಅವರು ಈ ಮಾಹಿತಿ ನೀಡಿದ್ದಾರೆ.

ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ವಿವಿಧ ರಾಜಕೀಯ ಪಕ್ಷಗಳ 14 ನಾಯಕರು ಭಾಗಿಯಾಗಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಬಾಲ್ ಸಹ ಇದ್ದರು. ಮೂರೂವರೆ ಗಂಟೆ ಸಭೆ ನಡೆಯಿತು.

'ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಮರಳಿ ನೀಡಬೇಕು ಎಂದು ಗುಪ್ಕಾರ್ ಕೂಟದ ಸದಸ್ಯರೂ ಸೇರಿದಂತೆ ಸಭೆಯಲ್ಲಿ ಭಾಗಿಯಾಗಿದ್ದ ಎಲ್ಲಾ ರಾಜಕೀಯ ಪಕ್ಷಗಳ ನಾಯಕರೂ ಒತ್ತಾಯಿಸಿದರು. ಎಲ್ಲರ ಮಾತನ್ನೂ ಪ್ರಧಾನಿ ಬಹಳ ಗಮನಕೊಟ್ಟು ಕೇಳಿಸಿಕೊಂಡರು' ಎಂದು ಮಾಹಿತಿ ನೀಡಿದ್ದಾರೆ.

'ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಈ ಸಭೆಯ ಉದ್ದೇಶವಾಗಿತ್ತು. ಇದಕ್ಕಾಗಿ ವಿಧಾನಸಭಾ ಚುನಾವಣೆ ನಡೆಯಬೇಕು. ಅದಕ್ಕೂ ಮುನ್ನ, ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ನಡೆಯಬೇಕು. ಇದಕ್ಕೆ ಎಲ್ಲರೂ ಸಹಕಾರ ನೀಡಿ ಎಂದು ಪ್ರಧಾನಿ ಮನವಿ ಮಾಡಿಕೊಂಡರು. 14 ನಾಯಕರೂ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದೇವೆ' ಎಂದು ಹುಸೇನ್ ಬೇಗ್ ತಿಳಿಸಿದ್ದಾರೆ. ಚುನಾವಣೆ ನಡೆಸುವುದಕ್ಕೆ ಕೇಂದ್ರ ಸರ್ಕಾರವು ಯಾವುದೇ ಕಾಲಮಿತಿ ಘೋಷಿಸಿಲ್ಲ.

ಜಿಲ್ಲಾಧಿಕಾರಿಗಳ ಸಭೆ: ಕ್ಷೇತ್ರಗಳ ಮರುವಿಂಗಡಣಾ ಆಯೋಗವು ಬುಧವಾರ ಜಮ್ಮು ಮತ್ತು ಕಾಶ್ಮೀರದ ಎಲ್ಲಾ 20 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಸಭೆ ನಡೆಸಿದೆ. ವಿಧಾನಸಭಾ ಕ್ಷೇತ್ರಗಳ ಸಮಗ್ರ ಮಾಹಿತಿ ನೀಡುವಂತೆ ಸೂಚಿಸಿದೆ.

ಇನ್ನೊಂದು ಸುದ್ದಿ 9

ಪ್ರವಾಸೋದ್ಯಮ: ರಿಯಾಯಿತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ಸಂಕಷ್ಟದಲ್ಲಿರುವ ಪ್ರವಾಸೋದ್ಯಮ ಕ್ಷೇತ್ರಕ್ಕೆ ಚೈತನ್ಯ ತುಂಬಲು ರಾಜ್ಯ ಸರ್ಕಾರ ಕೆಲವು ರಿಯಾಯಿತಿಗಳನ್ನು ಪ್ರಕಟಿಸಿದೆ.

ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಪಾರ್ಕ್‌ಗಳಿಗೆ ಈ ಸಾಲಿಗೆ (2021–21) ಆಸ್ತಿ ತೆರಿಗೆ ಪಾವತಿಯಲ್ಲಿ ಶೇ 50 ರಷ್ಟು ವಿನಾಯಿತಿ ನೀಡಲಾಗಿದೆ. ಅಲ್ಲದೆ, ಏಪ್ರಿಲ್ ಮತ್ತು ಜೂನ್ ತಿಂಗಳ ವಿದ್ಯುಚ್ಛಕ್ತಿ ಶುಲ್ಕವನ್ನೂ ಮನ್ನಾ ಮಾಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ತಿಳಿಸಿದ್ದಾರೆ.

ಯೋಗೇಶ್ವರ್

ಅಬಕಾರಿ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳಲ್ಲಿ ಶೇ 50 ರಷ್ಟು ಮೊತ್ತವನ್ನು ಪಾವತಿಸುವುದು ಮತ್ತು ಉಳಿದ ಶೇ 50 ರಷ್ಟು ಮೊತ್ತವನ್ನು ಈ ವರ್ಷದ ಡಿಸೆಂಬರ್ 31 ರೊಳಗೆ ಪಾವತಿಸಲು ಆರು ತಿಂಗಳ ಕಾಲಾವಕಾಶ ನೀಡಲಾಗಿದೆ.

ಈಗಾಗಲೇ ಪ್ರಕಟಿಸಿರುವಂತೆ ನೋಂದಣಿ ಮಾಡಿಕೊಂಡಿರುವ ಪ್ರತಿ ಪ್ರವಾಸಿ ಮಾರ್ಗದರ್ಶಿಗೆ ₹5,000 ಪರಿಹಾರದ ಮೊತ್ತವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

'ಈ ಎಲ್ಲ ನೆರವಿನಿಂದಾಗಿ ಪ್ರವಾಸೋದ್ಯಮ ಕ್ಷೇತ್ರ ಮತ್ತೆ ಚೇತರಿಕೆ ಕಾಣಲು ಸಾಧ್ಯವಿದೆ. ಇದರಿಂದ ಲಕ್ಷಾಂತರ ಉದ್ಯೋಗಿಗಳಿಗೆ ಅನುಕೂಲವಾಗಲಿದ್ದು, ಆರ್ಥಿಕ ವಹಿವಾಟು ಹೆಚ್ಚಲು ಸಹಾಯವಾಗುತ್ತದೆ' ಎಂದು ರಾಜ್ಯ ಪ್ರವಾಸೋದ್ಯಮ ಸೊಸೈಟಿ ಹೇಳಿದೆ.

ಜಿಯೊದಿಂದ ಅಗ್ಗದ ಬೆಲೆಯ ಸ್ಮಾರ್ಟ್‌ಫೋನ್

ಬೆಂಗಳೂರು/ನವದೆಹಲಿ (ಪಿಟಿಐ): ಜಿಯೊ ಮತ್ತು ಗೂಗಲ್ ಕಂಪನಿ ಒಟ್ಟಾಗಿ ಅಭಿವೃದ್ಧಿಪಡಿಸಿರುವ, ಕೈಗೆಟಕುವ ದರದ ಸ್ಮಾರ್ಟ್‌ಫೋನ್ 'ಜಿಯೊಫೋನ್ ನೆಕ್ಸ್ಟ್' ಅನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಗುರುವಾರ ಅನಾವರಣ ಮಾಡಿದರು.

ಈ ಸ್ಮಾರ್ಟ್‌ಫೋನ್ ಸೆಪ್ಟೆಂಬರ್ 10 ರಿಂದ ಮಾರುಕಟ್ಟೆಯಲ್ಲಿ ಲಭ್ಯವಾಗಲಿದೆ. ಇದು ಜಗತ್ತಿನ ಅತ್ಯಂತ ಕಡಿಮೆ ಬೆಲೆಯ ಸ್ಮಾರ್ಟ್‌ಫೋನ್ ಆಗಿರಲಿದೆ ಎಂದು ಅಂಬಾನಿ ಅವರು ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ಹೇಳಿದರು.

'ಈ ಸ್ಮಾರ್ಟ್‌ಫೋನ್‌ನಲ್ಲಿ ಅತ್ಯಾಧುನಿಕ ಸೌಲಭ್ಯಗಳು ಇರಲಿವೆ. ಧ್ವನಿ ಸಹಾಯಕ, ಭಾಷಾಂತರ ಸೌಲಭ್ಯ ಕೂಡ ಇರಲಿವೆ' ಎಂದು ಅವರು ತಿಳಿಸಿದರು. ಗೂಗಲ್ ಕಂಪನಿಯು ಜಿಯೊ ಪ್ಲಾಟ್‌ಫಾರ್ಮ್ಸ್‌ನಲ್ಲಿ ₹ 33 ಸಾವಿರ ಕೋಟಿ ಹೂಡಿಕೆ ಮಾಡಿ, ಶೇಕಡ 7.7ರಷ್ಟು ಷೇರುಗಳನ್ನು ಖರೀದಿಸುವ ಘೋಷಣೆಯನ್ನು ಹಿಂದಿನ ವರ್ಷ ಮಾಡಿತ್ತು.

ಹೊಸ ಸ್ಮಾರ್ಟ್‌ಫೋನ್ ಬಗ್ಗೆ ಗೂಗಲ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸುಂದರ್ ಪಿಚೈ ಅವರು, 'ನಮ್ಮ ತಂಡವು ಈ ಫೋನ್‌ಗಾಗಿಯೇ ಆ್ಯಂಡ್ರಾಯ್ಡ್‌ನಲ್ಲಿ ಕೆಲವು ಬದಲಾವಣೆಗಳನ್ನು ತಂದಿದೆ. ಅನುವಾದ ಸೌಲಭ್ಯವನ್ನೂ ಇದು ನೀಡಲಿದೆ. ಒಳ್ಳೆಯ ಕ್ಯಾಮೆರಾ, ಆ್ಯಂಡ್ರಾಯ್ಡ್‌ನ ಹೊಸ ಅಪ್ಡೇಟ್‌ಗಳು ಇದರಲ್ಲಿ ಇರಲಿವೆ. ಇದು ಭಾರತಕ್ಕಾಗಿಯೇ ತಯಾರಾದ, ಇಂಟರ್ನೆಟ್ ಸಂಪರ್ಕವನ್ನು ಮೊದಲ ಬಾರಿಗೆ ಕಾಣುತ್ತಿರುವವರಿಗೆ ಹೊಸ ಅವಕಾಶಗಳನ್ನು ತೆರೆದಿರಿಸುವಂಥದ್ದು' ಎಂದು ಹೇಳಿದರು.

MARUTI SUZUKI

NEXA

NEXA IS NOW OPEN.
A safe experience awaits you.

At NEXA, we create experiences around the needs of our customers. That's why we want to assure you that your safety is our priority. We're strictly adhering to the protocols recommended by the government. So that nothing stops you from enjoying experiences that inspire.
Book your showroom appointment today.

NEXA SAFETY FIRST

Scan the QR Code to experience the world of NEXA.

CREATE. INSPIRE.

ROBUST SAFETY MEASURES:

Disinfectant dispensers are installed.

Regular cleaning of showrooms and equipment with disinfectants.

Robust measures for test drives.

Every employee wears a face mask and a pair of gloves.

A contactless delivery of car will be arranged during this period.

Disclaimer: Image is for representation purpose only.

Contact us at
1800-200-[6392]
1800-102-[NEXA]
www.nexaexperience.com
NOW YOU CAN ALSO BOOK ONLINE

NORTH BANGALORE: NEXA YELAHANKA (MANDOVI MOTORS PVT. LTD. PH: 9916805500), NEXA HEBBAL ORR (VARUN MOTORS PVT. LTD. PH: 9513838777),
WEST BANGALORE: NEXA NAGARBHAVI (BIMAL AUTO AGENCY PH: 9066199461), NEXA RAJAJINAGAR (VARUN MOTORS PVT. LTD. PH: 8884000042),
NEXA RR NAGAR (KALYANI MOTORS PH: 9590990011), EAST BANGALORE: NEXA ORR MARATHALLI (BIMAL AUTO AGENCY PH: 9066199461),
NEXA BANASWADI (KALYANI MOTORS PH: 9590990011), CENTRAL BANGALORE: NEXA MUSEUM ROAD (PRATHAM MOTORS PH: 9880006006),
NEXA PALACE (MANDOVI MOTORS PH: 9880912425), SOUTH BANGALORE: NEXA ELECTRONIC CITY (SURAKSHAA CAR CARE PVT. LTD. PH: 80-25732229, 8884442229),
NEXA JP NAGAR (KALYANI MOTORS PH: 9590990011), NEXA SARJAPUR ROAD (PRATHAM MOTORS PH: 9008455550),
NEXA KORAMANGALA (KATARIA AUTOMOBILES PVT. LTD. PH: 7574002115, 9148146742), TUMKUR: NEXA SIRA ROAD (SAKETH AUTOMOBILES PH: 9900500051, 8884433923).

Scan to know more.
SMART FINANCE
AN ONLINE END-TO-END CAR FINANCE SOLUTION
Pre-approved loans
Custom generated loans
Multiple financiers
Loan status tracking

ಶುಕ್ರವಾರದ ಉಷ್ಣಾಂಶ: 29° ಗರಿಷ್ಠ, 21° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಅಲ್ಲಲ್ಲಿ ಸಾಧಾರಣ ಮಳೆ ಸಾಧ್ಯತೆ.

ಶನಿವಾರ	ಭಾನುವಾರ	ಸೋಮವಾರ
28° 20°	28° 21°	27° 20°

ಕರೆ ಕದ್ದಾಲಿಕೆ; ಎಸಿಪಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಅರವಿಂದ ಬೆಲ್ಲದ ಕರೆ ಕದ್ದಾಲಿಕೆ ಪ್ರಕರಣದ ವಿಚಾರಣೆಯನ್ನು ಶೇಷಾದ್ರಿಪುರ ಉಪವಿಭಾಗದ ಎಸಿಪಿ ಎಂ.ಪಿ. ಪೃಥ್ವಿ ನೇತೃತ್ವದ ತಂಡ ಕೈಗೆತ್ತಿಕೊಂಡಿದ್ದು, ಗುರುವಾರ ಹಲವೆಡೆ ಸಂಚರಿಸಿ ಮಾಹಿತಿ ಕಲೆಹಾಕಿತು.

ಆರೋಪದ ಬಗ್ಗೆ ಕೆಲ ಪೂರಕ ಮಾಹಿತಿ ಒದಗಿಸುವಂತೆ ಅರವಿಂದ ಬೆಲ್ಲದ ಅವರಿಗೆ ತಂಡ ತಿಳಿಸಿತ್ತು. ಆದರೆ, ತಂಡದ ಎದುರು ಬೆಲ್ಲದ ಗುರುವಾರ ಹಾಜರಾಗಲಿಲ್ಲ. ಶುಕ್ರವಾರ ಹಾಜರಾಗುವ ಸಾಧ್ಯತೆ ಇದೆ.

'ಅರವಿಂದ ಬೆಲ್ಲದ ನೀಡಿರುವ ದೂರಿನಲ್ಲಿರುವ ಸಂಗತಿಗಳಲ್ಲಿ ಕೆಲ ಗೊಂದಲಗಳು ಸೃಷ್ಟಿಯಾಗಿವೆ. ಈ ಬಗ್ಗೆ ಬೆಲ್ಲದ ಅವರ ಪ್ರತಿಕ್ರಿಯೆ ಪಡೆಯಬೇಕಾಗಿದೆ. ಸದ್ಯಕ್ಕೆ ಅವರು ಲಭ್ಯವಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಗಾಳಿಯ ಗುಣಮಟ್ಟದ ಸೂಚ್ಯಂಕವು ಶೇ 30ರಿಂದ ಶೇ 50ರಷ್ಟು ಹೆಚ್ಚಳ

ತಗ್ಗಿದ ವಾಯುಮಾಲಿನ್ಯ ದಿಢೀರ್ ಏರಿಕೆ

• ವರುಣ ಹೆಗಡೆ

ಬೆಂಗಳೂರು: ಲಾಕ್‌ಡೌನ್‌ನಿಂದ ನಗರದಲ್ಲಿ ಇಳಿಕೆ ಕಂಡಿದ್ದ ಗಾಳಿಯ ಗುಣಮಟ್ಟದ ಸೂಚ್ಯಂಕವು (ಎಕ್ಯುಐ), ಲಾಕ್‌ಡೌನ್ ಸಡಿಲಿಕೆಯ ಒಂದು ವಾರದೊಳಗೇ ಶೇ 30ರಿಂದ ಶೇ 50ರಷ್ಟು ಹೆಚ್ಚಳವಾಗಿದೆ. ಇದರಿಂದಾಗಿ ವಾಯುಮಾಲಿನ್ಯದ ಮಟ್ಟ ಮತ್ತೆ ಏರುಗತಿ ಪಡೆದಿದೆ.

ಕಳೆದ ವರ್ಷ ಅಕ್ಟೋಬರ್ ಬಳಿಕ ನಿಯಂತ್ರಣಕ್ಕೆ ಬಂದಿದ್ದ ಕೋವಿಡ್, ಮಾರ್ಚ್ ನಂತರ ಏರುಗತಿ ಪಡೆದುಕೊಂಡಿತು. ಎರಡನೇ ಅಲೆಯಲ್ಲಿ ಸೋಂಕು ವೇಗವಾಗಿ ವ್ಯಾಪಿಸಿದ್ದರಿಂದ ಸರ್ಕಾರವು ಏ.10 ರಿಂದ ರಾತ್ರಿ ಹಾಗೂ ವಾರಾಂತ್ಯ ಕರ್ಫ್ಯೂ ವಿಧಿಸಿತ್ತು. ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸಿನ ಮೇರೆಗೆ ಮೇ 10ಕ್ಕೆ ಪೂರ್ಣ ಪ್ರಮಾಣದ ಲಾಕ್‌ಡೌನ್ ಘೋಷಿಸಿತ್ತು. ಇದರಿಂದ ನಗರದಲ್ಲಿ ವಾಹನಗಳ ಸಂಚಾರಕ್ಕೆ ಕಡಿವಾಣ ಬಿದ್ದಿತ್ತು.

ಈ ವರ್ಷ ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಕೋವಿಡ್ ಮೊದಲನೇ ಅಲೆ ನಿಯಂತ್ರಣಕ್ಕೆ ಬಂದಿದ್ದರಿಂದ ನಗರದಲ್ಲಿ ವಾಣಿಜ್ಯ ಚಟುವಟಿಕೆಗಳು, ಮೆಟ್ರೊ ಸೇರಿದಂತೆ ವಿವಿಧ ಕಾಮಗಾರಿಗಳು ಮತ್ತೆ ಗರಿಗೆದರಿದ್ದವು. ಕೆಲ ಐಟಿ-ಬಿಟಿ ಕಂಪನಿಗಳು ಕೂಡ ಬಾಗಿಲು ತೆರೆದಿದ್ದವು. ಇದರಿಂದಾಗಿ ಎಂ.ಜಿ ರಸ್ತೆ, ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಕನಕಪುರ ರಸ್ತೆ, ಹೊಸೂರು ರಸ್ತೆ, ಮೈಸೂರು ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ವಾಹನ ಸಂಚಾರಗಳ ಏರಿಕೆ ಕಂಡು, ಗಾಳಿಯ ಗುಣಮಟ್ಟದ ಸೂಚ್ಯಂಕವು ಹೆಬ್ಬಾಳ, ಜಯನಗರ, ಪೀಣ್ಯ, ಸೆಂಟ್ರಲ್ ಸಿಲ್ಕ್‌ಬೋರ್ಡ್ ಸೇರಿದಂತೆ ನಗರದ ಬಹುತೇಕ ಕಡೆ ನೂರರ ಗಡಿ ದಾಟಿತ್ತು.

ಲಾಕ್‌ಡೌನ್ ಘೋಷಣೆಯಾದ ಬಳಿಕ ನಗರದಲ್ಲಿನ ಚಟುವಟಿಕೆಗಳು ಸಂಪೂರ್ಣ ಸ್ಥಗಿತವಾಗಿದ್ದವು. ಇದರಿಂದಾಗಿ ಎಕ್ಯುಐ ಶೇ 50ರಿಂದ ಶೇ 70ರವರೆಗೆ ಇಳಿಕೆಯಾಗಿ, ಗಾಳಿ ಶುದ್ಧಗೊಂಡಿತ್ತು. ಹೆಬ್ಬಾಳ, ಪೀಣ್ಯ, ಜಯನಗರ ಸೇರಿದಂತೆ ಬಹುತೇಕ ಕಡೆ ಎಕ್ಯುಐ 50ರ ಒಳಗಡೆಯೇ ಇದ್ದವು.

ಸಂಚಾರ ಹೆಚ್ಚಳ: ಜೂ.21ರಿಂದ 2ನೇ ಹಂತದ ಲಾಕ್‌ಡೌನ್ ಸಡಿಲಿಕೆ ಮಾಡಲಾಗಿದೆ. ಇದರಿಂದಾಗಿ ವಾಹನಗಳ ಸಂಚಾರ ಒಮ್ಮೆಲೇ ಹೆಚ್ಚಳವಾಗಿದ್ದು, ತುಮಕೂರು ರಸ್ತೆ, ಮೈಸೂರು ರಸ್ತೆ ಸೇರಿದಂತೆ ಕೆಲವೆಡೆ ಬೆಳಿಗ್ಗೆ ಮತ್ತು ಸಂಜೆಯ ಅವಧಿ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರಿಂದಾಗಿ ಉತ್ತಮ ಹಂತಕ್ಕೆ ಇಳಿಕೆಯಾಗಿದ್ದ ಗಾಳಿ ಗುಣಮಟ್ಟ ಸೂಚ್ಯಂಕವು ಸಮಾಧಾನಕರ, ಮಧ್ಯಮ ಹಂತಕ್ಕೆ ತಲುಪಿದೆ. ಗಾಳಿಯಲ್ಲಿನ ಮಲಿನಕಾರಕ ಕಣ ಹೆಚ್ಚಳವಾಗಿದೆ.

'ಲಾಕ್‌ಡೌನ್ ಸಡಿಲಿಕೆಯಾಗುತ್ತಿದ್ದಂತೆ ಜನರ ಓಡಾಟ ಹೆಚ್ಚಳವಾಗಿದೆ. ಅದೇ ರೀತಿ, ಸಾರ್ವಜನಿಕ ಸಾರಿಗೆ ಸಂಚಾರ ಕೂಡ ಪುನರಾರಂಭವಾಗಿದೆ. ಸ್ಥಗಿತವಾಗಿದ್ದ ವಿವಿಧ ಕಾಮಗಾರಿಗಳಿಗೆ ಈಗ ವೇಗ ನೀಡಲಾಗುತ್ತಿದೆ. ಇದರಿಂದಾಗಿ ಎಕ್ಯುಐ ಹೆಚ್ಚಳವಾಗಿದೆ. ವಾಹನಗಳ ಸಂಚಾರದಿಂದ ನೆಲದ ಮೇಲಿನ ದೂಳಿನ ಕಣಗಳು ಗಾಳಿಯಲ್ಲಿ ಹಾರಾಡುತ್ತವೆ. ಆಗ ಮಾಲಿನ್ಯವಾಗುತ್ತದೆ' ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಪರಿಸರ ಅಧಿಕಾರಿ ಶ್ರೀಧರ್ ನಾಯ್ಕ್ ತಿಳಿಸಿದರು.

ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ)

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಹೆಬ್ಬಾಳ	94
ಜಯನಗರ	99
ಕವಿಕಾ ಲೇಔಟ್	104
ನಿಮ್ಹಾನ್ಸ್	89
ಸೆಂಟ್ರಲ್ ಸಿಲ್ಕ್‌ಬೋರ್ಡ್	124
ನಗರ ರೈಲು ನಿಲ್ದಾಣ	63
ಸಾಣೆಗುರುವನಹಳ್ಳಿ	40
ಕಾಡಬೀಸನಹಳ್ಳಿ	71
ಪೀಣ್ಯ	85
ಬಿಟಿಎಂ ಬಡಾವಣೆ	109

ಲಾಕ್‌ಡೌನ್ ಅವಧಿಯಲ್ಲಿ ಎಕ್ಯುಐ

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಹೆಬ್ಬಾಳ	25
ಜಯನಗರ	30
ಸೆಂಟ್ರಲ್ ಸಿಲ್ಕ್ ಬೋರ್ಡ್	37
ನಗರ ರೈಲು ನಿಲ್ದಾಣ	44
ಸಾಣೆಗುರುವನಹಳ್ಳಿ	30
ಬಾಪೂಜಿನಗರ	37
ಹೊಂಬೇಗೌಡನಗರ	27
ಪೀಣ್ಯ	35
ಬಿಟಿಎಂ ಬಡಾವಣೆ	53

ಮೊದಲ ಹಂತದ ಅನ್‌ಲಾಕ್ ಅವಧಿಯಲ್ಲಿ ಎಕ್ಯುಐ

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಹೆಬ್ಬಾಳ	64
ಜಯನಗರ	69
ಕವಿಕಾ ಲೇಔಟ್	52
ನಿಮ್ಹಾನ್ಸ್	58
ಸೆಂಟ್ರಲ್ ಸಿಲ್ಕ್‌ಬೋರ್ಡ್	77
ನಗರ ರೈಲು ನಿಲ್ದಾಣ	56
ಸಾಣೆಗುರುವನಹಳ್ಳಿ	34
ಕಾಡಬೀಸನಹಳ್ಳಿ	66
ಪೀಣ್ಯ	75
ಬಿಟಿಎಂ ಬಡಾವಣೆ	94

ಸುದ್ದಿ 2 ನಿಮಿಷ

ಶಾಸಕರ ಭವನದ ಮಳಿಗೆ: ಏಕರೂಪದ ಬಾಡಿಗೆ

ಬೆಂಗಳೂರು: ವಿಧಾನಮಂಡಲದ ಉಭಯ ಸಚಿವಾಲಯದ ಅಧೀನದಲ್ಲಿರುವ ವಾಣಿಜ್ಯ ಮಳಿಗೆಗಳಿಗೆ ಏಕರೂಪದ ಬಾಡಿಗೆ ನಿಗದಿಪಡಿಸಲು ತೀರ್ಮಾನಿಸಲಾಗಿದೆ.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಗುರುವಾರ ನಡೆಸಿದ ಜಂಟಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಂಡಿದ್ದಾರೆ.

ಶಾಸಕರ ಭವನದ ವಾಣಿಜ್ಯ ಮಳಿಗೆಗಳ ಮಾಸಿಕ ಬಾಡಿಗೆಯಲ್ಲಿ ತಾರತಮ್ಯವಿದ್ದು, ಇದನ್ನು ಸರಿಪಡಿಸಿ, ಅಂಗಡಿಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಏಕರೂಪ ಬಾಡಿಗೆ ನಿಗದಿಪಡಿಸುವಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಈ ಸಂಬಂಧ ಶೀಘ್ರವೇ ಪ್ರಸ್ತಾವನೆ ಸಲ್ಲಿಸುವಂತೆಯೂ ನಿರ್ದೇಶನ ನೀಡಲಾಯಿತು ಎಂದು ವಿಧಾನಸಭೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಶಾಸಕರ ಭವನದಲ್ಲಿ ಹಳೆಯ ಮಳಿಗೆಗಳನ್ನು ತೆರವುಗೊಳಿಸಿ ಅಲ್ಲಿ ಹೊಸ ಮಳಿಗೆಗಳನ್ನು ನಿರ್ಮಿಸುವ ಕುರಿತು ಚರ್ಚಿಸಲಾಯಿತು. ಇದೇ ಸಂದರ್ಭದಲ್ಲಿ ಹೊರಟ್ಟಿ ಮತ್ತು ಕಾಗೇರಿ ಶಾಸಕರ ಭವನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶಾಸಕರ ಭವನದ ಸುಗಮ ಸಂಚಾರಕ್ಕೆ ಅಡ್ಡಿ ಮಾಡುವ ಅಂಗಡಿಗಳನ್ನು ತೆರವುಗೊಳಿಸಲು ಸೂಚಿಸಲಾಯಿತು ಎಂದೂ ಪ್ರಕಟಣೆ ವಿವರಿಸಿದೆ.

ಆಸ್ಪತ್ರೆಗೆ ಡಯಾಲಿಸಿಸ್ ಯಂತ್ರ ನೀಡಿದ ರೋಟರಿ ಕ್ಲಬ್

ಬೆಂಗಳೂರು: ರೋಟರಿ ಕ್ಲಬ್ ಬೆಂಗಳೂರು ಕಂಟೋನ್ಮೆಂಟ್ ಹಾಗೂ ರೋಟರಿ ಕ್ಲಬ್ ಬೆಂಗಳೂರು ವತಿಯಿಂದ ಬುಲ್ ಟೆಂಪಲ್ ರಸ್ತೆಯಲ್ಲಿರುವ ಬಿಎಂಎಸ್ ಸ್ಮಾರಕ ಆಸ್ಪತ್ರೆಗೆ ಐದು ಡಯಾಲಿಸಿಸ್ ಯಂತ್ರಗಳನ್ನು ಕೊಡುಗೆಯಾಗಿ ನೀಡಲಾಯಿತು.

ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3190 ಜಿಲ್ಲಾ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್, ಆಸ್ಪತ್ರೆಯಲ್ಲಿ ನೂತನವಾಗಿ ಆರಂಭಿಸಿರುವ ಡಯಾಲಿಸಿಸ್ ಘಟಕವನ್ನು ಗುರುವಾರ ಉದ್ಘಾಟಿಸಿದರು.

'ಆರ್ಥಿಕವಾಗಿ ಹಿಂದುಳಿದ ಅನೇಕ ಕುಟುಂಬಗಳಲ್ಲಿ ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ಜನ ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿರುವವರೂ ಇದ್ದಾರೆ. ಅಂತಹವರು ಚಿಕಿತ್ಸೆಗಾಗಿ ಮನೆಯನ್ನೇ ಮಾರಿಕೊಂಡ ಉದಾಹರಣೆಗಳಿವೆ. ಅವರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಸಿಗಲಿ ಎಂಬ ಉದ್ದೇಶದಿಂದ ಅತ್ಯಾಧುನಿಕ ಯಂತ್ರಗಳನ್ನು ಕೊಡುಗೆಯಾಗಿ ನೀಡಲಾಗಿದೆ' ಎಂದು ನಾಗೇಂದ್ರ ಪ್ರಸಾದ್ ತಿಳಿಸಿದರು.

ಬಿಎಂಎಸ್ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ಡಾ.ಸಾಧನಾ ಇದ್ದರು.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ
ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕುಗಳಿಂದ ಒಂದು ವರ್ಷದ ಅವಧಿಗೆ **ರೂ. 105.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ-ಬಿಡ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ರಲ್ಲಿ 24-06-2021 ರಿಂದ ಪಡೆಯಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ನಂ.ಡಬ್ಲ್ಯುಡಬ್ಲ್ಯು–13016/7/2017–ಡಬ್ಲ್ಯುಡಬ್ಲ್ಯು(ಇ–37217)
ಭಾರತ ಸರ್ಕಾರ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ
(ಡಬ್ಲ್ಯುಡಬ್ಲ್ಯು ಡಿವಿಜನ್)

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ತಡೆಗಟ್ಟುವ, ನಿರ್ಬಂಧಿಸುವ ಮತ್ತು ಪರಿಹಾರ ನೀಡುವ) ಕಾಯ್ದೆ, 2013ರ ಪ್ರಕಾರ ಸಮರ್ಪಕ ಅರ್ಹತೆಗಳನ್ನು ಹೊಂದಿರುವ ಮತ್ತು ಸಾಕಷ್ಟು ಅನುಭವವುಳ್ಳ ಪ್ರತಿಷ್ಠಿತ ಸಂಸ್ಥೆಗಳಿಂದ/ವ್ಯಕ್ತಿಗಳಿಂದ, ಸದರಿ ಕಾಯ್ದೆ ಅಡಿಯಲ್ಲಿ ತರಬೇತಿದಾರರು/ಸಂಪನ್ಮೂಲ ವ್ಯಕ್ತಿಗಳನ್ನಾಗಿ ನೇಮಕ ಮಾಡಿಕೊಳ್ಳಲು ಹಾಗೂ ಅವರ ಹೆಸರನ್ನು ಆಂತರಿಕ ಸಮಿತಿ/ಸ್ಥಾನಿಕ ಸಮಿತಿಗಳಲ್ಲಿ ಸ್ವತಂತ್ರ ಸದಸ್ಯರನ್ನಾಗಿ ಪರಿಗಣಿಸಲು ನಿರ್ದಿಷ್ಟ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಯವಿಟ್ಟು ಸಚಿವಾಲಯದ ಈ ವೆಬ್‌ಸೈಟ್‌ಗೆ ಭೇಟಿ ಕೊಡಿ www.wcd.nic.in.

ಸಹಿ/–
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ
ಇ–ಮೇಲ್: sakhi-mwcd@gov.in

davp46101/11/0001/2122

ನಗರಸಭಾ ಕಾರ್ಯಾಲಯ ರಾಮನಗರ
ರಾಮನಗರ ಜಿಲ್ಲೆ – 562 159.
ದೂ.: 080–27271286. ಇಮೇಲ್: itstaff_ulb_ramanagaram@yahoo.com
ವೆಬ್‌ಸೈಟ್: www.ramanagaracity.mrc.gov.in

ನಂ.:ನಸರಾ/ಆ.ಶಾ./ಘ.ವನಿ/ಟೆಂಡರ್/ಸಿ.ಆರ್(01)/27/20–21 ದಿನಾಂಕ: 22–06–2021

ಮರು ಟೆಂಡರ್ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಎಸ್.ಎಫ್.ಸಿ. ಶೇ 24.10/ ನಗರಸಭಾ ನಿಧಿ ಅನುದಾನದಲ್ಲಿ ರಾಮನಗರ ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಮತ್ತು ನೇರ ಪಾವತಿ ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ ಪೂರೈಸಲು ಟೆಂಡರ್ ಕರೆಯಲಾಗಿದ್ದು, ಯಾರು ಭಾಗವಹಿಸದ ಕಾರಣ ಮರು ಟೆಂಡರ್ ಕರೆಯಲಾಗಿದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಗುತ್ತಿಗೆದಾರರು / ಸರಬರಾಜುದಾರರು https://eproc.karnataka.gov.in ಮೂಲಕ ಟೆಂಡರ್‌ನಲ್ಲಿ ದಿನಾಂಕ : 07–07–2021 ರ ಸಂಜೆ 4.30 ಗಂಟೆಯೊಳಗಾಗಿ ಭಾಗವಹಿಸಬಹುದಾಗಿರುತ್ತದೆ.

ಸಹಿ/– ಆಡಳಿತಾಧಿಕಾರಿಗಳು, ನಗರಸಭೆ, ರಾಮನಗರ. ಡಿಐಪಿಆರ್/ರಾಮನಗರ/112/ಮಣಿಪಾಲ್/2020–21 ಸಹಿ/– ಪೌರಾಯುಕ್ತರು, ನಗರಸಭೆ, ರಾಮನಗರ.

ನೈರುತ್ಯ ರೈಲ್ವೆ
TENDER NOTICE No. 13/2021 Dated 21/06/2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ–ಟೆಂಡರ್ ಆಹ್ವಾನಿಸಿದ್ದಾರೆ.
ಟೆಂಡರ್ ಮುಕ್ತಾಯ ಸಮಯ: 14:00 ಗಂಟೆಗಳು

ಕ್ರ	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಕೊನೆಯ ದಿನಾಂಕ
1	18211051	ಇರಿಮ್‌ಡಿ ಪಿಟಿ ಸಂ. 40001026 ಗೆ ಡಿಸಿ ಲಿಂಕ್ ಕಾಂಟ್ರಾಕ್ಟರ್ ಟಿ/ಪಿ	96 ಸಂ.	05.07.2021
2	33201082	ಸ್ಪೀಡ್ ಸೆನ್ಸರ್ ಜಿ.16 KNORR BREMSE	133 ಸಂ.	29.06.2021
3	45211288A	ವಿಆರ್‌ಎಲ್‌ಎ ಬ್ಯಾಟರಿ 110 ವೋ, 70 ಎಎಚ್ ಸೆಟ್	143 ಸೆಟ್ಸ್	08.07.2021
4	80211002	ಐರಿಸ್: 493–81 ಗೆ ಆಯಿಲ್ ಮಷಿನರಿ / ಜನರಲ್ ಪರ್ಪಸ್ ಮಷಿನರಿ	54340 ಲೀಟರ್ಸ್	15.07.2021
5	33211049A	ಜನರೇಟರ್ ಕಾರ್‌ಗೆ ಸೆಕೆಂಡರಿ ಸ್ಪ್ರಿಂಗ್ ಔಟರ್	233 ಸಂ.	12.07.2021
6	45211261	ವಾಲ್ವ್ ರೆಗ್ಯೂಲೇಟೆಡ್ ಲೆಡ್ ಆಸಿಡ್ ಬ್ಯಾಟರಿ (ವಿಆರ್‌ಎಲ್‌ಎ) 1100 ಎಎಚ್	114 ಸೆಟ್ಸ್	14.07.2021
7	18211015	ಕಂಪಾರ್ಟ್‌ಮೆಂಟ್ ಇಕ್ವಿಪ್ಡ್ ಮೈಕ್ರೋ ಇಎಮ್‌ಡಿ ಪಾರ್ಟ್ ಸಂ. 40064109	7 ಸಂ.	19.07.2021

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/83/AAV/PRB/SWR/2021-22 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

ಆಕ್ಷೇಪಣೆ ಸಲ್ಲಿಕೆ: ಅವಧಿ ವಿಸ್ತರಣೆಗೆ ಮನವಿ

ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿಗೆ 6,316 ಮರ ಕಡಿಯುವ ಉದ್ದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗನಾಯಕನಹಳ್ಳಿ ಕೆರೆ ಅಭಿವೃದ್ಧಿಗೆ 6,316 ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಡಬಾರದು. ಅಲ್ಲದೆ, ಈ ಸಂಬಂಧ ಆಕ್ಷೇಪಣೆ ಸಲ್ಲಿಸಲು ನೀಡಿರುವ ಅವಧಿಯನ್ನು ಇನ್ನೂ 20 ದಿನಗಳಿಗೆ ವಿಸ್ತರಿಸಬೇಕು ಎಂದು ಒತ್ತಾಯಿಸಿ 'ನಮ್ಮ ಬೆಂಗಳೂರು ಫೌಂಡೇಷನ್' (ಎನ್‌ಬಿಎಫ್) ಸದಸ್ಯರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಸಂಜಯ್ ಮೋಹನ್ ಅವರಿಗೆ ಮನವಿ ಸಲ್ಲಿಸಿದರು.

'ಕೋವಿಡ್ ಇರುವುದರಿಂದ ಇನ್ನೂ 3 ತಿಂಗಳು ಈ ಕುರಿತು ಯಾವುದೇ ಕ್ರಮಕ್ಕೂ ಮುಂದಾಗಬಾರದು. ವಿಚಾರಣೆ ನಡೆಸುವ ವೇಳೆ, ಆಕ್ಷೇಪಣೆ ಸಲ್ಲಿಸಲು 20 ದಿನಗಳಿಗೂ ಹೆಚ್ಚು ದಿನ ಕಾಲಾವಕಾಶ ಕೊಡಬೇಕು' ಎಂದು ಎನ್‌ಬಿಎಫ್‌ನ ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್ ಕೋರಿದರು.

'ಕೆರೆ ಅಭಿವೃದ್ಧಿಪಡಿಸುವುದನ್ನು ನಾವು ವಿರೋಧಿಸುವುದಿಲ್ಲ. ಮರಗಳನ್ನು ಉಳಿಸಿಕೊಂಡು ಅಭಿವೃದ್ಧಿ ಕಾರ್ಯ ಕೈಗೊಳ್ಳಲಿ. ಕಾಮಗಾರಿಯಿಂದ ಇಲ್ಲಿನ ಪರಿಸರ ವ್ಯವಸ್ಥೆಗೆ ಧಕ್ಕೆ ಉಂಟಾಗುವುದಿಲ್ಲ ಎಂಬುದನ್ನು ಖಾತರಿಪಡಿಸಲಿ' ಎಂದು ಕೋರಿ ಮನವಿ ಪತ್ರ ಸಲ್ಲಿಸಿದರು.

'ಕೆರೆ ಅಭಿವೃದ್ಧಿಗಾಗಿ ಮರ ಕಡಿಯುವ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ (aranya.gov.in) ಹಂಚಿಕೊಂಡಿರುವ ಮಾಹಿತಿಯಲ್ಲಿ ಇಲ್ಲಿನ ಜೀವವೈವಿಧ್ಯದ ಬಗ್ಗೆ ಉಲ್ಲೇಖವೇ ಇಲ್ಲ. ಇಲ್ಲಿ ನೈಸರ್ಗಿಕವಾಗಿ ರೂಪುಗೊಂಡ ಪರಿಸರ ವ್ಯವಸ್ಥೆ ದಶಕಗಳಿಂದ ಅಂತರ್ಜಲ ವೃದ್ಧಿಗೂ ಕೊಡುಗೆ ನೀಡುತ್ತಿದೆ. ಈ ಅಂಶಗಳನ್ನೂ ಪರಿಗಣಿಸಬೇಕು' ಎಂದು ಒತ್ತಾಯಿಸಿದರು.

ಈ ಕೆರೆಯಂಗಳದ ಮರಗಳನ್ನು ಉಳಿಸಿಕೊಳ್ಳಲು ಹಮ್ಮಿಕೊಂಡಿರುವ ಆನ್‌ಲೈನ್ ಅಭಿಯಾನಕ್ಕೆ (https://act.jhatkaa.org/campaigns/no-axing-of-trees-hebbal--nagwara-valleyು) ಭಾರಿ ಬೆಂಬಲ ವ್ಯಕ್ತವಾಗಿದೆ. 8 ಸಾವಿರಕ್ಕೂ ಅಧಿಕ ಮಂದಿ ಈ ಅಭಿಯಾನಕ್ಕೆ ಬೆಂಬಲ ನೀಡಿದ್ದಾರೆ.

ಎನ್‌ಬಿಎಫ್‌ನ ವಿನೋದ್ ಜೇಕಬ್ ಹಾಗೂ ವಿಜಯ್ ನಿಶಾಂತ್ ಅವರು ಪಿಸಿಸಿಎಫ್ ಸಂಜಯ್ ಮೋಹನ್ ಅವರಿಗೆ ಮನವಿ ಸಲ್ಲಿಸಿದರು

ಆನ್‌ಲೈನ್‌ನಲ್ಲಿ ಉಚಿತವಾಗಿ ಭಗವದ್ಗೀತೆಯ ತರಗತಿ

ಬೆಂಗಳೂರು: ಗೀತಾ ಪರಿವಾರವು ಜುಲೈ 5ರಿಂದ ಆನ್‌ಲೈನ್‌ನಲ್ಲಿ ಭಗವದ್ಗೀತೆ ತರಗತಿಗಳನ್ನು ಉಚಿತವಾಗಿ ನಡೆಸಲು ನಿರ್ಧರಿಸಿದೆ.

'20 ದಿನಗಳಲ್ಲಿ ಒಟ್ಟು ಎರಡು ಅಧ್ಯಾಯಗಳನ್ನು ಹೇಳಿಕೊಡಲಾಗುತ್ತದೆ. ಅಧ್ಯಾಯಗಳನ್ನು ಓದಿ, ಅದನ್ನು ವಿಡಿಯೊ ಮಾಡಿ ಕಳುಹಿಸಬೇಕು. ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ 'ಗೀತಾಗುಂಜನ' ಇ-ಪ್ರಮಾಣ ಪತ್ರ ನೀಡಲಾಗುತ್ತದೆ. ವಾರದಲ್ಲಿ ಐದು ದಿನ (ಸೋಮವಾರದಿಂದ ಶುಕ್ರವಾರದವರೆಗೆ) ಜೂಮ್ ಮೂಲಕ ತಲಾ 40 ನಿಮಿಷಗಳ ತರಗತಿ ನಡೆಸಲಾಗುತ್ತದೆ. ವಾರಾಂತ್ಯಗಳಲ್ಲಿ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಅರ್ಥವ್ಯಾಖ್ಯಾನ ತರಗತಿಗಳನ್ನು ಆಯೋಜಿಸಲಾಗಿದೆ.

ಹಿಂದಿ, ಇಂಗ್ಲಿಷ್, ಕನ್ನಡ, ಮರಾಠಿ ಸೇರಿದಂತೆ ಒಟ್ಟು 10 ಭಾಷೆಗಳಲ್ಲಿ ಗೀತಾ ತರಗತಿಗಳು ನಡೆಯಲಿವೆ. ಈ ಬಾರಿ ಒಟ್ಟು 50 ಸಾವಿರಕ್ಕೂ ಅಧಿಕ ಪ್ರಶಿಕ್ಷಣಾರ್ಥಿಗಳನ್ನು ಸೇರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಹೆಸರು ನೋಂದಾಯಿಸಲು https://learngeeta.com/reg/ ಲಿಂಕ್ ಬಳಸಬೇಕು.

ನೀಟ್, ಕಾಮೆಡ್‌–ಕೆ ಪರೀಕ್ಷೆಗೆ ಉಚಿತ ತರಬೇತಿ

ಬೆಂಗಳೂರು: ನಗರದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯವು ಸಿಇಟಿ, ನೀಟ್ ಹಾಗೂ ಕಾಮೆಡ್‌–ಕೆ ಪರೀಕ್ಷೆಗೆ ಸಜ್ಜಾಗುತ್ತಿರುವ ಗ್ರಾಮೀಣ ಭಾಗದ ಹಾಗೂ ಇತರ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಉಚಿತ ತರಬೇತಿ ನೀಡಲು ನಿರ್ಧರಿಸಿದೆ.

'21 ದಿನಗಳ ಈ ತರಬೇತಿಯು ಇದೇ 28ರಿಂದ ಶುರುವಾಗಲಿದೆ. ತರಬೇತುದಾರ ಅರವಿಂದ್ ಗಂಭೀರ್ ಹಾಗೂ ಇತರ ಪರಿಣಿತ ಬೋಧಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ತರಬೇತಿಗೆ ತಗಲುವ ಸಂಪೂರ್ಣ ವೆಚ್ಚವನ್ನು ನಾವೇ ಭರಿಸುತ್ತೇವೆ' ಎಂದು ಪ್ರಾಂಶುಪಾಲ ಎಚ್.ಸಿ.ನಾಗರಾಜ್ ತಿಳಿಸಿದ್ದಾರೆ.

ಹೆಸರು ನೋಂದಾಯಿಸಲು https://forms.gle/YZAMhZVxhh1MoXup7 ಈ ಲಿಂಕ್ ಬಳಸಬೇಕು.



ಅಂತರ ಮರೆತ ಜನ

ಲಾಕ್‌ಡೌನ್ ಸಡಿಲಿಕೆ ನಂತರ ವ್ಯಾಪಾರ ಚಟುವಟಿಕೆ ಚುರುಕುಗೊಂಡಿದ್ದು, ಅವೆನ್ಯೂ ರಸ್ತೆಯಲ್ಲಿ ಜನತೆ ಕೋವಿಡ್ ಮಾರ್ಗಸೂಚಿಗಳನ್ನು ಮರೆತು ಗುಂಪು ಸೇರಿದ್ದರು – ಪ್ರಜಾವಾಣಿ ಚಿತ್ರ

ಟ್ವಿಟರ್ ಎಂ.ಡಿ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಟ್ವಿಟರ್‌ನಲ್ಲಿ ಪ್ರಕಟವಾದ ವಿಡಿಯೊವೊಂದಕ್ಕೆ ಸಂಬಂಧಿಸಿದಂತೆ ಟ್ವಿಟರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮನಿಶ್ ಮಹೇಶ್ವರಿ ವಿರುದ್ಧ ಉತ್ತರ ಪ್ರದೇಶ ಪೊಲೀಸರು ಕ್ರಮ ಕೈಗೊಳ್ಳದಂತೆ ಕರ್ನಾಟಕ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಉತ್ತರ ಪ್ರದೇಶದ ಗಾಜಿಯಾಬಾದ್ ಜಿಲ್ಲೆಯ ಲೋನಿ ಬಾರ್ಡರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅದನ್ನು ರದ್ದುಪಡಿಸುವಂತೆ ಕೋರಿ ಬೆಂಗಳೂರಿನ ನಿವಾಸಿ ಆಗಿರುವ ಮನಿಶ್ ಮಹೇಶ್ವರಿ ಅರ್ಜಿ ಸಲ್ಲಿಸಿದ್ದರು.

ಹಲವು ಪತ್ರಕರ್ತರು ಮತ್ತು ಕಾಂಗ್ರೆಸ್ ಮುಖಂಡರು ಟ್ವಿಟರ್‌ನಲ್ಲಿ ಧರ್ಮಗಳ ನಡುವೆ ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿ ಮನಿಶ್ ವಿರುದ್ಧ ದೂರು ದಾಖಲಾಗಿದೆ.

ಸಿಆರ್‌ಪಿಸಿ ಸೆಕ್ಷನ್ 160ರ ಅಡಿಯಲ್ಲಿ ಪೊಲೀಸರು ಜೂನ್ 17ರಂದು ನೋಟಿಸ್ ಜಾರಿ ಮಾಡಿದ್ದರು. ನೋಟಿಸ್‌ಗೆ ಪ್ರತಿಕ್ರಿಯಿಸಿದ ಮನಿಶ್, ವಿಡಿಯೊ ಕಾನ್ಫರೆನ್ಸ್ ಮೂಲಕ ತನಿಖೆಗೆ ಹಾಜರಾಗುವುದಾಗಿ ತಿಳಿಸಿದ್ದರು. ಬಳಿಕ ಮತ್ತೊಂದು ನೋಟಿಸ್ ನೀಡಿರುವ ಪೊಲೀಸರು, ಠಾಣೆಗೆ ಖುದ್ದು ಹಾಜರಾಗಬೇಕು ಎಂದು ನಿರ್ದೇಶನ ನೀಡಿದ್ದರು.

'ಅರ್ಜಿದಾರರು ಟ್ವಿಟರ್ ಕಂಪನಿಯ ಆಡಳಿತ ಮಂಡಳಿಯ ನಿರ್ದೇಶಕರಲ್ಲ. ಕಂಪನಿಯಲ್ಲಿ ಜಾಹೀರಾತು ವಿಭಾಗದ ಒಬ್ಬ ಉದ್ಯೋಗಿಯಷ್ಟೇ. ಅವರ ಸಾಕ್ಷಿದಾರರಷ್ಟೇ ಹೊರತು ಆರೋಪಿಯಲ್ಲ' ಎಂದು ಅರ್ಜಿದಾರರ ಪರ ವಕೀಲ ಸಿ.ವಿ. ನಾಗೇಶ್ ವಾದಿಸಿದರು.

'ಅರ್ಜಿದಾರರನ್ನು ತನಿಖೆ ಒಳಪಡಿಸಲು ಬಯಸಿದರೆ, ಅದು ವರ್ಚುವಲ್ ಮಾದರಿಯಲ್ಲಿ ನಡೆಸಲು ಸಾಧ್ಯವಿದೆ' ಎಂದು ತಿಳಿಸಿದ ಪೀಠ, ಜೂನ್ 29ಕ್ಕೆ ವಿಚಾರಣೆ ಮುಂದೂಡಿತು.

ಮೊಬೈಲ್ ಕಳವು; ಕಂಪನಿ ಪ್ರತಿನಿಧಿ ಬಂಧನ

ಬೆಂಗಳೂರು: ಸಾರ್ವಜನಿಕರು ಮಾತನಾಡುತ್ತಿರುವಾಗಲೇ ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಆರೋಪಿ ಇಮ್ರಾನ್ (27) ಎಂಬಾತನನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಹೆಗ್ಗನಹಳ್ಳಿ ಅಡ್ಡರಸ್ತೆಯ ಇಮ್ರಾನ್, ಮೊಬೈಲ್ ಸೇವಾ ಕಂಪನಿಯೊಂದರಲ್ಲಿ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ. ಆ ಕೆಲಸಕ್ಕೆ ರಾಜೀನಾಮೆ ನೀಡಿ, ಮೊಬೈಲ್ ಕಳವು ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದ. ಆತನಿಂದ ₹2.40 ಲಕ್ಷ ಮೌಲ್ಯದ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಒಂಟಿಯಾಗಿ ಓಡಾಡುತ್ತಿದ್ದವರನ್ನು ಹಿಂಬಾಲಿಸಿ ಆರೋಪಿ ಕೃತ್ಯ ಎಸಗುತ್ತಿದ್ದ. ಹೋಟೆಲ್, ಮಾಲ್, ಉದ್ಯಾನ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸುತ್ತಾಡುತ್ತಿದ್ದ ಆರೋಪಿ, ಮೊಬೈಲ್‌ನಲ್ಲಿ ಮಾತನಾಡುತ್ತಿದ್ದವರನ್ನು ಗುರುತಿಸುತ್ತಿದ್ದ. ಏಕಾಏಕಿ ಅವರ ಬಳಿ ಹೋಗಿ ಮೊಬೈಲ್ ಕಸಿದುಕೊಂಡು ಪರಾರಿಯಾಗುತ್ತಿದ್ದ. ಈ ಹಿಂದೆ ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲೂ ಕೃತ್ಯ ಎಸಗಿ ಜೈಲಿಗೆ ಹೋಗಿ ಬಂದಿದ್ದ' ಎಂದೂ ತಿಳಿಸಿದರು.

ನಗರದಲ್ಲಿ ಇಂದು

ಸಾಹಿತ್ಯ ಸಂಚಲನ ವೆಬಿನಾರ್: ಉಪನ್ಯಾಸಕರು: ಸುಧಾ ಶರ್ಮ ಚವತ್ತಿ, ಉಪಸ್ಥಿತಿ: ವನಮಾಲಾ ಸಂಪನ್ನಕುಮಾರ್, ಆಶಾ ಹೆಗಡೆ, ಎಲ್. ಗಿರಿಜಾ ರಾಜ್, ನಾಗರತ್ನ ಚಂದ್ರಶೇಖರ್, ಸರಸ್ವತಿ ನಟರಾಜ್, ರೇಣುಕಾ ದೇಸಾಯಿ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಕಲೆಯ ಮಹತ್ವ ಕುರಿತ ಟಾಕ್ ಶೋ: ಆರ್ಟ್ ಆ್ಯಸ್ ಮೈಂಡ್‌ಸ್ಪಾ, ಭಾಗವಹಿಸುವವರು: ಅಮೃತ ತಿವಾರಿ, ವಂದನಾ ಕಶ್ಯಪ್, ಇಶಿತಾ ಸೇನ್, ದೀಪಾಲಿ ಚಕ್ರವರ್ತಿ, ಆಯೋಜನೆ: ಕ್ರಿಯೇಟಿವ್ ಮೈಂಡ್ಸ್, ಸಂಜೆ 6.30 (ಆನ್‌ಲೈನ್ ಕಾರ್ಯಕ್ರಮ)

ನಿಧನ ವಾರ್ತೆ

ಎನ್. ನರಸಿಂಹಮೂರ್ತಿ

ಬೆಂಗಳೂರು: ಬಿಜೆಪಿ ಮುಖಂಡ ಎನ್. ನರಸಿಂಹಮೂರ್ತಿ (52) ಅವರು ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ನರಸಿಂಹಮೂರ್ತಿ ಅವರು ನಗರದ ವಾರ್ಡ್ ನಂ. 45ರ ಮಾಜಿ ಕಾರ್ಪೊರೇಟರ್ ಎನ್. ಜಯಪಾಲ್ ಸಹೋದರ.

'ತ್ರಿವೇಣಿ ರಸ್ತೆಯ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು' ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

के आई ओ सी एल लिमिटेड
KIOCL LIMITED
(A Government of India Enterprise)
CIN : L13100KA1976GOI002974
II Block, Koramangala, Bengaluru – 560 034
Tele-fax- 080-25531525, Web- www.kioclltd.in, E-mail- cs@kioclltd.in
KUDREMUKH

NOTICE TO SHAREHOLDERS FOR TRANSFER OF UNCLAIMED / UNPAID DIVIDEND & EQUITY SHARES THEREOF TO INVESTOR EDUCATION AND PROTECTION FUND AUTHORITY (IEPFA)

Notice is hereby given that pursuant to the provisions of Investor Education and Protection Fund Authority (Accounting, Audit, Transfer and Refund) Rules, 2016 ("the Rules"), as amended, the Final Dividend declared for the financial year 2013-14, which remained unclaimed for a period of seven years will be credited to the IEPFA on October 12, 2021. The corresponding shares on which dividend has not been claimed for seven consecutive years will also be transferred to IEPFA, as per the procedure set out in the aforesaid Rules.

Accordingly, the Company has sent individual communications at the latest available address to all the concerned shareholders whose shares are liable to be transferred to IEPFA during the financial year 2021-22 on account of unclaimed dividend amounts consecutively since 2013-14. The Company has also uploaded the full details of such shareholders and shares due for transfer to IEPFA on its website which can be assessed through web-link **https://www.kioclltd.in/user/cms/351**.

All the concerned shareholders holding shares in physical as well as demat form are required to make an application to the Company / Registrar by 25.09.2021 with a request for claiming the unpaid and unclaimed dividend for the financial year 2013-14 (Final) onwards, so that the shares and unpaid / unclaimed dividend are not transferred to the IEPFA.

It may please be noted that if no application is received by the Company / Registrar by 25.09.2021, the Company shall without any further notice, transfer the unpaid / unclaimed dividend along with corresponding shares to the IEPFA by the due date as per the procedure set out in the IEPF Rules and no claim shall lie against the Company in respect of the unpaid / unclaimed dividend along with corresponding shares transferred to IEPF pursuant to IEPF Rules.

Shareholders may note that the shares transferred to IEPF including all benefits accruing on such shares, if any, can be claimed back from the IEPF Authority after following the procedure given on its website i.e., **http://www.iepf.gov.in/IEPF/corporates.html**

For any queries on the above matter, shareholders are requested to contact the Registrar and Share Transfer Agent M/s. Integrated Registry Management Services Private Limited, No.30, Ramanna Residency, 4th Cross, Sampige Road, Malleshwaram, Bengaluru – 560 003. Tel: (080) 23460815-18, Fax: (080) 23460819, **Email: irg@integratedindia.in**.

Place : Bengaluru
Date : 25.06.2021

For KIOCL LIMITED
Sd/-
(P K Mishra)
Company Secretary

ಬ್ಯೂರೋ ಆಫ್ ಎನರ್ಜಿ
(ಭಾರತ ಸರ್ಕಾರದ ವಿದ್ಯುತ್ ಸಚಿವಾಲಯ ಅಡಿಯಲ್ಲಿನ ಶಾಸನಬದ್ಧ ಅಂಗಸಂಸ್ಥೆ)
4ನೇ ಮಹಡಿ, ಸೇವಾ ಭವನ, ಆರ್. ಕೆ. ಪುರಂ, ನವದೆಹಲಿ – 110066
ವೆಬ್‌ಸೈಟ್: www.beeindia.gov.in, ಫೋನ್: 011–26766700

ಎಸ್ಕೊ ಎಂಪಾನೆಲ್‌ಮೆಂಟ್/ರಿ–ಎಂಪಾನೆಲ್‌ಮೆಂಟ್

ಸದರಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ ಜಾರಿಗೊಂಡಂತೆ ಬ್ಯೂರೋ ಆಫ್ ಎನರ್ಜಿ ಇವರಲ್ಲಿ ಎನರ್ಜಿ ಸರ್ವೀಸ್ ಕಂಪನಿ (ಎಸ್ಕೊ) ನೇಮಕಾತಿ/ಮರು–ನೇಮಕಾತಿಗಾಗಿ ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಸ್ತುತ ಅಸ್ತಿತ್ವದಲ್ಲಿರುವ ವಿದ್ಯುತ್ ಸಂರಕ್ಷಣಾ ಕ್ರಮಗಳನ್ನು ಉತ್ತೇಜಿಸುವುದರ ಜೊತೆಗೆ ವಿದ್ಯುತ್ ಸಂರಕ್ಷಣಾ ಕಾಯ್ದೆ, 2001ರ ಅಡಿಯಲ್ಲಿ ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿ (ಬಿಇಇ) ಇವರು ದೇಶಾದ್ಯಂತ ವಿದ್ಯುತ್ ಕ್ಷಮತೆಗೆ ಸಂಬಂಧಿತ ಚಾಲನೆಗಳಿಗೆ ಎಸ್ಕೊ ಮಾದರಿಯಲ್ಲಿ ಉತ್ತೇಜನ ನೀಡುತ್ತಿದ್ದಾರೆ. ಎಸ್ಕೊ ಎಂಬ ಸಂಸ್ಥೆಯು, ತಾಂತ್ರಿಕವಾಗಿ ಕಾರ್ಯಸಾಧುವಾಗಿರುವ ವಿಧಾನದಲ್ಲಿ ವಿದ್ಯುತ್ ಬಳಕೆ ಹಾಗೂ ವೆಚ್ಚಗಳನ್ನು ಕಡಿತಗೊಳಿಸುವ ಕ್ರಮಗಳನ್ನು ಅಳವಡಿಸುವ ನಿಟ್ಟಿನಲ್ಲಿ ಸಂಬಂಧಿತ ಸಂಸ್ಥೆಗಳೊಂದಿಗೆ ಸಾಧನೆ ಆಧಾರಿತ ಗುತ್ತಿಗೆಯಲ್ಲಿ ತೊಡಗಿಸಿಕೊಂಡಿರುವ ಒಂದು ಸಂಸ್ಥೆಯಾಗಿದೆ. ಬಿಇಇ ರವರು, ಎರಡು ವರ್ಷಗಳ ಊರ್ಜಿತಾವಧಿ ಹೊಂದಿರುವ ಮತ್ತು ನೇಮಕಗೊಂಡಿರುವ ವಿದ್ಯುತ್ ಸೇವಾ ಕಂಪನಿಗಳ ಪಟ್ಟಿಯನ್ನು ತಯಾರಿಸಲು ಮತ್ತು ನಿರ್ವಹಿಸಲು ಉತ್ಸುಕವಾಗಿದೆ.

ಬಿಇಇ ರವರ ಜೊತೆಗೆ ಎಸ್ಕೊ ಆಗಿ ನೇಮಕಾತಿ/ಮರು–ನೇಮಕಾತಿ ಪಡೆದುಕೊಳ್ಳಲು, ಎಲ್ಲಾ ಎಸ್ಕೊ ಸಂಸ್ಥೆಗಳು ತಮ್ಮ ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಇವರಿಗೆ ಸಲ್ಲಿಸುವುದು ಕ್ರಿಸಿಲ್ ಲಿಮಿಟೆಡ್/ಕೇರ್ ಅಡ್ವಾಯ್ಸರಿ ರಿಸರ್ಚ್ & ಟ್ರೈನಿಂಗ್ ಲಿ.,/ಐಸಿಆರ್‌ಎ ಅನಾಲೈಟಿಕ್ಸ್ ಲಿ.,/ಐಆರ್‌ಆರ್ ಅಡ್ವಾಯ್ಸರಿ ಸರ್ವೀಸಸ್ ಪ್ರೈ. ಲಿ.,/ಸ್ಮೆರಾ ಗ್ರೇಡಿಂಗ್ಸ್ & ರೇಟಿಂಗ್ಸ್ ಪ್ರೈವೇಟ್ ಲಿಮಿಟೆಡ್.

ಜಾಹೀರಾತು, ಅರ್ಹತಾ ಮಾನದಂಡಗಳನ್ನು ಸೂಚಿಸುವ ಅರ್ಜಿ ನಮೂನೆ, ಗ್ರೇಡಿಂಗ್ ಏಜನ್ಸಿಗಳ ಸಂಪರ್ಕ ವಿವರಗಳು ಮತ್ತು ನೇಮಕಾತಿ ಪ್ರಕ್ರಿಯೆಯ ಕುರಿತಾದ ವಿವರಗಳನ್ನು ಸದರಿ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು www.beeindia.gov.in. **ಸದರಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ, ಮೇಲ್ಕಾಣಿಸಿದ ಗ್ರೇಡಿಂಗ್ ಏಜನ್ಸಿಗಳಿಗೆ ಸಂಪೂರ್ಣ ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಸಲ್ಲಿಸುವ ಅಂತಿಮ ದಿನಾಂಕವಾಗಿರುತ್ತದೆ.** ಅಪೂರ್ಣ ಭರ್ತಿ ಮಾಡಿರುವ ಅರ್ಜಿಗಳನ್ನು ಮತ್ತು ಅಂತಿಮ ದಿನಾಂಕದ ಬಳಿಕ ಸಂದಾಯವಾಗುವ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

davp34106/11/0003/2122 ಕಾರ್ಯದರ್ಶಿ

ಬೆಂಗಳೂರು ಉಪನಗರ ರೈಲು ಯೋಜನೆಯ ಕಾಮಗಾರಿ 3 ತಿಂಗಳಲ್ಲಿ ಆರಂಭ

ರೈಲು: ಪ್ರಧಾನಿ ಶೀಘ್ರ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ ಕಾಮಗಾರಿಗೆ ಮೂರು ತಿಂಗಳಲ್ಲಿ ಚಾಲನೆ ನೀಡಲಿದ್ದು, ಇದರ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನಗರದ ಕಂಟೋನ್ಮೆಂಟ್ ನಿಲ್ದಾಣದಿಂದ ಹೀಲಲಿಗೆ ನಡುವೆ ಸಂಚರಿಸಿ ಬೆಂಗಳೂರು ಉಪನಗರ ರೈಲು ಯೋಜನೆ ಮತ್ತು ರೈಲ್ವೆ ಮಾರ್ಗ ದ್ವಿಪಥ ಯೋಜನೆಗಳ ಪ್ರಗತಿ ಪರಿಶೀಲನೆ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಬೆಂಗಳೂರು ನಗರದ ಹೊರವಲಯದ ಉಪನಗರಗಳು ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದೊಂದಿಗೆ ಸಾರಿಗೆ ಸಂಪರ್ಕ ಸುಲಭವಾಗಲಿದೆ. ನಗರದ ಸಂಚಾರ ದಟ್ಟಣೆ ಕಡಿಮೆಯಾಗುವ ನಿರೀಕ್ಷೆಯೂ ಇದೆ ಎಂದು ಹೇಳಿದರು.

ಈ ಯೋಜನೆಯ ವೆಚ್ಚ ₹15,767 ಕೋಟಿ ಆಗಲಿದ್ದು ಕೇಂದ್ರ, ರಾಜ್ಯ ಮತ್ತು ಬಾಹ್ಯ ಹಣಕಾಸು ಸಂಸ್ಥೆಗಳ ಮೂಲಕ 20:20:60 ಅನುಪಾತದಲ್ಲಿ ಇದಕ್ಕೆ ಬಂಡವಾಳ ತೊಡಗಿಸಲಾಗುವುದು. 2020–21 ನೇ ಸಾಲಿಗೆ ರಾಜ್ಯ ಸರ್ಕಾರ ₹400 ಕೋಟಿ ಈ ಯೋಜನೆಗೆ ಮೀಸಲಿಟ್ಟಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರದ ರೈಲ್ವೆ ಸಚಿವಾಲಯದ ಜಂಟಿ ಮಾಲೀಕತ್ವದ ಕೆ-ರೈಡ್ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಹೇಳಿದರು.

ಬೈಯ್ಯಪ್ಪನಹಳ್ಳಿ–ರಾಜಾನುಕುಂಟೆ ಮತ್ತು ಯಶವಂತಪುರ– ಹೊಸೂರು ರಸ್ತೆ ಸಂಪರ್ಕಿಸುವ ರೈಲ್ವೆ ಮಾರ್ಗಗಳ ದ್ವಿಪಥ ಕೆಲಸಕ್ಕಾಗಿ 2020–21 ನೇ ಸಾಲಿಗೆ ₹65 ಕೋಟಿ ಅನುದಾನ ಒದಗಿಸಲಾಗಿದೆ. ಕಾಲಮಿತಿಯಲ್ಲಿ ಅಂದರೆ 2023 ಕ್ಕೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

ಕೇಂದ್ರದಲ್ಲಿ ಬಿಜೆಪಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದು ಏನು ಮಾಡುತ್ತಿದೆ ಎಂದು ಕಾಂಗ್ರೆಸ್ ಪಕ್ಷ ಟೀಕೆ ಮಾಡುತ್ತಿದೆ. ಇಲ್ಲಿಗೆ ಬಂದು ಆಗುತ್ತಿರುವ ಕೆಲಸಗಳನ್ನು ನೋಡಲಿ, ಇವು ಕೇಂದ್ರದ ಸಹಭಾಗಿತ್ವದಲ್ಲಿ ನಡೆಯುತ್ತಿರುವ ಯೋಜನೆಗಳು ಎಂದರು.

ನಾಲ್ಕು ಕಾರಿಡಾರ್‌ಗಳ ಯೋಜನೆ

ಒಟ್ಟು 148 ಕಿ.ಮೀ ಉದ್ದದ ಈ ಯೋಜನೆ ನಾಲ್ಕು ಕಾರಿಡಾರ್‌ಗಳನ್ನು ಹೊಂದಿದೆ. ಕೆ.ಎಸ್.ಆರ್ ಬೆಂಗಳೂರು ನಗರ– ದೇವನಹಳ್ಳಿ(ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ) ಇದರ ಉದ್ದ 41.40 ಕಿ.ಮೀ. ಬೈಯಪ್ಪನಹಳ್ಳಿ–ಚಿಕ್ಕಬಾಣಾವರ(25 ಕಿ.ಮೀ), ಕೆಂಗೇರಿ– ವೈಟ್‌ಫೀಲ್ಡ್(35.52 ಕಿ.ಮೀ), ಹೀಲಲಿಗೆ(ಚಂದಾಪುರ)– ರಾಜಾನುಕುಂಟೆ(46.24 ಕಿ.ಮೀ). ಈ ಪೈಕಿ ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಮತ್ತು ಹೀಲಲಿಗೆ(ಚಂದಾಪುರ)– ರಾಜಾನುಕುಂಟೆ ಕಾರಿಡಾರ್‌ಗಳ ಕಾಮಗಾರಿಯನ್ನು ಮೊದಲಿಗೆ ಕೈಗೆತ್ತಿಕೊಳ್ಳಲಾಗುವುದು ಎಂದು ಯಡಿಯೂರಪ್ಪ ಹೇಳಿದರು.

ದ್ವಿಪಥ ಮಾರ್ಗ: ₹ 499 ಕೋಟಿ

ಬೈಯಪ್ಪನಹಳ್ಳಿ- ಹೊಸೂರು ನಡುವಿನ 48 ಕಿ.ಮೀ. ರೈಲು ಮಾರ್ಗ ದ್ವಿಪಥ ಯೋಜನೆಯನ್ನು ₹ 499 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಜಾರಿಗೊಳಿಸಲಾಗುತ್ತಿದೆ. ಇದಕ್ಕೆ ರಾಜ್ಯ ಸರ್ಕಾರ ₹ 250 ಕೋಟಿ ವೆಚ್ಚ ಭರಿಸಲಿದೆ ಎಂದು ಅವರು ವಿವರಿಸಿದರು.

2020- 21ರಲ್ಲಿ ರಾಜ್ಯ ಸರ್ಕಾರವು ಇದಕ್ಕಾಗಿ ₹65 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಈ ಯೋಜನೆಯು 2020ರ ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿದ್ದು, 2023ರ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಯಡಿಯೂರಪ್ಪ ಹೇಳಿದರು.

ಯಶವಂತಪುರ- ಚನ್ನಸಂದ್ರ ನಡುವಣ 22 ಕಿ.ಮೀ. ಮಾರ್ಗದ ದ್ವಿಪಥ ಯೋಜನೆಗೆ ಒಟ್ಟು ₹ 315 ಕೋಟಿ ವೆಚ್ಚವಾಗಲಿದ್ದು, ರಾಜ್ಯ ₹157 ಕೋಟಿ ಭರಿಸಲಿದೆ. ಕಳೆದ ಆರ್ಥಿಕ ವರ್ಷ ₹35 ಕೋಟಿ ಬಿಡುಗಡೆ ಮಾಡಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದರು.

ಯೋಗಾಭ್ಯಾಸದಲ್ಲಿ ನಿರತರಾಗಿದ್ದ ವಿದ್ಯಾರ್ಥಿನಿಯರು

ಸಿ.ಎಂ.ಆರ್.ವಿಶ್ವವಿದ್ಯಾಲಯದಲ್ಲಿ ಯೋಗ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಎಂ.ಆರ್.ವಿಶ್ವವಿದ್ಯಾಲಯದ ಎನ್.ಸಿ.ಸಿ, ಎನ್.ಎಸ್.ಎಸ್ ಹಾಗೂ ದೈಹಿಕ ಶಿಕ್ಷಣ ವಿಭಾಗವು ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ಯೋಗ ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಕೇಂದ್ರದ ಶಕ್ತಿಯಾ ನಾರಾಯಣ ಹಾಗೂ ರಾಷ್ಟ್ರೀಯ ಯೋಗಪಟು ಎಂ.ವರ್ಷಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದರು.

‘ಯೋಗದಿಂದಾಗಿ ವಿದ್ಯಾರ್ಥಿಗಳು ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಯೋಗಾಭ್ಯಾಸ ತುಂಬಾ ಅವಶ್ಯ. ಇದರಿಂದ ಮಾನಸಿಕ ಒತ್ತಡ ಕಡಿಮೆಯಾಗಲಿದೆ’ ಎಂದು ಎನ್‌ಸಿಸಿ ಕರ್ನಾಟಕ 9ನೇ ಬೆಟಾಲಿಯನ್‌ನ ಕಮಾಂಡಿಂಗ್ ಅಧಿಕಾರಿ ಕರ್ನಲ್ ಡಿ.ಬಿ.ಪಾಠಕ್ ಹೇಳಿದರು.

ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಸಿ.ಎಂ. ಭಾಸ್ಕರ್ ರೆಡ್ಡಿ, ರಿಜಿಸ್ಟ್ರಾರ್ ಆರ್.ಪ್ರವೀಣ್, ಡೀನ್‌ಗಳಾದ ಟಿ.ಆರ್.ಸುಬ್ರಮಣ್ಯ, ಸುಜಾ ಬೆನೆಟ್, ಪ್ರಭಾಕರ ರೆಡ್ಡಿ, ಸುಗಂತ್ ಹಾಗೂ ಎನ್‌ಸಿಸಿ ಅಧಿಕಾರಿ ಮೇಜರ್ ಆನಂದಪ್ಪ ಇದ್ದರು.

‘ಕಲಾನಿಧಿ’ ಸಂಗೀತ ಸುಧೆ

ಬೆಂಗಳೂರು: ‘ಕೋವಿಡ್‌ನಿಂದಾಗಿ ರಾಜ್ಯದ ಸಂಗೀತ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದು, ಅವರ ನೆರವಿಗಾಗಿ ರೂಪಿಸಲಾಗಿರುವ ‘ಕಲಾನಿಧಿ’ ಸಂಗೀತ ಕಾರ್ಯಕ್ರಮ ಇದೇ 25 ರಿಂದ 27ರವರೆಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗಲಿದೆ. ಎಲ್ಲರೂ ಇದನ್ನು ವೀಕ್ಷಿಸಿ ಕೈಲಾದಷ್ಟು ದೇಣಿಗೆ ನೀಡಬೇಕು’ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮನವಿ ಮಾಡಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಸಂಸದ ತೇಜಸ್ವಿ ಸೂರ್ಯ ಹಾಗೂ ಗಾಯಕ ವಿಜಯ್ ಪ್ರಕಾಶ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ನಾವು (ಮೂವರು) ಹೊಂದಿರುವ ಖಾತೆಗಳು ಹಾಗೂ ಯೂಟ್ಯೂಬ್‌ನಲ್ಲಿ ಶುಕ್ರವಾರ ಮತ್ತು ಶನಿವಾರ ಸಂಜೆ 7 ರಿಂದ ರಾತ್ರಿ 10 ಹಾಗೂ ಭಾನುವಾರ ಸಂಜೆ 4 ರಿಂದ ರಾತ್ರಿ 10 ಗಂಟೆವರೆಗೆ ಕಾರ್ಯಕ್ರಮ ನೇರ ಪ್ರಸಾರವಾಗಲಿದೆ. ಕಾರ್ಯಕ್ರಮ ವೀಕ್ಷಿಸುತ್ತಿರುವಾಗಲೇ ಯಾವ ಖಾತೆಗೆ ಹಣ ವರ್ಗಾಯಿಸಬೇಕು ಎಂಬ ಮಾಹಿತಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತದೆ. ದೇಣಿಗೆಯಿಂದ ಸಂಗ್ರಹವಾಗುವ ಹಣವನ್ನು ಕಲಾವಿದರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗುವುದು’ ಎಂದರು.

ಸಂಸದ ತೇಜಸ್ವಿ ಸೂರ್ಯ ‘ಕೋವಿಡ್‌ನಿಂದಾಗಿ ಕಲಾವಿದರ ಬದುಕು ದುಸ್ತರವಾಗಿದೆ. ಕಲಾ ಸೇವಕರ ಸಹಾಯಕ್ಕೆ ನಿಧಿ ಸಂಗ್ರಹಣಾ ಅಭಿಯಾನ ಹಮ್ಮಿಕೊಂಡಿದ್ದೇವೆ. ಸಂಗೀತದಲ್ಲಿ ಹೆಸರು ಮಾಡಿರುವ ಕಲಾವಿದರು ಕಲಾನಿಧಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಾಡಿದ್ದಾರೆ. ಈ ಹಣ ಅರ್ಹರಿಗೇ ಸೇರುತ್ತದೆ’ ಎಂದರು.

ಗಾಯಕ ವಿಜಯ್ ಪ್ರಕಾಶ್ ‘ಗುರುಕಿರಣ್, ಅರ್ಜುನ್ ಜನ್ಯ, ರಾಜೇಶ್ ಕೃಷ್ಣನ್, ಅರ್ಚನಾ ಉಡುಪ, ಅನುರಾಧ ಭಟ್, ರಘು ದೀಕ್ಷಿತ್ ಹೀಗೆ 100ಕ್ಕೂ ಹೆಚ್ಚು ಗಾಯಕರು ಸಂಭಾವನೆ ಪಡೆಯದೆ ಹಾಡಿದ್ದಾರೆ. ಸಕ್ರಿಯವಾಗಿ ಕಲಾ ಸೇವೆ ಮಾಡಿರುವ, ಕಲೆಗಾಗಿಯೇ ಬದುಕುತ್ತಿರುವವರಿಗೆ ಈ ಹಣ ಸೇರುತ್ತದೆ. ಈಗಾಗಲೇ 400ಕ್ಕೂ ಹೆಚ್ಚು ಕಲಾವಿದರ ಪಟ್ಟಿ ಸಿದ್ಧಪಡಿಸಲಾಗಿದೆ. ನಾವು ಕೊಡುತ್ತಿರುವ ಹಣ ಅರ್ಹರಿಗೆ ತಲುಪುತ್ತಿದೆಯೇ ಎಂಬುದನ್ನು ತೇಜಸ್ವಿ ಸೂರ್ಯ ಅವರ ತಂಡ ಪರಿಶೀಲಿಸುತ್ತದೆ. ಕಾರ್ಯಕ್ರಮಕ್ಕಾಗಿ ಸತತ ನಾಲ್ಕು ದಿನ ಚಿತ್ರೀಕರಣ ನಡೆಸಲಾಗಿದೆ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ನೆನಪಿಗಾಗಿ ಸೋನು ನಿಗಂ ಅವರು ಹಿಂದಿ ಹಾಡೊಂದನ್ನು ಹಾಡಿದ್ದಾರೆ. ಅದನ್ನು ಬಿಟ್ಟು ಉಳಿದೆಲ್ಲವೂ ಕನ್ನಡ ಹಾಡುಗಳೇ’ ಎಂದು ಮಾಹಿತಿ ನೀಡಿದರು.

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಕರ್ನಾಟಕ ಸರ್ಕಾರ



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಬಿಎಸ್‌ಆರ್‌ಪಿ
(ಬೆಂಗಳೂರು ಉಪನಗರ ರೈಲು ಯೋಜನೆ)

ಭಾರತದ ಅತ್ಯಂತ ಸುಸಂಘಟಿತ
ಉಪನಗರ ರೈಲು ಯೋಜನೆ

ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಮುಖ್ಯ ಉದ್ದೇಶ ಬೆಂಗಳೂರು ನಗರವನ್ನು ಉಪನಗರ ಪ್ರದೇಶಗಳಿಗೆ ಮತ್ತು ನೆರೆಹೊರೆಯ ಉಪನಗರಗಳಿಗೆ ಸಂಪರ್ಕಿಸುವುದು ಮತ್ತು ನಗರದಲ್ಲಿನ ಸಂಚಾರ ದಟ್ಟಣೆಯನ್ನು ನಿವಾರಿಸುವುದು. ಈ ನಿಟ್ಟಿನಲ್ಲಿ ನಮ್ಮ ಮೆಟ್ರೋದ ಹಾಲಿ ಇರುವ ಕಾರಿಡಾರ್‌ಗಳು ಮತ್ತು ಹೊಸ ಹಂತಗಳ ವಿಸ್ತರಣೆ, ರಸ್ತೆಗಳ ಉನ್ನತೀಕರಣ, ಸಿಗ್ನಲ್ ಮುಕ್ತ ಕಾರಿಡಾರ್‌ಗಳು, ವೈಟ್‌ಟಾಪಿಂಗ್ ಮತ್ತು ರಸ್ತೆಗಳ ಅಗಲೀಕರಣ ಇತ್ಯಾದಿ ಪ್ರಮುಖ ಮೂಲಸೌಲಭ್ಯಗಳನ್ನು ಸಹ ಒದಗಿಸಲಾಗುತ್ತಿದೆ. ಉಪನಗರ ಪ್ರದೇಶದ ಸಾಮಾಜಿಕ - ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡಿದೆ.

- ಬಿಎಸ್‌ಆರ್‌ಪಿಯು ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಸಹಭಾಗಿತ್ವ ಯೋಜನೆ.
- ಅಕ್ಟೋಬರ್, 2020ರಲ್ಲಿ ಈ ಯೋಜನೆಗೆ ಅನುಮೋದನೆ. ಯೋಜನೆಯ ವೆಚ್ಚ ರೂ.15767 ಕೋಟಿ. ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ ಹಾಗೂ ಬಾಹ್ಯಸಾಲ ಹೀಗೆ ಅನುಕ್ರಮವಾಗಿ 20:20:60 ಅನುಪಾತದಲ್ಲಿ ಆರ್ಥಿಕ ಸಂಪನ್ಮೂಲ ಕ್ರೋಡೀಕರಣ.
- ಈ ಯೋಜನೆಗೆ 2020-2021ರ ಆರ್ಥಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದಿಂದ ರೂ.400 ಕೋಟಿ ಅನುದಾನ ಬಿಡುಗಡೆ.
- ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ "ಕ-ರೈಡ್" (K.RIDE) ಸಂಸ್ಥೆಯಿಂದ ಈ ಯೋಜನೆಯ ಕಾರ್ಯಾಚರಣೆ



ಮಾಸ್ಕ್ ಧರಿಸಿ ವ್ಯಕ್ತಿಗತ ಅಂತರ ಕಾಪಾಡಿ ಆರೋಗ್ಯದಿಂದಿರಿ

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪರವರು ಬೆಂಗಳೂರು ದಂಡು ಮತ್ತು ಹೀಲಲಿಗೆ (ಚಂದಾಪುರ) ನಡುವಿನ ಮಾರ್ಗಗಳನ್ನು ಪರಿಶೀಲಿಸುತ್ತಿರುವುದು.

- **ಉಪನಗರ ರೈಲು ಯೋಜನೆಗೆ ಒಳಪಡುವ 4 ಕಾರಿಡಾರ್‌ಗಳು ಹಾಗೂ ಪ್ರತಿ ಕಾರಿಡಾರ್‌ನ ಉದ್ದದ ವಿವರ:**
  1. ಕೆಎಸ್‌ಆರ್ ಬೆಂಗಳೂರು ನಗರ-ದೇವನಹಳ್ಳಿ (ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ)-41.40 ಕಿ.ಮೀ
  2. ಬೈಯಪ್ಪನಹಳ್ಳಿ-ಚಿಕ್ಕಬಾಣಾವರ-25 ಕಿಮೀ
  3. ಕೆಂಗೇರಿ-ವೈಟ್‌ಫೀಲ್ಡ್-35.52 ಕಿ.ಮೀ
  4. ಹೀಲಲಿಗೆ (ಚಂದಾಪುರ)-ರಾಜಾನುಕುಂಟೆ-46.24 ಕಿ.ಮೀ.

ರೈಲ್ವೆ ಮಾರ್ಗದ ದ್ವಿಪಥೀಕರಣ ಯೋಜನೆ

- ಯಶವಂತಪುರ-ಚನ್ನಸಂದ್ರ (22 ಕಿ.ಮೀ) ಮತ್ತು ಬೈಯಪ್ಪನಹಳ್ಳಿ-ಹೊಸೂರು (48 ಕಿ.ಮೀ.) ನಡುವಿನ ಏಕಪಥ ಮಾರ್ಗವನ್ನು ದ್ವಿಪಥ ಮಾರ್ಗವಾಗಿ ಮಾರ್ಪಾಡು. ಇದರಿಂದ ಯಶವಂತಪುರ ರೈಲು ನಿಲ್ದಾಣ ಮತ್ತು ಬೆಂಗಳೂರು ನಿಲ್ದಾಣಗಳಿಂದ ಹೊರವಲಯಕ್ಕೆ ಹೆಚ್ಚು ಪ್ಯಾಸೆಂಜರ್ ರೈಲುಗಳ ಆರಂಭಕ್ಕೆ ಅನುಕೂಲ.
- ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯ ಅನುಕ್ರಮವಾಗಿ 50:50 ಅನುಪಾತದಲ್ಲಿ ಯೋಜನೆ ವೆಚ್ಚ ಭರಿಸುವವು.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ತೈಲ ಬೆಲೆ ಏರಿಕೆ: ಜುಲೈನಲ್ಲಿ ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): ಹಣದುಬ್ಬರ ಹಾಗೂ ತೈಲ ಬೆಲೆ ಏರಿಕೆ ವಿರುದ್ಧ ಜುಲೈ 7ರಿಂದ 17ರ ವರೆಗೆ ದೇಶದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲು ಕಾಂಗ್ರೆಸ್ ಗುರುವಾರ ತೀರ್ಮಾನಿಸಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಕರೆದಿದ್ದ ಪಕ್ಷದ ವಿವಿಧ ರಾಜ್ಯಗಳ ಪ್ರಧಾನ ಕಾರ್ಯದರ್ಶಿಗಳ ಹಾಗೂ ಉಸ್ತುವಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

'ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ, ಖಾದ್ಯ ತೈಲ, ಆಹಾರ ಧಾನ್ಯಗಳ ಬೆಲೆ ಹೆಚ್ಚಳ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೇ 2ರಿಂದ ಸರ್ಕಾರವು ತೈಲ ಬೆಲೆಯನ್ನು 29 ಬಾರಿ ಹೆಚ್ಚಿಸಿದೆ. 150ಕ್ಕೂ ಅಧಿಕ ನಗರಗಳಲ್ಲಿ ಪೆಟ್ರೋಲ್ ದರವು ನೂರರ ಗಡಿ ದಾಟಿದೆ. ಪೆಟ್ರೋಲ್ ಮತ್ತು ಡೀಸೆಲ್‌ಗೆ ವಿಧಿಸಿರುವ ಅಬಕಾರಿ ಸುಂಕದಿಂದ ಬಿಜೆಪಿ ನೇತೃತ್ವದ ಸರ್ಕಾರವು ಕಳೆದ 7 ವರ್ಷಗಳಲ್ಲಿ ₹22ಲಕ್ಷ ಕೋಟಿ ಗಳಿಸಿದೆ ಎಂದೂ ಅವರು ಹೇಳಿದರು.

ಖಾದ್ಯ ತೈಲದ ಬೆಲೆ ಆರು ತಿಂಗಳಲ್ಲಿ ದ್ವಿಗುಣಗೊಂಡಿದೆ. ಕೋವಿಡ್ ಪರಿಣಾಮ ನಿರುದ್ಯೋಗ, ಸಂಬಳ ಕಡಿತದಿಂದಾಗಿ ಸಂಕಷ್ಟಕ್ಕೀಡಾಗಿರುವ ಜನರಿಗೆ ಬೆಲೆ ಏರಿಕೆಯು ಇನ್ನಷ್ಟು ಹೊರೆಯಾಗಿದೆ. ಈ ಕಾರಣಕ್ಕೆ ಕಾಂಗ್ರೆಸ್ ವತಿಯಿಂದ ಬ್ಲಾಕ್, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

ಮಧ್ಯಾಹ್ನದ ಬಿಸಿಯೂಟದ ಬದಲಾಗಿ ನೀಡಿರುವ ದಿನಸಿ ಕಿಟ್‌ಗಳನ್ನು ನಗರದ ಬ್ಯಾಟರಾಯನಪುರದ ಸರ್ಕಾರಿ ಶಾಲೆ ವಿದ್ಯಾರ್ಥಿಗಳು ಮನೆಗೆ ಹೊತ್ತೊಯ್ಯುತ್ತಿರುವ ದೃಶ್ಯ ಗುರುವಾರ ಕಂಡುಬಂದಿತು – ಪ್ರಜಾವಾಣಿ ಚಿತ್ರ

'ಕೋವಿಡ್ ವೇಳೆ ಮಕ್ಕಳ ಕಲಿಕಾ ಸಾಮರ್ಥ್ಯದಲ್ಲಿ ಹಿನ್ನಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಶೇ 92ರಷ್ಟು ಮಕ್ಕಳು ತಮ್ಮ ಹಿಂದಿನ ತರಗತಿಯ ಕನಿಷ್ಠ ಭಾಷಾ ಸಾಮರ್ಥ್ಯಗಳನ್ನು ಕಳೆದುಕೊಂಡಿದ್ದಾರೆ' ಎಂದು ಮಹಿಳಾ ಹೋರಾಟಗಾರ್ತಿ ವಾಣಿ ಪೆರಿಯೋಡಿ ತಿಳಿಸಿದರು.

ಚೈಲ್ಡ್ ರೈಟ್ಸ್ ಟ್ರಸ್ಟ್ ಆನ್‌ಲೈನ್ ಮೂಲಕ ಮಂಗಳವಾರ ಹಮ್ಮಿಕೊಂಡಿದ್ದ 50ನೇ ಇ-ಮಂಥನದಲ್ಲಿ 'ಕಲ್ಪನೆಯಿಂದ ಸಾಧ್ಯತೆಯೆಡೆಗೆ ಮಕ್ಕಳ ಹಕ್ಕುಗಳು' ಚರ್ಚೆಯಲ್ಲಿ ಮಾತನಾಡಿದರು.

'ಈ ವರ್ಷದ ಜನವರಿಯಲ್ಲಿ ಐದು ರಾಜ್ಯಗಳಲ್ಲಿ 2ರಿಂದ 6ನೇ ತರಗತಿ ಓದುತ್ತಿರುವ 16 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸಂಶೋಧನೆಗೆ ಒಳಪಡಿಸಲಾಗಿತ್ತು. ಇವರಲ್ಲಿ ಭಾಷೆ ಮತ್ತು ಗಣಿತಕ್ಕೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡಿದಾಗ, ಚಿತ್ರ ನೋಡಿ ವಿವರಣೆ, ಪದಗಳನ್ನು ಓದುವುದು, ಅರ್ಥಗ್ರಹಿಕೆ, ವಾಕ್ಯರಚನೆಯಂತಹ ಮೂಲ ಸಾಮರ್ಥ್ಯಗಳಲ್ಲಿ ಹಿನ್ನಡೆ ಕಂಡುಬಂತು' ಎಂದು ವಿವರಿಸಿದರು.

'ಮುಂದಿನ ತರಗತಿ ತಲುಪಲು ಇಂತಹ ಸಾಮರ್ಥ್ಯಗಳು ಅಡಿಪಾಯ. ಶಿಕ್ಷಣ ಎಂದರೆ ಇತರರೊಡನೆ ಒಡನಾಟ ಇರಬೇಕು. ಈಗಿನ ಆನ್‌ಲೈನ್ ಶಿಕ್ಷಣದಲ್ಲಿ ಒಡನಾಟ ಕಡಿಮೆ, ಹಾಸ್ಯಕ್ಕೆ ಅವಕಾಶ ಇಲ್ಲ. ಪರದೆ ನೋಡುತ್ತಲೇ ಕೂರಬೇಕಾದ ಅನಿವಾರ್ಯತೆ ಇದೆ. ಇವರಿಗಾಗಿ ಸೃಜನಶೀಲ ಹಾಗೂ ವಿಕೇಂದ್ರೀಕೃತ ಮಾರ್ಗಗಳನ್ನು ಕಂಡುಕೊಳ್ಳಬೇಕು' ಎಂದರು.

ನಟ ಸುಚೇಂದ್ರ ಪ್ರಸಾದ್,' ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ. ಆದರೆ, ಮಾಹಿತಿ, ಅರಿವು, ಜಾಗೃತಿ ಮೂಡಿಸುವ ಹಂತಗಳಲ್ಲೇ ಇನ್ನೂ ಎಷ್ಟು ವರ್ಷಗಳನ್ನು ಕಳೆಯಬೇಕು?' ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಚ್. ಸಿ.ರಾಘವೇಂದ್ರ, 'ತಜ್ಞರ ಪ್ರಕಾರ ಮಕ್ಕಳ ಶಿಕ್ಷಣ ಸಾಮಾಜೀಕರಣಗೊಳ್ಳಬೇಕು. ಭಾವನಾತ್ಮಕವಾಗಿ ಬೆರೆತಾಗ ಮಾತ್ರ ಕಲಿಕೆ ಅರ್ಥಪೂರ್ಣವಾಗುತ್ತದೆ. ಆನ್‌ಲೈನ್ ಶಿಕ್ಷಣ ಉಳ್ಳವರ ಸ್ವತ್ತಾಗಿದೆ. ಅಂಗವಿಕಲರು ಹಾಗೂ ಗುಡ್ಡಗಾಡು ಪ್ರದೇಶಗಳ ಮಕ್ಕಳಿಗೆ ಈ ತಾಂತ್ರಿಕತೆ ಪಡೆಯುವುದೇ ಸವಾಲು. ಆನ್‌ಲೈನ್ ಶಿಕ್ಷಣಕ್ಕೆ ಪರ್ಯಾಯ ವ್ಯವಸ್ಥೆಗಳು ಅಗತ್ಯ' ಎಂದರು.

ಮಕ್ಕಳ ಹಕ್ಕುಗಳ ಹೋರಾಟಗಾರ್ತಿ ಸುಚಿತ್ರಾ, ಚೈಲ್ಡ್ ರೈಟ್ಸ್ ಟ್ರಸ್ಟ್‌ನ ವಾಸುದೇವ ಶರ್ಮ, ನಾಗಸಿಂಹ ಜಿ.ರಾವ್ ಹಾಗೂ ಇತರರು ಭಾಗವಹಿಸಿದ್ದರು.

ವಿಧಾನಸೌಧದತ್ತ ಸುಳಿಯದ ಸಚಿವರು

ಬೆಂಗಳೂರು: ಎಲ್ಲ ಸಚಿವರು ವಿಧಾನಸೌಧದಲ್ಲಿರುವ ತಮ್ಮ ಕಚೇರಿಯಲ್ಲಿ ಪ್ರತಿ ಗುರುವಾರ ಇರಬೇಕು ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸೂಚನೆ ನೀಡಿದ್ದರೂ, ಮೊದಲ ಗುರುವಾರ (ಜೂನ್ 24) ಬಹುತೇಕ ಸಚಿವರು ವಿಧಾನಸೌಧದ ಕಡೆ ಸುಳಿಯಲೇ ಇಲ್ಲ.

ಇದೇ 16ರಂದು ರಾಜ್ಯಕ್ಕೆ ಬಂದಿದ್ದ ಅರುಣ್ ಸಿಂಗ್, ಆಡಳಿತಕ್ಕೆ ಚುರುಕು ಮುಟ್ಟಿಸಲು ಮತ್ತು ಸರ್ಕಾರದ ವರ್ಚಸ್ಸು ಹೆಚ್ಚಿಸಲು ಎಲ್ಲ ಸಚಿವರು ವಿಧಾನಸೌಧದ ತಮ್ಮ ಕಚೇರಿಗೆ ಬಂದು ಶಾಸಕರಿಗೆ ಹಾಗೂ ಸಾರ್ವಜನಿಕರಿಗೆ ಲಭ್ಯವಾಗಬೇಕೆಂದು ಸೂಚಿಸಿದ್ದರು. ಆದರೆ, ಮೊದಲ ಗುರುವಾರ ಕೇವಲ ಐವರು ಸಚಿವರು ವಿಧಾನಸೌಧದಲ್ಲಿರುವ ತಮ್ಮ ಕಚೇರಿಗೆ ಬಂದಿದ್ದರು.

ಸಚಿವರಾದ ಜಗದೀಶ ಶೆಟ್ಟರ್, ಆರ್. ಅಶೋಕ, ಅರವಿಂದ ಲಿಂಬಾವಳಿ, ಆರ್. ಶಂಕರ್ ಮತ್ತು ಕೆ. ಗೋಪಾಲಯ್ಯ ಮಾತ್ರ ಬಂದಿದ್ದರು, ಅವರೂ ಕೆಲವು ತಾಸು ಮಾತ್ರ ಕಚೇರಿಯಲ್ಲಿದ್ದು ಕಾರ್ಯನಿರ್ವಹಿಸಿದರು.

ಮಲ್ಲೇಶ್ವರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಕಾರ್ಯಕರ್ತರು ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಯಾದರು

8 ಜಿಲ್ಲೆಗಳಲ್ಲಿ 'ಮಿಷನ್ ಯುವ ಸಮೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2025ರ ವೇಳೆಗೆ ಕೌಶಲ ಮತ್ತು ಉದ್ಯಮಶೀಲತೆ ವಲಯದಲ್ಲಿ 10 ದಶಲಕ್ಷ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವ ಗುರಿಯೊಂದಿಗೆ ಸರ್ಕಾರ ಅತಿದೊಡ್ಡ ಹೆಜ್ಜೆ ಇಟ್ಟಿದೆ' ಎಂದು ಕೌಶಲಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

'ಕೌಶಲ ಮತ್ತು ಉದ್ಯಮಶೀಲತೆ' ಕಾರ್ಯಪಡೆಯ ಸಭೆಯ ಬಳಿಕ ಮಾತನಾಡಿದ ಅವರು, 'ಈ ಯೋಜನೆಯನ್ನು ಆದ್ಯತೆಯ ಮೇರೆಗೆ ಜಾರಿಗೆ ತರುವ ಉದ್ದೇಶದಿಂದ ಜುಲೈ 15ರೊಳಗೆ ಕಾರ್ಯಯೋಜನೆಯ ವರದಿ ಸಲ್ಲಿಸುವಂತೆ ಕಾರ್ಯಪಡೆಗೆ ಸೂಚಿಸಲಾಗಿದೆ' ಎಂದರು.

'ಕೋವಿಡ್ ಸಂಕಷ್ಟದಿಂದ ಆರ್ಥಿಕ ಅವಕಾಶಗಳು, ಉದ್ಯೋಗ ಸರಪಳಿಯ ಮೇಲೆ ಮಾರಕ ಪರಿಣಾಮ ಬೀರಿದೆ. ಇದಕ್ಕೆ ಚೇತರಿಕೆ ನೀಡಲು 'ಮಿಷನ್ ಯುವ ಸಮೃದ್ಧಿ' ಹೆಸರಿನಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಮೈಸೂರು, ದಕ್ಷಿಣ ಕನ್ನಡ, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಯಚೂರು, ಕೊಪ್ಪಳ, ಧಾರವಾಡ ಈ ಎಂಟು ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುವುದು' ಎಂದರು.

ಕಾರ್ಯಪಡೆಯ ಅಧ್ಯಕ್ಷ ಹಾಗೂ ಕೌಶಲಾವೃದ್ಧಿ ಇಲಾಖೆ ಕಾರ್ಯದರ್ಶಿ ಸೆಲ್ವಕುಮಾರ್, ಕೌಶಲ-ಉದ್ಯಮಶೀಲತೆ ಕಾರ್ಯಪಡೆಯ ಸಹ ಸಂಚಾಲಕರೂ ಆಗಿರುವ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್, ಉದ್ಯಮಿ ಮದನ್ ಪದಕಿ (ಒನ್ ಬ್ರಿಡ್ಜ್ ಕಂಪನಿ ಸಿಇಒ), ಮುಖ್ಯಮಂತ್ರಿಯ ಸಲಹೆಗಾರ ಹಾಗೂ ವಿಷನ್ ಗ್ರೂಪ್ ಚೇರ್ಮನ್ ಪ್ರಶಾಂತ್ ಪ್ರಕಾಶ್ ಸಭೆಯಲ್ಲಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Form No. URC-2

Advertisement giving notice about registration under Part I of Chapter XXI [Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

1. Notice is hereby given that in pursuance of sub-section (2) of section 366 of the Companies Act, 2013, an application has been made to the Registrar at Bangalore, Karnataka that EDUVY TECHNOLOGY LLP, a LLP incorporated under the LLP Act 2008 may be registered under Part I of Chapter XXI of the Companies Act 2013, as a company limited by shares.

2. The principal objects of the company are as follows: To carry on the business of facilitating online admissions and reservations to all educational courses in India

3. A copy of the draft memorandum and articles of association of the proposed company may be inspected at the office at NO. 54, Athmavidya Nagar, Kothannur P O, Doddagubbi Road, Near Saics Ceo Center, Bangalore, Karnataka, 560077 India

4. Notice is hereby given that any person objecting to this application may communicate their objection in writing to the Registrar at Registrar Of Companies, 'E' Wing, 2nd Floor, Kendriya Sadana, Kormangala, Banglore-560034, Karnataka, within twenty one days from the date of publication of this notice, with a copy to the company at its registered office.

Dated this 24th day of June 2021
FOR EDUVY TECHNOLOGY LLP
Sd/- MAJESH MOHAN
(Designated Partner)
Place: Bangalore
Date: 24/06/2021

EDUCATION CORNER

ಕ್ಲಾಸಿಫೈಡ್ಸ್

BHARATH EDUCATION SOCIETY ®

B.E.S. Pre-University College of Arts, Commerce & Science

IV Block, Jayanagar, Bengaluru - 560011
080-26637018
9886754533 / 9535558733

Free Integrated Course
NEET, JEE, K-CET, COMED-K
Affordable Fee for I & II PUC Science

SHAPE YOUR CAREER WITH INTEGRATED SKILL ENHANCEMENT PROGRAMMES

Sri S.T. Somashekar
President, Bharath Education Society
Minister for Co-operation, Govt of Karnataka



Sri B.L. Lakkegowda
Founder
B.E.S Institutions

COURSES OFFERED FOR : 2021-22

PUC: PCMB | PCMC | HEBA | SEBA | CEBA | HEPS

Languages: English, Kannada, Hindi & Sanskrit

B.E.S. EVENING P.U. COLLEGE OF ARTS & COMMERCE
HEBA | HEPS
Phone: 080-26533736 / 9945638393

BES-21205

B.E.S. Stands for the BEST and in Pursuit of Excellence in Education

Sri M. Krishna Das, Secretary, Bharath Education Society
Sri G.N.R. Mohana, GC Chairman, BES Day PU College
Sri B.R. Vasudev, GC Chairman, BES Evening PU College
Prof. G. Jayarama Reddy, Principal, BES Day PU College
Sri L. Puttamade Gowda, Principal, BES Evening PU College

Website: www.besinstitutions.edu.in Email: principalas018@gmail.com

Sri Sai Krishna Properties

NPA ಮತ್ತು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಮಾನ್ಯತೆ ಪಡೆದಿದೆ. ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯ, ಡೆವಲಪ್‌ಮೆಂಟ್ ಆಗಿರುವ ಲೇಔಟ್, ಇಂದೇ ರಿಜಿಸ್ಟ್ರೇಷನ್, ಇ ಖಾತಾ ಸಿಗುವ ಸೈಟು ಖರೀದಿಸಿ ಪ್ರಶಾಂತ ವಾತಾವರಣದಲ್ಲಿ ಮನೆ ಕಟ್ಟಲು ಅನುಕೂಲಕರವಾಗಿದೆ.

ಕುಟುಂಬ ಸಮೇತ ಸೈಟು ವೀಕ್ಷಣೆ ಮಾಡಿ, ನಿಮ್ಮ ಕನಸಿನ ಮನೆ ನನಸಾಗಿಸಲು ಸೂಕ್ತ ನಿವೇಶನ ಬುಕ್ ಮಾಡಿ

BMRDA-NPA APPROVED E-KHATA

SITES

Nelamangala Town

TUMKUR ROAD

Few Minutes from New APMC Market

Ready For Registration

Ready & Construction

Bank Loan Available

ಸರ್ಕಾರಿ ಸಂಸ್ಥೆಗಳಿಂದ ಮಾನ್ಯತೆ ಪಡೆದ ಸೈಟುಗಳು

ನೆಲಮಂಗಲ ಟೌನ್

ತುಮಕೂರು ರಸ್ತೆ

ನ್ಯೂ ಎಪಿಎಂಸಿ ಮಾರ್ಕೆಟ್‌ನಿಂದ ಕೆಲವೇ ನಿಮಿಷ

Upcoming 300 feet Township Ring Road, Near KSIIDC Industrial Area

Connectivity Kempegowda International Airport Road

ಲೇಔಟ್‌ನ ಸಮೀಪವಿರುವ ಸ್ಥಳಗಳು:
- ನೆಲಮಂಗಲ ರೈಲ್ವೆ ನಿಲ್ದಾಣ 01 ಕಿ.ಮೀ
- ಪ್ರಪೋಸಡ್ ಮೆಟ್ರೋ ಸ್ಟೇಷನ್ 05 ಕಿ.ಮೀ
- ಕುಣಿಗಲ್ ರಸ್ತೆ 03 ಕಿ.ಮೀ
- ನೈಸ್ ರಸ್ತೆಯಿಂದ 15 ಕಿ.ಮೀ
- ಪೀಣ್ಯ ಕೈಗಾರಿಕಾ ಪ್ರದೇಶ 18 ಕಿ.ಮೀ
- ಔಟರ್ ರಿಂಗ್ ರಸ್ತೆಯಿಂದ 20 ಕಿ.ಮೀ
- ಯಶವಂತಪುರ 23 ಕಿ.ಮೀ

ಲೇಔಟ್ ಸೌಲಭ್ಯಗಳು:
- ಗೇಟೆಡ್ ಕಮ್ಯುನಿಟಿ ಲೇಔಟ್
- ವಿದ್ಯುತ್ ಮತ್ತು ಬೀದಿ ದೀಪಗಳು
- ಉದ್ಯಾನವನ
- ಒಳಚರಂಡಿ ಸಂಸ್ಕರಣಾ ಘಟಕ
- ಟ್ರೀ ಅವೆನ್ಯೂ ಪ್ಲಾಂಟೇಶನ್
- ಅಗಲವಾದ ಡಾಂಬರ್ ರಸ್ತೆ
- 24 ಗಂಟೆಗಳ ಸೆಕ್ಯೂರಿಟಿ

99454 50444, 99003 77964, 97310 02677

RENTAL PROPERTIES

Accommodation Available

Flats

PRESTIGE LEELA RESIDENCES, Luxury apartments for Rent with all amenities near Old Airport Road. Starting from Rs. 2 lakhs onwards. Call: 9900020184.

AUGUSTA GOLF VILLAGE, Luxury units for rent, 3 & 4 BHK ready to occupy with all amenities, Off Hennur Road. Call: 9900085276.

THREE BHK Apartment 9th floor fully furnished & Gadgets at HighPoint, Chalukya Circle, Palace Road. Rent 69,000/-, ample car parking. 9980010567.

PRESTIGE LAKESIDE HABITAT, Premium apartments for Rent with all amenities in Whitefield. Call: 6366971311.

PRESTIGE WHITE MEADOWS, Luxury apartments for Rent with all amenities in Whitefield. Call: 9900078809.

PRESTIGE FALCON CITY, Kanakapura Road, 2/ 2.5/ 3/ 4 BHK apartments for Rent with all amenities. Call: 9108050577

Accommodation Wanted

Industrial And Factory

GODOWN/ WAREHOUSE Space Require 5000sqft to 10000sft for Rent Surrounding Nayandanhalli/ Kengeri/ Chamarajpet and Kanakapura Road close to-City with Good Parking Call:9740803686

Drivers required for earth moving equipment
For our projects on one year contract basis with relevant experience of about 5 years in operating Excavator, Dumper (Leyland), Transit Mixer etc, With valid driver licence and knowledge of safety checks of equipment.
Applyto:hrd0770@gmail.com

EDUCATION SPECIAL

We are coming out with special offer for Admission Notice, Education Success Congratulation Ads

DH Classifieds — More value, more impact

For details contact:
Jerry : 9731810277
Vishal : 9845114560
Tanveer: 9886213331

E-mail: dhclassifieds@deccanherald.co.in

REAL ESTATE SELLING

Flat

Rajarajeshwari Nagar

3BHK FLATS, 56L, Opposite Gopalan Arcade, Metro Station. OC+CC, Canara Bank Approved. Contact: 9611374397

Sites

Lingarajapuram

SITE FOR SALE KSFC Layout Corner Site A-KHATHA No.58 Lingarajapura Total Sqft 2860/- Contact 9986258271 Broker Excuse

Sunkadakatte

SALE, SUNKADAKATTE, Near Anjali School, 30X50, south facing. Rs. 5300/- sqft (negotiable). Contact: 9880439138

Vishweshwariah Layout

VISHWESHWARAIAH LAYOUT BDA SITE SALE 6th-BLOCK, 40x60 EAST FACE 5000/-Negotiable 40ft Road Contact: 9341733480/ 8892901567

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

JOB OPPORTUNITIES

General

CAREER OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

Teachers/ Professors

REQUIRED TEACHERS, Good English fluency, Experience in online and offline High School:SCIENCE and SOCIAL Primary: ENGLISH.ROYAL PUBLIC SCHOOL.Jnanabharati: 9035033560,8867569333

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

PERSONAL

Change of Name

I, A SYED AFSAR S/o Late SYED ABDULLA R/@ No. 45/2, 1st Cross, Lazer Road, MK Palya, Frazer Town , Bengaluru 560005 have changed to SYED AFSAR vide affidavit dated 24-06-2021 before notary Prakash C Bengaluru

14833627X, SEP/MT, Dokare Mahesh Diwakar, 1ATC, my father name service record DEWAKAR TULSIRAM DOKARE instead of DIWAKAR TULSHIRAM DOKARE notary KV Mani, Bangalore.

I, MOHAMMED IMAAD FAREED R/@ No.450,7th B main, 4th B Cross, Near Canara Bank HRBR Layout, Kalyan Nagar, Bangalore 560043 have changed my Name to MOHAMMED IMAAD Vide Affidavit dated 23-06-2021 before Notary N.Kanchivaradaraju Bangalore

MINU TAMANG, Wife of, JC681770F, SUB/ASH, MAHENDRA TAMANG, Vill-EAST MAIN ROAD, KALIMPONG, DARJEELING, WEST BENGAL, have changed my name from MINU TAMANG to MEENU TAMANG, 24/06/2021, Notary K.V. Mani, Bangalore

FOR SALE PU & DEGREE COLLEGE

Reputed PU & Degree College is for Sale with Upto date Documents and Running Successfully (Affiliated to Govt of Karnataka Location : Bangalore
Contact : 7795436324

ಇಬ್ಬರ ಹತ್ಯೆ; ಆರೋಪಿಗಳ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಮುಖ್ಯಾಂಶಗಳು

- ಪೂರ್ವ ವಿಭಾಗದ ಪೊಲೀಸರ ಕಾರ್ಯಾಚರಣೆ
- ಪ್ರತ್ಯೇಕ ಕೊಲೆ ಪ್ರಕರಣ

ಬೆಂಗಳೂರು: ಗೋವಿಂದಪುರ ಹಾಗೂ ಪುಲಿಕೇಶಿನಗರ ಠಾಣೆ ವ್ಯಾಪ್ತಿಲ್ಲಿ ನಡೆದಿದ್ದ ಪ್ರತ್ಯೇಕ ಕೊಲೆ ಪ್ರಕರಣಗಳ ಮೂವರು ಆರೋಪಿಗಳನ್ನು ಕಾಲಿಗೆ ಗುಂಡು ಹಾರಿಸಿ ಪೂರ್ವ ವಿಭಾಗದ ಪೊಲೀಸರು ಗುರುವಾರ ಸೆರೆ ಹಿಡಿದಿದ್ದಾರೆ.

'ರೌಡಿ ಸೈಯದ್ ಕರೀಂ ಅಲಿ ಹಾಗೂ ಅಪರಾಧ ಹಿನ್ನೆಲೆಯುಳ್ಳ ಥಾಮಸ್ ಎಂಬಾತನನ್ನು ಕೊಲೆ ಮಾಡಲಾಗಿತ್ತು. ಪರಾರಿಯಾಗಿದ್ದ ಆರೋಪಿಗಳಾದ ಮೊಹಮ್ಮದ್ ಸಲೀಂ (28). ದಿನೇಶ್ ಹಾಗೂ ಸುಹೇಲ್ ಎಂಬುವರನ್ನು ಗುಂಡು ಹೊಡೆದು ಬಂಧಿಸಲಾಗಿದೆ. ಗುಂಡೇಟಿನಿಂದ ಗಾಯಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕತ್ತು ಕೊಯ್ದು ರೌಡಿ ಹತ್ಯೆ: 'ಗೋವಿಂದಪುರದ ಶಾಂಪುರ ರೈಲ್ವೆ ಹಳಿ ಬಳಿ ರೌಡಿ ಸೈಯದ್ ಕರೀಂ ಅಲಿಯನ್ನು ಕತ್ತು ಕೊಯ್ದು ಜೂನ್ 21ರಂದು ರಾತ್ರಿ ಹತ್ಯೆ ಮಾಡಲಾಗಿತ್ತು. ಆರೋಪಿ ಮೊಹಮ್ಮದ್ ಸಲೀಂ, ಸಹಚರರಾದ ವಾಸೀಂ, ಇರ್ಷಾದ್ ಹಾಗೂ ಶಾಹಿದ್ ಜೊತೆ ಕೃತ್ಯ ಎಸಗಿದ್ದ. ನಾಲ್ವರನ್ನೂ ಇದೀಗ ಬಂಧಿಸಲಾಗಿದೆ' ಎಂದು ಅಧಿಕಾರಿ ತಿಳಿಸಿದರು.

'ತಲೆಮರೆಸಿಕೊಂಡಿದ್ದ ಆರೋಪಿ, ಎಚ್‌ಬಿಆರ್ ಲೇಔಟ್ ಸಮೀಪದ ಅರಣ್ಯ ಪ್ರದೇಶದಲ್ಲಿ ಅಡಗಿರುವ ಮಾಹಿತಿ ಸಿಕ್ಕಿತ್ತು. ಪಿಎಸ್‌ಐ ಇಮ್ರಾನ್ ನೇತೃತ್ವದ ತಂಡ ಗುರುವಾರ ನಸುಕಿನಲ್ಲಿ ಸ್ಥಳಕ್ಕೆ ಹೋಗಿತ್ತು. ಪರಾರಿಯಾಗಲು ಯತ್ನಿಸಿದ್ದ ಆರೋಪಿ, ಕಾನ್‌ಸ್ಟೆಬಲ್ ಹಂಸ ಮೇಲೆ ಹಲ್ಲೆ ಮಾಡಿದ್ದ. ರಕ್ಷಣೆಗೆ ಹೋಗಿದ್ದ ಪಿಎಸ್‌ಐ ಇಮ್ರಾನ್, ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಕೆ ನೀಡಿದರು. ಅವರ ಮೇಲೂ ಹಲ್ಲೆ ಮಾಡಲು ಆರೋಪಿ ಮುಂದಾಗಿದ್ದ. ಆಗ ಆತನ ಕಾಲಿಗೆ ಗುಂಡು ಹೊಡೆಯಲಾಗಿದೆ' ಎಂದೂ ಅಧಿಕಾರಿ ಹೇಳಿದರು.

'ಸ್ಥಳೀಯ ನಿವಾಸಿ ಸಲೀಂ, ಅಪರಾಧ ಹಿನ್ನೆಲೆಯುಳ್ಳವ. ಯಶವಂತಪುರ ಹಾಗೂ ಶಿವಾಜಿನಗರ ಠಾಣೆಯಲ್ಲಿ ಆತನ ವಿರುದ್ಧ ಪ್ರಕರಣ ದಾಖಲಾಗಿದ್ದವು' ಎಂದೂ ತಿಳಿಸಿದರು.

ಹಳೇ ವೈಷಮ್ಯದಿಂದ ಕೊಲೆ: 'ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಜೂನ್ 22ರಂದು ರಾತ್ರಿ ಥಾಮಸ್ ಎಂಬುವರನ್ನು ಕೊಲೆ ಮಾಡಲಾಗಿತ್ತು. ಆರೋಪಿಗಳಾದ ದಿನೇಶ್ ಹಾಗೂ ಸುಹೇಲ್‌ನನ್ನು ಗುಂಡು ಹಾರಿಸಿ ಸೆರೆಹಿಡಿಯಲಾಗಿದೆ. ಅವರಿಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ಅಧಿಕಾರಿ ಹೇಳಿದರು.

'ಸುಲಿಗೆ ಗ್ಯಾಂಗ್ ಕಟ್ಟಿಕೊಂಡಿದ್ದ ಆರೋಪಿಗಳು, ಥಾಮಸ್ ಜೊತೆ ವೈಷಮ್ಯ ಹೊಂದಿದ್ದರು. ಅದೇ ಕಾರಣಕ್ಕೆ ಹತ್ಯೆ ಮಾಡಿ ಪರಾರಿಯಾಗಿದ್ದರು. ಬಂಧಿಸಲು ಹೋಗಿದ್ದ ಪೊಲೀಸರ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದರು. ಹೀಗಾಗಿ, ದಿನೇಶ್ ಹಾಗೂ ಸುಹೇಲ್ ಮೇಲೆ ಗುಂಡು ಹಾರಿಸಲಾಗಿದೆ' ಎಂದೂ ತಿಳಿಸಿದರು.

ಆರೋಪಿಗಳ ಪತ್ತೆಗೆ ಪೊಲೀಸರ ಮೂರು ತಂಡ ರಚನೆ • ಸಹಚರರು ಸೇರಿ ಹಲವರ ವಿಚಾರಣೆ

ಮಾಜಿ ಕಾರ್ಪೊರೇಟರ್ ರೇಖಾ ಹತ್ಯೆ

ಪ್ರಜಾವಾಣಿ ವಾರ್ತೆ

ರೇಖಾ ಕದಿರೇಶ್

ಬೆಂಗಳೂರು: ನಗರದ ಛಲವಾದಿಪಾಳ್ಯ ವಾರ್ಡ್‌ನ ಮಾಜಿ ಕಾರ್ಪೊರೇಟರ್ ಬಿಜೆಪಿಯ ಆರ್. ರೇಖಾ ಕದಿರೇಶ್ ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹೊಡೆದು ಗುರುವಾರ ಬೆಳಿಗ್ಗೆ ಹತ್ಯೆ ಮಾಡಿದ್ದಾರೆ.

ರೇಖಾ ಪತಿ ಕದಿರೇಶ್ ಅವರನ್ನೂ 2018ರ ಫೆಬ್ರುವರಿ 7ರಂದು ಕೊಲೆ ಮಾಡಲಾಗಿತ್ತು. ಇದೀಗ ರೇಖಾ ಹತ್ಯೆಯಾಗಿದ್ದು, ಈ ಬಗ್ಗೆ ಕಾಟನ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಪೊಲೀಸರ ಮೂರು ವಿಶೇಷ ತಂಡಗಳನ್ನು ರಚಿಸಲಾಗಿದೆ.

'ವಾರ್ಡ್ ವ್ಯಾಪ್ತಿಯ ಫ್ಲವರ್ ಗಾರ್ಡನ್‌ನಲ್ಲಿ ವಾಸವಿದ್ದ ರೇಖಾ, ಮನೆ ಬಳಿ ಕಚೇರಿ ಹೊಂದಿದ್ದರು. ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದವರಿಗೆ ಆಹಾರ ಪೊಟ್ಟಣ ವಿತರಿಸಲು ಬೆಂಬಲಿಗರ ಜೊತೆ ಕಚೇರಿಗೆ ಬಂದಿದ್ದರು. ಪೊಟ್ಟಣ ವಿತರಿಸುವ ಸಂದರ್ಭದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿ, ಮಾತನಾಡಬೇಕೆಂದು ಹೇಳಿ ರೇಖಾ ಅವರನ್ನು ಕಚೇರಿಯಿಂದ ಹೊರಗೆ ಕರೆದುಕೊಂಡು ಬಂದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಚೇರಿ ಎದುರು ನಿಂತಿರುವಾಗಲೇ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ರೇಖಾ ಮೇಲೆ ಏಕಾಏಕಿ ಮಾರಕಾಸ್ತ್ರ ಬೀಸಿದ್ದರು. ಗಾಯಗೊಂಡು ಚೀರಾಡುತ್ತಲೇ ರೇಖಾ ಸ್ಥಳದಿಂದ ತಪ್ಪಿಸಿಕೊಳ್ಳಲು ಮುಂದಾಗಿದ್ದರು. ಅವರನ್ನು ಬೆನ್ನಟ್ಟಿದ್ದ ಮೂವರೂ ಆರೋಪಿಗಳು, ಪುನಃ ಮಾರಕಾಸ್ತ್ರಗಳಿಂದ ಹೊಡೆದಿದ್ದರು. ಕೆಳಗೆ ಬಿದ್ದ ರೇಖಾ ಅವರ ಕತ್ತು ಕೊಯ್ದು ಪರಾರಿಯಾದರು' ಎಂದೂ ಮೂಲಗಳು ತಿಳಿಸಿವೆ.

> **ಹತ್ಯೆಗೆ ಕಾರಣವೇನು ಎಂಬುದು ತನಿಖೆಯಿಂದ ಗೊತ್ತಾಗಬೇಕು. ಮೂರು ಪ್ರತ್ಯೇಕ ತಂಡಗಳು ತನಿಖೆ ನಡೆಸುತ್ತಿದ್ದು, ಆದಷ್ಟು ಬೇಗ ಆರೋಪಿಗಳನ್ನು ಬಂಧಿಸುವ ವಿಶ್ವಾಸವಿದೆ**
> **ಮುರುಗನ್,** ಹೆಚ್ಚುವರಿ ಪೊಲೀಸ್ ಕಮಿಷನರ್

'ರಕ್ತದ ಮಡುವಿನಲ್ಲಿ ಬಿದ್ದು ನರಳುತ್ತಿದ್ದ ರೇಖಾ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಆದರೆ, ಮಾರ್ಗಮಧ್ಯೆ ಅವರು ಮೃತಪಟ್ಟರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಪರಿಚಯಸ್ಥರಿಂದಲೇ ಕೃತ್ಯ: 'ಕೃತ್ಯದ ಬಳಿಕ ಆರೋಪಿಗಳು, ದ್ವಿಚಕ್ರ ವಾಹನದಲ್ಲಿ ಪರಾರಿಯಾಗಿದ್ದಾರೆ. ರೇಖಾ ಅವರಿಗೆ ಪರಿಚಯವಿರುವವರೇ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕದಿರೇಶ್ ಬಳಿ ಅಂಗರಕ್ಷಕನಾಗಿದ್ದ ಪೀಟರ್, ಆತನ ಸ್ನೇಹಿತ ಸ್ಟೀಫನ್ ಹಾಗೂ ರೌಡಿ ಸೂರ್ಯ ಎಂಬುವರು ಹತ್ಯೆಯಲ್ಲಿ ಭಾಗಿಯಾಗಿರುವ ಅನುಮಾನವಿದೆ. ಕೃತ್ಯ ನಡೆಯುವುದಕ್ಕೂ ಮುನ್ನ ಪೀಟರ್ ಸ್ಥಳದಲ್ಲೇ ಇದ್ದ. ಹತ್ಯೆ ಬಳಿಕ ಆತನೂ ಪರಾರಿಯಾಗಿದ್ದಾನೆ. ಕಚೇರಿ ಎದುರಿನಲ್ಲೇ ಆತ, ಬಹುಮಹಡಿ ಕಟ್ಟಡ ನಿರ್ಮಿಸುತ್ತಿದ್ದ. ಆತ ರೇಖಾ ಅವರನ್ನು ಕಚೇರಿಯಿಂದ ಹೊರಗೆ ಕರೆದುಕೊಂಡು ಬಂದಿದ್ದನೆಂಬ ಮಾಹಿತಿ ಇದೆ' ಎಂದೂ ಮೂಲಗಳು ಹೇಳಿವೆ.

'ಹಳೇ ವೈಷಮ್ಯ, ಹಣಕಾಸಿ ವ್ಯವಹಾರ ಹಾಗೂ ವಾರ್ಡ್‌ನಲ್ಲಿ ಹೆಸರು ಮಾಡಲು ಆರೋಪಿಗಳು ಕೃತ್ಯ ಎಸಗಿರುವ ಸಾಧ್ಯತೆ ಇದೆ. ಮೂರು ಆಯಾಮಗಳಲ್ಲಿ ಪ್ರತ್ಯೇಕ ತಂಡಗಳು ತನಿಖೆ ಚುರುಕುಗೊಳಿಸಿವೆ. ಆರೋಪಿಗಳ ಜೊತೆ ಒಡನಾಟ ಹೊಂದಿದ್ದ ಸಹಚರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆದರೆ, ಆರೋಪಿಗಳು ಇದುವರೆಗೂ ಪೊಲೀಸರಿಗೆ ಸಿಕ್ಕಿಬಿದ್ದಿಲ್ಲ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಪತಿ ಕೊಂದವರಿಂದಲೇ ಪತ್ನಿ ಹತ್ಯೆ'

'ರೇಖಾ ಅವರ ಹತ್ಯೆ ನೋವು ತಂದಿದೆ. ಕದಿರೇಶ್ ಅವರನ್ನು ಕೊಂದು ಜೈಲಿಗೆ ಹೋಗಿ ಬಂದವರೇ ಇದೀಗ ರೇಖಾ ಅವರನ್ನೂ ಹತ್ಯೆ ಮಾಡಿರುವ ಅನುಮಾನವಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೊಲೆ ಹಿಂದೆ ಕುಟುಂಬದವರ ಕೈವಾಡ ಇದೆಯೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪೊಲೀಸ್ ಕಮಿಷನರ್ ಜೊತೆ ಮಾತನಾಡಿ, 24 ಗಂಟೆಯಲ್ಲಿ ಆರೋಪಿಗಳನ್ನು ಬಂಧಿಸುವಂತೆ ಸೂಚನೆ ನೀಡಿದ್ದಾರೆ' ಎಂದರು.

'ಆರೋಪಿಗಳಿಗೆ ಜಮೀರ್ ಬೆಂಬಲ'

'ರೇಖಾ ಅವರು ವಾರ್ಡ್‌ನಲ್ಲಿ ಉತ್ತಮ ಕೆಲಸ ಮಾಡುತ್ತಿದ್ದರು. ಐದಾರು ತಿಂಗಳಿನಲ್ಲಿ ಬಿಬಿಎಂಪಿ ಚುನಾವಣೆ ನಡೆಯಲಿದ್ದು, ವಾರ್ಡ್‌ನಲ್ಲಿ ರೇಖಾ ಅವರು ಗೆಲ್ಲುತ್ತಾರೆಂಬ ಕಾರಣಕ್ಕೆ ಈ ಹತ್ಯೆ ಮಾಡಲಾಗಿದೆ' ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆರೋಪಿಸಿದರು.

ಘಟನಾ ಸ್ಥಳದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕದಿರೇಶ್ ಹತ್ಯೆ ಪ್ರಕರಣದಲ್ಲಿ ಹೆಚ್ಚಿನ ತನಿಖೆ ನಡೆಯಲಿಲ್ಲ. ಆರೋಪಿಗಳಿಗೆ ಶಾಸಕ ಜಮೀರ್ ಅಹಮ್ಮದ್ ಖಾನ್ ಬೆಂಬಲ ನೀಡಿದ್ದರು. ತನಿಖೆ ಸರಿಯಾಗಿ ನಡೆಯದ ಕಾರಣಕ್ಕೆ ಮತ್ತೊಂದು ಜೀವ ಹೋಗಿದೆ' ಎಂದರು.

'ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲ'

'ರೇಖಾ ನನ್ನ ತಂಗಿ ಇದ್ದಂತೆ. ಕ್ಷೇತ್ರದಲ್ಲಿ ಯಾವುದೇ ಕಾರ್ಯಕ್ರಮವಾದರೂ ಅವರನ್ನು ಆಮಂತ್ರಿಸುತ್ತಿದ್ದೆ. ಅವರ ಕೊಲೆ ನನಗೆ ಆಘಾತವನ್ನುಂಟು ಮಾಡಿದೆ. ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಹತ್ಯೆ ಆರೋಪಿಗಳನ್ನು ಕೂಡಲೇ ಬಂಧಿಸಿ ಶಿಕ್ಷಿಸಬೇಕು' ಎಂದು ಶಾಸಕ ಜಮೀರ್ ಅಹಮ್ಮದ್ ಖಾನ್ ಒತ್ತಾಯಿಸಿದರು.

ಆಸ್ಪತ್ರೆಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೊಲೆಯಲ್ಲೂ ರಾಜಕೀಯ ಮಾಡಿ ನನ್ನ ವಿರುದ್ಧ ಆರೋಪ ಮಾಡುವುದು ಸರಿಯಲ್ಲ. ಕೊಲೆ ಸಂಗತಿ ತಿಳಿದು ಆಸ್ಪತ್ರೆಗೆ ಬಂದಿದ್ದೇನೆ. ರೇಖಾ ಅವರ ಮಕ್ಕಳು ಅನಾಥರಾಗಿದ್ದಾರೆ. ಅವರನ್ನು ಕಾಪಾಡುವ ಕೆಲಸ ನಾನು ಮಾಡುತ್ತೇನೆ' ಎಂದರು.

'ಸಿ.ಸಿ.ಟಿ.ವಿ ತಿರುಗಿಸಿಟ್ಟಿದ್ದ ಆರೋಪಿಗಳು'

ಕಚೇರಿ ಎದುರಿನ ಸಿ.ಸಿ.ಟಿ.ವಿ ಕ್ಯಾಮರಾ ತಿರುಗಿಸಿಟ್ಟಿರುವುದು

ರೇಖಾ ಕದಿರೇಶ್ ಅವರನ್ನು ಕಚೇರಿ ಎದುರೇ ಹತ್ಯೆ ಮಾಡಲು ಹಲವು ದಿನಗಳ ಹಿಂದೆಯೇ ಸಂಚು ರೂಪಿಸಿದ್ದ ಆರೋಪಿಗಳು, ತಮ್ಮ ಗುರುತು ಸಿಗಬಾರದೆಂದು ಕಚೇರಿಯ ಸಿ.ಸಿ.ಟಿ.ವಿ ಕ್ಯಾಮೆರಾವನ್ನು ತಿರುಗಿಸಿಟ್ಟಿದ್ದರು.

'ಇಬ್ಬರು ಮಕ್ಕಳ ಜೊತೆ ವಾಸವಿದ್ದ ರೇಖಾ, ಕಚೇರಿಗೆ ನಿತ್ಯವೂ ಬಂದು ಹೋಗುತ್ತಿದ್ದರು. ದಿನಸಿ ಕಿಟ್ ವಿತರಣೆ, ಆಹಾರದ ಪೊಟ್ಟಣ ವಿತರಣೆ ಮಾಡುತ್ತಿದ್ದರು. ಕಚೇರಿಯೊಳಗೆ ಗುರುವಾರ ಬೆಳಿಗ್ಗೆ ಹೆಚ್ಚಿನ ಜನರಿದ್ದರು. ಅಲ್ಲಿ ಹತ್ಯೆ ಮಾಡಲು ಆಗುವುದಿಲ್ಲವೆಂದು ರೇಖಾ ಅವರನ್ನು ಆರೋಪಿ ಹೊರಗೆ ಕರೆದುಕೊಂಡು ಬಂದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಚೇರಿ ಬಳಿ ಹಾಗೂ ಸುತ್ತಮುತ್ತ 7 ಸಿ.ಸಿ.ಟಿ.ವಿ ಕ್ಯಾಮೆರಾಗಳಿವೆ. ಎಲ್ಲ ಕ್ಯಾಮೆರಾಗಳನ್ನು ಮೇಲಕ್ಕೆ ಮುಖ ಮಾಡಿ ತಿರುಗಿಸಿಡಲಾಗಿದೆ. ಅದು ನೇರವಾಗಿದ್ದರೆ, ಘಟನೆ ದೃಶ್ಯ ಸೆರೆಯಾಗುತ್ತಿತ್ತು. ಆರೋಪಿಗಳ ಸುಳಿವು ಬೇಗನೇ ಸಿಗುತ್ತಿತ್ತು' ಎಂದೂ ಮೂಲಗಳು ತಿಳಿಸಿವೆ.

'ಆರೋಪಿಗಳು ಪರಾರಿಯಾಗಿರುವ ದೃಶ್ಯಗಳು ಕೆಲ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ' ಎಂದೂ ಹೇಳಿವೆ.

'ಆರೋಪಿಗಳ ಶೀಘ್ರ ಬಂಧನ'

ಹಾವೇರಿ: ಬೆಂಗಳೂರಿನ ಮಾಜಿ ಕಾರ್ಪೊರೇಟರ್ ಬಿಜೆಪಿಯ ರೇಖಾ ಕದಿರೇಶ್ ಕೊಲೆ ಪ್ರಕರಣದ ಆರೋಪಿಗಳನ್ನು ಶೀಘ್ರ ಬಂಧಿಸಲಾಗುವುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದ್ದೇನೆ. ಅವರು ಮಾಹಿತಿ ಕಲೆ ಹಾಕುತ್ತಿದ್ದಾರೆ. ಅತಿ ಶೀಘ್ರದಲ್ಲಿ ಕೊಲೆ ಆರೋಪಿಗಳನ್ನು ಬಂಧಿಸುವ ವಿಶ್ವಾಸವಿದೆ' ಎಂದು ತಿಳಿಸಿದರು.

ಪ್ರತಿಭಟನೆ

ಆನ್‌ಲೈನ್ ಮೂಲಕ ಫಲಾನುಭವಿಗಳಿಗೆ ಸರ್ಕಾರದ ಕೋವಿಡ್ ಪ್ಯಾಕೇಜ್ ತಲುಪಿಸುವ 'ಆಪ್ ಸಹಾಯ' ಕಾರ್ಯಕ್ರಮಕ್ಕೆ ಅಡ್ಡಿಪಡಿಸಲಾಗುತ್ತಿದೆ ಎಂದು ಆರೋಪಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಯಲಹಂಕದ ಬಿಬಿಎಂಪಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಕತ್ತು ಕೊಯ್ದ ಗಾಳಿಪಟ ದಾರ: ತೀವ್ರ ಗಾಯಗೊಂಡ ಸವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಹರಡಿ ಕೊಂಡಿದ್ದ ಗಾಳಿಪಟದ ದಾರವೊಂದು ದ್ವಿಚಕ್ರ ವಾಹನ ಸವಾರರೊಬ್ಬರ ಕತ್ತು ಕೊಯ್ದು ಬೆರಳು ತುಂಡರಿಸುವಂತೆ ಗಾಯವನ್ನುಂಟು ಮಾಡಿರುವ ಘಟನೆ ಆಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಆಡುಗೋಡಿ ಸಂಚಾರ ಠಾಣೆ ಸಮೀಪದಲ್ಲೇ ಬುಧವಾರ ಬೆಳಿಗ್ಗೆ ನಡೆದಿರುವ ಘಟನೆಯಲ್ಲಿ ಸವಾರ ಮಲ್ಲಿಕಾರ್ಜುನ್ ಎಂಬುವರು ಗಾಯಗೊಂಡಿದ್ದಾರೆ. ಅವರೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಲೇ ವಿಡಿಯೊ ಚಿತ್ರೀಕರಿಸಿರುವ ಮಲ್ಲಿಕಾರ್ಜುನ್, 'ನಗರದಲ್ಲಿ ಗಾಳಿಪಟ ಹಾರಾಟ ನಿಷೇಧ ಮಾಡಿ ಸವಾರ ಪ್ರಾಣ ಉಳಿಸಿ' ಎಂದು ಒತ್ತಾಯಿಸಿದ್ದಾರೆ. ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಡಿಯೊ ಆಧರಿಸಿ ಮಲ್ಲಿಕಾರ್ಜುನ್ ಅವರನ್ನು ಸಂಪರ್ಕಿಸಿದ್ದ ಆಡುಗೋಡಿ ಪೊಲೀಸರು ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

> **ಗಾಳಿಪಟದ ದಾರದಿಂದ ನನ್ನ ಪ್ರಾಣವೇ ಹೋಗುತ್ತಿತ್ತು. ಗಾಳಿಪಟ ಹಾರಾಟವನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿಷೇಧ ಮಾಡಿ**
> **ಮಲ್ಲಿಕಾರ್ಜುನ್,** ಗಾಯಾಳು

'ಮಲ್ಲಿಕಾರ್ಜುನ್ ಅವರ ಕತ್ತಿನ ಎರಡು ಕಡೆ ಕೊಯ್ದು ಗಾಯಗಳಾಗಿವೆ. ಎಡಗೈನ ಮೂರು ಬೆರಳುಗಳು ತುಂಡರಿಸುವ ಹಂತಕ್ಕೆ ಬಂದಿದ್ದವು. ಅದಕ್ಕೆ ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಗಾಯಾಳು ಆರೋಗ್ಯವಾಗಿದ್ದಾರೆ. ದೂರು ನೀಡಲು ನಿರಾಕರಿಸುತ್ತಿರುವ ಅವರು, ಸಾರ್ವಜನಿಕರ ಜಾಗೃತಿಗಾಗಿ ವಿಡಿಯೊ ಚಿತ್ರೀಕರಿಸಿ ಬಿಟ್ಟಿರುವುದಾಗಿ ಹೇಳುತ್ತಿದ್ದಾರೆ' ಎಂದೂ ತಿಳಿಸಿದರು.

ಆಗಿದ್ದೇನು?: 'ಮಲ್ಲಿಕಾರ್ಜುನ್, ದ್ವಿಚಕ್ರ ವಾಹನದಲ್ಲಿ ಬ್ಯಾಂಕ್‌ಗೆ ಹೊರಟಿದ್ದರು. ಹೆಲ್ಮೆಟ್ ಸಹ ಹಾಕಿಕೊಂಡಿದ್ದರು. ಆಡುಗೋಡಿ ಸಂಚಾರ ಪೊಲೀಸ್ ಠಾಣೆ ಬಳಿ ರಸ್ತೆಯಲ್ಲಿ ಹರಡಿಕೊಂಡಿದ್ದ ಗಾಳಿಪಟದ ದಾರ ಕತ್ತಿಗೆ ಸಿಕ್ಕಿಕೊಂಡು ಕೊಯ್ದಿತ್ತು' ಎಂದು ಪೊಲೀಸರು ಹೇಳಿದರು.

ದೇವನಹಳ್ಳಿ ತಾಲ್ಲೂಕಿನ ಸಾದಹಳ್ಳಿ ಬಳಿಯಿರುವ ಟೋಲ್ ನಲ್ಲಿ ಸುಂಕ ಕಟ್ಟದೆ ಇರುವ ವ್ಯಕ್ತಿಯ ಸಹಿತ ಕಾರನ್ನು ಪೊಲೀಸರು ವಶಕ್ಕೆ ಪಡೆದರು

ಟೋಲ್ ಶುಲ್ಕ ಕಟ್ಟಲು ಕೇಳಿದರೆ ಮಚ್ಚು ತೋರಿಸಿದ !

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಟೋಲ್‌ನಲ್ಲಿ ಶುಲ್ಕ ಪಾವತಿಸುವಂತೆ ಕೇಳಿದ ಸಿಬ್ಬಂದಿಗೆ ಮಚ್ಚು ತೋರಿಸಿ ಬೆದರಿಕೆ ಹಾಕಿರುವ ಆರೋಪದಡಿ ಕಾರು ಚಾಲಕ ಚಂದ್ರಪ್ಪ ಅವರನ್ನು ವಶಕ್ಕೆ ಪಡೆದಿರುವ ಚಿಕ್ಕಜಾಲ ಪೊಲೀಸರು, ಕಾರನ್ನು ವಶಕ್ಕೆ ಪಡೆದರು.

ದೇವನಹಳ್ಳಿ ಕಡೆಯಿಂದ ಬೆಂಗಳೂರಿನ ಕಡೆಗೆ ಪೋರ್ಡ್ ಕಾರಿನಲ್ಲಿ ಹೊರಟಿದ್ದ ತೆಲ್ಲೋಹಳ್ಳಿಯ ಚಂದ್ರಪ್ಪ ಎಂಬುವವರು, 'ನಾವು ಸ್ಥಳೀಯರು ಟೋಲ್ ಕಟ್ಟುವುದಿಲ್ಲ ಎಂದು ಕೂಗಾಡಿದ್ದಾರೆ. ಈ ವೇಳೆ ಟೋಲ್ ನಿರ್ವಾಹಕ ಶ್ರೀಧರ್ ಎಂಬುವವರು, 5 ಕೀ.ಮೀ.ವ್ಯಾಪ್ತಿಯೊಳಗಿನ ಹಳ್ಳಿಗಳ ಜನರಿಗೆ ಮಾತ್ರವೇ ಟೋಲ್ ನಲ್ಲಿ ವಿನಾಯಿತಿ ಇದೆ. ಉಳಿದ ಎಲ್ಲರೂ ಟೋಲ್ ಕಟ್ಟಬೇಕು ಎಂದು ತಿಳಿಸಿದ್ದಾರೆ. ಆದರೂ, ಟೋಲ್ ಸುಂಕ ಕಟ್ಟಲು ನಿರಾಕರಿಸಿದ ಚಂದ್ರಪ್ಪ, ಕಾರಿನಲ್ಲಿದ್ದ ಮಚ್ಚು ತೋರಿಸಿ, ಪರಿಣಾಮ ನೆಟ್ಟಗಿರಲ್ಲ'ಎಂದು ಬೆದರಿಕೆ ಹಾಕಿದ್ದಾರೆ. ಟೋಲ್ ಸಿಬ್ಬಂದಿ ತಕ್ಷಣ ಪೊಲೀಸರಿಗೆ ಕರೆ ಮಾಡಿದ್ದು, ಸ್ಥಳಕ್ಕೆ ಬಂದ ಚಿಕ್ಕಜಾಲ ಪೊಲೀಸರು ಕಾರು ಚಾಲಕನಿಂದ ಮಚ್ಚು ಹಾಗೂ ಕಾರು ಸಹಿತವಾಗಿ ವಶಕ್ಕೆ ಪಡೆದುಕೊಂಡಿದ್ದಾರೆ.

ನಕಲಿ ನೋಟು ದಂಧೆ: ವಿದೇಶಿ ಪ್ರಜೆಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಡಾಲರ್ ನೋಟು ಹೋಲುವಂತೆ ನಕಲಿ ನೋಟುಗಳನ್ನು ತಯಾರಿಸಿ ವಂಚಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಕ್ಯಾಮರೂನ್ ದೇಶದ ಇಬ್ಬರು ಪ್ರಜೆಗಳನ್ನು ಬಂಧಿಸಿದ್ದಾರೆ.

'ಸುಬ್ರಹ್ಮಣ್ಯನಗರ ಠಾಣೆ ವ್ಯಾಪ್ತಿಯ ಹೋಟೆಲೊಂದರಲ್ಲಿ ಉಳಿದುಕೊಂಡಿದ್ದ ಆರೋಪಿಗಳು, ನಕಲಿ ನೋಟು ದಂಧೆ ನಡೆಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅಮೆರಿಕದ 100 ಡಾಲರ್ ಮುಖಬೆಲೆಯ ನಕಲಿ ನೋಟುಗಳ ಕಂತೆಗಳನ್ನು ಜಪ್ತಿ ಮಾಡಲಾಗಿದೆ. ಇದರ ರೂಪಾಯಿ ಮೌಲ್ಯ ₹ 80 ಲಕ್ಷ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ವೈದ್ಯಕೀಯ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿಗಳು, ಅದರ ಅವಧಿ ಮುಗಿದರೂ ವಾಪಸು ಹೋಗಿರಲಿಲ್ಲ. ಇಲ್ಲಿಯೇ ಅಕ್ರಮವಾಗಿ ನೆಲೆಸಿ ನಕಲಿ ನೋಟು ದಂಧೆ ನಡೆಸುತ್ತಿದ್ದರು. ₹ 10 ಲಕ್ಷ ನೀಡಿದರೆ, ₹ 1 ಕೋಟಿ ಮೊತ್ತದ ಅಮೆರಿಕ ಡಾಲರ್ ನೀಡುವುದಾಗಿ ಆರೋಪಿಗಳು ಹೇಳುತ್ತಿದ್ದರು. ಅದನ್ನು ನಂಬಿ ಹಣ ಕೊಟ್ಟವರಿಗೆ ನಕಲಿ ನೋಟುಗಳನ್ನು ಕೊಟ್ಟು ವಂಚಿಸುತ್ತಿದ್ದರು.'

'ಹೋಟೆಲ್‌ನಲ್ಲೇ ಉಳಿದುಕೊಂಡಿದ್ದ ಆರೋಪಿಗಳು, ವಂಚನೆಯಿಂದ ಗಳಿಸಿದ ಹಣದಲ್ಲೇ ಐಷಾರಾಮಿ ಜೀವನ ನಡೆಸುತ್ತಿದ್ದರು. ಅವರ ವಿರುದ್ಧ ಸುಬ್ರಹ್ಮಣ್ಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯಾರಾದರೂ ವಂಚನೆಗೀಡಾಗಿದ್ದರೆ ಸಿಸಿಬಿ ಕಚೇರಿಗೆ ಮಾಹಿತಿ ನೀಡಬಹುದು' ಎಂದೂ ಅಧಿಕಾರಿ ತಿಳಿಸಿದರು.

ಅಮೆರಿಕದ ಡಾಲರ್‌ನ ನಕಲಿ ನೋಟುಗಳು

ಮದ್ಯದಂಗಡಿ ಅವಧಿ ವಿಸ್ತರಣೆಗೆ ಮನವಿ

ಬೆಂಗಳೂರು: ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿನ ಶೇ 50ರಷ್ಟು ಸೀಟುಗಳಲ್ಲಿ ಆಹಾರದೊಂದಿಗೆ ಮದ್ಯ ಸೇವಿಸಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ಪತ್ರ ಬರೆದಿದೆ.

'ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲೂ ಎಂಆರ್‌ಪಿ ದರದಲ್ಲಿ ಪಾರ್ಸೆಲ್ ಸೇವೆಯನ್ನಷ್ಟೇ ನೀಡಲಾಗುತ್ತಿದೆ. ಕುಳಿತುಕೊಂಡು ಮದ್ಯ ಸೇವಿಸಲು ಅನುಮತಿ ನೀಡಬೇಕು ಮತ್ತು ಮದ್ಯದ ಅಂಗಡಿ ತೆರೆಯುವ ಅವಧಿಯನ್ನೂ ವಿಸ್ತರಿಸಬೇಕು' ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ್ ಹೆಗ್ಡೆ ಮನವಿ ಮಾಡಿದ್ದಾರೆ.

ಸ್ಮಾರ್ಟ್ ಸಿಟಿ ಯೋಜನೆಯಡಿ ಕೆ.ಆರ್. ಮಾರುಕಟ್ಟೆ ಬಳಿ ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಯನ್ನು ಗುರುವಾರ ನಡೆಸಲಾಯಿತು ಪ್ರಜಾವಾಣಿ ಚಿತ್ರ

ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ, ವಿದ್ಯುತ್ ದರ ಹಾಗೂ ಅಗತ್ಯ ವಸ್ತುಗಳ ದರ ಏರಿಕೆ ಖಂಡಿಸಿ ವೆಲ್‌ಪೇರ್ ಪಾರ್ಟಿ ಆಫ್ ಇಂಡಿಯಾದ ಸದಸ್ಯರು ಜಯನಗರದಲ್ಲಿರುವ ಪಕ್ಷದ ಕಚೇರಿ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಹಬೀಬುಲ್ಲಾ ಖಾನ್,'ಲಾಕ್‌ಡೌನ್‌ನಿಂದ ಜನ ಸಾಮಾನ್ಯರು ಉದ್ಯೋಗವಿಲ್ಲದೆ ಆರ್ಥಿಕ ಸಂಕಷ್ಟದಲ್ಲಿರುವಾಗ ಪೆಟ್ರೋಲ್ ದರ ₹100 ದಾಟಿದೆ. ಗ್ಯಾಸ್ ಸಿಲಿಂಡರ್ ₹850 ಆಗಿದೆ. ಇದರ ಜೊತೆಗೆ ವಿದ್ಯುತ್ ದರವೂ ಏರಿಸಿ ರಾಜ್ಯ ಸರ್ಕಾರ ಗಾಯದ ಮೇಲೆ ಬರೆ ಎಳೆದಿದೆ' ಎಂದು ದೂರಿದರು.

'ವಿದ್ಯುತ್ ಸರಬರಾಜು ಸಂಸ್ಥೆಗಳು ನಷ್ಟದಲ್ಲಿದ್ದರೆ ಅದಕ್ಕೆ ಸರ್ಕಾರದ ಭ್ರಷ್ಟಾಚಾರ ಹಾಗೂ ಅದಕ್ಷತೆ ಕಾರಣ. ದರ ಏರಿಕೆಗಳನ್ನು ಸರ್ಕಾರ ಹಿಂಪಡೆಯದಿದ್ದರೆ, ಹೋರಾಟ ನಡೆಸಲಾಗುವುದು' ಎಂದೂ ಎಚ್ಚರಿಸಿದರು.

ಮಹಿಳಾ ಘಟಕದ ಅಧ್ಯಕ್ಷೆ ತಲತ್ ಯಾಸ್ಮಿನ್, 'ಅಂತರಾಷ್ಟ್ರೀಯ ಮಟ್ಟದಲ್ಲಿ ತೈಲದ ದರ ಕಡಿಮೆ ಇದ್ದರೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ದರ ಏರಿಸುತ್ತಲೇ ಇವೆ. ಜನರು ಖರೀದಿಸುವ ಸ್ಥಿತಿಯಲ್ಲೂ ಇಲ್ಲ. ಯುಪಿಎ ಸರ್ಕಾರದ ಅವಧಿಯಲ್ಲಿ ತೈಲ ದರ ಖಂಡಿಸಿ ಪ್ರತಿಭಟನೆಗಳನ್ನು ನಡೆಸಿದ ಬಿಜೆಪಿ ನಾಯಕರು ಈಗ ಮೌನವಾಗಿದ್ದಾರೆ' ಎಂದರು.

ಚರಸ್ ಮಾರುತ್ತಿದ್ದ ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಮೂವರನ್ನು ಶ್ರೀರಾಮಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಪ್ರಶಾಂತ್ ಅಲಿಯಾಸ್ ಮೊಟ್ಟೆ (24), ಜಾನ್ ಅಲಿಯಾಸ್ ಕರಿಯ (32) ಹಾಗೂ ಜಾಲಹಳ್ಳಿ ನಿವಾಸಿ ಸುಂದರ್ ಅಲಿಯಾಸ್ ಕೊಟ್ಟಿ (32) ಬಂಧಿತರು' ಎಂದು ಪೊಲೀಸರು ತಿಳಿಸಿದರು.

'ಬಂಧಿತರಿಂದ 800 ಗ್ರಾಂ ಚರಸ್, 200 ಗ್ರಾಂ ಹ್ಯಾಶೀಷ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಮಾದಕ ವಸ್ತು ಮಾರಾಟ ಹಾಗೂ ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದರು. ಇವರ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಪ್ರಕರಣಗಳೂ ದಾಖಲಾಗಿದ್ದವು. ಗಾಂಜಾದಿಂದ ಎಣ್ಣೆ ತೆಗೆದು ಆರೋಪಿಗಳು ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

'ಕೆಲ ಪ್ರಕರಣಗಳಲ್ಲಿ ಜೈಲು ಸೇರಿದ್ದ ಆರೋಪಿಗಳು, ಜಾಮೀನು ಮೇಲೆ ಹೊರಬಂದು ಕೃತ್ಯ ಎಸಗುತ್ತಿದ್ದರು' ಎಂದೂ ಹೇಳಿದರು.

ನಿಧನ ವಾರ್ತೆ

ಚಿತ್ರ ಕಲಾವಿದ ಬಿ.ಆರ್. ಕೊರ್ತಿ

ದಾವಣಗೆರೆ: ಇಲ್ಲಿನ ಹಿರಿಯ ಚಿತ್ರ ಕಲಾವಿದ ಪ್ರೊ. ಬಿ.ಆರ್. ಕೊರ್ತಿ (76) ಅವರು ಅನಾರೋಗ್ಯದಿಂದ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಜೂನ್ 25ರಂದು ಬೆಳಿಗ್ಗೆ 10ಕ್ಕೆ ಶಾಮನೂರು ಬಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ದಾವಣಗೆರೆಯ ದೃಶ್ಯಕಲಾ ಮಹಾವಿದ್ಯಾಲಯದ ಚಿತ್ರಕಲಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿ, ವಿಭಾಗದ ಮುಖ್ಯಸ್ಥರಾಗಿ ಇಲ್ಲಿಯೇ ನಿವೃತ್ತಿಯಾಗಿದ್ದರು. ಜಲವರ್ಣ ಮಾದರಿಯ ಚಿತ್ರಕಲೆಯಲ್ಲಿ ಪ್ರಸಿದ್ಧರಾಗಿದ್ದರು. ಅವರ ಕಲಾ ಸೇವೆ ಪರಿಗಣಿಸಿ 'ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ', ಕರ್ನಾಟಕ ಲಲಿತಕಲಾ ಅಕಾಡೆಮಿಯ 'ಗೌರವ ಪ್ರಶಸ್ತಿ', ಮೈಸೂರಿನ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದ ಚಿತ್ರಕಲಾ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಅರಸಿ ಬಂದಿದ್ದವು.

ಯಲಹಂಕ: ಮಹೇಶ್ವರಮ್ಮ ದೇವಿಯ ಕರಗ

ಪ್ರಜಾವಾಣಿ ವಾರ್ತೆ

ಯಲಹಂಕ: ಹಳೇನಗರದಲ್ಲಿ ಮಹೇಶ್ವರಮ್ಮ ದೇವಿಯ ಹೂವಿನ ಕರಗ ಮಹೋತ್ಸವ ಕೋವಿಡ್ ನಿಯಮಗಳ ಅನುಸಾರ ಬುಧವಾರ ಸರಳವಾಗಿ ನಡೆಯಿತು.

ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ದೇವಸ್ಥಾನದಲ್ಲಿ ದೇವಿಗೆ ಮತ್ತು ಕರಗಕ್ಕೆ ವಿಶೇಷಪೂಜೆ ನೆರವೇರಿಸಲಾಯಿತು.

ನಂತರ ಮಧ್ಯರಾತ್ರಿ 2 ಗಂಟೆಗೆ ಹೊರಟ ಕರಗ, ರಾಜಬೀದಿಯಲ್ಲಿ ಸರಳ ಮೆರವಣಿಗೆಯೊಂದಿಗೆ ಸಂಚರಿಸಿ, ಮತ್ತೆ ದೇವಾಲಯಕ್ಕೆ ಬಂತು.

ಈ ವೇಳೆ ಜನರು ಕರಗದ ದರ್ಶನ ಪಡೆದರು. ಅಯ್ಯಪ್ಪ 3ನೇ ಬಾರಿ ಕರಗ ಹೊತ್ತಿದ್ದರು. ವಹ್ನಿಕುಲ ಕ್ಷತ್ರಿಯ ಮಂಡಳಿಯ ಸಂಚಾಲಕ ಮು.ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಯಲಹಂಕದಲ್ಲಿ ಮಹೇಶ್ವರಮ್ಮ ದೇವಿಯ ಹೂವಿನ ಕರಗ ಮಹೋತ್ಸವ ಬುಧವಾರ ನಡೆಯಿತು.

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಕೋಲಾರ ವಿಭಾಗ, ಕೋಲಾರ-563101. ದೂ: 08152-222022,
ಫ್ಯಾಕ್ಸ್: 08152-227443
e-mail: eeklr@kpwd.gov.in Website: www.kpwd.gov.in

ಇ-ಟೆಂಡರ್ ಪ್ರಕಟಣೆ ಕೆ.ಡಬ್ಲ್ಯು-3
ಟೆಂಡರ್ ಅಧಿಸೂಚನೆ ಸಂಖ್ಯೆ: 01/2021-22 ದಿನಾಂಕ: 21.6.2021

ಕೋಲಾರ ಲೋಕೋಪಯೋಗಿ ಇಲಾಖೆ ಬಂಗಾರಪೇಟೆ ಉಪ ವಿಭಾಗ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 8443-ಠೇವಣಿ ವಂತಿಗೆ ಅಡಿಯಲ್ಲಿ ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ: **ರೂ.78.00 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 1.56 ಲಕ್ಷಗಳು,** ಕಾಲಾವಧಿ: **9 ತಿಂಗಳು,** ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-3 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc. karnataka. gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **10.07.2021** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **11.07.2021 ರಂದು ಸಂಜೆ 16.30 ಗಂಟೆಯ ನಂತರ** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc. karnataka.gov.in)ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ, ಕೋಲಾರ ವಿಭಾಗ, ಕೋಲಾರ.
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 101/ಎಂಸಿಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಾನವೀಯ ಮೌಲ್ಯಗಳ ವೃದ್ಧಿಗೆ ಕನ್ನಡದ ಪಠ್ಯ ಪೂರಕವಾಗಿರಬೇಕು– ಸರ್ಕಾರಕ್ಕೆ ಸಾಹಿತಿಗಳ ಒತ್ತಾಯ

'3 ವರ್ಷದ ಅವಧಿಗೆ ಭಾಷಾ ವಿಷಯದ ಪಠ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂರು ವರ್ಷದ ಪದವಿ ಕೋರ್ಸ್ ಇದ್ದಾಗ ಕನ್ನಡ ಸೇರಿದಂತೆ ಭಾಷಾ ವಿಷಯಗಳನ್ನು ಎರಡು ವರ್ಷ ಬೋಧಿಸಲಾಗುತ್ತಿತ್ತು. ಹೊಸ ಶಿಕ್ಷಣ ನೀತಿಯಡಿ ನಾಲ್ಕು ವರ್ಷಗಳ ಪದವಿ ಕೋರ್ಸ್ ಅನುಷ್ಠಾನಗೊಳಿಸುತ್ತಿರುವುದರಿಂದ ಕನ್ನಡ ಒಳಗೊಂಡಂತೆ ಭಾಷಾ ವಿಷಯಗಳನ್ನು ಮೂರು ವರ್ಷಗಳ ಅವಧಿಗೆ ಪಠ್ಯ ಅಳವಡಿಸಬೇಕು' ಎಂದು ಸಾಹಿತಿಗಳು ಒತ್ತಾಯಿಸಿದ್ದಾರೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಪತ್ರ ಬರೆದಿದ್ದು, ಬಿ.ಎ. ವಿವೇಕ ರೈ, ಎಚ್.ಎಸ್. ವೆಂಕಟೇಶಮೂರ್ತಿ, ದೊಡ್ಡರಂಗೇಗೌಡ, ಎಚ್.ಎಸ್. ರಾಘವೇಂದ್ರರಾವ್, ಬಸವರಾಜ ಕಲ್ಗುಡಿ, ನಟರಾಜ್ ಬೂದಾಳು, ಬಾಲಸುಬ್ರಹ್ಮಣ್ಯ, ಬಾನು ಮುಷ್ತಾಕ್, ಜಿ. ರಾಮಕೃಷ್ಣ, ಕೆ. ಮರುಳಸಿದ್ದಪ್ಪ, ಎಲ್. ಹನುಮಂತಯ್ಯ, ಬಸವರಾಜ ಸಬರದ, ಬಂಜಗೆರೆ ಜಯಪ್ರಕಾಶ್, ಸರಜೂ ಕಾಟ್ಕರ್, ಶರೀಫಾ ಕೆ. ಹಾಗೂ ಸುಕನ್ಯಾ ಮಾರುತಿ ಅವರು ಒತ್ತಾಯಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ.

'ನೂತನ ಶಿಕ್ಷಣ ನೀತಿ ಅನುಸಾರ ಪದವಿ ತರಗತಿಗಳಿಗೆ ಪಠ್ಯಕ್ರಮದ ಸ್ವರೂಪವನ್ನು ಸೂಚಿಸಲು ನೇಮಿಸಲಾಗಿದ್ದ ಸಮಿತಿಯು ಭಾಷಾ ವಿಷಯಗಳನ್ನು ಕೇವಲ ಎರಡು ಸೆಮಿಸ್ಟರ್‌ಗಳಿಗೆ ಸೀಮಿತಗೊಳಿಸಿದೆ. ಇದರ ಬಗ್ಗೆ ವಿರೋಧ ವ್ಯಕ್ತವಾದಾಗ ತಾವು 'ಕನ್ನಡ ಪಠ್ಯ ಕಡಿತವಿಲ್ಲ' ಎಂದು ಸ್ಪಷ್ಟನೆ ನೀಡಿದ್ದೀರಿ. ಆದರೆ, ಆ ಸ್ಪಷ್ಟನೆಯು ಇನ್ನೂ ಅಧಿಕೃತ ಆದೇಶವಾಗಿ ಹೊರಬಂದಿಲ್ಲ. ಭಾಷಾ ಪಠ್ಯ ವಿಷಯಗಳಿಗೆ ಸೂಕ್ತ ಸ್ಥಾನವನ್ನು ಕಲ್ಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಭಾಷಾ ವಿಷಯಗಳ ಪಠ್ಯಗಳೆಂದರೆ ಕೇವಲ ಕೌಶಲ್ಯ ಮತ್ತು ಸಂವಹನದ ಸಾಧನಗಳಲ್ಲ. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅರಿವನ್ನು ಮೂಡಿಸುವ ಪಠ್ಯ ವಿಷಯಗಳೆಂದು ಭಾವಿಸಬೇಕು. ಅದಕ್ಕನುಗುಣವಾಗಿ ಯಾವುದೇ ವಿಶೇಷಾಧ್ಯಯನ ಮಾಡುವ ವ್ಯಾಸಂಗಗಳಿಗೆ ನಡುವೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಅರಿವು ಮೂಡಿಸುವ ದೃಷ್ಟಿಯಿಂದ ಪಠ್ಯಕ್ರಮವನ್ನು ರೂಪಿಸಬೇಕು. ಮಾನವೀಯ ಮೌಲ್ಯಗಳ ವೃದ್ಧಿಗೆ ಭಾಷಾ ಪಠ್ಯಗಳು ಪೂರಕವಾಗಿರಬೇಕು. ಹೊಸ ನೀತಿಯ ಹೆಸರಿನಲ್ಲಿ ಭಾಷಾ ಕೌಶಲ್ಯಕ್ಕೆ ಸೀಮಿತ ಮಾಡಬಾರದು' ಎಂದು ತಿಳಿಸಿದ್ದಾರೆ.

ಶುಲ್ಕ ಗೊಂದಲ: ಪೋಷಕರ ಪ್ರತಿಭಟನೆ

ಬೆಂಗಳೂರು: ಶಾಲಾ ಶುಲ್ಕ ವಿಚಾರಕ್ಕೆ ಸಂಬಂಧಿಸಿದಂತೆ ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರ ನಡುವೆ ಸಂಘರ್ಷ ಮುಂದುವರಿದಿದ್ದು, ಲಗ್ಗೆರೆ ಬಳಿಯ ನಾರಾಯಣ ಇ-ಟೆಕ್ನೊ ಶಾಲೆಯ ವಿರುದ್ಧ ಪೋಷಕರು ಗುರುವಾರ ಪ್ರತಿಭಟನೆ ನಡೆಸಿದರು.

'ಇಲ್ಲಿಯವರೆಗೂ ₹ 1 ಲಕ್ಷದವರೆಗೂ ಎಸ್ಸೆಸ್ಸೆಲ್ಸಿ ಮಕ್ಕಳ ಶುಲ್ಕ ಕಟ್ಟಿದ್ದೇವೆ. ಶುಲ್ಕ ಕಡಿತ ಮಾಡಲು ಶಾಲೆಯವರು ತಯಾರಿಲ್ಲ' ಎಂದು ಬೆಂಗಳೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಮೇಶ್ ಅವರಿಗೆ ಪೋಷಕರು ದೂರು ನೀಡಿದ್ದರು. 'ಶಾಲೆಗೆ ಬರುತ್ತೇವೆ ಅಲ್ಲೇ ಮಾತನಾಡೋಣ' ಎಂದು ಪೋಷಕರಿಗೆ ರಮೇಶ್ ಭರವಸೆ ನೀಡಿದ್ದರು. ಅವರು ಬಾರದ ಕಾರಣ ಪೋಷಕರು ಪ್ರತಿಭಟನೆ ನಡೆಸಿದರು. ಶಾಲಾ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರವೇಶದ್ವಾರದ ಬಳಿ ಪ್ರತಿಭಟನೆ ನಡೆಸಿದ ಪೋಷಕರು, ಶಾಲಾ ಸಿಬ್ಬಂದಿಯನ್ನು ಒಳಗೆ ಹೋಗಲು ಬಿಡಲಿಲ್ಲ. ಅಲ್ಲದೆ, ಗೇಟ್ ತಳ್ಳಿ ಒಳಗೆ ನುಗ್ಗಲು ಪೋಷಕರು ಯತ್ನಿಸಿದರು. ಶಾಲಾ ಸಿಬ್ಬಂದಿ ಪ್ರವೇಶದ್ವಾರ ಮುಚ್ಚಿ ತಡೆದರು.

'10ನೇ ತರಗತಿ ವಾರ್ಷಿಕ ಪರೀಕ್ಷೆಗೆ ಡೆಲ್ಟಾ ಪ್ಲಸ್ ವೈರಸ್ ಆತಂಕ ಕಾಡುತ್ತಿದೆ. ಶಿಕ್ಷಣ ಸಚಿವರು ಯಾವುದೇ ಮುಂದಾಲೋಚನೆ ಇಲ್ಲದೆ ಪರೀಕ್ಷೆ ನಡೆಸಲು ಸಜ್ಜಾಗಿದ್ದಾರೆ. ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುವುದು ಎಷ್ಟು ಸರಿ' ಎಂದೂ ಸಚಿವರ ನಡೆ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

'ನಕಾರಾತ್ಮಕ ಚಿಂತನೆ ಬೇಡ'

ಬೆಂಗಳೂರು: 'ವ್ಯಕ್ತಿಯ ಬದುಕಿಗೆ ಅರ್ಥ ಬರಬೇಕಾದರೆ ಏನಾದರೂ ಸಾಧನೆ ಮಾಡಬೇಕು. ಯಾವುದೇ ಸಾಧನೆಯ ಮಾನದಂಡ ಜೀವನೋತ್ಸಾಹ. ಇದರ ಕೀಲಿಕೈ ನಮ್ಮ ಜೇಬಿನಲ್ಲಿದೆ. ಅದರ, ಅದರ ಅರಿವು ನಮಗಿರಬೇಕು' ಎಂದು ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಕೋಶ ಆಯೋಜಿಸಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ 'ಜೀವನೋತ್ಸಾಹ' ಕುರಿತು ಅವರು ಉಪನ್ಯಾಸ ನೀಡಿದರು.

'ಶಾಲೆಯಲ್ಲಿ ಕಲಿಯುವುದಕ್ಕಿಂತ ಸಮಾಜದಿಂದ ಹೆಚ್ಚಿನ ವಿಷಯ ಕಲಿಯುತ್ತೇವೆ. ಒಳ್ಳೆಯ ಸ್ನೇಹಿತರು ನಮ್ಮನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತಾರೆ. ನಮ್ಮ ಮನಸ್ಸಿನಲ್ಲಿ ದ್ವಂದ್ವಕ್ಕೆ ಹಾಗೂ ನಕಾರಾತ್ಮಕ ಚಿಂತನೆಗೆ ಅವಕಾಶ ನೀಡಬಾರದು. ಅದು ಜೀವನದ ಉಲ್ಲಾಸ ಹಾಗೂ ಶಕ್ತಿಯನ್ನು ಕಸಿದುಕೊಳ್ಳುತ್ತದೆ' ಎಂದು ಕಿವಿಮಾತು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, 'ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳಬಾರದು. ಜೀವನೋತ್ಸಾಹ ಎಂದರೆ ಬೇರೆಯವರ ಜೀವನದೊಂದಿಗೆ ಹೋಲಿಕೆ ಮಾಡಿಕೊಳ್ಳುವುದಲ್ಲ. ನಮ್ಮ ಜೀವನದ ಶಕ್ತಿಯ ಬಗ್ಗೆ ಸ್ಪಷ್ಟತೆ ಇರಬೇಕು' ಎಂದರು.

ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಹಾಗೂ ಸಂಯೋಜನಾಧಿಕಾರಿ ಎಸ್.ಸತೀಶ್ ಗೌಡ ಭಾಗವಹಿಸಿದ್ದರು.



ಪ್ರಯಾಣಿಕರ ನಿರೀಕ್ಷೆಯಲ್ಲಿ...

ಲಾಕ್‌ಡೌನ್‌ನಿಂದ ವಿನಾಯಿತಿ ಲಭಿಸಿರುವ ಕಾರಣ ಕೆಎಸ್‌ಆರ್‌ಟಿಸಿ ಬಸ್‌ಗಳು ಗುರುವಾರ ಸಂಚಾರ ಆರಂಭಿಸಿದರೂ ಪ್ರಯಾಣಿಕರ ಸಂಖ್ಯೆ ಕಡಿಮೆಯಿದ್ದ ದೃಶ್ಯ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ ಕಂಡು ಬಂತು. ಚಾಲಕರು ಹಾಗೂ ನಿರ್ವಾಹಕರು ಪ್ರಯಾಣಿಕರಿಗಾಗಿ ಕಾಯುತ್ತಿದ್ದರು - ಪ್ರಜಾವಾಣಿ ಚಿತ್ರ

ಡೆಲ್ಟಾ ಪ್ಲಸ್ ವೈರಾಣು ಸೋಂಕಿತ ವ್ಯಕ್ತಿ ಗುಣಮುಖ

ವೈರಾಣು ಅನುಕ್ರಮಣಿಕೆ ಪರೀಕ್ಷೆಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೊರೊನಾ ರೂಪಾಂತರಿತ ಡೆಲ್ಟಾ ಪ್ಲಸ್ ವೈರಾಣು ಸೋಂಕು ದೃಢಪಟ್ಟಿದ್ದ ವ್ಯಕ್ತಿಯೊಬ್ಬರು ಗುಣಮುಖರಾಗಿದ್ದಾರೆ. ಈ ನಡುವೆಯೇ, ಈ ಪ್ರಕರಣಗಳ ಪತ್ತೆಗೆ ವೈರಾಣು ಅನುಕ್ರಮಣಿಕೆ ಪರೀಕ್ಷೆಗೆ (ಜೀನೋಮ್ ಸೀಕ್ವೆನ್ಸಿಂಗ್) ಆದ್ಯತೆ ನೀಡಲು ಬಿಬಿಎಂಪಿ ಮುಂದಾಗಿದೆ.

ನಗರದ ನಂದಿನಿ ಬಡಾವಣೆಯಲ್ಲಿರುವ 87 ವರ್ಷದ ವೃದ್ಧರೊಬ್ಬರಲ್ಲಿ ಈ ರೂಪಾಂತರಿತ ಸೋಂಕು ಪತ್ತೆಯಾಗಿತ್ತು. ಈಗ ಅವರು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು, ಮನೆಯಲ್ಲಿಯೇ ಆರೈಕೆಗೆ ಒಳಗಾಗಿದ್ದಾರೆ. ಇವರೊಂದಿಗೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿದ್ದ 10 ಮಂದಿಗೆ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗಿದ್ದು, ಅವರೆಲ್ಲರ ವರದಿ ನೆಗೆಟಿವ್ ಬಂದಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಗುರುವಾರ ತಿಳಿಸಿದರು.

'ನಗರದಲ್ಲಿ ವೈರಾಣು ಅನುಕ್ರಮಣಿಕೆ ಪರೀಕ್ಷೆಗೆ ಒತ್ತು ನೀಡಲಾಗುತ್ತಿದೆ. ಸೋಂಕಿತ ವ್ಯಕ್ತಿಯಲ್ಲಿರುವ ರೂಪಾಂತರಿ ವೈರಾಣುವಿನ ವಂಶವಾಹಿ ಪತ್ತೆ ಮಾಡಲಾಗುತ್ತಿದೆ. ಡೆಲ್ಟಾ ಮತ್ತು ಡೆಲ್ಟಾ ಪ್ಲಸ್ ಸೋಂಕಿನ ಗುಣಲಕ್ಷಣಗಳು, ದುಷ್ಪರಿಣಾಮಗಳ ಕುರಿತು ತಜ್ಞರು ಅಧ್ಯಯನ ನಡೆಸುತ್ತಿದ್ದಾರೆ. ಅವರು ನೀಡುವ ಶಿಫಾರಸುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು. ಜನರ ಆರೋಗ್ಯ ರಕ್ಷಣೆಗೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಡೆಲ್ಟಾ ಪ್ಲಸ್ ವೈರಾಣು ಸೋಂಕಿನ ಅಪಾಯ, ಗುಣಲಕ್ಷಣಗಳ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ಅಧ್ಯಯನ ನಡೆಸುತ್ತಿದೆ. ಬಿಬಿಎಂಪಿಯಿಂದ ನಿತ್ಯ ಎಂಟು ಮಂದಿ ಸೋಂಕಿತರ ಮಾದರಿಗಳನ್ನು ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ. ಪ್ರಯೋಗಾಲಯದವರೇ ಎಂಟು ಸೋಂಕಿತರ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಪಾಲಿಕೆಯ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್ ತಿಳಿಸಿದರು.

ಎಲ್ಲರಿಗೂ ಉಚಿತ ಲಸಿಕೆ ನೀಡಿ: ರಾಮಲಿಂಗಾ ರೆಡ್ಡಿ

ಬೆಂಗಳೂರು: 'ದೇಶದ ಶೇ 75ರಷ್ಟು ಜನರಿಗೆ ಉಚಿತವಾಗಿ ಲಸಿಕೆ ನೀಡುವ ಕೇಂದ್ರ ಸರ್ಕಾರ, ಉಳಿದ ಶೇ 25ರಷ್ಟು ಜನರಿಗೆ ಏಕೆ ಖಾಸಗಿ ಆಸ್ಪತ್ರೆಯ ಮೂಲಕ ನೀಡುತ್ತಿದೆ. ದೇಶದ ಪ್ರತಿಯೊಬ್ಬ ಪ್ರಜೆಗೂ ಸರ್ಕಾರವೇ ಉಚಿತ ಲಸಿಕೆ ನೀಡಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉಚಿತವಾಗಿ ಲಸಿಕೆ ನೀಡುವುದಾಗಿ ಘೋಷಿಸಿದ್ದ ಕೇಂದ್ರ, ಮುಂಚೂಣಿ ಯೋಧರು, ಆನಂತರ ಹಿರಿಯರಿಗೆ, ಬಳಿಕ 45 ವರ್ಷ ದಾಟಿದವರಿಗೆ ನೀಡುವುದಾಗಿ ತಿಳಿಸಿತ್ತು. ವ್ಯಾಪಕ ಟೀಕೆಯ ಬಳಿಕ, ಲಸಿಕೆ ಲಭ್ಯ ಇದೆಯೊ ಎಂಬುವುದನ್ನೂ ಗಮನಿಸದೆ ಮೇ 1ರಿಂದ 18 ವರ್ಷ ದಾಟಿದವರಿಗೂ ಪ್ರಧಾನಿ ಲಸಿಕೆ ಘೋಷಿಸಿದರು' ಎಂದರು.

'ಕೋವ್ಯಾಕ್ಸಿನ್ ದರ ಒಂದು ಡೋಸ್‌ಗೆ ₹ 900ರಿಂದ ₹ 1,200ವರೆಗೂ ನಿಗದಿ ಮಾಡಲಾಯಿತು. ಆ ಮೂಲಕ, ಒಬ್ಬ ವ್ಯಕ್ತಿ ಲಸಿಕೆ ಪಡೆಯಲು ₹ 1,800 ರಿಂದ ₹ 2,400 ವರೆಗೂ ಭರಿಸಬೇಕಾಯಿತು. ಸರ್ಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಲಭ್ಯವಾಗದಿದ್ದರೆ, ಖಾಸಗಿ ಆಸ್ಪತ್ರೆಗಳಿಗೆ ಮಾತ್ರ ಲಸಿಕೆ ಪೂರೈಕೆಯಾಗುತ್ತಿತ್ತು. ಕೇಂದ್ರ ಸರ್ಕಾರ ಖಾಸಗಿ ಆಸ್ಪತ್ರೆಗಳಿಗೆ ಉತ್ತೇಜನ ನೀಡಿತ್ತು' ಎಂದೂ ದೂರಿದರು.

ಎಚ್ಚರಿಕೆ: ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆಯಲ್ಲಿ ಸುಮಾರು 1.50 ಲಕ್ಷ ಮಕ್ಕಳಿಗೆ ಸೋಂಕು ತಗಲುವ ಸಾಧ್ಯತೆ ಇದೆ ಎಂದು ಡಾ. ದೇವಿ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ. ಸರ್ಕಾರ ಮೊದಲ ಮತ್ತು 2ನೇ ಅಲೆಯಲ್ಲಿ ಎಡವಿದ್ದು, ಮೂರನೇ ಅಲೆ ಎದುರಿಸಲು ಸಿದ್ಧವಾಗಬೇಕು' ಎಂದರು.



'ಮಹಿಳೆಯರಿಗಾಗಿ ಲಸಿಕಾ ಅಭಿಯಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳು ಹಾಗೂ ಮನೆಯವರೆಲ್ಲರ ಆರೈಕೆಯಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ಹೀಗಾಗಿ ಅವರಿಗೆ ಪ್ರತ್ಯೇಕವಾಗಿ ಲಸಿಕೆ ನೀಡುವ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಾ. ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರ ಕ್ಷೇತ್ರದಲ್ಲಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಷನ್ ಹಮ್ಮಿಕೊಂಡಿದ್ದ 18 ವರ್ಷ ಮೇಲ್ಪಟ್ಟ ಸ್ತ್ರೀಯರಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

'ನಗರದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಲಸಿಕೆ ಶಿಬಿರ ಹಮ್ಮಿಕೊಂಡಿರುವುದು ಇದೇ ಮೊದಲು. 66ನೇ ವಾರ್ಡ್‌ನಲ್ಲಿರುವ ಸಂಗೊಳ್ಳಿ ರಾಯಣ್ಣ ಉದ್ಯಾನದಲ್ಲಿ ಈ ಅಭಿಯಾನ ಆಯೋಜಿಸಲಾಗಿದ್ದು, 1,500ಕ್ಕೂ ಹೆಚ್ಚು ಮಂದಿ ಲಸಿಕೆ ಪಡೆದಿದ್ದಾರೆ' ಎಂದರು.

ಲಸಿಕೆ ಪಡೆಯಲು ಬಂದಿದ್ದ ಮಹಿಳೆಯರೊಂದಿಗೆ ಡಾ.ಸಿ.ಎನ್.ಅಶ್ವತ್ಥನಾರಾಯಣ



'ನರೇಂದ್ರ ಮೋದಿ ರಾಜೀನಾಮೆ ಕೊಟ್ಟು ಹೊರಡಿ'

'ರಾಷ್ಟ್ರೀಯ ಸರ್ಕಾರ' ರಚನೆಗೆ ದಾರಿ ಮಾಡಿಕೊಡುವಂತೆ ಪ್ರಧಾನಿಗೆ ಸಿಟಿಜನ್ ಫಾರ್ ಡೆಮಾಕ್ರಸಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಮಂತ್ರಿ ಹುದ್ದೆಗೆ ನೀವು ತಕ್ಷಣವೇ ರಾಜೀನಾಮೆ ನೀಡಿ 'ರಾಷ್ಟ್ರೀಯ ಸರ್ಕಾರ' ರಚನೆಗೆ ದಾರಿ ಮಾಡಿಕೊಡಬೇಕು' ಎಂದು ಪ್ರಧಾನಿ ನರೇಂದ್ರ ಮೋದಿಯವರಿಗೆ 'ಸಿಟಿಜನ್ ಫಾರ್ ಡೆಮಾಕ್ರಸಿ' ಪತ್ರ ಬರೆದಿದೆ.

ಸಿಟಿಜನ್ ಫಾರ್ ಡೆಮಾಕ್ರಸಿಯ ಅಧ್ಯಕ್ಷರೂ ಆಗಿರುವ ಎಸ್.ಆರ್.ಹಿರೇಮಠ, ಸಾಹಿತಿ ದೇವನೂರು ಮಹಾದೇವ ಸೇರಿ 24 ಜನ ಈ ಪತ್ರಕ್ಕೆ ಸಹಿ ಮಾಡಿದ್ದಾರೆ.

'ನಿಮ್ಮ ಸರ್ಕಾರ ಸ್ವತಂತ್ರ ಭಾರತ ಕಂಡ ಅತ್ಯಂತ ಕೆಟ್ಟ ಸರ್ಕಾರವಾಗಿದೆ. ಆದ್ದರಿಂದ ಈಗಿನ ಕೋವಿಡ್–19 ಸಮಸ್ಯೆ, ಸಾಮಾಜಿಕ ಆರ್ಥಿಕ ಮತ್ತು ಆಡಳಿತ ಬಿಕ್ಕಟ್ಟನ್ನು ಸರಿಪಡಿಸಲು ಸಮಾಜದ ಎಲ್ಲ ವರ್ಗಗಳನ್ನು ಒಳಗೊಂಡ ರಾಜಕೀಯ ದೃಷ್ಟಿಕೋನವುಳ್ಳ ಜನರ ಸರ್ಕಾರ ರಚನೆ ಆಗಬೇಕು. ಅದರಿಂದ ಮಾತ್ರ ದೇಶದ ಎಲ್ಲ ಸಮಸ್ಯೆಗಳಿಗೂ ಪರಿಹಾರ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಮೊದಲಿಗೆ ನೀವು ರಾಜೀನಾಮೆ ನೀಡಬೇಕು. ಆ ಬಳಿಕ ರಾಷ್ಟ್ರಪತಿಯವರು ವರ್ಚುವಲ್ ಆಗಿ ಸಂಸತ್ ಅಧಿವೇಶನ ಕರೆಯಬೇಕು. ಆ ಮೂಲಕ ರಾಷ್ಟ್ರೀಯ ಸರ್ಕಾರ ರಚನೆಗೆ ದಾರಿ ಮಾಡಿಕೊಡಬೇಕು. ಇದರಿಂದ ಮಾತ್ರ ರಾಷ್ಟ್ರಕ್ಕೆ ಮುಂದೆ ಬರಬಹುದಾದ ಬಿಕ್ಕಟ್ಟನ್ನು ಎದುರಿಸಲು ಸಾಧ್ಯ. ಅಷ್ಟೇ ಅಲ್ಲ ಮೂರನೇ ಕೋವಿಡ್ ಅಲೆಯನ್ನು ತಡೆಯುವುದರ ಜತೆಗೆ, ರಾಜಕೀಯ ಸುಧಾರಣೆಗಳನ್ನು ತರಲು ರಾಷ್ಟ್ರೀಯ ಸರ್ಕಾರದಿಂದ ಮಾತ್ರ ಸಾಧ್ಯ' ಎಂದು ಪ್ರತಿಪಾದಿಸಿದ್ದಾರೆ.

ನಿಮ್ಮ ಸರ್ಕಾರ ಸಮಸ್ಯೆಗಳನ್ನು ಬಗೆಹರಿಸುವುದರ ಬದಲಿಗೆ, ಸಮಸ್ಯೆಯ ಭಾಗವಾಗಿದೆ. 2020 ರ ನವೆಂಬರ್‌ನಿಂದ ಕೃಷಿ ಕಾಯ್ದೆಯನ್ನು ವಿರೋಧಿಸಿ ರೈತರು ಹೋರಾಟ ನಡೆಸುತ್ತಿದ್ದಾರೆ. ಅದಕ್ಕೆ ಯಾವುದೇ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ರೈತರ ಬೇಡಿಕೆಯಂತೆ ಕಾಯ್ದೆ ಹಿಂದಕ್ಕೆ ಪಡೆಯಬೇಕಿತ್ತು. ರಾಷ್ಟ್ರೀಯ ಸರ್ಕಾರ ಬಂದರೆ ಅದನ್ನು ಮಾಡುತ್ತದೆ. ಅದೇ ರೀತಿ ಕಾರ್ಮಿಕ ಕಾಯ್ದೆಯನ್ನು ಹಿಂದಕ್ಕೆ ಪಡೆಯದೇ ಕಾರ್ಮಿಕರನ್ನು ಸಂಕಷ್ಟದಲ್ಲಿ ಸಿಲುಕಿಸಿದೆ ಎಂದು ಕಿಡಿಕಾರಿದ್ದಾರೆ.

ಕೋವಿಡ್‌ಗೆ ಸಾರ್ವತ್ರಿಕವಾಗಿ ಉಚಿತವಾಗಿ ಲಸಿಕೆ ನೀಡುವುದರ ಬದಲು, ಕಂಪನಿಗಳು ಹಣ ಮಾಡಿಕೊಳ್ಳಲು ಅನುಕೂಲವಾಗುವ ಲಸಿಕೆ ನೀತಿಯನ್ನು ಜಾರಿಗೆ ತರಲಾಗಿದೆ. ಕೋವಿಡ್‌ನಿಂದ ಮೃತಪಟ್ಟವರಿಗೆ ₹4 ಲಕ್ಷ ಪರಿಹಾರ ನೀಡುವ ವಿಚಾರದಲ್ಲೂ ಮೋದಿ ಸರ್ಕಾರ ವಿಕ್ಷಿಪ್ತ ಧೋರಣೆ ತಳೆದಿದೆ ಎಂದು ಟೀಕಿಸಿದ್ದಾರೆ.

ಬ್ರ್ಯಾಂಡ್ ಮೋದಿ ಆಮ್ಲಜನಕವಿಲ್ಲದೆ ಐಸಿಯುನಲ್ಲಿದೆ. ಆದ್ದರಿಂದ ರಾಜೀನಾಮೆ ಕೊಟ್ಟು ಹೊರಹೋಗಬೇಕು. ದೇಶಕ್ಕೆ ರಾಷ್ಟ್ರೀಯ ಸರ್ಕಾರವೊಂದೇ ಪರಿಹಾರ. ಈ ವಿಷಯವಾಗಿ ಇದೇ 26 ರಂದು ರಾಷ್ಟ್ರೀಯ ಮಟ್ಟದ ವೆಬಿನಾರ್‌ವೊಂದನ್ನು ಏರ್ಪಡಿಸಲಾಗಿದೆ ಎಂದೂ ಪತ್ರದಲ್ಲಿ ಹೇಳಿದ್ದಾರೆ.

ದುಬೈ ಮಾರುಕಟ್ಟೆ ಪ್ರವೇಶಿಸಿದ ಮಲಬಾರ್

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಸಂಸ್ಥೆಯು ದುಬೈ ಇಂಟರ್‌ನ್ಯಾಷನಲ್ ಫೈನಾನ್ಷಿಯಲ್ ಸೆಂಟರ್ (ಡಿಐಎಫ್‌ಸಿ) ಅನ್ನು ಪ್ರವೇಶಿಸಿದೆ ಹಾಗೂ ನಾಸ್ಡಾಕ್ ದುಬೈನ ಸೆಂಟ್ರಲ್ ಸೆಕ್ಯುರಿಟೀಸ್ ಡೆಪಾಸಿಟರಿಯಡಿ (ಸಿಎಸ್‌ಡಿ) ತನ್ನ ಷೇರುಗಳನ್ನು ನೋಂದಣಿ ಮಾಡಿದೆ.

ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ.ಅಹ್ಮದ್, 'ಮಲಬಾರ್ ಪ್ರಗತಿ ಮುಂದುವರಿಸಿದ್ದು, ಡಿಐಎಫ್‌ಸಿಯಂತಹ ಸಂಸ್ಥೆಯಲ್ಲಿ ನೆಲೆ ಕಂಡಿರುವುದು ಸಂತಸ ತಂದಿದೆ' ಎಂದರು.

ಡಿಐಎಫ್‌ಸಿ ಗವರ್ನರ್ ಎಚ್.ಇ. ಎಸ್ಸಾ ಕಜೀಂ,'ದುಬೈ ಅಂತರರಾಷ್ಟ್ರೀಯ ಹಣಕಾಸು ಕೇಂದ್ರವಾಗಿ ರೂಪುಗೊಂಡಿದ್ದು, ಬಂಡವಾಳ ಮಾರುಕಟ್ಟೆಯ ಲಾಭ ಪಡೆಯಲು ಹಲವು ಕಂಪನಿಗಳಿಗೆ ಅವಕಾಶ ಒದಗಿಸಲು ಬದ್ಧವಾಗಿದೆ' ಎಂದರು.

8 ಕೆ.ಜಿ ಗಾಂಜಾ ಜಪ್ತಿ: ಸೆರೆ

ಬೆಂಗಳೂರು: ನಗರದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಗಂಗಮ್ಮ ಗುಡಿ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಯಲಹಂಕದ ಕೋಗಿಲು ಕ್ರಾಸ್ ಬಳಿ ವಾಸವಿದ್ದ ಅಮೀನ್ ಖಾನ್ (28) ಬಂಧಿತ. 'ಎಂ.ಎಸ್.ರಸ್ತೆಯಲ್ಲಿ ಮಂಗಳವಾರ ಬೆಳಿಗ್ಗೆ ಗಾಂಜಾ ಮಾರುತ್ತಿದ್ದಾಗ ಆರೋಪಿಯನ್ನು ಬಂಧಿಸಲಾಯಿತು. ಮತ್ತೊಬ್ಬ ಆರೋಪಿ ಪರಾರಿಯಾಗಿದ್ದಾನೆ. ಬಂಧಿತನಿಂದ 8 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಅಮೀನ್ ಟ್ಯಾಕ್ಸಿ ಚಾಲಕನಾಗಿದ್ದು, ಅಪಘಾತದಲ್ಲಿ ಕಾರು ಹಾಳಾಗಿತ್ತು. ಇದಾದ ನಂತರ ಕೆಲಸವಿಲ್ಲದೆ ಇದ್ದ ಅಮೀನ್‌ಗೆ ಮತ್ತೊಬ್ಬ ಆರೋಪಿಯ ಪರಿಚಯವಾಗಿತ್ತು. ಆತನೇ ಅಮೀನ್‌ಗೆ ಗಾಂಜಾ ಮಾರಾಟ ಮಾಡುವ ಕೆಲಸ ನೀಡಿದ್ದ. ಆರೋಪಿಗಳು ಆಂಧ್ರಪ್ರದೇಶ ದಿಂದ ಗಾಂಜಾ ತರಿಸಿಕೊಳ್ಳುತ್ತಿದ್ದರು' ಎಂದೂ ಹೇಳಿದರು.

ಕ್ಷಯ ರೋಗ: ಹಾಸಿಗೆ ಕಾಯ್ದಿರಿಸಲು ಸೂಚನೆ

ಬೆಂಗಳೂರು: ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಕ್ಷಯ ರೋಗಿಗಳಿಗೆ ಎರಡರಿಂದ ನಾಲ್ಕು ಹಾಸಿಗೆಗಳನ್ನು ಪ್ರತ್ಯೇಕವಾಗಿ ಕಾಯ್ದಿರಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಾ.ಕೆ.ವಿ. ತ್ರಿಲೋಕ ಚಂದ್ರ ಅವರು ಸುತ್ತೋಲೆ ಹೊರಡಿಸಿದ್ದಾರೆ. 'ಕೇಂದ್ರ ಸರ್ಕಾರವು 2025ರ ವೇಳೆಗೆ ಕ್ಷಯ ರೋಗವನ್ನು ನಿರ್ಮೂಲನೆ ಮಾಡುವ ಗುರಿ ಹೊಂದಿದೆ. ಹಾಗಾಗಿ, ಪ್ರಾರಂಭಿಕ ಹಂತದಲ್ಲಿಯೇ ರೋಗ ಪತ್ತೆ, ಚಿಕಿತ್ಸೆ ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ರೋಗಿಗಳಿಗೆ ಹಾಸಿಗೆಗಳನ್ನು ಕಾಯ್ದಿರಿಸಬೇಕು. ಅವರಿಗೆ ನಡೆಸುವ ಎಲ್ಲ ತಪಾಸಣೆಗಳು ಮತ್ತು ಇತರೆ ಸೌಲಭ್ಯಗಳು ಉಚಿತವಾಗಿ ಇರುತ್ತದೆ' ಎಂದು ತಿಳಿಸಿದ್ದಾರೆ.

ಚಿತ್ರಾವಳಿ

ರಾಜಗೋಪಾಲನಗರ ವಾರ್ಡ್‌ನ ಜಿ.ಕೆ. ಡಬ್ಲ್ಯೂ ಬಡಾವಣೆಯ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಆರ್. ಮಂಜುನಾಥ್ ಚಾಲನೆ ನೀಡಿದರು. ಜೆಡಿಎಸ್‌ನ ಸ್ಥಳೀಯ ಮುಖಂಡರಾದ ಎಚ್.ಎನ್. ಗಂಗಾಧರ್, ಮಂಜೇಗೌಡ, ರುದ್ರೇಗೌಡ ಇತರರು ಹಾಜರಿದ್ದರು

ಮಾವಳ್ಳಿಯ ಕುಂಬ್ರಿಗಲ್ ರಸ್ತೆಯಲ್ಲಿರುವ ಗಣೇಶ ದೇವಸ್ಥಾನದ ಬಳಿ ಗುರುವಾರ ಹೂವು ಖರೀದಿಸುವವರ ಸಂಖ್ಯೆ ವಿರಳವಾಗಿತ್ತು –ಪ್ರಜಾವಾಣಿ ಚಿತ್ರ

ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಬೆಂಗಳೂರು ಹಾಗೂ ದೇವನಹಳ್ಳಿ ಸುತ್ತಲಿನ 50ಕ್ಕೂ ಹೆಚ್ಚು ಅಂಧರಿಗೆ ಯೂತ್ ಫಾರ್ ಸೇವಾ ಸಂಸ್ಥೆ ಹಾಗೂ ಬೆಳಕು ಟ್ರಸ್ಟ್ ಸಹಯೋಗದಲ್ಲಿ ದಿನಸಿ ಕಿಟ್ ವಿತರಿಸಲಾಯಿತು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ದಿನಾಂಕ: 25.06.2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆವಿಕಂನ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಉತ್ತರ ಮತ್ತು ದಕ್ಷಿಣದ ವಾ, ಕಾ ಮತ್ತು ಪಾ ವಿಭಾಗಗಳಿಗೆ **ಕೇಬಲ್ ರೂಟ್ ಟ್ರೇಸರ್ ಉಪಕರಣಗಳನ್ನು ಸರಬರಾಜು ಮಾಡಲು** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಪ್ರಮಾಣ: 14 ಸಂಖ್ಯೆಗಳು. ಬಿಡ್ ದಸ್ತಾವೇಜುಗಳು ದಿನಾಂಕ: **25.06.2021 ರಿಂದ 12.07.2021 ರ ಅಪರಾಹ್ನ 3.00 ಗಂಟೆಯವರೆಗೆ** ಲಭ್ಯವಿರುತ್ತದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **12.07.2021ರ ಅಪರಾಹ್ನ 3.00 ಗಂಟೆಯವರೆಗೆ.** ಬಿಡ್ಡನ್ನು ತೆರೆಯುವ ದಿನಾಂಕ : **13.07.2021ರ ಅಪರಾಹ್ನ 03.15 ಗಂಟೆಯವರೆಗೆ.** ಆಸಕ್ತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ನೋಂದಾಯಿಸಿಕೊಂಡು ಬಿಡ್‌ನಲ್ಲಿ ಭಾಗವಹಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ +91–80–46010000/+91–80–68948777 ಅಥವಾ ಇ–ಮೇಲ್: support@eprochelpdesk.comನ್ನು ಸಂಪರ್ಕಿಸಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ವಿದ್ಯುತ್), ಖರೀದಿ, ಬೆವಿಕಂ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with 'A' GRADE
ಕುಲಸಚಿವರು (ಮೌಲ್ಯಮಾಪನ), ಪರೀಕ್ಷಾ ಭವನ, ಜ್ಞಾನಭಾರತಿ ಆವರಣ, ಬೆಂಗಳೂರು – 560056.
ಸಂಖ್ಯೆ: ಪ.ವಿ3/ಅಂಕಪಟ್ಟಿ/ಖರೀದಿ/ಕೋಟೇಷನ್/2021–22 ದಿನಾಂಕ: 21–06–2021

ಅಧಿಸೂಚನೆ

ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸುಮಾರು 2,50,000 ಸಂಖ್ಯೆಯ ಖಾಲಿ ಅಂಕಪಟ್ಟಿ ಮುದ್ರಿಸಿ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ಧತಿ (two cover system) ಅಂದರೆ ತಾಂತ್ರಿಕ ಮತ್ತು ಹಣಕಾಸು ಕೊಟೇಷನ್ ಅನ್ನು ನೊಂದಾಯಿತ ಕಂಪನಿ/ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

ತಾಂತ್ರಿಕ ಮತ್ತು ಹಣಕಾಸು ಬಿಡ್ಡಿನ ಅರ್ಹತೆ / ವಿಷೇಶತೆಗಳನ್ನು ಷರತ್ತು ಹಾಗೂ ನಿಬಂಧನೆಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ bangaloreuniversity.ac.in ನಿಂದ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ, ಕೊಟೇಷನ್ ಅನ್ನು ಅಧೀಕ್ಷಕರು, ಪರೀಕ್ಷಾ ವಿಭಾಗ–3, ಪರೀಕ್ಷಾ ಭವನ, ಜ್ಞಾನಭಾರತಿ ಆವರಣ, ಬೆಂಗಳೂರು–560 056 ಇವರಿಗೆ ಈ ಅಧಿಸೂಚನೆ ಪ್ರಕಟಗೊಂಡ 30 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–22961210 ಮತ್ತು ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–, ಕುಲಸಚಿವರು (ಮೌಲ್ಯಮಾಪನ)

₹110 ಕೋಟಿ ಅನುದಾನಕ್ಕೆ ಬಿಬಿಎಂಪಿ ಕೋರಿಕೆ

ದಾಸರಹಳ್ಳಿ: ಅನುದಾನದ ಮನವಿ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ದಾಸರಹಳ್ಳಿ ವಲಯಕ್ಕೆ ₹110.75 ಕೋಟಿ ಅನುದಾನ ಬಿಡುಗಡೆ ಮಾಡಲು ಕೋರಿರುವ ಬಿಬಿಎಂಪಿ ಮನವಿ ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಅಶ್ವತ್ಥನಾರಾಯಣ ಚೌಧರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 14 ವರ್ಷಗಳ ಹಿಂದೆಯೇ ಬಿಬಿಎಂಪಿಗೆ ಈ ಕ್ಷೇತ್ರದ ಬಡಾವಣೆಗಳು ಸೇರ್ಪಡೆಯಾಗಿದ್ದರೂ ರಸ್ತೆಗಳ ಸಮರ್ಪಕವಾಗಿ ಅಭಿವೃದ್ಧಿ ಆಗಿಲ್ಲ ಎಂಬ ಅಂಶವನ್ನು ಗಮನಿಸಿ ಈ ಆದೇಶ ನೀಡಿತು.

ಈ ಸಂಬಂಧ ದಾಸರಹಳ್ಳಿ ವಲಯದ ಕಾರ್ಯಪಾಲಕ ಎಂಜಿನಿಯರ್ ಸೈಯದ್ ಅತಿಖುರ್ ರೆಹಮಾನ್ ಇದ್ರುಸ್ ಸಲ್ಲಿಸಿದ್ದ ಅಫಿಡವಿಟ್ ಅನ್ನು ಪೀಠ ಪರಿಶೀಲನೆ ನಡೆಸಿತು.

'ದಾಸರಹಳ್ಳಿ ವಲಯದ ರಸ್ತೆ ಮತ್ತು ಕುಡಿಯುವ ನೀರಿನ ಸಮಸ್ಯೆ ಸರಿಪಡಿಸಲು ಅನುದಾನ ಕೋರಿ ನಗರಾಭಿವೃದ್ಧಿ ಇಲಾಖೆಗೆ ಬಿಬಿಎಂಪಿ ಆಯುಕ್ತರು ಪತ್ರ ಬರೆದಿದ್ದರು. 2019ರ ಫೆಬ್ರುವರಿ 1ರಂದು ₹558.1 ಕೋಟಿ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿತ್ತು. 2019ರ ಸೆಪ್ಟೆಂಬರ್‌ನಲ್ಲಿ ಇದನ್ನು ₹28.2 ಕೋಟಿಗೆ ಕಡಿಮೆ ಮಾಡಲಾಗಿದೆ' ಎಂದು ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಹಿನ್ನೆಲೆ: ದಾಸರಹಳ್ಳಿ ಕ್ಷೇತ್ರವನ್ನು ಜೆಡಿಎಸ್ ಶಾಸಕ ಆರ್. ಮಂಜುನಾಥ್ ಪ್ರತಿನಿಧಿಸುತ್ತಿದ್ದು, ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ₹558 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಕೆಲವೇ ದಿನಗಳಲ್ಲಿ ಸರ್ಕಾರ ಬದಲಾಯಿತು. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆದ ಕೂಡಲೇ ಅನುದಾನ ವಾಪಸ್ ಪಡೆದು ₹28 ಕೋಟಿ ಮಾತ್ರ ಉಳಿಸಿದ್ದರು.

110 ಹಳ್ಳಿಯ ಕಾಮಗಾರಿಗಳು, ರಸ್ತೆಗಳು, ಕುಡಿಯುವ ನೀರಿನ ಯೋಜನೆ ಇದರಿಂದಾಗಿ ನನೆಗುದಿಗೆ ಬೀಳುವಂತಾಯಿತು. ಅನುದಾನ ವಾಪಸ್ ಪಡೆದ ಸರ್ಕಾರದ ಕ್ರಮದ ವಿರುದ್ಧ ಶಾಸಕ ಆರ್.ಮಂಜುನಾಥ್ ಪ್ರತಿಭಟನೆಯನ್ನೂ ನಡೆಸಿದರು. ಎಚ್.ಡಿ.ಕುಮಾರಸ್ವಾಮಿ ಕೂಡ ಅದರಲ್ಲಿ ಪಾಲ್ಗೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.

ಆದರೂ, ಈ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ದೊರೆಯಲಿಲ್ಲ. ಇನ್ನೊಂದೆಡೆ, 110 ಹಳ್ಳಿ ಯೋಜನೆಯ ಕಾಮಗಾರಿಗಾಗಿ ಅಗೆದಿದ್ದ ರಸ್ತೆಗಳಲ್ಲಿ ವಾಹನ ಸಂಚಾರವೇ ದುಸ್ತರವಾಗಿತ್ತು. ಇಡೀ ಕ್ಷೇತ್ರದಲ್ಲಿ ರಸ್ತೆಗಳು ತೀರಾ ಹದಗೆಟ್ಟಿದ್ದವು.

ಇದೇ ಕ್ಷೇತ್ರದ ನಿವಾಸಿಯಾದ ಅಶ್ವತ್ಥನಾರಾಯಣ ಚೌಧರಿ ಅವರು ತಮ್ಮ ತಾಯಿ ಅಶ್ವತ್ಥಮ್ಮ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಬರುತ್ತಿದ್ದಾಗ ಬಿದ್ದಿದ್ದರು. 'ತಾಯಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದವು. ಇದರಿಂದ ಬೇಸತ್ತು ಹೈಕೋರ್ಟ್ ಮೊರೆ ಹೋದೆ' ಎಂದು ಅಶ್ವತ್ಥನಾರಾಯಣ ತಿಳಿಸಿದರು.

'ಅನುದಾನ ಬಿಡುಗಡೆ ಮಾಡಲಿ'

ನೀಡಿದ್ದ ಅನುದಾನವನ್ನು ಸರ್ಕಾರ ವಾಪಸ್ ಪಡೆದಿದ್ದರಿಂದ ಕ್ಷೇತ್ರದ ಜನರಿಗೆ ಅನ್ಯಾಯವಾಗಿದೆ ಎಂದು ಶಾಸಕ ಆರ್.ಮಂಜುನಾಥ್ ಹೇಳಿದರು.

'ಕ್ಷೇತ್ರದ ಜನರ ಪರವಾಗಿ ಸದನದ ಒಳಗೆ ಮತ್ತು ಹೊರಗೂ ಹೋರಾಟ ನಡೆಸಿದ್ದರೂ ಸರ್ಕಾರ ಕಿವಿಗೊಟ್ಟಿರಲಿಲ್ಲ. ಈಗ ಸರ್ಕಾರಕ್ಕೆ ಹೈಕೋರ್ಟ್ ಚಾಟಿ ಬೀಸಿದೆ. ಈಗಲಾದರೂ ಅನುದಾನ ಬಿಡಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಒಳಿತು– ಕೆಡುಕಿನ ನಡುವೆ



ಪೈರಸಿಗೆ ಶಿಕ್ಷೆ 1952ರ ಕಾಯ್ದೆಯಲ್ಲಿ ಇರಲಿಲ್ಲ. ಈಗಿನ ಕರಡಿನಲ್ಲಿ ಇದೆ. 10 ವರ್ಷಕ್ಕೊಮ್ಮೆ ಚಿತ್ರದ ಮರು ಪ್ರಮಾಣೀಕರಣ ಅನ್ನುವುದನ್ನು ತರುವುದರಿಂದ ನಿರ್ಮಾಪಕರಿಗೆ ಮತ್ತೊಂದಿಷ್ಟು ರಾಯಧನ ಸಿಗುತ್ತದೆ. ನಿರ್ಮಾಪಕ ಬದುಕುತ್ತಾನೆ. ವಿಡಿಯೊ ಮಾಫಿಯಾವನ್ನು ತಡೆಗಟ್ಟಬಹುದು. ಈ ದೃಷ್ಟಿಯಲ್ಲಿ ಈ ಕಾಯ್ದೆ ಒಳ್ಳೆಯದೇ.

ಇನ್ನು ಸಿನಿಮಾ ಪ್ರಮಾಣೀಕರಣ ವರ್ಗೀಕರವನ್ನು (ಯು/ಎ/ 16 + ... ಇತ್ಯಾದಿ) ಇದನ್ನು ಸದ್ಯದ ಡಿಜಿಟಲ್ ವೀಕ್ಷಣಾ ವ್ಯವಸ್ಥೆಯಲ್ಲಿ ಹೇಗೆ ನಿಯಂತ್ರಿಸುತ್ತೀರಿ? ಗ್ಯಾಜೆಟ್‌ಗಳಲ್ಲಿ ನೋಡುವವರ ವಯಸ್ಸನ್ನು ಹೇಗೆ ಗುರುತಿಸಿ ನಿಯಂತ್ರಿಸುತ್ತೀರಿ?

ಒಂದು ಕಥಾ ವಸ್ತುವಲ್ಲಿ ಇರುವ ಸತ್ಯಾಂಶವನ್ನು ಸ್ವೀಕರಿಸಲು ಸರ್ಕಾರಕ್ಕೆ ಭಯ ಏಕೆ? ಅಭಿವ್ಯಕ್ತಿ ಸ್ವಾತಂತ್ರ್ಯ ನಿಯಂತ್ರಿಸುವ ಯಾವ ಪ್ರಯತ್ನಗಳೂ ಪ್ರಪಂಚದಲ್ಲಿ ಯಶಸ್ವಿ ಆಗಿಲ್ಲ.

ರಾಜೇಂದ್ರ ಸಿಂಗ್ ಬಾಬು, ನಿರ್ಮಾಪಕ, ನಿರ್ದೇಶಕ

ಭ್ರಷ್ಟಾಚಾರಕ್ಕೆ ದಾರಿಯಾಗಬಹುದು

ಶಿಸ್ತುಬದ್ಧವಾಗಿರುವ ಸೆನ್ಸಾರ್ ಮಂಡಳಿ ಮೇಲೆ ಇನ್ನೊಂದು ಹಿಡಿತ ತರುವ ಉದ್ದೇಶ ಏನು? ಚಿತ್ರದ ಶೂಟಿಂಗ್ ಸಹಿತ ನಿರ್ಮಾಣ ಹಂತದಲ್ಲೇ ನಿಯಮಗಳ ಕಾರಣದಿಂದ ಸಾಕಷ್ಟು ಹೆದರಿಕೊಂಡು ಸ್ವಯಂ ಸೆನ್ಸಾರ್ ಹಾಕಿಕೊಂಡು ಕೆಲಸ ಮಾಡುತ್ತೇವೆ. ಇಷ್ಟೆಲ್ಲಾ ನಿಯಮ ಪಾಲಿಸಿಯೂ ಇನ್ನೊಂದು ವ್ಯವಸ್ಥೆ ಬೇಕಾಗಿಲ್ಲ. ಇದು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ನಿರ್ಮಾಪಕರು, ನಿರ್ದೇಶಕರನ್ನು ಇನ್ನಷ್ಟು ಹೈರಾಣಾಗಿಸುವ ವ್ಯವಸ್ಥೆ ಇದು. ಸಿನಿಮಾವನ್ನು ಪ್ರೀತಿಸುವ ಯಾರೂ ಕೂಡಾ ಇಂಥ ನಿಯಮ ತರಲು ಸಾಧ್ಯವಿಲ್ಲ. ನಾನು ಇದನ್ನು ವಿರೋಧಿಸುತ್ತೇನೆ.

ಜಯಮಾಲಾ, ನಟಿ, ನಿರ್ಮಾಪಕಿ

ಆಳುವವರ ವಿರುದ್ಧದ ಧ್ವನಿ ಹತ್ತಿಕ್ಕುವ ಹುನ್ನಾರ

ದೇಶದ ಸಾರ್ವಭೌಮತೆ, ಭದ್ರತೆ ಸಂಬಂಧಿಸಿ ತೊಂದರೆ ಆಗುವ ಅಥವಾ ಅನಗತ್ಯ ವಿಷಯಗಳಿದ್ದರೆ ಅದನ್ನು ನಿರ್ಬಂಧಿಸುವ ಅವಕಾಶ ಈಗಲೇ ಇದೆ. ಬೇಕಿದ್ದರೆ ಹೊಸ ವಿಷಯಗಳನ್ನು ಆ ನಿಯಮಗಳಿಗೇ ಸೇರಿಸಬಹುದು. ಸೆನ್ಸಾರ್ ಮಂಡಳಿಯ ಕೆಲಸವನ್ನು ಸಮ್ಮಿಶ್ರ ಸರ್ಕಾರ ಮಾಡಬಾರದು. ಆಳುವ ಸರ್ಕಾರದ ವಿರುದ್ಧ ಯಾವುದೇ ಧ್ವನಿ ಬರಬಾರದು ಎಂಬುದು ಇಲ್ಲಿನ ಹುನ್ನಾರ ಅಷ್ಟೆ. ಇದು ಸಂವಿಧಾನ ವಿರೋಧಿ. ಸರ್ಕಾರದ ಆದೇಶವನ್ನು ಪ್ರಶ್ನಿಸಬಾರದು ಎಂದು ಮಾಡಿದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇ ಇಲ್ಲ. ಕೇಂದ್ರ ಸರ್ಕಾರ ನಿರಂತರವಾಗಿ ನಡೆಸುತ್ತಿರುವ ಕೇಂದ್ರೀಕರಣ ನೀತಿಯ ಫಲ ಇದು.

ಬರಗೂರು ರಾಮಚಂದ್ರಪ್ಪ, ಚಿತ್ರ ನಿರ್ದೇಶಕ

ಅಭಿವ್ಯಕ್ತಿ ಇತಿಮಿತಿಯೊಳಗಿರಲಿ



ಹೊಸ ಕರಡಿನ ಪ್ರಕಾರ ಇಲ್ಲಿ ಕೋರ್ಟ್ ಕೈಯಾಡಿಸುವ ಬದಲು ಸರ್ಕಾರ ಕೈ ಆಡಿಸುತ್ತದೆ. ಯಾವುದೇ ನಿರ್ದೇಶಕ ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿಮಿತಿಯೊಳಗೆ ಮಾಡಬೇಕಾದದ್ದು ಅವನ ಕರ್ತವ್ಯ. ಇತ್ತೀಚೆಗೆ ಅಭಿವ್ಯಕ್ತಿ ಅಂದುಕೊಂಡಿದ್ದನ್ನು ಕೆಲವರು ಸ್ವೇಚ್ಛೆ ಎಂದು ಬಳಸಿಕೊಳ್ಳುತ್ತಿದ್ದಾರೆ. ಡಿಜಿಟಲ್ ವೇದಿಕೆಗಳು ಬಂದ ಮೇಲೆ ಹೊಸ ಚಿಂತನೆ, ಹೊಸ ಸ್ವಯಂ ಶಿಸ್ತಿನ ಕ್ರಮಗಳು ಬರಬೇಕು. ದೃಶ್ಯ ಮಾಧ್ಯಮದ ಶಿಸ್ತುಬದ್ಧ ಕ್ರಮಕ್ಕೆ ಬೇರೆಯೇ ವ್ಯಾಖ್ಯಾನ ಬೇಕು. ಈಗ ಸಿನಿಮಾಟೋಗ್ರಫಿ ಅನ್ನುವುದೇ ಸರಿಯಲ್ಲ. ಎಲ್ಲಿದೆ ಸಿನಿಮಾ ಹೇಳಿ? ಈಗ ಸಿನಿಮಾ ಅನ್ನುವುದು ಡಿಜಿಟಲ್ ದೃಶ್ಯ ಆಗಿಬಿಟ್ಟಿದೆ. ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಡಿಜಿಟಲ್ ಸೆನ್ಸಾರಿಂಗ್ ಆಗಬೇಕು (ಟಿವಿ, ಒಟಿಟಿ ಸೇರಿ). ಡಿಜಿಟಲ್ ದೃಶ್ಯ ಸಾಕ್ಷರತೆಗೆ ತಕ್ಕ ಕಾನೂನು ಚೌಕಟ್ಟು ರೂಪಿಸಬೇಕು.

– **ಟಿ.ಎಸ್.ನಾಗಾಭರಣ,** ಚಿತ್ರ ನಿರ್ದೇಶಕ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಬಿಜೆಪಿಯ ಸಾರ್ವಭೌಮತ್ವಕ್ಕೆ ಧಕ್ಕೆ

ಇದು ಮೇಲ್ನೋಟಕ್ಕೆ ಅಪಾಯಕಾರಿ. ಚಿತ್ರದ ಕಂಟೆಂಟ್ ದೇಶದ ಸಾರ್ವಭೌಮತ್ವ ಐಕ್ಯತೆಗೆ ಧಕ್ಕೆ ತರುವಂತಹದ್ದು ಅಲ್ಲ, ಇದು ಬಿಜೆಪಿಯ 'ಸಾರ್ವಭೌಮತ್ವ ಮತ್ತು ಐಕ್ಯತೆ'ಗೆ ಧಕ್ಕೆ ತರುವ ಕಂಟೆಂಟ್ ಆಗಿದ್ದರೆ... ಎಂದು ತಿದ್ದಿಕೊಂಡರೆ ಈ ಹೊಸ ಕರಡನ್ನು ಒಪ್ಪಿಕೊಳ್ಳಬಹುದು. ಯಾವ ಕಲಾಕಾರನ ಅಭಿವ್ಯಕ್ತಿಯೂ ಸದಾ ದೇಶದ ಸಾರ್ವಭೌಮತೆ, ಐಕ್ಯತೆಗೆ ಅಡ್ಡಿ ಮಾಡಲು ಸಾಧ್ಯವಿಲ್ಲ.

ಯಾವಾಗ ತಮ್ಮ ಅಸ್ತಿತ್ವಕ್ಕೆ ಅಡ್ಡಿ ಬರುತ್ತದೆ ಎಂದು ಗೊತ್ತಾದರೆ ಅವರು ಇಂಥದ್ದನ್ನು (ದೇಶ, ರಾಷ್ಟ್ರೀಯತೆ... ಇತ್ಯಾದಿ) ಬಳಸುತ್ತಾರೆ. ಸಣ್ಣ ಸಿನಿಮಾ ಮಾಡುವವರನ್ನು ಕ್ಷುಲ್ಲಕ ಕಾರಣಕ್ಕಾಗಿ ಆಕ್ಷೇಪಿಸುತ್ತಾರೆ. ಹೀಗೆ ಚಿತ್ರದ ಮೇಲೆ ಆಕ್ಷೇಪಗಳನ್ನು ಸೃಷ್ಟಿ ಮಾಡಿಸಲೂಬಹುದು. ಇದು ಈಗ ನೆಲಕ್ಕೆ ಬಿದ್ದವನ ಮೇಲೆ ಗುದ್ದು ಹಾಕುವ ಕೆಲಸ. ಸಿನಿಮಾ ಕ್ಷೇತ್ರ ಬಿದ್ದುಬಿಟ್ಟಿದೆ. ಅದರ ಮೇಲೆ ಗುದ್ದು ಹಾಕುತ್ತಿದ್ದಾರೆ. ಬಿಜೆಪಿ ಈ ಕ್ಷೇತ್ರವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ವ್ಯರ್ಥ ಪ್ರಯತ್ನ ಮಾಡುತ್ತಿದೆ.

ಡಾ.ನಾಗತಿಹಳ್ಳಿ ಚಂದ್ರಶೇಖರ್, ನಿರ್ಮಾಪಕ, ನಿರ್ದೇಶಕ

ಸಿನಿಮಾಟೊಗ್ರಫಿ ಕಾಯ್ದೆ 1952ಕ್ಕೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ರೂಪಿಸಿರುವ ಕರಡು ಮಸೂದೆಯಲ್ಲಿ, ಸೆನ್ಸಾರ್ ಮಂಡಳಿ ಹಾಗೂ ಸಿನಿಮಾ ರಂಗದ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುವ ನಿಯಮಗಳಿವೆ ಎನ್ನುವ ವಾದ ಬಲವಾಗಿ ಕೇಳಿ ಬರುತ್ತಿದೆ. ಮಸೂದೆಯಲ್ಲಿ ಹೊಸದಾಗಿ ಸೇರಿಸಲಾಗಿರುವ ಅಂಶಗಳು ಯಾವುವು? ಅವುಗಳಿಂದ ಆಗುವ ದೂರಗಾಮಿ ಪರಿಣಾಮಗಳೇನು? ಈ ಚರ್ಚೆಯೊಳಗೆ ಒಂದು ಇಣುಕು ನೋಟ

ಸೆನ್ಸಾರ್ ಕತ್ತರಿ ಮೇಲೆ ಕೇಂದ್ರದ ಕೈ

ಶರತ್ ಹೆಗ್ಡೆ

ಸೆನ್ಸಾರ್ ಮಂಡಳಿ ಪ್ರಮಾಣಿಕರಿಸಿದ ಚಲನಚಿತ್ರವನ್ನು (ಏನಾದರೂ ಆಕ್ಷೇಪಗಳು ಬಂದಲ್ಲಿ) ಮರುಪರಿಶೀಲಿಸುವಂತೆ ಆದೇಶಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವೇ ನೇರವಾಗಿ ಹೊಂದುವ ಹೊಸ ನಿಯಮದ ಕರಡು ಇತ್ತೀಚೆಗೆ ಬಿಡುಗಡೆ ಆಗಿದೆ. ಜುಲೈ 2ರ ಒಳಗೆ ಇದಕ್ಕೆ ಸಂಬಂಧಿಸಿ ಚಿತ್ರೋದ್ಯಮ ಹಾಗೂ ಸಾರ್ವಜನಿಕರಿಂದ ಪ್ರತಿಕ್ರಿಯೆ ಆಹ್ವಾನಿಸಿದೆ. ಕರಡಿನಲ್ಲಿರುವ ಅಂಶಗಳ ಬಗ್ಗೆ ಚಿತ್ರೋದ್ಯಮದಲ್ಲಿ ಪರ ವಿರೋಧ ಚರ್ಚೆಗಳು ಶುರುವಾಗಿವೆ. ಬಹುಪಾಲು ಸಿನಿಮಂದಿ ಈ ಆದೇಶದ ಸಮಂಜಸತೆಯನ್ನೇ ಪ್ರಶ್ನಿಸಿ ಕೇಂದ್ರ ಸರ್ಕಾರಕ್ಕೆ ಪ್ರತಿಕ್ರಿಯಿಸಲು ಸಿದ್ಧತೆ ನಡೆಸಿದ್ದಾರೆ.

ಇಷ್ಟಕ್ಕೂ ಕರಡಿನಲ್ಲಿ ಏನಿದೆ?

ಸದ್ಯಕ್ಕಿರುವ ನಿಯಮ ಪ್ರಕಾರ (ಸಿನಿಮಾಟೊಗ್ರಫಿ ಕಾಯ್ದೆ 1952 ಸೆಕ್ಷನ್ 5ಬಿ(1)) ಚಿತ್ರವೊಂದು ಒಮ್ಮೆ ಸೆನ್ಸಾರ್ ಮಂಡಳಿಯಿಂದ ಪ್ರಮಾಣಿತಗೊಂಡರೆ ಅದನ್ನು ಬದಲಾಯಿಸಲು ಸರ್ಕಾರಕ್ಕೆ ಯಾವುದೇ ಹಕ್ಕು ಇಲ್ಲ. ಸುಪ್ರೀಂ ಕೋರ್ಟ್ ಕೂಡಾ ಇದನ್ನೇ ಸಮರ್ಥಿಸಿದೆ. ಹಾಗಾಗಿ ನಿರ್ದಿಷ್ಟವಾದ ಸಿನಿಮಾದ ವಿರುದ್ಧ ದೂರು ಬಂದರೂ ಅದರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ತನಗೆ ಯಾವುದೇ ನೇರ ಅಧಿಕಾರ ಇಲ್ಲ ಎಂಬುದು ಕೇಂದ್ರ ಸರ್ಕಾರದ ಅಳಲು.

5ಬಿ(1) ಹೇಳುವುದು ಹೀಗೆ: ಚಲನಚಿತ್ರ ಅಥವಾ ಅದರ ಯಾವುದೇ ಭಾಗವು ಸಂವಿಧಾನದ ಪರಿಚ್ಛೇದ 19 ಪ್ರಕಾರ ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಯ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ ದೇಶದ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳಿದ್ದಲ್ಲಿ, ವಿದೇಶದೊಡನೆ ಸ್ನೇಹ– ಸಂಬಂಧ ಕದಡುವಂತಿದ್ದರೆ, ಕಾನೂನು ಸುವ್ಯವಸ್ಥೆ, ಸಭ್ಯತೆ, ನೈತಿಕತೆಗೆ ಭಂಗ ತರುವಂತದ್ದಾಗಿದ್ದರೆ ನ್ಯಾಯಾಲಯವನ್ನು ನಿಂದಿಸುವಂತಿದ್ದರೆ ಅಥವಾ ಯಾವುದೇ ಅಪರಾಧ ಕೃತ್ಯವನ್ನು ಪ್ರಚೋದಿಸುವಂತಿದ್ದರೆ ಅಂಥ ಚಿತ್ರವನ್ನು ಪ್ರದರ್ಶಿಸಲು ಪ್ರಮಾಣೀಕರಿಸಲಾಗುವುದಿಲ್ಲ. ಸದ್ಯದ ಸೆನ್ಸಾರ್ ಮಂಡಳಿಯು ಪಾಲಿಸುವುದು ಇದೇ ನಿಯಮವನ್ನು.

ಈಗ ಉದ್ದೇಶಿತ ತಿದ್ದುಪಡಿ ಮಸೂದೆಯ ಕರಡಿನಲ್ಲಿ ಮೇಲಿರುವ ನಿಯಮಕ್ಕೆ ಒಂದಿಷ್ಟು ಹೊಸ ಅಂಶಗಳನ್ನು ಸೇರಿಸಲಾಗಿದೆ.

ಇದೇ ಕಾಯ್ದೆಯ ಸೆಕ್ಷನ್ 6ರ ಉಪ ಸೆಕ್ಷನ್ –1 ರಲ್ಲಿ ಹೊಸ ಸಾಲುಗಳನ್ನು ಸೇರಿಸಲಾಗಿದೆ. ಅದೇನೆಂದರೆ, 'ಪ್ರದರ್ಶನಕ್ಕಾಗಿ ಪ್ರಮಾಣಿತಗೊಂಡ ಚಿತ್ರದ ವಿರುದ್ಧ ಯಾವುದಾದರೂ ದೂರು ಬಂದರೆ (5ಬಿ(1) ನಿಯಮದ ಉಲ್ಲಂಘಿಸಿದ್ದು ಸಂಬಂಧಿಸಿ) ಕೇಂದ್ರ ಸರ್ಕಾರವು ಈ ಚಿತ್ರವನ್ನು ಮರುಪರಿಶೀಲಿಸುವಂತೆ ಕೋರಿ ಸೆನ್ಸಾರ್ ಮಂಡಳಿ ಅಧ್ಯಕ್ಷರಿಗೆ ನಿರ್ದೇಶನ ನೀಡಬಹುದು.

ಚಿತ್ರ ಬಿಡುಗಡೆ ಆದ ನಂತರ ಅದರ ವಸ್ತುವಿನ ಮೇಲೆ ಹಿತಾಸಕ್ತಿ ಗುಂಪುಗಳು ಪರ–ವಿರೋಧ ಅಭಿಪ್ರಾಯ ವ್ಯಕ್ತಪಡಿಸುವುದು, ಕೆಲವು ಭಾಗಗಳನ್ನು ಕತ್ತರಿಸಲು ಆಗ್ರಹಿಸುವುದು, ಕೆಲವೊಮ್ಮೆ ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾಗುವುದು ನಡೆದೇ ಇದೆ. ಇದನ್ನೆಲ್ಲಾ ಗಮನಿಸಿ 'ಸೂಪರ್ ಸೆನ್ಸಾರ್' ವ್ಯವಸ್ಥೆಯೊಂದನ್ನು ತರಲು ಮುಂದಾಗಿದೆ. ಈ ನಿಯಮ ಪ್ರಕಾರ ಚಿತ್ರವೊಂದರ ಮೇಲೆ ಯಾವುದೇ ದೂರು ಅಥವಾ ಆಕ್ಷೇಪವನ್ನು ಬಂದಲ್ಲಿ ಆ ಚಿತ್ರದ ಬಿಡುಗಡೆ ತಡೆಯುವ ಪ್ರದರ್ಶನವನ್ನು ಕೇಂದ್ರ ಸರ್ಕಾರವೇ ಪರಿಣಾಮಕಾರಿಯಾಗಿ ನಿಷೇಧಿಸುವ ವ್ಯವಸ್ಥೆ ಜಾರಿಗೆ ಬರಲಿದೆ.

ಈ ನಿಯಮ ಪ್ರಕಾರ ಕೇಂದ್ರ ಸರ್ಕಾರವು ತನಗೆ ಬೇಕಾದಂತೆ ಚಿತ್ರದ ವಸ್ತು/ ಸನ್ನಿವೇಶವನ್ನು ಕತ್ತರಿಸುವ ಅಧಿಕಾರವನ್ನು ಹೊಂದಿರಲಿದೆ. ಇದು ಮುಂದೆ ಈ ಕ್ಷೇತ್ರದ ವೃತ್ತಿಪರರಿಗಿಂತ ರಾಜಕೀಯ ವ್ಯವಸ್ಥೆಯ ಪ್ರವೇಶಕ್ಕೆ ಬಾಗಿಲು ತೆರೆದಂತಾಗಲಿದೆ ಎಂಬುದು ಸಿನಿರಂಗದವರ ಅಳಲು. ನಿರ್ದೇಶಕನ ಪರಿಕಲ್ಪನೆಯನ್ನು ಅಭಿವ್ಯಕ್ತಿಯನ್ನು ಪೂರ್ಣ ನಿರೂಪಿಸಲು ಹೊಸ ಕಾಯ್ದೆ ಅಡ್ಡಿ ಆಗಬಹುದು ಎಂಬುದು ಈ ಕ್ಷೇತ್ರದವರ ಅಳಲು.

ಹಾಗೆಂದು ಒಳ್ಳೆಯ ಅಂಶಗಳು ಇಲ್ಲವೆಂದೇನಲ್ಲ. ಪೈರಸಿ ವಿರುದ್ಧ ತೀವ್ರ ಸಮರ ಸಾರಿದೆ. ಚಿತ್ರದ ನಕಲು ಮಾಡಿದ ಆರೋಪ ಸಾಬೀತಾದರೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ಒಂದು ಸಿನಿಮಾದ ಪ್ರಮಾಣೀಕರಣದ ಅವಧಿ 10 ವರ್ಷಗಳವರೆಗೆ ಎಂದು ನಿಗದಿ ಮಾಡಲಾಗಿದೆ. ಮರುಬಿಡುಗಡೆ ಮಾಡಬೇಕಾದರೆ ಮತ್ತೆ ಸೆನ್ಸಾರ್ ಮಾಡಬೇಕು. ಚಿತ್ರವು ಎಲ್ಲ 'ಅಗ್ನಿ ಪರೀಕ್ಷೆ'ಗಳನ್ನು ದಾಟಿ ಬರುವುದರಿಂದ ಮುಂದೆ ಪ್ರದರ್ಶನದ ವೇಳೆ ಯಾವುದೇ ಅಡ್ಡಿ ವ್ಯಕ್ತವಾಗದು ಎಂಬ ಅಭಿಪ್ರಾಯವೂ ಕೇಳಿಬಂದಿದೆ.

ಪ್ರಮಾಣ ಪತ್ರದ ವರ್ಗೀಕರಣ: ಸದ್ಯ ಯು, ಎ ಅಥವಾ ಯು/ಎ (ಅನಿರ್ಬಂಧಿತ– ವಯಸ್ಕರು ಮಾತ್ರ ನೋಡಬಹುದಾದ) ಎಂಬ ವರ್ಗೀಕೃತ ಪ್ರಮಾಣ ಪತ್ರ ಸಿಗುತ್ತಿತ್ತು. ಮುಂದೆ ವೀಕ್ಷಕರ ವಯೋಮಾನಕ್ಕನುಗುಣವಾಗಿ, ಯು / ಎ, 7 + , ಯು / ಎ 13 + ಮತ್ತು ಯು / ಎ 16 + ವರ್ಗೀಕರಿಸಿ ಪ್ರಮಾಣಪತ್ರ ನೀಡಲಾಗುವುದು ಎಂದು ಕಾಯ್ದೆ ಹೇಳಿದೆ.

ಈ ಬಗ್ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಚರ್ಚಿಸಿ ಪ್ರತಿಕ್ರಿಯೆ ಸಲ್ಲಿಸುತ್ತೇವೆ ಎಂದು ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್ ಹೇಳುತ್ತಾರೆ.

ಈಗಲೇ 3ನೇ ಅಲೆಯ ಆತಂಕ

ಅಭಿಲಾಷ್ ಪಿ.ಎಸ್.

ಕೋವಿಡ್–19 ಎರಡನೇ ಅಲೆಯನ್ನು ನಿಯಂತ್ರಿಸಲು ಹೇರಲಾಗಿದ್ದ ಲಾಕ್‌ಡೌನ್ ಕ್ರಮೇಣವಾಗಿ ಹಂತಹಂತವಾಗಿ ಸಡಿಲವಾಗುತ್ತಿದೆ. ಹಲವು ನಿರ್ಬಂಧಗಳನ್ನು ಸಡಿಲಗೊಳಿಸಲಾಗುತ್ತಿದ್ದು, ಮೊದಲ ಹಂತದಲ್ಲಿ ಸಿನಿಮಾ, ಕಿರುತೆರೆ ಹೊರಾಂಗಣ ಚಿತ್ರೀಕರಣಕ್ಕೆ ಅವಕಾಶ ನೀಡಲಾಗಿದೆ. ಆದರೆ, ಚಿತ್ರಮಂದಿರಗಳನ್ನು ತೆರೆಯುವುದರ ಕುರಿತು ಹಾಗೂ ಒಳಾಂಗಣದಲ್ಲಿ ಚಿತ್ರೀಕರಣದ ಬಗ್ಗೆ ಸರ್ಕಾರ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಹೀಗಾಗಿ ಲಾಕ್‌ಡೌನ್ ಸಡಿಲಿಕೆಯಾಗುತ್ತಿದ್ದರೂ, ಒಂದಿಷ್ಟು ಅನಿಶ್ಚಿತತೆ ಚಿತ್ರೋದ್ಯಮದಲ್ಲಿ ಇನ್ನೂ ಮುಂದುವರಿದಿದೆ.

ಡಿ.ಆರ್. ಜೈರಾಜ್

ಡಿ.ಕೆ.ರಾಮಕೃಷ್ಣ

ಸಾಲು ಸಾಲು ಬಿಗ್‌ಬಜೆಟ್ ಚಿತ್ರಗಳು: ಕಳೆದ ಬಾರಿ ಪುನೀತ್ ರಾಜ್‌ಕುಮಾರ್ ನಟನೆಯ 'ಯುವರತ್ನ' ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಕೋವಿಡ್ ಎರಡನೇ ಅಲೆ ತೀವ್ರತೆ ಹೆಚ್ಚಾಗಿ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆಯನ್ನು ಶೇ 50ರಷ್ಟು ನಿರ್ಬಂಧಿಸಲಾಯಿತು. ಹೀಗಾಗಿ ಈ ಚಿತ್ರ ಬಿಡುಗಡೆಯಾದ ಒಂದೇ ವಾರದಲ್ಲಿ ಒಟಿಟಿಯಲ್ಲಿ ತೆರೆಕಂಡಿತು. ಪ್ರಸ್ತುತ ಇದೇ ಆತಂಕ ನಿರ್ಮಾಪಕರಲ್ಲಿ ಇದೆ. ದುನಿಯಾ ವಿಜಯ್ ನಟನೆಯ 'ಸಲಗ', ಸುದೀಪ್ ನಟನೆಯ 'ಕೋಟಿಗೊಬ್ಬ–3', ಶಿವರಾಜ್‌ಕುಮಾರ್ ಅಭಿನಯದ 'ಭಜರಂಗಿ–2' ಹೀಗೆ ಬಿಗ್‌ಬಜೆಟ್ ಚಿತ್ರಗಳು ಏಪ್ರಿಲ್–ಜೂನ್ ನಡುವೆ ತೆರೆಕಾಣಬೇಕಿತ್ತು. ಲಾಕ್‌ಡೌನ್ ಕಾರಣದಿಂದ ಇವೆಲ್ಲವೂ ಬಿಡುಗಡೆಗೆ ಕಾಯುತ್ತಿವೆ.

ಯಶ್ ಅಭಿನಯದ 'ಕೆಜಿಎಫ್–2' ಜುಲೈ 16ಕ್ಕೆ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಘೋಷಿಸಿತ್ತು. ಆದರೆ ಇಲ್ಲಿಯವರೆಗೂ ಚಿತ್ರಮಂದಿರ ತೆರೆಯುವ ಯಾವುದೇ ಸೂಚನೆ ಇಲ್ಲ. ಚಿತ್ರಮಂದಿರ ತೆರೆಯಲು ಅವಕಾಶ ನೀಡಿದರೂ, ಇನ್ನೂ ನಾಲ್ಕೈದು ವಾರ ಶೇ 100 ಪ್ರೇಕ್ಷಕರ ಪ್ರವೇಶಕ್ಕೆ ಅನುಮತಿ ನೀಡುವುದು ಅನುಮಾನವೇ ಸರಿ. ಹೀಗಾಗಿ ಈ ಚಿತ್ರದ ಬಿಡುಗಡೆಯೂ ಮುಂದಕ್ಕೆ ಹೋಗುವ ಸಾಧ್ಯತೆ ಇದೆ.

'ಮೂರನೇ ಅಲೆಯ ಆತಂಕ': 'ಚಿತ್ರಮಂದಿರಕ್ಕೆ ಪ್ರೇಕ್ಷಕರು ಬರುತ್ತಾರೆಯೇ ಇಲ್ಲವೇ ಎನ್ನುವ ಭಯ ಇನ್ನೂ ನಮ್ಮಲ್ಲಿದೆ. ಆದರೂ ಚಿತ್ರಬಿಡುಗಡೆ ನಾವು ಪ್ರಯತ್ನಪಡಲೇಬೇಕು. ಸೆಪ್ಟೆಂಬರ್‌ನಲ್ಲಿ ಮೂರನೇ ಅಲೆ ಬರುತ್ತದೆ ಎನ್ನುತ್ತಿದ್ದಾರೆ. ಇದು ಚಿತ್ರಮಂದಿರದ ಮಾಲೀಕರಿಗೆ ಹಾಗೂ ನಿರ್ಮಾಪಕರಿಗೆ ಆತಂಕ ತಂದಿದೆ. ಎಲ್ಲರೂ ಲಸಿಕೆ ಪಡೆದುಕೊಳ್ಳುತ್ತಿರುವ ಕಾರಣ ಮೂರನೇ ಅಲೆ ಬರಲಿಕ್ಕಿಲ್ಲ ಎನ್ನುವ ನಂಬಿಕೆಯೂ ಇದೆ. ಜುಲೈ 2 ಅಥವಾ 3ನೇ ವಾರದಲ್ಲಿ ಚಿತ್ರಮಂದಿರಗಳನ್ನು ತೆರೆಯಲು ಅವಕಾಶ ನೀಡಬಹುದು. ಶೇ 50ರಷ್ಟು ಪ್ರೇಕ್ಷಕರಿಗೆ ಅವಕಾಶ ನೀಡಿದರೆ ಬಿಗ್‌ಬಜೆಟ್ ಚಿತ್ರಗಳಿಗೆ ವರ್ಕ್‌ಔಟ್ ಆಗುವುದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಚಿತ್ರರಂಗ 20 ವರ್ಷ ಹಿಂದಕ್ಕೆ ಹೋದಂತಾಗಿದೆ' ಎನ್ನುತ್ತಾರೆ ನಿರ್ಮಾಪಕರ ಸಂಘದ ಅಧ್ಯಕ್ಷ ಡಿ.ಕೆ. ರಾಮಕೃಷ್ಣ.

'ಮತ್ತೆ ಸಿನಿಮಾ ವಾತಾವರಣ ನಿರ್ಮಾಣ ಮಾಡಬೇಕಾಗಿದೆ': ಚಿತ್ರರಂಗದ ಚಟುವಟಿಕೆ ಮತ್ತೆ ಗರಿಗೆದರುತ್ತಿರುವ ಸಂದರ್ಭದಲ್ಲೇ ಒಳಾಂಗಣದಲ್ಲಿ ಚಿತ್ರೀಕರಣಕ್ಕೆ ಅನುಮತಿ ಕೋರಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್.ಜೈರಾಜ್ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

'ಜುಲೈ 5ರ ಬಳಿಕ ಚಿತ್ರಮಂದಿರಗಳನ್ನು ತೆರೆಯುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಬಹುದು ಎನಿಸುತ್ತಿದೆ. ಮೊದಲಿಗೆ ಒಂದೆರಡು ತಿಂಗಳು ಶೇ 50 ಪ್ರೇಕ್ಷಕರಿಗಷ್ಟೇ ಅವಕಾಶ ನೀಡುವ ಸಾಧ್ಯತೆ ಇದೆ. ಕೋವಿಡ್–19 ಮೂರನೇ ಅಲೆಯ ಮುನ್ಸೂಚನೆಯೂ ಇದ್ದು, ಇದೀಗ ಚಿತ್ರಮಂದಿರ ತೆರೆದು ಒಂದೆರಡು ಸಿನಿಮಾ ಬಿಡುಗಡೆ ನಂತರ ಮತ್ತೆ ಮುಚ್ಚುವಂತ ಸ್ಥಿತಿ ಬಂದರೆ ಏನು ಮಾಡುವುದು. ಕಳೆದ ಬಾರಿ ಪ್ರೇಕ್ಷಕರ ಸಂಖ್ಯೆಯನ್ನು ಶೇ 50ರಷ್ಟು ನಿರ್ಬಂಧಿಸುವ ಏಕಾಏಕಿ ನಿರ್ಧಾರ ನಿರ್ಮಾಪಕರಿಗೆ ಸಮಸ್ಯೆಯಾಗಿತ್ತು. ನಾವು ಮನವಿ ಸಲ್ಲಿಸಿದ ಮೇಲೆ ಕೆಲ ದಿನಗಳ ಅವಕಾಶ ನೀಡಲಾಯಿತು. ಈ ರೀತಿಯ ಘಟನೆ ಮರುಕಳಿಸಬಾರದು' ಎನ್ನುತ್ತಾರೆ ಜೈರಾಜ್.

ಸಂಜನಾ ಆನಂದ್ ಅಭಿನಯದ ಸಲಗ ಚಿತ್ರವು ಬಿಡುಗಡೆಯ ನಿರೀಕ್ಷೆಯಲ್ಲಿದೆ

ಕಿರುತೆರೆ

ನಟನೆಯ 'ಸಾಗರ'ದೊಳಗೆ...

ರಂಗಭೂಮಿಯಲ್ಲಿ ನಟನೆಯ ಪಟ್ಟುಗಳನ್ನು ಕಲಿತು, ಬಣ್ಣದ ಲೋಕಕ್ಕೆ ಜಿಗಿದವರು ನಟ ಸಾಗರ್. ನಟನೆಯ ಬಲವನ್ನೇ ನಂಬಿ ಬಣ್ಣದ ಲೋಕಕ್ಕೆ ಅಡಿಯಿರಿಸಿರುವ ಅವರಿಗೆ ಭಿನ್ನ ಪಾತ್ರಗಳಿಗೆ ಜೀವ ತುಂಬುವ ಬಯಕೆ ಇದೆ.

ವಿದ್ಯಾಶ್ರೀ ಎಸ್.

ನಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾದ ಪಾತ್ರ ನಿರ್ವಹಣೆ ದೊಡ್ಡ ಸವಾಲು. ಅಲ್ಲಿ ಏಕತಾನತೆ ಇರುವುದಿಲ್ಲ. ದಿನವೂ ಹೊಸತನ್ನು ಕಲಿಯಬಹುದು... ಹೀಗೆ ತಮ್ಮ ಪಾತ್ರದ ಕುರಿತು ಹೇಳಿಕೊಳ್ಳುವ ನಟ ಸಾಗರ್ ಬಿಳಿಗೌಡ ಅವರ ಮಾತಿನಲ್ಲಿ ಖುಷಿ, ವಿಶ್ವಾಸ ಎರಡೂ ಎದ್ದುಕಾಣುತ್ತಿತ್ತು.

ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಸತ್ಯ' ಧಾರಾವಾಹಿಯಲ್ಲಿ ಮುಖ್ಯ ಪಾತ್ರಕ್ಕೆ ಸಾಗರ್ ಜೀವ ತುಂಬುತ್ತಿದ್ದಾರೆ. ಅಮೆರಿಕದಲ್ಲಿ ಪದವಿ ಮುಗಿಸಿ, ಲಂಡನ್‌ನಲ್ಲಿ ಎಂಬಿಎ ಮಾಡಿರುವ ಇವರಿಗೆ, ಕೈತುಂಬ ಸಂಬಳ ನೀಡುವ ಎಂಎನ್‌ಸಿ ಕಂಪನಿಯ ಕೆಲಸಕ್ಕಿಂತ ಹೆಚ್ಚು ಖುಷಿ ನೀಡುವುದು ಅಭಿನಯ.

ಸಿನಿಮಾದ ಗಂಧಗಾಳಿಯೇ ಇಲ್ಲದ ಕುಟುಂಬದಲ್ಲಿ ಇವರು ಬೆಳೆದವರು. ಅಜ್ಜ ಅಸಿಸ್ಟೆಂಟ್ ಕಮಿಷನರ್ ಆಗಿದ್ದವರು. ಅಪ್ಪ ಸರ್ಕಾರಿ ಉದ್ಯೋಗದಲ್ಲಿ ಇದ್ದರು. ಹಾಗಾಗಿ ಮನೆಯಲ್ಲಿ ಮಗ ಚೆನ್ನಾಗಿ ಓದಿ, ಒಳ್ಳೆಯ ಕೆಲಸ ಗಿಟ್ಟಿಸಿಕೊಳ್ಳಬೇಕೆಂಬ ಬಯಕೆ ಸಹಜವಾಗಿತ್ತು. ಎಂಬಿಎ ಮುಗಿಸಿ, ಸ್ವಲ್ಪದಿನ ಕೆಲಸ ಮಾಡಿದ ಇವರಿಗೆ ಈ ಕ್ಷೇತ್ರ ನನ್ನದಲ್ಲ ಎಂಬುದು ಅರಿವಾದ ತಕ್ಷಣವೇ ಯಾರ ಮಾತು ಕೇಳದೆ ಬಣ್ಣದ ಲೋಕಕ್ಕೆ ಜಿಗಿದರು. ಆದರೆ, ಈ ದಾರಿ ಅಷ್ಟೊಂದು ಸುಲಭದಲ್ಲಿ ಇವರಿಗೆ ಒಲಿದಿಲ್ಲ. ಸುಮಾರು 130 ಆಡಿಷನ್‌ಗಳನ್ನು ನೀಡಿದ ಬಳಿಕವೇ ಮೊದಲ ಅವಕಾಶವನ್ನು ಗಿಟ್ಟಿಸಿಕೊಂಡರು.

'ಶಾಲೆ, ಕಾಲೇಜುಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೆ. ಆಗಲೇ ನಟನೆಯ ಬಗ್ಗೆ ಆಸಕ್ತಿ ಮೂಡಿತ್ತು. ಆದರೆ, ಅದನ್ನು ನನಸಾಗಿಸಿಕೊಳ್ಳುವ ದಾರಿಯ ಸ್ಪಷ್ಟತೆ ಇರಲಿಲ್ಲ. ವಿದೇಶದಲ್ಲಿ ಶಿಕ್ಷಣ ಮುಗಿಸಿ, ಬೆಂಗಳೂರಿಗೆ ಬಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಈ ವೇಳೆ ನನ್ನ ನಟನೆಯ ಆಸಕ್ತಿಯನ್ನು ಗುರುತಿಸಿದ್ದ ಸ್ನೇಹಿತ ಅಭಿಲಾಷ್, ನಾಗಾಭರಣ ಸರ್ ಅವರನ್ನು ಪರಿಚಯ ಮಾಡಿಕೊಟ್ಟ. ಬೆನಕ ತಂಡವನ್ನು ಸೇರಿದೆ. ವಾರಾಂತ್ಯದಲ್ಲಿ ಅವರು ನಡೆಸುತ್ತಿದ್ದ ತರಗತಿಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ಇದೇ ನನ್ನ ಖುಷಿಯ ಕ್ಷೇತ್ರ ಎಂಬುದು ಆಗಲೇ ನನ್ನ ಅರಿವಿಗೆ ಬಂತು' ಎಂದು ಅಭಿನಯದಲ್ಲಿ ಹೆಜ್ಜೆಯೂರಿದ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾರೆ.

ರಂಗಭೂಮಿಯೇ ನನ್ನ ನಟನೆಗೆ ಬುನಾದಿ ಎನ್ನುವ ಅವರು, ಮಾನವೀಯತೆಯೇ ನಾನು ಅಲ್ಲಿ ಕಲಿತ ದೊಡ್ಡ ಪಾಠ. ಯಾರು ಯಾರಿಗಿಂತಲೂ ದೊಡ್ಡವರಲ್ಲ. ಎಲ್ಲರೂ ಕಲಿಯುತ್ತಲೇ ಇರಬೇಕು ಎಂಬುದನ್ನು 'ಬೆನಕ' ಕಲಿಸಿತು. ಜೊತೆಗೆ ಶಿಸ್ತು ಮತ್ತು ಬದ್ಧತೆಯನ್ನು ಅಲ್ಲಿ ಕಲಿತೆ ಎಂದು ಅವರು ಸ್ಮರಿಸುತ್ತಾರೆ.

ನೀನಾಸಂ, ಎನ್‌ಎಸ್‌ಡಿಯಲ್ಲಿ ಅಭಿನಯದ ಪಟ್ಟುಗಳನ್ನು ಕಲಿಯುವ ಆಸಕ್ತಿಯೂ ಇವರಿಗಿತ್ತು. ಆದರೆ, ಅಲ್ಲಿ ಅವಕಾಶ ಸಿಗದ ಕಾರಣ ಕೃಷ್ಣಮೂರ್ತಿ ಕವತ್ತಾರ್ ಅವರ ಸಲಹೆಯಂತೆ ವಿದೇಶಕ್ಕೆ ತೆರಳಿ ಅಲ್ಲಿಯೇ ನಟನೆ ಮತ್ತು ಫಿಲ್ಮ್ ಮೇಕಿಂಗ್ ಕೋರ್ಸ್ ಮುಗಿಸಿ ಮತ್ತೆ ತವರಿಗೆ ಮರಳಿದರು.

'ಅವಕಾಶಗಳಿಗಾಗಿ ಸಾಕಷ್ಟು ಅಲೆದಿದ್ದೇನೆ. ಫೇಸ್‌ಬುಕ್ ಗ್ರೂಪ್‌ಗಳ ಮೂಲಕ ಎಲ್ಲೆಲ್ಲಿ ಆಡಿಷನ್ ನಡೆಯುತ್ತಿದೆ ಎಂಬುದನ್ನು ತಿಳಿದುಕೊಂಡು, ಪಟ್ಟಿ ಮಾಡುತ್ತಿದ್ದೆ. ಒಂದರ ನಂತರ ಒಂದರಂತೆ ಸುಮಾರು 130 ಆಡಿಷನ್ ಕೊಟ್ಟಿರಬಹುದು. ಒಂದೊಂದು ಪಾತ್ರಕ್ಕೆ ಐದಾರು ಬಾರಿ ಆಡಿಷನ್ ಕೊಟ್ಟಿದ್ದೇನೆ. ಪ್ರಯತ್ನದ ಫಲವೆಂಬಂತೆ 'ಕಿನ್ನರಿ' ಧಾರಾವಾಹಿಗೆ ಆಯ್ಕೆಯಾದೆ' ಎಂದು ಅವಕಾಶ ಒದಗಿದ ಸಂದರ್ಭವನ್ನು ವಿವರಿಸುತ್ತಾರೆ.

ಸತ್ಯ ಧಾರಾವಾಹಿಯಲ್ಲಿನ ಪಾತ್ರದ ಕುರಿತು ಉತ್ಸಾಹದಿಂದಲೇ ಮಾತಿಗಿಳಿದ ಅವರು, 'ತುಂಬಾ ವಿಭಿನ್ನವಾದ ಪಾತ್ರ ದೊರಕಿರುವ ಅದೃಷ್ಟ ನನ್ನದು. ಆ ಪಾತ್ರಕ್ಕೆ ಕಡ್ಡಾಯವಾದ ಬೌಂಡರಿ ಇಲ್ಲ. ಅಳು, ಕೋಪ, ನಗು, ಮುಗ್ಧತೆ... ಎಲ್ಲದರ ಹೂರಣವೂ ಇದೆ. ಈ ಪಾತ್ರ ನಿಭಾಯಿಸುವಾಗ ಎಂದಿಗೂ ನನಗೆ ಮಾಡಿದ್ದೇ ಮಾಡುತ್ತಿದ್ದೇನೆ ಎಂದು ಅನಿಸಿದ್ದೇ ಇಲ್ಲ. ನನ್ನ ವ್ಯಕ್ತಿತ್ವಕ್ಕೆ ಸಂಪೂರ್ಣವಾದ ವಿಭಿನ್ನವಾದ ಪಾತ್ರವದು. ಹಾಗಾಗಿ ನಿತ್ಯವೂ ಹೊಸತನ್ನು ಕಲಿಯುವ ಅವಕಾಶ ದೊರಕಿದೆ' ಎನ್ನುತ್ತಾರೆ.

ನಟನೆಯ ಬಲವನ್ನೇ ನಂಬಿ ಬಣ್ಣದ ಲೋಕಕ್ಕೆ ಅಡಿಯಿರಿಸಿರುವ ಸಾಗರ್ ಅವರಿಗೆ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಇರಾದೆ ಇದೆ. 'ಪಾತ್ರದ ವಿಚಾರದಲ್ಲಿ ಯಾವುದೇ ಗಡಿಯನ್ನು ನಾನು ಹಾಕಿಕೊಂಡಿಲ್ಲ. ಸಿನಿಮಾ, ಧಾರಾವಾಹಿ, ನಾಟಕ, ವೆಬ್‌ಸೀರೀಸ್ ಯಾವುದೇ ಇರಬಹುದು. ಮನಸ್ಸಿಗೆ ಹಿಡಿಸುವಂತಹ ಸವಾಲಿನ ಪಾತ್ರವಾಗಿರಬೇಕು' ಎಂಬುದು ಇವರ ಅಂಬೋಣ.

ನಟನೆಯ ಹೊರತು ವರ್ಕೌಟ್ ಮಾಡುವುದೆಂದರೂ ಸಾಗರ್‌ಗೆ ಇಷ್ಟ. ವ್ಯಾಯಾಮ ಮನಸ್ಸು ಮತ್ತು ದೇಹ ಚಟುವಟಿಕೆಯಿಂದಿರಲು ನೆರವಾಗುತ್ತದೆ ಎಂಬ ಸಿದ್ಧಾಂತವನ್ನು ನಂಬಿದವರು ಇವರು. ಪ್ರತಿದಿನ ಎರಡು ಗಂಟೆ ದೇಹದಂಡಿಸುತ್ತಿದ್ದರು. ಆದರೆ, ಭುಜಕ್ಕೆ ಏಟು ಬಿದ್ದಿರುವುದರಿಂದ ದೇಹದಂಡನೆಗೆ ಸದ್ಯ ಬ್ರೇಕ್ ನೀಡಿದ್ದಾರೆ.

ಸಾಗರ್ ಬಿಳಿಗೌಡ

ಮಾನಾಡು– ಲಿರಿಕಲ್ ಹಾಡು ಬಿಡುಗಡೆ

'ಮಾನಾಡು' ಹಾಡಿನ ದೃಶ್ಯದಲ್ಲಿ ಕಲ್ಯಾಣಿ ಪ್ರಿಯದರ್ಶಿನಿ– ಸಿಲಂಬರಸನ್

ತಮಿಳು ನಟ ಸಿಲಂಬರಸನ್ ಟಿ.ಆರ್. ನಟನೆಯ 'ಮಾನಾಡು' ಚಿತ್ರದ ಲಿರಿಕಲ್ ಹಾಡಿನ ವಿಡಿಯೊ ಇತ್ತೀಚೆಗೆ ಬಿಡುಗಡೆಗೊಂಡಿದೆ. ಕನ್ನಡ, ತಮಿಳು ಸಹಿತ ಐದು ಭಾಷೆಗಳಲ್ಲಿ ಈ ಚಿತ್ರ ಸಿದ್ಧಗೊಳ್ಳುತ್ತಿದೆ.

ಮದುವೆ ಸಂಭ್ರಮದಲ್ಲಿ ನವ ಜೋಡಿಗಳ ಎದುರು 'ಮಹರೆಜೈಲಾ ಅಲ್ಲಾ ಅಲ್ಲಾ ಎಲ್ಲಾ ಎಲ್ಲಾ' ಎಂಬ ಹಾಡಿನಲ್ಲಿ ನಾಯಕ ಮತ್ತು ನಾಯಕಿ ಸಹನೃತ್ಯಗಾರರೊಂದಿಗೆ ಹೆಜ್ಜೆ ಹಾಕುವ ಗೀತೆಯ ವಿಡಿಯೊ ಇದಾಗಿದೆ. ಮದನ್‌ಕರ್ಕಿ ಸಾಹಿತ್ಯಕ್ಕೆ ಸಂಗೀತ ಸಂಯೋಜಕ ಯುವನ್ ಶಂಕರ್‌ರಾಜ ಹಾಡಿಗೆ ಧ್ವನಿಯಾಗಿದ್ದಾರೆ. ಸಹಗಾಯಕರಾಗಿ ರಿಜ್ವಾನ್, ರಾಜಭವತರಣಿ ಇದ್ದಾರೆ.

ರಾಜಕೀಯ ಕಥಾ ವಸ್ತು ಹೊಂದಿರುವ ಈ ಚಿತ್ರದ ಕಥೆ ರಚನೆ-ನಿರ್ದೇಶನ ವೆಂಕಟ್‌ಪ್ರಭು, ಛಾಯಾಗ್ರಹಣ ರಿಚರ್ಡ್ ಎಂ. ನಾಥನ್, ಸಂಕಲನ ಪ್ರವೀಣ್ ಕೆ.ಎಲ್., ಸಾಹಸ ಸ್ಟಂಟ್‌ಶಿವ, ನೃತ್ಯ ರಾಜುಸುಂದರಂ ಅವರದಾಗಿದೆ. ಸುರೇಶ್‌ಕಮತ್‌ಚಿ ಅವರು 'ವಿ ಹೌಸ್ ಪ್ರೊಡಕ್ಷನ್' ಮೂಲಕ ನಿರ್ಮಾಣ ಮಾಡುತ್ತಿದ್ದಾರೆ.

ಚಿತ್ರಕ್ಕೆ ಕಲ್ಯಾಣಿ ಪ್ರಿಯದರ್ಶನ್ ನಾಯಕಿ. ಮತ್ತೊಂದು ಮುಖ್ಯ ಪಾತ್ರದಲ್ಲಿ ಎಸ್.ಜೆ.ಸೂರ್ಯ ಉಳಿದಂತೆ ವೈ.ಜಿ. ಮಹೇಂದ್ರನ್, ವಾಗಿ ಚಂದ್ರಶೇಖರ್, ಅಂಜನಕೀರ್ತಿ, ಎಸ್.ಎ.ಚಂದ್ರಶೇಖರ್, ಉದಯ, ಮನೋಜ್. ಕೆ.ಭಾರತಿ, ಪ್ರೇಮ್‌ಜಿ ಅಮರೆನ್, ಡ್ಯಾನಿಯೆಲ್, ಕರುಣಾಕರನ್ ನಟಿಸುತ್ತಿದ್ದಾರೆ.

'ಅನಿರೀಕ್ಷಿತ' ಅನ್‌ಲಾಕ್ ಹಾದಿಯಲ್ಲಿ

ಅನಿರೀಕ್ಷಿತ ಚಿತ್ರದ ಪೋಸ್ಟರ್

ಎರಡು ಪಾತ್ರಗಳು ಒಂದೇ ಸ್ಥಳದಲ್ಲಿ ನಾಲ್ಕು ಸನ್ನಿವೇಶಗಳ (ಲೋಕೇಷನ್) ಚಿತ್ರೀಕರಣ. 13 ಜನರ ತಂಡದ ಪರಿಶ್ರಮ. ಲಾಕ್‌ಡೌನ್ ಸಮಯದಲ್ಲೇ ನಿರ್ಮಾಣ. ಇವೆಲ್ಲದರ ಒಟ್ಟು ಫಲವೇ 'ಅನಿರೀಕ್ಷಿತ'. ಈ 'ಅನಿರೀಕ್ಷಿತ' ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದವರು ಮಿಮಿಕ್ರಿ ದಯಾನಂದ್. ನೆಲ್ಲುಳ್ಳಿ ರಾಜಶೇಖರನ್ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಕೋವಿಡ್ ನಿರ್ಬಂಧಗಳು ಸರಿಹೋದ ಬಳಿಕ ಚಿತ್ರಮಂದಿರ ಹಾಗೂ ಒಟಿಟಿ ವೇದಿಕೆಗಳಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಸಿದ್ಧತೆ ಮಾಡಿದೆ.

ಜೀವನದ ಅನಿರೀಕ್ಷಿತ ತಿರುವುಗಳು ಬದುಕಿನ ಗತಿಯನ್ನೇ ಬದಲಿಸಿ, ಯಾರೂ ಕಲಿಸದ ಪಾಠವನ್ನು ಕಲಿಸಿಬಿಡುತ್ತವೆ. ಇಂತಹ ತಾತ್ವಿಕ ಎಳೆಯೊಂದು, ಕುತೂಹಲ ಹಿಡಿದಿಟ್ಟುಕೊಂಡು ಹೇಗೆ ಎಳೆಎಳೆಯಾಗಿ ರಹಸ್ಯ ಬಿಚ್ಚಿಕೊಳ್ಳುತ್ತ ಸಾಗುತ್ತದೆ ಎಂಬುದೇ 'ಅನಿರೀಕ್ಷಿತ'ದ ಒಂದು ಎಳೆ.

ಚಿತ್ರದ ಪೋಸ್ಟರ್‌ನ್ನು ಹಿರಿಯ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಬಿಡುಗಡೆ ಮಾಡಿದರು. ಶೀಘ್ರ ಟ್ರೇಲರ್ ಬಿಡುಗಡೆ ಆಗಲಿದೆ. ಎಸ್.ಕೆ.ಟಾಕೀಸ್ ಲಾಂಛನದಲ್ಲಿ ಶಾಂತಕುಮಾರ್ ನಿರ್ಮಿಸಿರುವ ಈ ಚಿತ್ರದ ಸಹ ನಿರ್ಮಾಪಕರು ಸಂತೋಷ್ ಕೊಡಂಕೇರಿ, ರಘು ಎಸ್ ಹಾಗೂ ಮಿಮಿಕ್ರಿ ದಯಾನಂದ್. ಜೀವನ್ ಗೌಡ ಛಾಯಾಗ್ರಹಣ ಹಾಗೂ ರಘು ಅವರ ಸಂಕಲನ ಈ ಚಿತ್ರಕ್ಕಿದೆ.

ಪ್ರಜಾವಾಣಿ ಸೆಲೆಬ್ರಿಟಿ ಲೈವ್’ ಫೇಸ್‌ಬುಕ್ ಸಂದರ್ಶನದಲ್ಲಿ ಚೇತನ್ ಹೇಳಿಕೆ

‘ಚುನಾವಣೆಗೆ ನಿಲ್ಲುವ ಆಲೋಚನೆ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಾಹ್ಮಣ್ಯದ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂಬ ದೂರನ್ನು ಆಧರಿಸಿ ಸಾಮಾಜಿಕ ಹೋರಾಟಗಾರ, ನಟ ಚೇತನ್ ಅಹಿಂಸಾ ವಿರುದ್ಧ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಚೇತನ್ ಅವರ ಪೌರತ್ವದ ಬಗ್ಗೆಯೂ ಹಲವರು ಪ್ರಶ್ನೆ ಎತ್ತಿದ್ದು, ವಿದೇಶಿಗರ ಕಾಯ್ದೆಯಡಿ ಅವರ ವಿರುದ್ಧ ಕ್ರಮಕ್ಕೂ ಒತ್ತಾಯಿಸಿದ್ದಾರೆ.

ಈ ಎಲ್ಲ ಘಟನೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ‘ಪ್ರಜಾವಾಣಿ ಸೆಲೆಬ್ರಿಟಿ ಲೈವ್’ ಫೇಸ್‌ಬುಕ್ ಸಂದರ್ಶನದಲ್ಲಿ ಚೇತನ್ ಉತ್ತರಿಸಿದ್ದು, ರಾಜಕೀಯ ಪ್ರವೇಶಿಸುವ ಅಥವಾ ಚುನಾವಣೆ ನಿಲ್ಲುವ ಯಾವುದೇ ಆಲೋಚನೆ ಇಲ್ಲ ಎಂದೂ ಸ್ಪಷ್ಟಪಡಿಸಿದ್ದಾರೆ.

‘ನಾನು ಹುಟ್ಟಿದ್ದು ಅಮೆರಿಕದಲ್ಲಿ. 22 ವರ್ಷ ಅಲ್ಲಿಯೇ ಇದ್ದೆ. ರಿಸರ್ಚ್ ವೀಸಾದಲ್ಲಿ ನಾನು ಬಂದೆ. ನಂತರ ಆರು ತಿಂಗಳಿಗೊಮ್ಮೆ ನೋಂದಣಿ ಮಾಡಿಕೊಳ್ಳುವುದನ್ನು ಮಾಡುತ್ತಿದ್ದೆ. ಕುವೆಂಪು ಅವರ ವಿಶ್ವಮಾನವ ಸಿದ್ಧಾಂತದ ಬಗ್ಗೆ ನಂಬಿಕೆ ಇಟ್ಟುಕೊಂಡವನು ನಾನು. 2019ರಲ್ಲಿ ನನಗೆ ಒಸಿಐ (ಓವರ್‌ಸೀಸ್ ಸಿಟಿಜನ್ ಆಫ್ ಇಂಡಿಯಾ) ದೊರಕಿತು. ಮತದಾನ ಮಾಡುವ ಹಾಗೂ ಚುನಾವಣೆಗೆ ನಿಲ್ಲುವ ಹಕ್ಕು ಬಿಟ್ಟು ಉಳಿದೆಲ್ಲ ನಾಗರಿಕ ಹಕ್ಕುಗಳು ನನಗೆ ಇವೆ’ ಎಂದರು.

‘ಪಾಸ್‌ಪೋರ್ಟ್ ಇದ್ದಮಾತ್ರಕ್ಕೆ ಅವರು ಆ ದೇಶದವರು ಎನ್ನುವುದು ಸರಿಯಲ್ಲ. ಯಾರು, ಇರುವ ದೇಶದ ಬಗ್ಗೆ, ಅಲ್ಲಿನ ಜನರ ಬಗ್ಗೆ ಕಾಳಜಿ ತೋರಿಸುತ್ತಾರೋ ಅವರು ಆ ದೇಶದವರಾಗುತ್ತಾರೆ. ತಂದೆ, ತಾಯಿ ಅಮೆರಿಕದಲ್ಲಿ ಇರುವ ಕಾರಣದಿಂದ, ಅವರಿಗೆ ಏನಾದರೂ ಸಮಸ್ಯೆಯಾದರೆ ನಾನು ತಕ್ಷಣದಲ್ಲೇ ಹೋಗಬಹುದು ಎನ್ನುವ ಕಾರಣಕ್ಕೆ ಪೌರತ್ವ ಬದಲಾವಣೆ ಮಾಡಿಕೊಳ್ಳಲು ಹೋಗಿಲ್ಲ. ನನಗೇನೂ ಚುನಾವಣೆ ನಿಲ್ಲುವ ಅವಶ್ಯಕತೆ ಇಲ್ಲ. ಚುನಾವಣೆ ನಿಲ್ಲಬೇಕು ಎನ್ನುವ ಯಾವುದೇ ಆಲೋಚನೆಯೂ ಇಲ್ಲ. ಇವಾಗ ಈ ಪ್ರಶ್ನೆ ಎತ್ತುತ್ತಾರೆ ಎಂದು ನಾನು ಅಂದುಕೊಂಡಿರಲಿಲ್ಲ’ ಎಂದರು ಚೇತನ್.

ಪ್ರಜಾವಾಣಿ facebook LIVE

‘ಇವರೆಲ್ಲ ಭಾರತೀಯರೆ?’: ‘ನಮ್ಮ ದೇಶದಲ್ಲಿ ಅಧಿಕಾರದಲ್ಲಿದ್ದುಕೊಂಡು ಮಾಡಬಾರದ್ದನ್ನು ಮಾಡುತ್ತಿದ್ದಾರೆ, ಭ್ರಷ್ಟಾಚಾರ, ಲೂಟಿ ಮಾಡುತ್ತಿದ್ದಾರೆ. ಹೀಗಿರುವಾಗ ಇವರು ಭಾರತೀಯರು ಆಗುತ್ತಾರೆಯೇ? ಕೋಮುವಾದ, ಭೇದಭಾವ ಮಾಡುತ್ತಿರುವವರು ಭಾರತೀಯರಾಗುತ್ತಾರೆಯೇ? ಈ ಪ್ರಶ್ನೆ ನಾವು ಕೇಳಬೇಕು. ಆದರೆ ನನ್ನ ಪೌರತ್ವದ ಬಗ್ಗೆ ಪ್ರಶ್ನೆ ಕೇಳುವುದು ಪ್ರಾರಂಭವಾಗಿದೆ’ ಎಂದು ಅವರು ನಕ್ಕರು.

‘ಎಲ್ಲ ಜಾತಿಯಲ್ಲೂ ಬ್ರಾಹ್ಮಣ್ಯ’: ‘ಬ್ರಾಹ್ಮಣ್ಯ ಎನ್ನುವುದು ಎಲ್ಲ ಜಾತಿಗಳಲ್ಲೂ, ಧರ್ಮಗಳಲ್ಲೂ ಇದೆ. ಬಸವಣ್ಣನವರು ಯಾವ ಸಮುದಾಯದಲ್ಲಿ ಹುಟ್ಟಿದ್ದಾರೆ ಎನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ಅದು ಚರ್ಚೆ ಆಗಲಿ. ಅವರು ಬ್ರಾಹ್ಮಣರಾಗಿ ಜನಿಸಿದರೂ ಬ್ರಾಹ್ಮಣ್ಯ ವಿರೋಧ ಮಾಡಿ ಚಳವಳಿ ಮಾಡಿದರು. ಆದರೆ ಬಸವಣ್ಣನವರು ಒಬ್ಬರೇ ಹೇಳಿರುವುದು ಸರಿ ಎನ್ನುವುದು, ಇತರೆ ವಚನಕಾರರು, ಶರಣರ ಮಾತಿಗೆ ಬೆಲೆ ಕೊಡದೇ ಇರುವುದೂ ಬ್ರಾಹ್ಮಣ್ಯದ ಹೇರಿಕೆ. ಇತಿಹಾಸವನ್ನು ಹಾಡಿ ಹೊಗಳುವುದಷ್ಟೇ ಅಲ್ಲ, ಅನುಭವ ಮಂಟಪವನ್ನು ಆಧುನಿಕವಾಗಿ ಕಟ್ಟಿ ಇವತ್ತಿನ ದಿನ ಅವರ ಯೋಚನೆಗಳನ್ನು ಆಧುನಿಕವಾಗಿ ಕಾರ್ಯರೂಪಕ್ಕೆ ತರುವುದೇ ಬಸವತತ್ವ, ಶರಣತತ್ವ’ ಎಂದು ಸಮರ್ಥಿಸಿಕೊಂಡರು.

‘ನನ್ನ ನೇರ ಮಾತುಗಳಿಂದ ಸಿನಿಮಾಗಳಲ್ಲಿ ಅವಕಾಶ ಕಡಿಮೆಯಾಗಬಹುದು. ಆದರೆ ಈ ರೀತಿ ಕಡಿಮೆಯಾದರೆ ನಾನು ಮಾತನಾಡುತ್ತಿರುವುದು ತಪ್ಪು ಎಂದಲ್ಲ. ಸಾಮಾಜಿಕ ವಿಷಯಗಳನ್ನು ಇಟ್ಟುಕೊಂಡು ಚಿತ್ರ ಮಾಡುವ ನಿರ್ದೇಶಕರಿಗೆ, ಬರಹಗಾರರಿಗೆ ರಕ್ಷಣೆ ಕೊಡಬೇಕು. ಮಲಯಾಳಂನಲ್ಲಿ ಬರಹಗಾರರಿಗೆ ಹೆಚ್ಚಿನ ಬೆಲೆ ಕೊಡುತ್ತಾರೆ. ಸ್ಟಾರ್ ಸಂಸ್ಕೃತಿಗೆ ತುಪ್ಪ ಸುರಿದಷ್ಟು ಸಿನಿಮಾ ರಂಗ ಬೆಳೆಯುವುದಿಲ್ಲ. ಸಿನಿಮಾ ರಂಗ ಬೆಳೆಯಲು ಕಲೆಗೆ, ಸಮಾಜಕ್ಕೆ ಬೆಲೆ ಕೊಡಬೇಕು’ ಎಂದು ಅಭಿಪ್ರಾಯಪಟ್ಟರು.

ಪೂರ್ಣ ಸಂದರ್ಶನ:
https://bit.ly/3gYfXpn
https://bit.ly/3qrlXd5

ಕನ್ನಡದ ಮೇಲಿದ್ದ ಪ್ರೀತಿ

‘ನನಗೆ ಕನ್ನಡದ ಮೇಲಿದ್ದ ಪ್ರೀತಿ ಹಾಗೂ ಜೀವನಕ್ಕೊಂದು ಅರ್ಥ ಸಿಗಬೇಕು ಎನ್ನುವ ಕಾರಣಕ್ಕೆ ನಾನು ಅಮೆರಿಕದಿಂದ ಕರ್ನಾಟಕಕ್ಕೆ ಬಂದೆ. ಕರ್ನಾಟಕದ ಜೊತೆ ಭಾವನಾತ್ಮಕ ಸಂಪರ್ಕ ನನಗೆ ಬಹಳಷ್ಟಿದೆ. ಅಮೆರಿಕದಲ್ಲಿದ್ದರೂ ಮನೆಯೊಳಗೆ ಕನ್ನಡದ ವಾತಾವರಣವಿತ್ತು. ರಂಗಭೂಮಿ, ಸಾಹಿತ್ಯದ ರುಚಿ ಹತ್ತಿಸಿದ್ದರು. ನಾನು ಎರಡೂ ಕಡೆ ಒಳಗೂ ಇದ್ದೆ ಹೊರಗೂ ಇದ್ದೆ. ಹೀಗೆ ನೀರಿನ ಮೇಲಿನ ಗುಳ್ಳೆಯಂತೆ ನಾನು ಬದುಕುತ್ತಿದ್ದೆ’ ಎಂದು ಚೇತನ್ ನೆನಪಿಸಿಕೊಂಡರು.

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
ಲೀಲಾವತಿ ಸುಖ-ದುಃಖ

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ...
https://bit.ly/3vWCl6u

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯುಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ತುರ್ತುಪರಿಸ್ಥಿತಿ: ಹಿಂದೆ- ಮುಂದೆ
ಸಂವಾದದಲ್ಲಿ ಭಾಗವಹಿಸುವವರು

ಡಿ.ಎಚ್.ಶಂಕರಮೂರ್ತಿ
ವಿಧಾನ ಪರಿಷತ್ ಮಾಜಿ ಸಭಾಪತಿ, ಬಿಜೆಪಿ ಮುಖಂಡ

ಬರಗೂರು ರಾಮಚಂದ್ರಪ್ಪ
ಸಂಸ್ಕೃತಿ ಚಿಂತಕ, ಲೇಖಕ

ಎಲ್. ಹನುಮಂತಯ್ಯ
ರಾಜ್ಯಸಭಾ ಸದಸ್ಯ, ಕಾಂಗ್ರೆಸ್
ಶನಿವಾರ, 26- 6-2021 ಸಮಯ- ಮಧ್ಯಾಹ್ನ 12 ರಿಂದ 1

30 ದಿನ ಕಾಂಗ್ರೆಸ್ ಅಭಿಯಾನ: ಡಿಕೆಶಿ

ಬೆಂಗಳೂರು: ‘ಕೋವಿಡ್‌ನಿಂದ ಸಾವು-ನೋವು ಉಂಡವರು, ಉದ್ಯೋಗ-ಆರೋಗ್ಯ ಕಳೆದುಕೊಂಡವರು, ಆರ್ಥಿಕವಾಗಿ ಸಂಕಷ್ಟಕ್ಕೀಡಾದ ರೈತರು, ಕಾರ್ಮಿಕರು, ವರ್ತಕರು, ಬಡವರು ಸೇರಿದಂತೆ ಎಲ್ಲ ವರ್ಗದ ಜನರಿಗೆ ಆತ್ಮಸ್ಥೈರ್ಯ ತುಂಬಲು ಕಾಂಗ್ರೆಸ್ ವತಿಯಿಂದ 30 ದಿನಗಳ ಅಭಿಯಾನ ಹಮ್ಮಿಕೊಳ್ಳಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಕೋವಿಡ್‌ನಿಂದ ಯಾರು ನೊಂದಿದ್ದಾರೆ, ಬೆಂದಿದ್ದಾರೆ, ಜೀವ, ಜೀವನ ಕಳೆದುಕೊಂಡಿದ್ದಾರೆ, ಅವರನ್ನು ತಲುಪಲು ಎಐಸಿಸಿ ಸೂಚನೆಯಂತೆ ಪಕ್ಷ ಈ ಅಭಿಯಾನ ಹಮ್ಮಿಕೊಂಡಿದೆ’ ಎಂದರು.

‘ಸೋಂಕಿತರು, ಸೋಂಕಿನಿಂದ ಮೃತಪಟ್ಟಿದ್ದರೆ ಹೆಸರು, ವಯಸ್ಸು, ಅಂಥವರ ಮನೆಯಲ್ಲಿ ದುಡಿಯುವ ವ್ಯಕ್ತಿಗಳಿದ್ದಾರೆಯೇ, ಯಾರಾದರೂ ಉದ್ಯೋಗ ಕಳೆದುಕೊಂಡಿದ್ದರೆ ಅವರ ಹೆಸರು, ವಯಸ್ಸು, ಆ ಕುಟುಂಬಕ್ಕೆ ಅಗತ್ಯವಿರುವ ನೆರವು (ದಿನಸಿ, ಉದ್ಯೋಗ, ಶಿಕ್ಷಣ, ಆರ್ಥಿಕ ನೆರವು) ಏನು ಎಂಬ ಮಾಹಿತಿ ಸಂಗ್ರಹಿಸಿ ಅದನ್ನು ಪಕ್ಷದ ಕಾರ್ಯಕರ್ತರು ಕೆಪಿಸಿಸಿಗೆ ಕಳುಹಿಸಿಕೊಡಬೇಕು. ನಂತರ ಅದನ್ನು ಎಐಸಿಸಿಗೆ ರವಾನಿಸಲಾಗುವುದು’ ಎಂದರು.

ಜುಲೈ 1ರಿಂದ 30 ದಿನ ನಡೆಯುವ ಈ ಕಾರ್ಯಕ್ರಮದಲ್ಲಿ ನಾಯಕರು, ಪದಾಧಿಕಾರಿಗಳು ಪ್ರತಿ ಬ್ಲಾಕ್‌ನಲ್ಲಿ ಕನಿಷ್ಠ 10 ಜನರ ತಂಡ ರಚಿಸಿ, ಜನರ ಧ್ವನಿಯಾಗಿ ಕೆಲಸ ಮಾಡಲಿದ್ದಾರೆ’ ಎಂದರು.

1.20 ಲಕ್ಷ ಮರಣ ಪ್ರಮಾಣ ಪತ್ರ: ‘ಕೋವಿಡ್‌ನಿಂದ ಸತ್ತವರ ಸಂಖ್ಯೆ 30 ಸಾವಿರ ಎಂದು ಸರ್ಕಾರ ಹೇಳುತ್ತಿದೆ. ಆದರೆ, ರಾಜ್ಯದಲ್ಲಿ 1.20 ಲಕ್ಷ ಮರಣ ಪ್ರಮಾಣಪತ್ರ ವಿತರಿಸಲಾಗಿದೆ. ಮರಣ ಪ್ರಮಾಣಪತ್ರದಲ್ಲಿ ಸಾವಿನ ಕಾರಣ ಇಲ್ಲದಿದ್ದರೆ ಪರಿಹಾರ ಸಿಗುವುದಿಲ್ಲ. ಹೀಗಾಗಿ, ಕೋವಿಡ್‌ನಿಂದ ಸತ್ತಿರುವ ಎಲ್ಲರಿಗೂ ಪ್ರಮಾಣಪತ್ರ ಕೊಡಿಸಿ, ಪರಿಹಾರ ಕೊಡಿಸುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ’ ಎಂದರು.

ವಟ ಸಾವಿತ್ರಿ ವ್ರತ

ವಟ ಸಾವಿತ್ರಿ ವ್ರತದ ಅಂಗವಾಗಿ ಹುಬ್ಬಳ್ಳಿಯಲ್ಲಿ ಗುರುವಾರ ಮಹಿಳೆಯರು ಆಲದ ಮರಕ್ಕೆ ಪೂಜೆ ಸಲ್ಲಿಸಿದರು

-ಪ್ರಜಾವಾಣಿ ಚಿತ್ರ/ ಗುರು ಹಬೀಬ

‘ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಹಶೀಲ್ದಾರ್, ಜಿಲ್ಲಾಧಿಕಾರಿ ಸೇರಿದಂತೆ ಎಲ್ಲಾ ಅರೆ ನ್ಯಾಯಿಕ ಅಧಿಕಾರಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸುವ ಸಂಬಂಧ ನಿರ್ಧಾರ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ಕಾರಣದಿಂದ ಕಳೆದ ಒಂದು ವರ್ಷದಿಂದ ವಿಚಾರಣೆಗಳು ಸ್ಥಗಿತಗೊಂಡಿವೆ. ಹೀಗಾಗಿ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ನಡೆಸಲು ಇದು ಸಕಾಲ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು. ತಹಶೀಲ್ದಾರ್, ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿ ಮತ್ತು ಪ್ರಾದೇಶಿಕ ಆಯುಕ್ತರ ನ್ಯಾಯಾಲಯಗಳಲ್ಲಿ ವಿಚಾರಣೆಗಳ ಬಾಕಿ ಉಳಿದುಕೊಂಡಿವೆ. ಹಂತ-ಹಂತವಾಗಿ ವಿಡಿಯೊ ಕಾನ್ಫರೆನ್ಸ್ ಆರಂಭಿಸುವುದು ಸೂಕ್ತ ಎಂದು ಹೇಳಿತು.

ಕೋವಿಡ್ ಮೂರನೇ ಅಲೆ ಪರಿಸ್ಥಿತಿ ಎದುರಿಸಲು ಅಧಿಕಾರಿಗಳು ಸಿದ್ಧರಾಗಿರಬೇಕಾಗುತ್ತದೆ. ವಿಡಿಯೊ ಕಾನ್ಫರೆನ್ಸ್‌ಗೆ ಬೇಕಾದ ಸಲಭ್ಯ ಒದಗಿಸುವ ಬಗ್ಗೆ ಮಾಹಿತಿ ಸಲ್ಲಿಸುವಂತೆ ತಿಳಿಸಿದ ಪೀಠ, ವಿಚಾರಣೆಯನ್ನು ಜುಲೈ13ಕ್ಕೆ ಮುಂದೂಡಿತು.

ಅಸ್ತಿತ್ವ ರಹಿತ ಕೆರೆ–ಕುಂಟೆಗಳಿಗೂ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಸ್ತಿತ್ವ ಕಳೆದುಕೊಂಡಿರುವ ಕೆರೆ, ಕುಂಟೆ, ತೊರೆ ಮತ್ತು ರಾಜಕಾಲುವೆಗಳನ್ನು ರಕ್ಷಿಸಲು ಸರ್ಕಾರ ನಿರ್ಧರಿಸಿದ್ದು, ಇವುಗಳನ್ನು ಇತರ ಉದ್ದೇಶಕ್ಕೆ ಬಳಸಿಕೊಳ್ಳುವುದಕ್ಕೆ ತಡೆ ನೀಡುವ ಕಾಯ್ದೆಗೆ ತಿದ್ದುಪಡಿ ಮಾಡಿದೆ.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಮಹತ್ವದ ನಿರ್ಣಯ ತೆಗೆದುಕೊಳ್ಳಲಾಗಿದೆ. ಇದರಿಂದ ಜಲಮೂಲಗಳು ಅಸ್ತಿತ್ವ ಕಳೆದುಕೊಂಡಿದ್ದರೂ, ಅನ್ಯ ಉದ್ದೇಶಕ್ಕೆ ಬಳಸಲು ಸಾಧ್ಯವಿಲ್ಲ.

ಆರ್.ಅಶೋಕ

‘2015 ರಲ್ಲಿ ಅಂದಿನ ಸರ್ಕಾರ ಕಾಯ್ದೆಗೆ ತಿದ್ದುಪಡಿ ಮಾಡಿ ಕೆರೆ, ಕುಂಟೆ, ತೊರೆ ಮತ್ತು ರಾಜಕಾಲುವೆಗಳು ಸ್ವರೂಪ ಕಳೆದುಕೊಂಡಿದ್ದರೆ, ಅವುಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿತ್ತು. ನಾವು ಅದಕ್ಕೆ ತಡೆ ನೀಡುವ ಮೂಲಕ ಜಲಮೂಲಗಳನ್ನು ಉಳಿಸಿಕೊಳ್ಳಲು ಕ್ರಮ ತೆಗೆದುಕೊಂಡಿದ್ದೇವೆ’ ಎಂದು ಕಂದಾಯ ಸಚಿವ ಆರ್.ಅಶೋಕ ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಂದು ವೇಳೆ ಖಾಸಗಿ ಜಮೀನುಗಳಲ್ಲಿ ಇರುವ ಹಳ್ಳ ಅಥವಾ ತೊರೆಗಳು ಅಸ್ತಿತ್ವ ಕಳೆದುಕೊಂಡು 10 ವರ್ಷಗಳು ಕಳೆದಿದ್ದರೆ, ಅವುಗಳ ಬಗ್ಗೆ ಸಮೀಕ್ಷೆ ನಡೆಸಿ ಬಳಸಿಕೊಳ್ಳಲು ಅವಕಾಶ ನೀಡಲಾಗುವುದು. ಕೆಲವು ಖಾಸಗಿ ಜಮೀನುಗಳಲ್ಲಿ ಹಳ್ಳಗಳು ಹಾದು ಹೋಗಿ ಕೊನೆಗೊಂಡಿರುತ್ತವೆ. ಮುಂದಕ್ಕೆ ಹೋಗುವುದಿಲ್ಲ. ಅಂತಹವುಗಳನ್ನು ಬಳಸಿಕೊಳ್ಳಬಹುದು’ ಎಂದು ಅವರು ಸ್ಪಷ್ಟಪಡಿಸಿದರು.

ಅಲ್ಲದೆ, ಗ್ರಾಮಾಂತರ ಪ್ರದೇಶಗಳಲ್ಲಿ ಕಚ್ಚಾ ರಸ್ತೆಗಳು ಜಮೀನಿನಲ್ಲಿದ್ದು, ಬಳಿಕ ಅವು ಅಸ್ತಿತ್ವ ಕಳೆದುಕೊಂಡಿದ್ದರೆ ಅವುಗಳನ್ನೂ ಬಳಸಿಕೊಳ್ಳಬಹುದು. ಆದರೆ, ಕೆರೆ, ಕುಂಟೆ ಮತ್ತು ರಾಜಕಾಲುವೆಗಳನ್ನು ಮಾತ್ರ ಮುಟ್ಟುವಂತಿಲ್ಲ ಎಂದರು.

‘2015 ರ ತಿದ್ದುಪಡಿಯಲ್ಲಿ ಅಸ್ತಿತ್ವ ಕಳೆದುಕೊಂಡ ಎಲ್ಲ ಕೆರೆ, ಕುಂಟೆ, ರಾಜಕಾಲುವೆಗಳನ್ನೂ ಬಳಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಈಗ ಬದಲಾವಣೆ ಮಾಡಿದ್ದೇವೆ. ಸ್ವರೂಪ ಕಳೆದುಕೊಂಡು ಕನಿಷ್ಠ 10 ವರ್ಷಗಳು ಕಳೆದಿರಬೇಕು ಎಂಬುದನ್ನು ಸೇರಿಸಿದ್ದೇವೆ. ಹಿಂದೆ ಅಂತಹ ನಿಯಮವೂ ಇರಲಿಲ್ಲ’ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ತಿಳಿಸಿದರು.

ಕೃಷಿ ಇಲಾಖೆ ಅಧಿಕಾರಿಗಳಿಂದ ಸಾಮೂಹಿಕ ರಜೆ

ಪ್ರಜಾವಾಣಿ ವಾರ್ತೆ

ಬೀದರ್: ‘ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ತಾರಾಮಣಿ ಕೆಳ ಹಂತದ ಅಧಿಕಾರಿಗಳಿಗೆ ಕಿರುಕಳ ನೀಡುತ್ತಿದ್ದು, ಅವರನ್ನು ವರ್ಗಾವಣೆ ಮಾಡಬೇಕು’ ಎಂದು ಆಗ್ರಹಿಸಿ ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಗುರುವಾರ ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ಆರಂಭಿಸಿದ್ದಾರೆ.

ಕೃಷಿ ಅಧಿಕಾರಿಗಳು ಜಂಟಿ ನಿರ್ದೇಶಕರ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ತಾರಾಮಣಿ ವರ್ಗಾವಣೆ ಆಗುವವರೆಗೂ ಪ್ರತಿಭಟನೆ ಮುಂದುವರಿಯಲಿದೆ ಎಂದು ಎಚ್ಚರಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ ಮಾತನಾಡಿ, ‘ತಾರಾಮಣಿ ಅವರು ಜಿಲ್ಲೆಗೆ ಜಂಟಿ ನಿರ್ದೇಶಕರಾಗಿ ಬಂದ ನಂತರ ಕೃಷಿ ಇಲಾಖೆಯಲ್ಲಿ ಸಮಸ್ಯೆ ಹೆಚ್ಚಿದೆ. ಇಲಾಖೆಯ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಈಗಾಗಲೇ ದೂರು ಕೊಡಲಾಗಿದೆ. ಜಂಟಿ ನಿರ್ದೇಶಕಿ ವರ್ಗಾವಣೆ ಆಗುವವರೆಗೆ ಸರ್ಕಾರಿ ನೌಕರರು ಕೈಗೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಿದ್ದಾರೆ’ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಕೃಷಿ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

‘ಸಿ.ಎಂ ಸ್ಥಾನ; ಸಂದರ್ಭ ಬಂದಾಗ ಹೇಳುತ್ತೇನೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ನಾನು ಮುಖ್ಯಮಂತ್ರಿ ಸ್ಥಾನದ ಸ್ಪರ್ಧೆಯಲ್ಲಿದ್ದೇನೆಯೇ ಎಂಬುದನ್ನು ಸಂದರ್ಭ ಬಂದಾಗ ಹೇಳುತ್ತೇನೆ’ ಎಂದು ಶಾಸಕ, ಕಾಂಗ್ರೆಸ್ ಮುಖಂಡ ಡಾ.ಜಿ. ಪರಮೇಶ್ವರ ಗುರುವಾರ ಇಲ್ಲಿ ಹೇಳಿದರು.

ಮುಂದಿನ ಮುಖ್ಯಮಂತ್ರಿ ಕುರಿತ ಚರ್ಚೆ ಕಾಂಗ್ರೆಸ್‌ನಲ್ಲಿ ಕಾವು ಪಡೆದಿರುವ ಸಮಯದಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿ ಸ್ಥಾನದ ಸ್ಪರ್ಧೆಯಲ್ಲಿ ತಾವು ಇದ್ದೀರಾ ಎಂಬ ಮಾಧ್ಯಮದವರ ಪ್ರಶ್ನೆಗೆ, ‘ಆ ಸಂದರ್ಭ ಬರಲಿ, ನೋಡೋಣ’ ಎಂದು ಉತ್ತರಿಸಿದರು.

ಚರ್ಚೆ ಇಲ್ಲಿಗೆ ಸಾಕು: ‘ಚುನಾವಣೆಗೆ ಇನ್ನೂ ಎರಡು ವರ್ಷ ಇದೆ. ಅದರಲ್ಲಿ ನಾವೆಲ್ಲರೂ ಮತ್ತೆ ಗೆದ್ದು ಬರಬೇಕು. ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಈಗಲೇ ನಿರ್ಧರಿಸುವುದು ಅಪ್ರಸ್ತುತ’ ಎಂದರು.

‘ಕೆಲವು ಶಾಸಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ಅದು ದೊಡ್ಡ ಚರ್ಚೆಯಾಗಿ ಬೆಳೆದಿದೆ. ಈ ಚರ್ಚೆ ಇಲ್ಲಿಗೆ ಸಾಕು ಎಂದು ಪಕ್ಷದಲ್ಲಿರುವ ಸ್ನೇಹಿತರು ಮತ್ತು ಎಲ್ಲ ಮುಖಂಡರಿಗೆ ಮನವಿ ಮಾಡುತ್ತೇನೆ. ಇದನ್ನು ಇನ್ನಷ್ಟು ಬೆಳೆಸುವ ಅಗತ್ಯವಿಲ್ಲ’ ಎಂದು ತಿಳಿಸಿದರು.

ಸುತ್ತೂರು ಶ್ರೀಗಳ ಭೇಟಿ: ಪರಮೇಶ್ವರ ಅವರು ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಜತೆ ಸುಮಾರು ಒಂದು ತಾಸು ಮಾತುಕತೆ ನಡೆಸಿದರು.

ಡಾ.ಜಿ. ಪರಮೇಶ್ವರ

‘ಸುತ್ತೂರು ಶ್ರೀಗಳ ಪೂರ್ವಾಶ್ರಮದ ಮಾತೃಶ್ರೀ ಇತ್ತೀಚೆಗೆ ನಿಧನರಾಗಿದ್ದಾರೆ. ಆದ್ದರಿಂದ ಸೌಜನ್ಯದ ಭೇಟಿ ಕೊಟ್ಟಿದ್ದೇನೆ. ಈ ಭೇಟಿಗೆ ಬೇರೆ ಯಾವುದೇ ಅರ್ಥ ಕಲ್ಪಿಸಬೇಕಾಗಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಮುಂದಿನ ಸಿ.ಎಂ ಪರಮೇಶ್ವರ್–ಕೂಗು: ಡಾ.ಪರಮೇಶ್ವರ ಅವರು ಸುತ್ತೂರು ಶಾಖಾ ಮಠಕ್ಕೆ ಬಂದಿಳಿದಾಗ ಅಲ್ಲಿ ಸೇರಿದ್ದ ಬೆಂಬಲಿಗರು, ‘ಮುಂದಿನ ಮುಖ್ಯಮಂತ್ರಿ ಪರಮೇಶ್ವರ್ ಅವರಿಗೆ ಜಯವಾಗಲಿ’ ಎಂದು ಘೋಷಣೆ ಕೂಗಿದರು. ತಕ್ಷಣವೇ ಅವರತ್ತ ತಿರುಗಿದ ಪರಮೇಶ್ವರ, ಸುಮ್ಮನಿರುವಂತೆ ಸೂಚಿಸಿದರು.

ಈ ಬಗ್ಗೆ ಬಳಿಕ ಪ್ರತಿಕ್ರಿಯಿಸಿ, ‘ಹೌದು ಕೆಲವು ಸ್ನೇಹಿತರು ಆ ರೀತಿ ಘೋಷಣೆ ಕೂಗಿದರು. ಬೇಡಪ್ಪಾ.. ಆ ರೀತಿ ಘೋಷಣೆ ಕೂಗಬೇಡಿ ಎಂದು ಅವರಿಗೆ ಮನವಿ ಮಾಡಿದೆ’ ಎಂದರು.

ಕಾಂಗ್ರೆಸ್‌ನಲ್ಲೂ ‘ಸಿ.ಎಂ’ ರಗಳೆ

ಒಂದನೇ ಪುಟದಿಂದ...

‘ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂಬ ಮನಸ್ಥಿತಿಯನ್ನು ಪಕ್ಷ ಹಾಗೂ ಜನರಲ್ಲಿ ಸೃಷ್ಟಿಸಲು ಸಿದ್ದರಾಮಯ್ಯ ಪರ ಶಾಸಕರು ಮುಂದಾಗಿದ್ದಾರೆ. ಅವರ ಅವಧಿಯ (2013–2018) ಯೋಜನೆಗಳ ಮೆಲುಕು ಹಾಕುವ ಮೂಲಕ ಮುಂದಿನ ಮುಖ್ಯಮಂತ್ರಿ ಎಂಬ ಚಿಂತನೆಯನ್ನು ಗಟ್ಟಿ ಮಾಡಲು ಯತ್ನ ನಡೆಯುತ್ತಿದೆ. ಸಿದ್ದರಾಮಯ್ಯ ನಿವಾಸದಲ್ಲಿ ಸಭೆ ಸೇರುವ ಅವರ ಬೆಂಬಲಿಗ ಶಾಸಕರು, ಮಾಜಿ ಶಾಸಕರು, ನಾಯಕರು ವ್ಯವಸ್ಥಿತವಾಗಿ ಈ ಕೆಲಸ ಮಾಡುತ್ತಿದ್ದಾರೆ’ ಎಂಬ ಅಭಿಪ್ರಾಯಗಳು ಕೆಪಿಸಿಸಿ ಕಚೇರಿ ಸುತ್ತ ಮಾರ್ದನಿಸುತ್ತಿವೆ.

‘ತಮ್ಮ ಮನಸ್ಸಿನಲ್ಲಿ ಇರುವುದನ್ನು ಆಪ್ತ ಶಾಸಕರ ಮೂಲಕ ಸಿದ್ದರಾಮಯ್ಯ ಹೊರ ಹಾಕುತ್ತಿದ್ದಾರೆ. ಅದಕ್ಕೆ ಪೂರಕವಾಗಿ, ರಾಜ್ಯದ ಅಭಿವೃದ್ಧಿಗೆ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ಆಪ್ತ ಬಳಗ ಬಿಂಬಿಸುತ್ತಿದೆ’ ಎನ್ನುವುದು ಶಿವಕುಮಾರ್ ಆಪ್ತ ವಲಯದ ದೂರು.

> **ನಾನೇನು ಸನ್ಯಾಸಿಯಲ್ಲ. ನೀವೇ ಮುಖ್ಯಮಂತ್ರಿ ಎಂದರೆ ಯಾರು ಬೇಡ ಎನ್ನುತ್ತಾರೆ. ನನ್ನ ಬೆಂಬಲಿಗರೂ ನಾನು ಮುಖ್ಯಮಂತ್ರಿಯಾಗಲಿ ಎಂದು ಬಯಸುತ್ತಾರೆ.**
> **ಎಸ್.ಆರ್.ಪಾಟೀಲ**
> ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಶಾಸಕರಾದ ಜಮೀರ್ ಅಹಮ್ಮದ್ ಖಾನ್, ರಾಘವೇಂದ್ರ ಹಿಟ್ನಾಳ್, ಭೀಮಾ ನಾಯಕ್, ಕಂಪ್ಲಿ ಗಣೇಶ್, ಭೈರತಿ ಸುರೇಶ್, ರಾಮಪ್ಪ, ಮಾಜಿ ಶಾಸಕ ಬಸವರಾಜ ರಾಯರಡ್ಡಿ ಸೇರಿದಂತೆ ಹಲವರು ನಾಯಕರು ಬಹಿರಂಗವಾಗಿಯೇ ಹೇಳಿಕೆ ನೀಡಿದ್ದಾರೆ.

‘ಮುಖ್ಯಮಂತ್ರಿ ವಿಷಯದಲ್ಲಿ ಜಮೀರ್ ಪದೇ ಪದೇ ನೀಡುತ್ತಿರುವ ಹೇಳಿಕೆ ಎಲ್ಲ ಗೊಂದಲಕ್ಕೆ ಕಾರಣವೆಂದು ಶಾಸಕರಾದ ಎನ್.ಎ. ಹ್ಯಾರಿಸ್, ತನ್ವೀರ್ ಸೇಠ್, ರಿಜ್ವಾನ್ ಅರ್ಷದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್ ಸೇರಿದಂತೆ ಹಲವರು ತಮ್ಮ ಆಪ್ತ ಬಳಗದಲ್ಲಿ ಅಸಮಾಧಾನ ಹೊರಹಾಕಿದ್ದಾರೆ. ಜಮೀರ್ ಹಾದಿಯಲ್ಲಿಯೇ ಇತರ ಕೆಲವು ಶಾಸಕರು ಮಾತನಾಡಲು ಆರಂಭಿಸಿದ್ದರಿಂದ ಗೊಂದಲ ಸೃಷ್ಟಿಯಾಗಿದೆ. ಸಮುದಾಯದ ಪ್ರಮುಖ ನಾಯಕ ತಾನು ಎಂಬಂತೆ ಜಮೀರ್ ಬಿಂಬಿಸಿಕೊಳ್ಳುತ್ತಿದ್ದಾರೆ. ಜೆಡಿಎಸ್‌ನಲ್ಲಿದ್ದಾಗ ಕುಮಾರಸ್ವಾಮಿ, ಈಗ ಸಿದ್ದರಾಮಯ್ಯ ಅವರನ್ನು ಜಮೀರ್ ಅತಿಯಾಗಿ ಓಲೈಸುತ್ತಿದ್ದಾರೆ. ಪಕ್ಷದಲ್ಲಿ ಒಂದು ಶಿಸ್ತು, ಚೌಕಟ್ಟಿದೆ. ಅದನ್ನು ಮೀರಿ ವರ್ತಿಸುವುದಕ್ಕೆ ತೆರೆ ಎಳೆಯಬೇಕೆಂಬ ಬೇಡಿಕೆ ಮುಂದಿಟ್ಟುಕೊಂಡು ಹೈಕಮಾಂಡ್ ಕದ ತಟ್ಟಲು ಕೆಲವು ನಾಯಕರು ಮುಂದಾಗಿದ್ದಾರೆ’ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಸೋತವರೂ ಮುಖ್ಯಮಂತ್ರಿ ಆಗಿದ್ದಾರೆ: ಡಿಕೆಶಿ

ಒಂದನೇ ಪುಟದಿಂದ...

ಶಾಸಕ ಜಿ. ಪರಮೇಶ್ವರ ಅವರು ಸುತ್ತೂರು ಮಠಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರ ಬೆಂಬಲಿಗರು ‘ಮುಂದಿನ ಮುಖ್ಯಮಂತ್ರಿ ಪರಮೇಶ್ವರ’ ಎಂದು ಜೈಕಾರ ಹಾಕಿದ್ದರ ಬಗ್ಗೆ ಪ್ರಸ್ತಾಪಿಸಿದಾಗ ಶಿವಕುಮಾರ್ ಈ ರೀತಿ ಪ್ರತಿಕ್ರಿಯಿಸಿದರು.

‘ಕಾಂಗ್ರೆಸ್ ಪಕ್ಷದ ಹೈಕಮಾಂಡ್ ದುರ್ಬಲವಾಗಿದೆ. ಹೀಗಾಗಿ ಪಕ್ಷದಲ್ಲಿ ನಾಯಕತ್ವದ ವಿಚಾರವಾಗಿ ಚರ್ಚೆ ನಡೆಯುತ್ತಿದೆ’ ಎಂದು ಸಚಿವ ಆರ್. ಅಶೋಕ ಅವರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ತಮ್ಮ ತಟ್ಟೆಯಲ್ಲಿ ಬಿದ್ದಿರುವ ಹೆಗ್ಗಣವನ್ನು ಅವರು ಮೊದಲು ತೆಗೆದುಹಾಕಲಿ, ಆಮೇಲೆ ಬೇರೆಯವರ ಬಗ್ಗೆ ಮಾತನಾಡಲಿ’ ಎಂದು ತಿರುಗೇಟು ನೀಡಿದರು.

ಸಾಕಷ್ಟು ನಾಯಕರಿದ್ದಾರೆ:ಕೆ.ಎನ್. ರಾಜಣ್ಣ

‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕು ಎನ್ನುವುದು ಶಾಸಕರ ವೈಯಕ್ತಿಕ ಅಭಿಪ್ರಾಯ’ ಎಂದು ಮಾಜಿ ಶಾಸಕ ಕೆ.ಎನ್. ರಾಜಣ್ಣ ಹೇಳಿದರು.

ಸಿದ್ದರಾಮಯ್ಯ ಐದು ವರ್ಷ ಉತ್ತಮ ಆಡಳಿತ ನೀಡಿದ್ದರು. ಹೀಗಾಗಿ ಮತ್ತೆ ಅವರೇ ಮುಖ್ಯಮಂತ್ರಿ ಆಗಬೇಕು ಎಂದು ಕೆಲವರು ಹೇಳುತ್ತಾರೆ. ಅದರಲ್ಲಿ ತಪ್ಪಿಲ್ಲ. ಸಿದ್ದರಾಮಯ್ಯ ಒಬ್ಬರೇ ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲ. ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ಆರ್.ವಿ. ದೇಶಪಾಂಡೆ, ಕೆ.ಎಚ್. ಮುನಿಯಪ್ಪ ಹೀಗೆ ಸಾಕಷ್ಟು ನಾಯಕರು ಇದ್ದಾರೆ ಎಂದರು.

‘ಈಗ ಮಾತನಾಡುವವರೆಲ್ಲ ಮುಂದಿನ ಚುನಾವಣೆಯಲ್ಲಿ ಗೆಲ್ಲಬೇಕು. ಎಷ್ಟೂ ಜನ ಗೆಲ್ಲುವುದಿಲ್ಲ. ಹೊಸಬರು ಆಯ್ಕೆಯಾಗುತ್ತಾರೆ. ಪಕ್ಷ ಬಹುಮತ ಪಡೆದ ಬಳಿಕ ಮುಖ್ಯಮಂತ್ರಿ ಯಾರಾಗಬೇಕೆಂದು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

ಹಜ್ ಸಮಿತಿ: ರವೂಫುದ್ದೀನ್ ಕಚೇರಿವಾಲೆ ಅಧ್ಯಕ್ಷರಾಗಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಜ್ ಸಮಿತಿಯ ನೂತನ ಅಧ್ಯಕ್ಷರಾಗಿ ಬಿಜೆಪಿ ಮುಖಂಡ ರವೂಫುದ್ದೀನ್ ಕಚೇರಿವಾಲೆ ಆಯ್ಕೆಯಾಗಿದ್ದಾರೆ.



ರವೂಫುದ್ದೀನ್ ಕಚೇರಿವಾಲೆ

ವಿಕಾಸಸೌಧದಲ್ಲಿ ಗುರುವಾರ ನಡೆದ ರಾಜ್ಯ ಹಜ್ ಸಮಿತಿಯ ನೂತನ ಅಧ್ಯಕ್ಷರ ಚುನಾವಣೆಯಲ್ಲಿ ರವೂಫುದ್ದೀನ್ ಕಚೇರಿವಾಲೆ ಅವರು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಬಿ.ಎಂ. ಫಾರೂಕ್ ವಿರುದ್ಧ ಎರಡು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಮತ ಪತ್ರದ ಮೂಲಕ ನಡೆದ ಈ ಚುನಾವಣೆಯಲ್ಲಿ ರಾಜ್ಯ ಹಜ್ ಸಮಿತಿಯ ಎಲ್ಲ 14 ಸದಸ್ಯರ ಪೈಕಿ, ರವೂಫುದ್ದೀನ್ ಕಚೇರಿವಾಲೆ ಪರವಾಗಿ 7 ಮತಗಳು ಹಾಗೂ ಬಿ.ಎಂ. ಫಾರೂಕ್ ಪರವಾಗಿ 5 ಮತಗಳು ಚಲಾವಣೆಗೊಂಡವು. ಕ್ರಮಬದ್ಧವಲ್ಲದ ಎರಡು ಮತಗಳನ್ನು ಅಸಿಂಧುಗೊಳಿಸಲಾಯಿತು.

ರಾಜ್ಯ ಹಜ್ ಸಮಿತಿಯ ಹಿಂದಿನ ಅಧ್ಯಕ್ಷರ ಅವಧಿ ಮುಕ್ತಾಯಗೊಂಡು ಒಂದೂವರೆ ವರ್ಷ ಕಳೆದಿತ್ತು. ಆದರೆ, ಸಮಿತಿಗೆ ನೂತನ ಅಧ್ಯಕ್ಷರ ಆಯ್ಕೆಯಾಗದ ಕಾರಣ ಕೆಲವು ಸದಸ್ಯರು ನ್ಯಾಯಾಲಯದ ಮೆಟ್ಟಿಲೇರಿದ್ದರು. ನ್ಯಾಯಾಲಯದ ಆದೇಶದಂತೆ ಚುನಾವಣೆ ನಡೆಸಲಾಯಿತು.

ಸರ್ಕಾರದ ಉಪ ಕಾರ್ಯದರ್ಶಿ ಮುಕ್ತಾರ್ ಪಾಷ ಅವರ ಉಪಸ್ಥಿತಿಯಲ್ಲಿ, ರಾಜ್ಯ ಹಜ್ ಸಮಿತಿಯ ಕಾರ್ಯ ನಿರ್ವಾಹಕ ಅಧಿಕಾರಿ ಸರ್ಫ್ರಾಜ್ ಖಾನ್ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

ಧಾರವಾಡ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಯತ್ನ

ಪಠ್ಯಪುಸ್ತಕದ ಕೊರತೆ ನೀಗಿಸುತ್ತಿರುವ ‘ಬುಕ್ ಬ್ಯಾಂಕ್’

● ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಜುಲೈ 1 ರಿಂದ ಶಾಲೆಗಳು ಆರಂಭವಾಗಲಿವೆ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ಆದರೆ, ಪಠ್ಯಪುಸ್ತಕಗಳು ಇನ್ನೂ ಮುದ್ರಣವಾಗಿಲ್ಲ. ಮಕ್ಕಳಿಗೆ ತೊಂದರೆಯಾಗಬಾರದು ಎಂದು ಧಾರವಾಡ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ‘ಬುಕ್ ಬ್ಯಾಂಕ್’ ಆರಂಭಿಸುವ ಮೂಲಕ ಪಠ್ಯಪುಸ್ತಕಗಳ ಕೊರತೆ ನೀಗಿಸಲು ಮುಂದಾಗಿದೆ.

ಹಿಂದಿನ ವರ್ಷದ ವಿದ್ಯಾರ್ಥಿಗಳಿಂದ ಪಠ್ಯಪುಸ್ತಕಗಳನ್ನು ಸಂಗ್ರಹಿಸಿ, ಈ ವರ್ಷದ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡುವುದೇ ಬುಕ್ ಬ್ಯಾಂಕ್ ಉದ್ದೇಶ. ಧಾರವಾಡ ಜಿಲ್ಲೆಯಲ್ಲಿ ಈಗಾಗಲೇ 60,125 ಪಠ್ಯಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹ ಕಾರ್ಯ ಇನ್ನೂ ಮುಂದುವರೆದಿದೆ.

> **ಹೊಸ ಪಠ್ಯಪುಸ್ತಕ ಬರುವ ವರೆಗೂ ಹಳೆಯ ಪುಸ್ತಕ ಸಂಗ್ರಹಿಸಿ ಮಕ್ಕಳಿಗೆ ನೀಡುತ್ತಿದ್ದೇವೆ. ಹೊಸದು ಬಂದ ಮೇಲೆ ಅವುಗಳನ್ನೂ ನೀಡಲಾಗುವುದು**
> **ಎಂ.ಎಲ್ ಹಂಚಾಟೆ,** ಡಿಡಿಪಿಐ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ

ಒಂದರಿಂದ ಒಂಬತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳನ್ನು ಆಯಾ ಶಾಲಾ ಶಿಕ್ಷಕರ ಮೂಲಕ ಸಂಗ್ರಹಿಸಲಾಗುತ್ತಿದೆ. ಬಿಸಿಯೂಟದ ಆಹಾರ ಧಾನ್ಯ ತೆಗೆದುಕೊಂಡು ಹೋಗಲು ಬರುವ ಪೋಷಕರು ಹಿಂದಿನ ವರ್ಷದ ಪಠ್ಯಪುಸ್ತಕಗಳೊಂದಿಗೆ ಬಂದು, ಈ ವರ್ಷದ ಪಠ್ಯಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿವಾರು ಸಂಗ್ರಹಿಸಿದ ಪುಸ್ತಕಗಳ ವಿವರ	
ಹುಬ್ಬಳ್ಳಿ ಶಹರ	6,800
ಹುಬ್ಬಳ್ಳಿ ಗ್ರಾಮೀಣ	14,480
ಕುಂದಗೋಳ	4,829
ಕಲಘಟಗಿ	7,421
ನವಲಗುಂದ	8,102
ಧಾರವಾಡ ಶಹರ	1,205
ಧಾರವಾಡ ಗ್ರಾಮೀಣ	17,288

‘ಮಕ್ಕಳು ಭೌತಿಕವಾಗಿ ಶಾಲೆಗೆ ಬರದಿದ್ದರೂ, ಮನೆಯಲ್ಲಿದ್ದು ಆನ್‌ಲೈನ್ ತರಗತಿ, ‘ಚಂದನ’ದಲ್ಲಿ ಬರುವ ಪಾಠ ಕೇಳಿದರೂ, ನಂತರದಲ್ಲಿ ಪಠ್ಯಪುಸ್ತಕದಲ್ಲಿ ಪುನರ್‌ಮನನಕ್ಕೆ ಅನುಕೂಲವಾಗಲಿದೆ’ ಎನ್ನುತ್ತಾರೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಧಾರವಾಡ ಜಿಲ್ಲಾ ಉಪನಿರ್ದೇಶಕ ಎಂ.ಎಲ್. ಹಂಚಾಟೆ.

‘ರಾಜ್ಯ ಸರ್ಕಾರದಿಂದಲೇ ಪ್ರತಿ ವರ್ಷ ಸರ್ಕಾರಿ ಶಾಲೆಗಳ ಮಕ್ಕಳಿಗೆ ಉಚಿತವಾಗಿ, ಅನುದಾನಿತ ಶಾಲೆಗಳ ಮಕ್ಕಳಿಗೆ ಪುಸ್ತಕದ ಬೆಲೆ ಪಾವತಿಸಿಕೊಂಡು ವಿತರಣೆ ಮಾಡಲಾಗುತ್ತಿತ್ತು. ಲಾಕ್‌ಡೌನ್ ಇರುವುದರಿಂದ ಈ ಬಾರಿ ಪಠ್ಯಪುಸ್ತಕಗಳು ಬರುವುದು ವಿಳಂಬವಾಗಲಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಬುಕ್ ಬ್ಯಾಂಕ್ ಆರಂಭಿಸಿದ್ದೇವೆ’ ಎಂದರು.

‘ಶಿಕ್ಷಕರ ಮೂಲಕ ಗ್ರಾಮಗಳಲ್ಲಿ ವಿಷಯ ತಿಳಿಸಿದ ಮೇಲೆ ಉತ್ತಮ ಪ್ರತಿಕ್ರಿಯೆ ಬಂದಿದೆ. ನಿತ್ಯ ಪುಸ್ತಕಗಳನ್ನು ತಂದುಕೊಡುತ್ತಿದ್ದಾರೆ. ಅವುಗಳನ್ನು ವಿದ್ಯಾರ್ಥಿಗಳಿಗೆ ಹಂಚುವ ಕಾರ್ಯವೂ ನಡೆದಿದೆ’ ಎಂದು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್	124.80	95.56	4,251	1,636
ಹಾರಂಗಿ	2,859	2,838.93	723	80
ಕಬಿನಿ	2284.00	2,276.82	2,774	3,000
ಹೇಮಾವತಿ	2,922	2,894.43	2,397	200
ಲಿಂಗನಮಕ್ಕಿ	1,819	1,785.60	3,274	ಶೂನ್ಯ
ಸೂಪಾ (ಮೀ)	564	539.16	5,115	5,115
ಮಾಣಿ	594.36	573.90	172	493
ತುಂಗಭದ್ರಾ (ಅಡಿ)	1,633	1,605.99	25,744	256
ಮಲಪ್ರಭಾ	2,079.50	2,062.00	2,138	194
ಘಟಪ್ರಭಾ	2175	2,129.46	5,935	122
ಭದ್ರಾ	186	153.4	3,900	80
ಆಲಮಟ್ಟಿ (ಮೀ)	519.60	517.34	58,537	37,866
ನಾರಾಯಣಪುರ (ಮೀ)	492.25	489.10	44,000	45,440

* ನೆಲಮಟ್ಟದಿಂದ

ಮೂಡಿಗೆರೆಯ ಬಾಳೂರು ಮೀಸಲು ಅರಣ್ಯದ ಸರಹದ್ದು

ಮಾಫಿ ಪಾಸ್ ಅಡಿ ಮರ ಕಡಿದ ಪ್ರಕರಣ; ತನಿಖೆ ನನೆಗುದಿಗೆ

• ಬಿ.ಜೆ. ಧನ್ಯಪ್ರಸಾದ್

ಬಾಳೂರು ಮೀಸಲು ಅರಣ್ಯದ ಗಡಿಭಾಗದಲ್ಲಿ ಕಡಿದಿದ್ದ ಮರಗಳು. (ಸಂಗ್ರಹ ಚಿತ್ರ)

ಚಿಕ್ಕಮಗಳೂರು: 'ಮಾಫಿ ಪಾಸ್' ಹೆಸರಿನಲ್ಲಿ ಮೂಡಿಗೆರೆ ತಾಲ್ಲೂಕಿನ ಬಾಳೂರು ಮೀಸಲು ಅರಣ್ಯ ಸರಹದ್ದಿನಲ್ಲಿ ನೂರಾರು ಮರಗಳನ್ನು ಕಡಿಯಲಾಗಿದೆ ಎಂಬ ದೂರಿನ ತನಿಖೆ ನನೆಗುದಿಗೆ ಬಿದ್ದಿದೆ.

'ಮಾಫಿ ಪಾಸ್' (ಖಾಸಗಿ ಜಮೀನಿನ ಮರ ಕಡಿಯಲು ನೀಡುವ ಅನುಮತಿ ಪತ್ರ) ಹೆಸರಿನಲ್ಲಿ ಮೂಡಿಗೆರೆ, ಕಳಸ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮರಗಳನ್ನು ಕಡಿಯಲಾಗಿದೆ. ಇದರಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಶಾಮೀಲಾಗಿದ್ದಾರೆ ಎಂದು ದೂರು ದಾಖಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಎಫ್‌ಒ ಸತೀಶ್ ಅವರು ಪರಿಶೀಲನೆ ನಡೆಸಿ ವರದಿ ನೀಡಿದ್ದಾರೆ. ಮರ ಕಡಿದಿರುವ ಜಾಗ ಯಾರಿಗೆ ಸೇರಿದ್ದು (ಖಾಸಗಿ ಅಥವಾ ಅರಣ್ಯ) ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ಜಂಟಿ ಮೋಜಣಿ ನಡೆಸಲು ತೀರ್ಮಾನಿಸಲಾಗಿದೆ. ನಾಲ್ಕೈದು ತಿಂಗಳು ಕಳೆದರೂ ಮೋಜಣಿ ಕೈಗೆತ್ತಿಕೊಂಡಿಲ್ಲ.

'ಜಂಟಿ ಮೋಜಣಿಗೆ ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗಿದೆ. ಕೋವಿಡ್‌ನಿಂದಾಗಿ ಪ್ರಕ್ರಿಯೆ ತಡವಾಗಿದೆ. ಜಂಟಿ ಮೋಜಣಿ ಮುಗಿದ ನಂತರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ಚಿಕ್ಕಮಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಸುನೀಲ್ ಪನ್ವಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಆರ್‌ಎಫ್‌ಒ ಅಮಾನತಿಗೆ ಮುಖ್ಯಮಂತ್ರಿಗೆ ಪತ್ರ: 'ಕಳಸ ವಲಯದ ಆರ್‌ಎಫ್‌ಒ ಜೆ.ವಿಜಯಕುಮಾರ್ ಅವರ ಕಾರ್ಯನಿರ್ವಹಣೆ ಬಗ್ಗೆ ಹಲವಾರು ಸಾರ್ವಜನಿಕರು ದೂರು ನೀಡಿದ್ದಾರೆ. ಅವರನ್ನು ಅಮಾನತುಗೊಳಿಸಬೇಕು' ಎಂದು ಮೂಡಿಗೆರೆ ಕ್ಷೇತ್ರದ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರು, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರಿಗೆ ಪತ್ರ ಬರೆದಿದ್ದಾರೆ. ಅಮಾನತಿಗೆ ಕ್ರಮ ಕೈಗೊಳ್ಳುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಯಡಿಯೂರಪ್ಪ ಅವರು ಆ ಪತ್ರದಲ್ಲಿ ಒಕ್ಕಣೆ ಬರೆದಿದ್ದಾರೆ.

'ವಿಜಯಕುಮಾರ್ ಅವರು, ಮಾಫಿ ಪಾಸ್ ಟಿಂಬರ್ ಕಂಟ್ರಾಕ್ಟರ್ ಜತೆ ಕೈಜೋಡಿಸಿದ್ದು, ಹಲಗಡ್ಕಕದ ಸರ್ವೆ ನಂಬರ್ 10ರ ಹಿಡುವಳಿಯ ದ್ಯಾವಪ್ಪ ಅವರ ಸ್ವಂತ ಜಾಗದ್ದವು ಎಂದು ಗುರುತಿಸಿ ಬಾಳೂರು ಮೀಸಲು ಅರಣ್ಯದಲ್ಲಿ 500ರಿಂದ 600 ಮರಗಳನ್ನು ಕಡಿಸಿದ್ದಾರೆ' ಎಂದು ಸಚಿವ ಲಿಂಬಾವಳಿ ಅವರಿಗೆ ಪತ್ರದಲ್ಲಿ ಕುಮಾರಸ್ವಾಮಿ ಆಪಾದಿಸಿದ್ದಾರೆ.

ಚಲಿಸುವ ರೈಲಿನಿಂದ ಜಿಗಿದು ಪ್ರಯಾಣಿಕ ಸಾವು

ಝಾನ್ಸಿ, ಉತ್ತರಪ್ರದೇಶ (ಪಿಟಿಐ): ಬೇರೆ ಮಾರ್ಗದ ರೈಲು ಹತ್ತಿದ ಆತಂಕದಲ್ಲಿ ಐವರು ಪ್ರಯಾಣಿಕರು ಚಲಿಸುವ ರೈಲಿನಿಂದ ಜಿಗಿದ ಪರಿಣಾಮ ಒಬ್ಬ ಪ್ರಯಾಣಿಕ ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಮೃತ ಪ್ರಯಾಣಿಕನನ್ನು ಗೋರಖ್‌ಪುರದ ದೇವಕಲಿ ಗ್ರಾಮದ ನಿವಾಸಿ ಅಜಯ್ ಕುಮಾರ್ (35) ಎಂದು ಗುರುತಿಸಲಾಗಿದೆ. ಇವರ ಸಹೋದರ ವಿಜಯ್, ಚಿಕ್ಕಪ್ಪ ಜಗಮೋಹನ್ ಮತ್ತು ಅವರ ಒಡನಾಡಿಗಳಾದ ಸಂದೀಪ್ ಮತ್ತು ಸಂಜಯ್ ಗಾಯಗೊಂಡಿದ್ದಾರೆ. ಇವರು ಆಂಧ್ರಪ್ರದೇಶಕ್ಕೆ ಹೋಗಲು ಝಾನ್ಸಿಗೆ ಬಂದಿದ್ದರು ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ.

ಬುಧವಾರ ರಾತ್ರಿ 12.30ರ ಸುಮಾರಿಗೆ ಅವರೆಲ್ಲರೂ ದೆಹಲಿ–ಆಂಧ್ರಪ್ರದೇಶ ಎಕ್ಸ್‌ಪ್ರೆಸ್‌ಗೆ ಹತ್ತಿದ್ದು, ರೈಲು ಆಂಧ್ರಪ್ರದೇಶಕ್ಕೆ ಹೋಗಲಿದೆ ಎಂದು ಭಾವಿಸಿದ್ದರು. ಆದರೆ ಅದು ನವದೆಹಲಿಗೆ ಹೋಗುತ್ತಿದೆ ಎಂದು ತಿಳಿದಾಗ ಅವರು ಭಯಭೀತರಾಗಿ ಚಲಿಸುವ ರೈಲಿನಿಂದ ಕೆಳಕ್ಕೆ ಜಿಗಿದರು ಎಂದು ಮೂಲಗಳು ತಿಳಿಸಿವೆ.

ಭಾರಿ ವಾಹನ ಸಂಚಾರ ನಿಷೇಧ

ಪ್ರಜಾವಾಣಿ ವಾರ್ತೆ

ಉಡುಪಿ: ಮಳೆಗಾಲದಲ್ಲಿ ಭಾರಿ ವಾಹನಗಳ ಸಂಚಾರದಿಂದ ಆಗುಂಬೆ ಘಾಟಿ ರಸ್ತೆಯ ಮಣ್ಣು ಕುಸಿಯುವ ಅಪಾಯ ಇರುವುದರಿಂದ ಅ.15ರವರೆಗೆ ಆಗುಂಬೆ ಘಾಟಿಯಲ್ಲಿ ಅಧಿಕ ಭಾರದ ವಾಹನಗಳ ಸಂಚಾರ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ.

GOVERNMENT OF KARNATAKA
OFFICE OF THE SUPERINTENDENT, CENTRAL PRISON, VIJAYAPUR
No: CPV/ TENDER/ 2021-22 Dated: 21.06.2021

E-PROCUREMENT NOTICE

As per the Head office Order dated: 22-01-2021, 08-04-2021, 21-05-2021 and 19-06-2021 this office proceeding dated 21-06-2021. The purchases of Factory raw articles to Vijayapur Zone jails under following lots for the year 2021-22 to be procured through e-Procurement call-5 as per the KTPP Act.

Sl No	Tender No	Lot No	Brief Detail of Tender	EMD Amount	Last Date for Submission
CALL-5					
1	DP/2020-21/IND1042/ Lot-12/Call-5 Dated: 21.06.2021	Lot -12	Purchase of factory raw materials to Vijayapur Zone	As per E-Portal	As per E-Portal

Suppliers can also take assistance with E-procurement help desk at 08352-272044 for further details Please visit at https://eproc.karnataka.gov.in or helpline number. 9480806487.

Sd/- (Dr. I. J. Myageri)
Superintendent, Central Prison, VIjayapur
ವಾಸಾಸಂಇ/ವಿಜಯಪುರ/130/ಎಂಸಿಎ/2020–21

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ
ಸಂಖ್ಯೆ:04/ಕಾ.ಇಂ/ಲೋ.ಇ.ವಿ/ಹಾಸನ/ಸ.ಇಂ.2/2021–22 ದಿನಾಂಕ:22.06.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ **ಕೆ.ಡಬ್ಲ್ಯೂ–1** ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗ ವ್ಯಾಪ್ತಿಯ, ಲೋಕೋಪಯೋಗಿ ಇಲಾಖೆಯ ಒಟ್ಟು 11 ಸಂಖ್ಯೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಇವುಗಳಲ್ಲಿ 02 ಸಂಖ್ಯೆ ಕಾಮಗಾರಿಗಳನ್ನು ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಹಾಗೂ 01 ಸಂಖ್ಯೆ ಕಾಮಗಾರಿಗಳನ್ನು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಟೆಂಡರ್‌ನಲ್ಲಿನ ಕಾಮಗಾರಿಗಳ ಅಂದಾಜು ಮೊತ್ತ ರೂ.16.00 ಲಕ್ಷಗಳು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. **01.07.2021 16.00 ಗಂಟೆ**. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/173/2020–21

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರೀಯ ಉಗ್ರಾಣ, ಶಾಂತಿನಗರ ಬೆಂಗಳೂರು–560027
ಸಂಖ್ಯೆ: ಬೆ.ಮ.ಸಾ.ಸಂ./ಕೇಕ/ಉಖನಿ/ಟೆಂಡರ್/003/2021–22 ದಿನಾಂಕ: 24.06.2021

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ನ.ಸಾ. ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸರಕು/ಸೇವೆಗಳನ್ನು ಪಡೆಯಲು e-procurement ಮೂಲಕ ಟೆಂಡರ್ ಕರೆಯಾಲಾಗಿದ್ದು ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ ಮತ್ತು ದಿನಾಂಕ	ಟೆಂಡರ್ ವಿವರ	ಟೆಂಡರ್‌ನ ಮೊತ್ತ ಅಂದಾಜು (ರೂ. ಲಕ್ಷಗಳಲ್ಲಿ)	ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ
ಅಲ್ಪಾವಧಿ ಟೆಂಡರ್				
01	BMTC/2021/014 Dtd.24.06.2021	ಬೆಮಸಾ ಸಂಸ್ಥೆಗೆ ಕ್ಲೌಡ್ ಸರ್ವಿಸ್‌ಗಳನ್ನು ಒದಗಿಸಲು ಸೇವಾ ಪೂರೈಕೆದಾರರ (ಎಮ್.ಎಸ್.ಪಿ) ಆಯ್ಕೆ	500.00	14.07.2021 @ 14.30 Hrs
02	BMTC/2021/015 Dtd.24.06.2021	ಎಮ್.ಎಸ್ ಆ್ಯಂಗಲ್ ಮತ್ತು ಎಮ್.ಎಸ್ ಪ್ಲಾಟ್ಸ್‌ಗಳ ಖರೀದಿಯ ಬಗ್ಗೆ	16.00	12.07.2021 @ 14.30 Hrs
ನಿಯಮಿತ ಟೆಂಡರ್				
03	BMTC/2021/016 Dtd.24.06.2021	ಟ್ಯೂಬ್ ಪ್ಯಾಚ್‌ಗಳ ಖರೀದಿಯ ಬಗ್ಗೆ	07.00	25.07.2021 @ 14.00 Hrs

ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು www.eproc.karnataka.gov.in ನಿಂದ ಪಡೆಯಬಹುದು.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಕರೆಯುವ ಪ್ರಾಧಿಕಾರಿ)
ವಾ.ಸಾ.ಸಂ.ಇ/ಬೆಂ.ನಗರ/651/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರ್.ಸಿ.ಹೆಚ್. ಘಟಕ ಜಿಲ್ಲಾ ಆಸ್ಪತ್ರೆ ಆವರಣ, ಅನಂತಪುರ ರಸ್ತೆ, ಬಳ್ಳಾರಿ. ದೂರವಾಣಿ : 08392–273739
E-Mail ID : rchobellary@gmail.com
ಸಂಖ್ಯೆ:ಎಸ್.ಹೆಚ್.ಎಂ/ವಾಹನ ಟೆಂಡರ್/31/2021–22 ದಿ:23.06.2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಿಗೆ ನಾಲ್ಕು ಚಕ್ರದ ವಾಹನಗಳ ಸೇವೆಯನ್ನು ಏಜೆನ್ಸಿ ಮುಖಾಂತರ ಹೊರ ಸಂಪನ್ಮೂಲ ಸಂಸ್ಥೆಯಿಂದ ಸೇವೆಗಳನ್ನು ಪಡೆಯಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 200ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಜಿಲ್ಲಾ ಹಾಗೂ ತಾಲೂಕವಾರು ಪ್ರತ್ಯೇಕವಾಗಿ ಇ–ಪ್ರಕ್ಯೂರ್‌ಮೆಂಟ್ ಮೂಲಕ 10 ದಿನಗಳ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ತೆರೆಯುವ ದಿನಾಂಕ: ದಿ:24.06.2021 ರಿಂದ 03.07.2021 ಸಮಯ ಸಂಜೆ: 05.30 ಗಂಟೆಯ ವರೆಗೆ, ಟೆಂಡರ್ ಮೊತ್ತ ರೂ. 65,01,645/– ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ರಲ್ಲಿ ಪರಿಶೀಲಿಸಿ.

ಸಹಿ/– ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/137/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.
ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–1/2021–22/411 ದಿನಾಂಕ: 22–06–2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯುರ್‌ಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ ಕೆ.ಕೆ.ಆರ್.ಡಿ.ಬಿ. ಮತ್ತು ವಿವಿಧ ಯೋಜನೆ ಅಡಿ ಮಂಜೂರಾದ 31 ಕಾಮಗಾರಿಗಳಿಗೆ ಗರಿಷ್ಟ ರೂ. 1,76,846.20 (Rupees One Lakhs Seventy Six Thousand Eight Hundred Forty Six and paise twenty only) ಮತ್ತು ಕನಿಷ್ಟ 101,68,928.79 ಮೊತ್ತದ (Rupees One Crore One Lakh Sixty Eight Thousand Nine Hundred Twenty Eight and paise seventy nine only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಮತ್ತು ಪಂಚಾಯತ ರಾಜ ಇಂಜಿನಿಯರಿಂಗ ಇಲಾಖೆಯಲ್ಲಿ ನೋಂದಾಯಿತ ಆರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ–1, 2, 3 ಮತ್ತು 4ರ ನಿಬಂಧನೆಗೊಳಪಟ್ಟು ಇ–ಪ್ರಾಕ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ **https://eproc.karnataka.gov.in**ನ್ನು ಸಂಪರ್ಕಿಸಬಹುದು.

ಟೆಂಡರ್ ಪ್ರಕ್ರಿಯೆ ದಿನಾಂಕಗಳು: 1) ಇ–ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **23.06.2021 ರಿಂದ 12.07.2021 16:00 ಗಂಟೆವರೆಗೆ,** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **13.07.2021 ರಂದು 16:00 ಗಂಟೆ ನಂತರ,** 3) ಅರ್ಥಿಕ ಬಿಡ್ ತೆರೆಯುವ ದಿನಾಂಕ : **19.07.2021 ರಂದು 11:00 ಗಂಟೆ ನಂತರ.**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/63/ಎಂಸಿ&ಎ/2021–22

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ಕ್ರಸಂ : ಕಾನಿಇಂಧಾ/ಪಿಬಿ–2/ಗುತ್ತಿಗೆ/2021–22/1071 ದಿನಾಂಕ : 23–06–2021

ಅಲ್ಪಾವಧಿ ಟೆಂಡರ ಪ್ರಕಟಣೆ – I.F.T – KW- 3 & 4
ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ e-Proc- ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ (e-Proc)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ (e-Proc)	ಆರ್ಥಿಕ ಬಿಡ್ ತೆರೆಯುವ ದಿನಾಂಕ (e-Proc)
ಲೆಕ್ಕ ಶಿರ್ಷಿಕೆ 8443 ಠೇವಣಿ ವಂತಿಕೆ ಅಡಿಯ ಕಾಮಗಾರಿ					
1	CONSTRUCTION OF PRIMARY & SECONDARY SCHOOL BUILDING FOR KARNATAKA PUBLIC SCHOOL UNDER SAMAGRA SHIKSHAN KARNATAKA AT KARADIGUDDA ,DHARWAD DISTRICT. KPWD/2021-22/BD/WORK_INDENT137102.	200.00	01/07/2021	02/07/2021	03/07/2021
ಲೆಕ್ಕ ಶಿರ್ಷಿಕೆ 2216 ಅಡಿಯ ಕಾಮಗಾರಿ					
2	1) Daily Sweeping & Maintenance The Main roads & Premises at Hon ble Judges Bunglows Additional Registar General Quters & Staff Quters, Guest House, Club House Repair Works such as Water supply UGD, Door & Windows, providing Sign Boards & Painting Wherever required Jungle Clearance, removal of honeyes box walls Pumps & other works at High Court Premises Dharwad. KPWD/2021-22/BD/WORK_INDENT138000 2) Annual Electrical Maintenance (A.C., Geysers, Fans, Generator (2Nos), Street Light, Footpath Lights, and Repaires to Hon'ble High Court Judges Qtrs (10 Nos), ARG Qtrs (03 Nos), & Staff Qtrs (152 Nos) High Court Premises Dharwad. KPWD/2021-22/EL/WORK_INDENT137583 . KPWD/2021-22/BD/WORK_INDENT138177	110.00	01/07/2021	02/07/2021	03/07/2021
ಲೆಕ್ಕ ಶಿರ್ಷಿಕೆ 2059 ಅಡಿಯ ಕಾಮಗಾರಿ					
3	PACKAGE: 1) Daily sweeping @ Main building Guest house Club house Roads arrangements for Flag hoisting twice in a year, Repairs works such as water supply, UGD, Door & Windows, Flooring, Bamboo chickmates & Sumps, Providing Name boards, Jungle clearance, Painting in selected areas, and Providing Technical & Non-Technical Staff to Assistant Exe Executive Engineer special sub-division High Court Office etc KPWD/2021-22/BD/WORK_INDENT137686 2) Annual Electrical Maintenance and Repairs (250 KVA DG Set No.1, 62 KVA DG Set No.1, Ductable AC 8.5 Ton No.20, Split AC 3 Ton No.13, Split AC 2 Ton No.32, Split AC 1.5 Ton No.24,500 KVA Transformer No.2, Geyeser No.8, Fans , Lights, Computor Points, Lan Work, Street Light, High Mast Lights No.6, and Etc. to Main Building, Guest House, Club House in High Court Bench Dharwad KPWD/2021-22/EL/WORK_INDENT137582. K P W D / 2 0 2 1 - 2 2 / B D / WORK_INDENT138181)	133.00	01/07/2021	02/07/2021	03/07/2021

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ವಾಸಾಸಂಇ/ಧಾರವಾಡ/ಎಂಸಿಎ/215/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ : ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 03 / 2021–22 ದಿನಾಂಕ : 18.06.2021

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಫಾರಂ ಕೆ.ಡ್ಬ್ಲ್ಯೂ–4 ಅನ್ವಯ ರಾಣೆಬೆನ್ನೂರು ಉಪ–ವಿಭಾಗದ ವ್ಯಾಪ್ತಿಗೆ ಒಳಪಡುವ 4702–ನರ್ಬಾಡ 26 ಲೆಕ್ಕಶೀರ್ಷಿಕೆಯಡಿಯಲ್ಲಿ 02 ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. **89.16** ಲಕ್ಷ ಕನಿಷ್ಠ ಅಂದಾಜು ಮೊತ್ತ ರೂ. **89.03** ಲಕ್ಷಗಳು ಇ.ಎಂ.ಡಿ **ಮೊತ್ತ ಸರ್ಕಾರದ ಆದೇಶ ಸಂಖ್ಯೆ:ಆಇ 675 ವೆಚ್ಚ 12/2020 ದಿನಾಂಕ : 22/12/2020** ರನ್ವಯ **ಇಎಂಡಿ ಘೋಷಣೆ ಅನುಬಂಧ ಲಗತ್ತಿಸತಕ್ಕದ್ದು.** ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ : http://eproc.karnataka.gov.in ನಲ್ಲಿ ದಿನಾಂಕ : **24/06/2021** ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ : **09/07/2021** ಇರುವದು. ಯಾವುದೇ ವೇಳೆ ಹಾಗೂ ದಿನಾಂಕ ಬದಲಾವಣೆಗಳು ಹಾಗೂ ತಿದ್ದುಪಡಿ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್‌ನಲ್ಲಿ ನೋಡಿಕೊಳ್ಳತಕ್ಕದ್ದು, **ವೆಬ್‌ಸೈಟ್‌ನಲ್ಲಿರುವ ವಿವರಗಳೇ ಅಂತಿಮ.**

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.
ವಾಸಾಸಂಇ/ಹಾವೇರಿ/ಎಂಸಿಎ/110/2021–22

The Printers (Mysore) Pvt. Ltd.
Publishers of Deccan Herald, Prajavani, Sudha & Mayura
No. 7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period July - Sep 2021

Details	Location - wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH&PV Print waste & unsolds (Voucher & Office copies)	50	12	4.5	3	6	3.75	4
Mixed Print & Folded waste	3	1.5	-	-	-	-	-
DH,PV,Sudha & Mayura White cut Peel waste	2.5	0.6	0.4	-	0.5	-	-
White Reel ends including core DH,PV,Sudha & Mayura	12	3.5	0.75	1.4	1	2	2
DH,PV,Sudha & Mayura Reel wrappers/Misceleneous sweep/ Bale pattie waste	12	3	1	2.2	1	1	1
Sudha & Mayura Print waste & unsolds - Magazine	1	0.6	0.9	0.8	0.9	0.9	0
Misceleanous Tissue / Mixed White waste / Carton boxes	2	1	1	1	1	1	1

For clarification, **contact Procurement Head at 080-25880340.** Sealed Tenders may be addressed to Procurement Head and sent to the above address **within 7 days** from the date of this advertisement.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ಪ್ರಕಟಣೆ ಸಂಖ್ಯೆ: ಡಬ್ಲ್ಯೂಪಿಎಸ್/.ಎ2/ಇ–ಟೆಂಡರ್–05/ಸಿಆರ್–02/21–22 ದಿನಾಂಕ:21.06.2021

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

2021–22 ನೇ ಸಾಲಿನಲ್ಲಿ ಶಿವಮೊಗ್ಗ, ಸಾಗರ ಮತ್ತು ಮಂಗಳೂರು ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ #Survey and Demarcation of Notified Forests by Providing and Fixing RCC Pillars and Cairns" ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ.1,53,33,150/–ಗಳ ಕಾಮಗಾರಿಗಳಿಗೆ ಅಲ್ಪಾವಧಿ ಮರು ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ: 29.06.2021 ರ ಗಂಟೆ ಸಂಜೆ 04.00 ರೊಳಗಾಗಿ ಟೆಂಡರನ್ನು ಸಲ್ಲಿಸಬಹುದಾಗಿದೆ. ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785ನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–72/06/ಎಂಸಿಎ/21–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು
ಸಂಖ್ಯೆ : DCF/PR-495/2021-22 ದಿನಾಂಕ: 23.06.2021

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಸಮಸ್ತ ನಾಗರಿಕರ ಗಮನಕ್ಕೆ ತರುವುದೇನೆಂದರೆ, ಒಟ್ಟು ದೂರ 10.072 ಕಿ.ಮೀ. ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮೆಟ್ರೋ ಕಾಮಗಾರಿಗಾಗಿ ಅಡ್ಡ ಬರುತ್ತಿರುವ ಮರಗಳ (ಏರ್‌ಪೋರ್ಟ್ ಲೈನ್ ಮೆಟ್ರೋ ನಿರ್ಮಾಣದ ಕಾಮಗಾರಿಗೆ ಅಡ್ಡ ಬರುತ್ತಿರುವ ಮರಗಳು, ಕಸ್ತೂರಿ ನಗರದಿಂದ–ಕೆಂಪಾಪುರದವರೆಗೆ ಒಆರ್‌ಆರ್ ಲೈನ್ ಪ್ಯಾಕೇಜ್–1 ಹಂತ–2ಬಿ) ತೆರವಿಗಾಗಿ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತವು ಮನವಿ ಸಲ್ಲಿಸಿದ್ದು, ವಿವರಗಳು ಕೆಳಕಂಡಂತಿರುತ್ತವೆ.

ಯೋಜನೆಯ ಹೆಸರು	Construction of elevated structure (Viaduct & Stations) for a length of 10.072 Km (including 281 mtrs of Viaduct beyond Phase-2A) from Chainage 0.000 to Chainage 10072 and 8 No. of elevated stations viz. Kasturi Nagar, Horamavu, HRBR Layout, Kalyan Nagar, HBR Layout, Nagawara, Veerannapalya and Kempapura including 650m length of link line connectivity to Baiyappanahalli, road widening, Utility diversion and allied works of Bengaluru Metro Rail Project, Package-1, Phase-2B.
ಏಜೆನ್ಸಿಯ ಹೆಸರು	ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
ಮರ ತೆರವುಗೊಳಿಸುವ ಉದ್ದೇಶ	ಏರ್‌ಪೋರ್ಟ್ ಲೈನ್ ಮೆಟ್ರೋ ನಿರ್ಮಾಣದ ಕಾಮಗಾರಿಗೆ ಅಡ್ಡ ಬರುತ್ತಿರುವ ಮರಗಳು, ಕಸ್ತೂರಿ ನಗರದಿಂದ–ಕೆಂಪಾಪುರದವರೆಗೆ (ಒಆರ್‌ಆರ್ ಲೈನ್ ಪ್ಯಾಕೇಜ್–1 ಹಂತ–2ಬಿ)
ಯೋಜನೆ ಬರುತ್ತಿರುವ ಪ್ರದೇಶದ ನಿರ್ದೇಶಾಂಕಗಳು	(see table below)

Sl. No	Longitude (D M S)	Latitude (D M S)	Location
1	77° 39' 48.269"	12° 59' 51.3816"	ಕಸ್ತೂರಿನಗರದಿಂದ ಪ್ರಾರಂಭವಾಗುವ ಪ್ರದೇಶ
2	77° 36' 8.7284"	13° 2' 37.3489"	ಕೆಂಪಾಪುರದಲ್ಲಿ ಕೊನೆಗೊಳ್ಳುವ ಪ್ರದೇಶ

ಯೋಜನಾ ಪ್ರದೇಶದಲ್ಲಿ ಪ್ರಸ್ತುತ ಇರುವ ಮರಗಳು	1507 No's (Annexure-1)	ಮರಗಳ ವಿವರ, ಜಾತಿ, ಮರಗಳಿರುವ ಜಾಗ, ನಕಾಶೆಗಳ ವಿವರಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಒದಗಿಸಲಾಗಿದೆ. (www.bbmp.gov.in)
ಯೋಜನಾ ಪ್ರದೇಶದಲ್ಲಿ ತೆರವುಗೊಳಿಸಬೇಕಾದ ಮರಗಳು	1507 No's (Annexure-1)	
ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನ (ಸಾರ್ವಜನಿಕರು ನೇರವಾಗಿ/ಇ–ಮೇಲ್/ಅಂಚೆ ಮುಖಾಂತರ ಈ ಕೆಳಸಹಿದಾರರ ಕಛೇರಿಗೆ ಸಲ್ಲಿಸಬಹುದು)	ವಿಳಾಸ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಿಬಿಎಂಪಿ, ಎನ್.ಆರ್. ಸ್ಕ್ವೇರ್, ಬೆಂಗಳೂರು–560 002. E-mail Id:dcfbbmp12@gmail.com ದಾಖಲೆ ಪತ್ರಗಳನ್ನು ಕೆಳಸಹಿದಾರರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು.	
ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ	ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ. **ಸೂಚನೆ: ಆಕ್ಷೇಪಣೆಗಳು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು.**	

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್ 8(3)(vii) ಪ್ರಕಾರ ಸಲಹೆ/ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 3ನೇ ಮಹಡಿ, 1ನೇ ಘಟ್ಟ, 1 ನೇ ಹಂತ, ಬಿಟಿಎಂ ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029. ದೂರವಾಣಿ: 080 41106536
ಇ–ಮೇಲ್: kwbeebng@gmail.com

ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

KWB/EE/BNG/AE-1/Harohalli-UGD/Survey/454/2021-22 dtd: 24.06.2021 ಮತ್ತು ಇ–ಪ್ರೊಕ್ಯೂರ್‌ಮೆಂಟ್, ಇಂಡೆಂಟ್ ಸಂಖ್ಯೆ: 2977

ಕಾಮಗಾರಿಯ ವಿವರ: ಹಾರೋಹಳ್ಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಟೋಟಲ್ ಸ್ಟೇಷನ್ ಸರ್ವೆ ಕೈಗೊಳ್ಳುವುದು, ವಿಶ್ಲೇಷಣೆ, ಸಮಗ್ರ ವಿನ್ಯಾಸ, ನಕ್ಷೆ ಮತ್ತು ವಿವರವಾದ ಯೋಜನೆಯ ವರದಿ (ಡಿ.ಪಿ.ಆರ್) ತಯಾರಿಸುವ ಕಾರ್ಯ

ಟೆಂಡರ್‌ಗಿಟ್ಟ ಮೊತ್ತ : ರೂ.5,90,573/– (ಜಿ.ಎಸ್.ಟಿ ಹೊರತುಪಡಿಸಿ)

ಭದ್ರತಾ ಠೇವಣಿ: ಇಲ್ಲ **ಗುತ್ತಿಗೆ ಕಾಲಾವಧಿ:** 2 ತಿಂಗಳು

ಟೆಂಡರ್ ವಿವರ :

1) ಟೆಂಡರ್ ಪ್ರಾರಂಭ ದಿನಾಂಕ ಮತ್ತು ಸಮಯ 28.06.2021 ರ ಬೆಳಿಗ್ಗೆ 11.00 ಗಂಟೆಯ ನಂತರ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 12.07.2021 ರ ಸಂಜೆ 5.30ರ ವರೆಗೆ. 3) ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ 14.07.2021 ರ ಬೆಳಿಗ್ಗೆ 11.00ಗಂಟೆಯ ನಂತರ.

ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಅಭಿಯಂತರವರ ಕಛೇರಿ ದೂರವಾಣಿ 080–41106536 ಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ ವಿಭಾಗ, ಬೆಂಗಳೂರು.
ವಾ.ಸಾ.ಸಂ.ಇ/ಬೆಂ.ನಗರ/648/ಆಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುಭಾಷಿತ

ದುಃಖಿತರಾಗದಿರಿ. ಅತ್ಯಂತ ಹತಾಶ ಕ್ಷಣಗಳಲ್ಲಿಯೂ ಭರವಸೆದಾಯಕ ಸಂಗತಿಗಳು ಇರುತ್ತವೆ. ದಟ್ಟವಾದ ಮೋಡಗಳಿಂದಲೇ ಭಾರಿ ಮಳೆ ಸುರಿಯುವುದು ಎಂಬುದನ್ನು ಮರೆಯಬಾರದು.

–ರೂಮಿ

ಮೂರನೇ ಅಲೆ ಎದುರಿಸಲು ಸರ್ವ ಬಗೆಯಲ್ಲೂ ಸನ್ನದ್ಧರಾಗೋಣ

ದೇಶದಲ್ಲಿ ಕೊರೊನಾ ಸೋಂಕಿನ ಎರಡನೇ ಅಲೆಯ ಅಬ್ಬರ ಇಳಿದಿದೆ. ಲಾಕ್‌ಡೌನ್ ನಿರ್ಬಂಧಗಳು ಬಹುಮಟ್ಟಿಗೆ ತೆರವಾಗಿವೆ. ಕಚೇರಿ, ಕಾರ್ಖಾನೆ, ಅಂಗಡಿ-ಮುಂಗಟ್ಟುಗಳ ಬಾಗಿಲು ತೆರೆದು ಕೊಳ್ಳತೊಡಗಿವೆ. ಆರ್ಥಿಕ ಚಟುವಟಿಕೆಗಳು ಜೀವ ಪಡೆದುಕೊಳ್ಳತೊಡಗಿವೆ. ಕೋವಿಡ್ ಪ್ರಕರಣಗಳ ಸರಾಸರಿ ದೃಢ ಪ್ರಮಾಣ ಶೇಕಡ 5ಕ್ಕಿಂತ ಕೆಳಗೆ ಇಳಿದಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7 ಲಕ್ಷಕ್ಕಿಂತ ಕಡಿಮೆ ಇದೆ. ದಿನನಿತ್ಯ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಆಸುಪಾಸಿಗೆ ಬಂದಿದ್ದು, ಇದು ಮೂರು ತಿಂಗಳಲ್ಲೇ ಅತ್ಯಂತ ಕಡಿಮೆ. ಚೇತರಿಕೆಯ ಪ್ರಮಾಣವೂ ಹೆಚ್ಚಿದೆ. ಇವೆಲ್ಲ ಜನಸಮುದಾಯದ ಪಾಲಿಗೆ ಸಹಜವಾಗಿಯೇ ಸಮಾಧಾನದಂತೆ ಭಾಸವಾಗುತ್ತಿವೆ. ಹೊಸ ಭರವಸೆಗೆ ಕಾರಣವಾಗಿರುವ ಈ ಬೆಳವಣಿಗೆಗಳ ನಡುವೆಯೇ ಮೂರನೇ ಅಲೆಯ ಸಾಧ್ಯತೆ ಕುರಿತು ತಜ್ಞರು ಎಚ್ಚರಿಕೆಯ ಸಂದೇಶ ಹೊರಡಿಸಿದ್ದಾರೆ. ಆರು ವಾರಗಳಿಂದ ಎಂಟು ವಾರಗಳೊಳಗೆ ಮತ್ತೊಂದು ಅಲೆ ಅಪ್ಪಳಿಸಬಹುದು ಎಂದು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ನಿರ್ದೇಶಕ ಡಾ. ರಣದೀಪ್ ಗುಲೇರಿಯಾ ಎಚ್ಚರಿಸಿದ್ದಾರೆ. ಮತ್ತೊಂದು ಅಲೆ ಇನ್ನೂ ತೀವ್ರತರವಾಗಿಯೇ ರಾಜ್ಯದ ಮೇಲೆ ಎರಗಬಹುದು ಎಂದು ಮಹಾರಾಷ್ಟ್ರದ ಕೋವಿಡ್ ಕಾರ್ಯಪಡೆ ಹೇಳಿದೆ. ಎರಡನೇ ಅಲೆಯಲ್ಲಿ ಆಗಿರುವುದಕ್ಕಿಂತ ಹೆಚ್ಚಿನ ಸಾವು-ನೋವು ಸಂಭವಿಸಬಹುದು ಎಂದೂ ಹೇಳಿದೆ. ಇದನ್ನು ಆ ರಾಜ್ಯಕ್ಕೆ ಮಾತ್ರ ಅನ್ವಯ ಆಗುವಂತಹ ಎಚ್ಚರಿಕೆ ಎಂದೇನೂ ಭಾವಿಸಬೇಕಾಗಿಲ್ಲ.

ಸಾಂಕ್ರಾಮಿಕವು ನಿಯಂತ್ರಣಕ್ಕೆ ಒಳಪಟ್ಟಿದೆ ಎಂದು ಮೈಮರೆಯುವ ಸಮಯ ಇದಲ್ಲ. ಆರೋಗ್ಯ ಸೇವಾ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿ, ಲಸಿಕೆ ಆಂದೋಲನಕ್ಕೆ ವೇಗ ತುಂಬುವ ಕಾರ್ಯ ತುರ್ತಾಗಿ ಆಗಬೇಕು

ಸಂಭವನೀಯ ಮೂರನೇ ಅಲೆಯ ತೀವ್ರತೆಯನ್ನು ನಿಯಂತ್ರಿಸುವ ಅಥವಾ ಅದಕ್ಕೆ ಲಗಾಮು ಹಾಕುವಂತಹ ಸೌಕರ್ಯಗಳು ಮತ್ತು ವ್ಯವಸ್ಥೆ ಈಗಲೂ ದೇಶದಲ್ಲಿ ಇಲ್ಲ. ಸದ್ಯದ ಮಟ್ಟಿಗೆ ಕೋವಿಡ್ ಪ್ರತಿರೋಧಕ ಲಸಿಕೆಯೊಂದೇ ಭರವಸೆಯ ರಕ್ಷಾಕವಚ. ಆದರೆ, ದೇಶದಲ್ಲಿ ಎರಡು ಡೋಸ್ ಲಸಿಕೆ ಪಡೆದವರ ಪ್ರಮಾಣ ಇನ್ನೂ ಶೇಕಡ 4 ಮೀರಿಲ್ಲ. ಲಸಿಕೆ ನೀಡಿಕೆಯು ಈಗಿನ ವೇಗದಲ್ಲಿಯೇ ಮುಂದುವರಿದರೆ ಮುಂದಿನ ಕೆಲವು ವಾರಗಳಲ್ಲಿ ಭಾರಿ ಜಿಗಿತವನ್ನೇನೂ ನಿರೀಕ್ಷಿಸಲಾಗದು. ಇದರ ನಡುವೆ, ಕೊರೊನಾ ವೈರಾಣುವಿನ ರೂಪಾಂತರ ತಳಿಯೊಂದು ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಭಾರತದಲ್ಲಿ ಕೋವಿಡ್‌ನ ಎರಡನೇ ಅಲೆ ತೀವ್ರವಾಗಲು ಡೆಲ್ಟಾ ತಳಿಯ ವೈರಾಣು ಕಾರಣ ಎಂದು ತಜ್ಞರು ಹೇಳಿದ್ದಾರೆ. ಈಗ ಇದರ ರೂಪಾಂತರ ತಳಿಯಾದ 'ಡೆಲ್ಟಾ ಪ್ಲಸ್' ಭಾರತದ ಹಲವೆಡೆ ಕಾಣಿಸಿಕೊಂಡು ಜನರ ನೆಮ್ಮದಿ ಕದಡಿದೆ. ಇದು, ಅತ್ಯಂತ ಕ್ಷಿಪ್ರವಾಗಿ ಹರಡುವ ಸಾಮರ್ಥ್ಯ ಹೊಂದಿದೆ ಎಂಬುದು ಪರಿಣತರ ಅಭಿಪ್ರಾಯ. ಭಾರತದಲ್ಲಿ ಬುಧವಾರದ ವೇಳೆಗೆ 40ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿದ್ದವು. ಇದರಲ್ಲಿ ಅರ್ಧಕ್ಕೂ ಹೆಚ್ಚು ಪ್ರಕರಣಗಳು ನೆರೆಯ ಮಹಾರಾಷ್ಟ್ರದಲ್ಲಿ ಪತ್ತೆಯಾಗಿವೆ. ಮಧ್ಯಪ್ರದೇಶದಲ್ಲಿ ಒಟ್ಟು ಆರು ಹಾಗೂ ಕೇರಳದಲ್ಲಿ ಮೂರು ಪ್ರಕರಣಗಳು ಪತ್ತೆಯಾಗಿರುವ ಕಾರಣ, ಕಟ್ಟೆಚ್ಚರ ವಹಿಸುವಂತೆ ಈ ಮೂರೂ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ. ಕರ್ನಾಟಕದಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ತಲಾ ಒಂದು ಪ್ರಕರಣ ಪತ್ತೆಯಾಗಿದೆ. ನಮ್ಮ ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶದಲ್ಲಿ ಒಂದು ಮತ್ತು ತಮಿಳುನಾಡಿನಲ್ಲಿ ಮೂರು ಪ್ರಕರಣಗಳು ಪತ್ತೆಯಾಗಿವೆ. ಕೊರೊನಾಕ್ಕೆ ಸಂಬಂಧಿಸಿದ ದತ್ತಾಂಶಗಳು ಹೆಚ್ಚು ಪಾರದರ್ಶಕವಾಗಿರಬೇಕು. ಅಂಕಿಅಂಶಗಳನ್ನು ಅಡಗಿಸಿಡುವ ಪರಿಪಾಟ ಸಲ್ಲದು. ನಿಖರ ದತ್ತಾಂಶ ಇಲ್ಲದೇ ಹೋದರೆ ಸಾಂಕ್ರಾಮಿಕದ ವಿರುದ್ಧದ ಹೋರಾಟವು ಕಗ್ಗತ್ತಲಲ್ಲಿ ನಡೆಸಿದಂತಾಗುತ್ತದೆ.

ಕೊರೊನಾ ಅಬ್ಬರ ಇಳಿದಿರುವ ಈ ಸಂದರ್ಭದಲ್ಲಿ ಆರೋಗ್ಯ ಸೇವಾ ವಲಯದ ಮೇಲಿನ ಒತ್ತಡ ಕಡಿಮೆಯಾಗಿದೆ. ಈ ಸುಸಂದರ್ಭದ ಪ್ರತಿಕ್ಷಣವನ್ನೂ ಸರ್ಕಾರ ಸಾರ್ಥಕಪಡಿಸಿಕೊಳ್ಳಬೇಕು. ಸಾಂಕ್ರಾಮಿಕವು ನಿಯಂತ್ರಣಕ್ಕೆ ಒಳಪಟ್ಟಿದೆ ಎಂದು ಬೀಗುವ ಸಮಯ ಇದಲ್ಲ ಎಂಬುದನ್ನು ಅರಿಯಬೇಕು. ಆರೋಗ್ಯ ಸೇವಾ ಕ್ಷೇತ್ರದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಒತ್ತು ಕೊಡಬೇಕು. ಲಸಿಕೆ ಆಂದೋಲನಕ್ಕೆ ವೇಗ ತುಂಬುವುದರ ಜೊತೆಗೆ ವೈದ್ಯಕೀಯ ಆಮ್ಲಜನಕದ ಲಭ್ಯತೆ, ಔಷಧ, ಆಸ್ಪತ್ರೆಗಳಲ್ಲಿನ ಹಾಸಿಗೆ ಸಾಮರ್ಥ್ಯ ಹೆಚ್ಚಿಸಲು ತುರ್ತು ಕ್ರಮ ಜರುಗಿಸಬೇಕು. ಮಕ್ಕಳ ಆರೈಕೆಗೆ ಬೇಕಾದ ಸೌಕರ್ಯಗಳ ವೃದ್ಧಿಗೂ ಗಮನಹರಿಸಬೇಕು. ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಯ ಕೊರತೆ ತುಂಬಬೇಕು. ಸಮುದಾಯ ಶುಶ್ರೂಷಕ ಸಹಾಯಕ ಸೇವೆಗೆ ಸ್ವಯಂ ಸೇವಕರನ್ನು ಅಣಿಗೊಳಿಸುವ ದಿಸೆಯಲ್ಲಿ ಕೆಲವು ರಾಜ್ಯಗಳು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ. ಸೋಂಕು ಪ್ರಕರಣಗಳ ತ್ವರಿತ ಪತ್ತೆಗೆ ನಿಗಾ ವ್ಯವಸ್ಥೆಯನ್ನು ವಿಸ್ತರಿಸಬೇಕು ಮತ್ತು ಬಲಪಡಿಸಬೇಕು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಿಗಾ ಇರಿಸುವುದು ಅಗತ್ಯ. ಇದರಿಂದ ಸೋಂಕು ಹರಡುವಿಕೆಯನ್ನು ತಡೆಯಬಹುದು. ಸೋಂಕಿಗೆ ಬಹಳ ಬೇಗ ಈಡಾಗುವ ಸಾಧ್ಯತೆ ಹೆಚ್ಚಿರುವಂತಹ ಜನರ ಕುರಿತು ವಿಶೇಷ ಮುತುವರ್ಜಿ ವಹಿಸಬೇಕು. ಪರಿಹಾರ ನೀಡುವಿಕೆ ಮತ್ತು ಆದಾಯ ಮೂಲಕ್ಕೆ ಬೆಂಬಲವಾಗಿ ಒದಗಿಬರುವುದನ್ನು ಕೋವಿಡ್ ನಿರ್ವಹಣೆಯ ಭಾಗವಾಗಿ ಪರಿಗಣಿಸಬೇಕು. ಕೋವಿಡ್ ಮಾರ್ಗಸೂಚಿ ಪಾಲನೆ ವಿಚಾರದಲ್ಲಿ ಸಣ್ಣ ನಿರ್ಲಕ್ಷ್ಯಕ್ಕೂ ಅವಕಾಶ ಕೊಡಬಾರದು. ಕೊರೊನಾದ ಎರಡನೇ ಅಲೆಯನ್ನು ಎದುರಿಸುವ ಸಂದರ್ಭದಲ್ಲಿ ಉಂಟಾದ ಗೊಂದಲ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ವೈರಾಣು ಹೊರಟುಹೋಗಿಲ್ಲ. ಪುನಃ ಬಾಗಿಲು ಬಡಿಯಲು ಅದಕ್ಕೆ ಅವಕಾಶ ಕಲ್ಪಿಸಬಾರದು. ಹಾಗಂತ ಪಣ ತೊಡೋಣ.

ದಿನದ ಟ್ವೀಟ್

ಸಮಾನತೆಗೆ ಅಡಿಪಾಯ

ಲಿಂಗಸಮಾನತೆಯ ಸಂಸ್ಕೃತಿಯನ್ನು ಮಕ್ಕಳ ಮನಸ್ಸಿನಾಳಕ್ಕೆ ಇಳಿಸುವ ಸಲುವಾಗಿ ಕೇರಳದ ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗುವುದು. ಮಹಿಳೆಯರಿಗೆ ಅಗೌರವ ತೋರುವ ಪದಗಳು ಮತ್ತು ನುಡಿಗಟ್ಟುಗಳನ್ನು ತೆಗೆದುಹಾಕಲಾಗುವುದು. ನಮ್ಮ ಶಾಲಾ ಕಾಲೇಜುಗಳನ್ನು ಲಿಂಗಸಮಾನತೆ ಮತ್ತು ಸಮಾನ ಹಕ್ಕುಗಳನ್ನು ಸಾಕಾರಗೊಳಿಸುವುದಕ್ಕೆ ಪೂರಕವಾದ ತಾಣಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು.

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

ಸಂಕಷ್ಟದಲ್ಲಿ ಒಗ್ಗಟ್ಟಿರಲಿ



#OneNationManyGovernments ಭಾರತವು 40ಕ್ಕಿಂತ ಹೆಚ್ಚು ಪಕ್ಷಗಳ ನೇತೃತ್ವದ ವಿವಿಧ ಸರ್ಕಾರಗಳನ್ನು ಹೊಂದಿದೆ. ಕೋವಿಡ್, ಆರ್ಥಿಕ ಬಿಕ್ಕಟ್ಟಿನಂತಹ ಸಂದರ್ಭಗಳಲ್ಲಿಯೂ ಇವುಗಳ ನಡುವೆ ಸಮನ್ವಯ ಸಾಧ್ಯವಾಗಲಿಲ್ಲ. 1990ರಲ್ಲಿ ಆರಂಭವಾದ ಅಂತರರಾಜ್ಯ ಮಂಡಳಿಯು 2019ರವರೆಗೂ– ಮೋದಿ, ಶಾ ಅವರ ಅಧಿಕಾರಾವಧಿಯಲ್ಲಿಯೂ– ಆಗಾಗ್ಗೆ ಸಭೆ ಸೇರುತ್ತಿತ್ತು. ಬಿಕ್ಕಟ್ಟು ನಿರ್ವಹಣೆಗೆ ಈ ಮಂಡಳಿಯ ನೆರವು ಪಡೆಯಬೇಕು.

ತಾರಾ ಕೃಷ್ಣಸ್ವಾಮಿ, ಲೇಖಕಿ

50 ವರ್ಷಗಳ ಹಿಂದೆ

ಶುಕ್ರವಾರ, 25-6-1971

• ಧಾರವಾಡದಲ್ಲಿ ಮರ ಉರುಳಿ ಮೂವರು ವಿದ್ಯಾರ್ಥಿಗಳ ಸಾವು

ಧಾರವಾಡ, ಜೂನ್ 24– ಇಂದು ಇಲ್ಲಿನ ಕರ್ನಾಟಕ ಆರ್ಟ್ಸ್ ಕಾಲೇಜು ಮುಂದುಗಡೆ ಇದ್ದ ದೊಡ್ಡ ಮರ ಇದ್ದಕ್ಕಿದ್ದಂತೆ ಸದ್ದಿಲ್ಲದೆ ಉರುಳಿದ ಪ್ರಯುಕ್ತ ಮರದ ಕೆಳಗಿದ್ದ ಮೂವರು ವಿದ್ಯಾರ್ಥಿಗಳು ಮೃತರಾದರು.

ಇತ್ತೀಚೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಈ ವಿದ್ಯಾರ್ಥಿಗಳು ಆರ್ಟ್ಸ್ ಕಾಲೇಜಿಗೆ ಸೇರಲು ಬಂದಿದ್ದು ಮರದ ಕೆಳಗೆ ಕುಳಿತಿದ್ದರು.

ಮರದ ಕೆಳಗೆ ಸಿಕ್ಕಿಬಿದ್ದವರಲ್ಲಿ ಗುರಯ್ಯ ಗದಿಗಯ್ಯ ಸುಬ್ಬಾಪುರ ಮಠ ಎಂಬ ವಿದ್ಯಾರ್ಥಿ ಆಸ್ಪತ್ರೆಗೆ ಸಾಗಿಸುವಾಗ, ವೀರಪ್ಪ-ಬಸಪ್ಪ ಅವರು ಆಸ್ಪತ್ರೆಗೆ ಸೇರಿಸಿದ ಕೂಡಲೇ ಮೃತರಾದರು. ತೀವ್ರವಾಗಿ ಗಾಯಗೊಂಡ ಮತ್ತೊಬ್ಬ ವಿದ್ಯಾರ್ಥಿ ಎಸ್.ಎನ್. ಪಾಟೀಲ್ (ನಿವೃತ್ತ ಡಿಎಸ್‌ಪಿ ಎನ್.ಎಂ. ಪಾಟೀಲ್ ಅವರ ಪುತ್ರ) ಅವರು ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಮೃತರಾದರು.

• ಕರಾಚಿಗೆ ಅಮೆರಿಕ ಶಸ್ತ್ರಾಸ್ತ್ರ ನೌಕೆ ಬರದಂತೆ ತಡೆಯಲು ಸಂಸತ್ತಿನಲ್ಲಿ ಆಗ್ರಹ

ನವದೆಹಲಿ, ಜೂನ್ 24– ಪಾಕಿಸ್ತಾನಕ್ಕೆ ಅಮೆರಿಕ ಇತ್ತೀಚೆಗೆ ಶಸ್ತ್ರಾಸ್ತ್ರ ರವಾನಿಸಿದುದನ್ನು ಸಂಸತ್ತಿನ ಎರಡು ಸದನಗಳಲ್ಲೂ ಸದಸ್ಯರು ಇಂದು ಕಟುವಾಗಿ ಖಂಡಿಸಿದರಲ್ಲದೆ ಮಾರಕ ಶಸ್ತ್ರಾಸ್ತ್ರಗಳನ್ನು ಹೊತ್ತು ನ್ಯೂಯಾರ್ಕಿನಿಂದ ಪಾಕಿಸ್ತಾನದತ್ತ ಹೊರಟಿರುವ ಎರಡು ಪಾಕಿಸ್ತಾನಿ ಹಡಗುಗಳನ್ನು ಮಾರ್ಗದಲ್ಲಿ ತಡೆಯುವಂತೆ ಆಗ್ರಹಪಡಿಸಿದರು.

ಬಾಂಗ್ಲಾ ದೇಶದಲ್ಲಿ ಪಾಕಿಸ್ತಾನ ಸೇನೆಯು ನಡೆಸಿರುವ ನರಮೇಧಕ್ಕೆ ಅಮೆರಿಕ ಒತ್ತಾಸೆ ಕೊಡುತ್ತಿದೆಯೆಂದೂ ಸದಸ್ಯರು ಆಪಾದಿಸಿದರು.

ತುರ್ತು ಪರಿಸ್ಥಿತಿಯ ಪರಿಣಾಮವನ್ನು ಮರೆಮಾಚುವ ಯಾವುದೇ ಯತ್ನವನ್ನು ವಿರೋಧಿಸಬೇಕು

ಮರೆಯಬಾರದು, ಕ್ಷಮಿಸಲೂ ಆಗದು!

ಸೂರ್ಯ- ನಮಸ್ಕಾರ

ಎ. ಸೂರ್ಯ ಪ್ರಕಾಶ್

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗಿನಿಂದಲೂ ದೇಶದಲ್ಲಿ 'ಅಘೋಷಿತ ತುರ್ತು ಪರಿಸ್ಥಿತಿ' ಇದೆ ಎಂದು ಅವರ ವಿರೋಧಿಗಳು ಮತ್ತೆ ಮತ್ತೆ ಹೇಳುತ್ತಾರೆ. 1975ರ ಜೂನ್ 25ರಿಂದ 21 ತಿಂಗಳ ಕಾಲ ಜಾರಿಯಲ್ಲಿದ್ದ, ಇಂದಿರಾ ಗಾಂಧಿ ಅವರು ಜಾರಿಗೊಳಿಸಿದ ತುರ್ತು ಪರಿಸ್ಥಿತಿಯನ್ನು ಕಂಡವರಿಗೆ, ಅದರ ವಿರುದ್ಧ ಹೋರಾಡಿದವರಿಗೆ, ಈಗಿನ ಪರಿಸ್ಥಿತಿಯನ್ನು ಅಂದಿನ ಪರಿಸ್ಥಿತಿ ಜೊತೆ ಹೋಲಿಸುವುದೇ ಅಸಹ್ಯವೆಂದು ಅನಿಸುತ್ತದೆ. ಅಷ್ಟೇ ಅಲ್ಲ, ಇಂದಿರಾ ಗಾಂಧಿ ಅವರ ಸರ್ವಾಧಿಕಾರವನ್ನು ಎದುರಿಸಿ ನಿಂತು, ಸಂವಿಧಾನ ಮತ್ತು ನಮ್ಮ ಪ್ರಜಾತಾಂತ್ರಿಕ ಜೀವನ ಕ್ರಮದ ಪುನರ್‌ಸ್ಥಾಪನೆಗೆ ಧೈರ್ಯದಿಂದ ಹೋರಾಡಿದ ಲಕ್ಷಾಂತರ ಜನರ ತ್ಯಾಗವನ್ನು ಕುಬ್ಜಗೊಳಿಸಿದಂತೆಯೂ ಆಗುತ್ತದೆ.

ಹಲವರು ಬಣ್ಣಿಸಿರುವಂತೆ ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟವು ನಿಜಕ್ಕೂ 'ಎರಡನೆಯ ಸ್ವಾತಂತ್ರ್ಯ ಹೋರಾಟ'. ಏಕೆಂದರೆ, ತುರ್ತು ಪರಿಸ್ಥಿತಿ ಹೇರಿಯೂ ತಪ್ಪಿಸಿಕೊಳ್ಳಲು ಇಂದಿರಾ ಅವರಿಗೆ ಅವಕಾಶ ನೀಡಿದ್ದಿದ್ದರೆ ದೇಶದ ಪ್ರಜಾತಂತ್ರವು ಶಾಶ್ವತವಾಗಿ ಹಳಿತಪ್ಪಿರುತ್ತಿತ್ತು. ಇಂದಿರಾ ಗಾಂಧಿ ಅವರ ಸರ್ವಾಧಿಕಾರದ ಕರಾಳ ಛಾಯೆಯನ್ನು ವಿವರಿಸುವ ನೂರಾರು ನಿದರ್ಶನಗಳು ಇವೆ. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಒಂದು ಪ್ರಸಂಗವು ಆಗ ಆಡಳಿತ ನಡೆಸುತ್ತಿದ್ದುದು ಸರ್ವಾಧಿಕಾರಿ ಸರ್ಕಾರವಷ್ಟೇ ಅಲ್ಲ ಅದು ಫ್ಯಾಸಿಸ್ಟ್ ಸರ್ಕಾರವೂ ಹೌದು ಎಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಿತು.

ಹೇಬಿಯಸ್ ಕಾರ್ಪಸ್ ಪ್ರಕರಣ ಎಂದೇ ಖ್ಯಾತವಾಗಿರುವುದಕ್ಕೆ ಸಂಬಂಧಿಸಿದ್ದು ಇದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಇದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿತ್ತು. ನ್ಯಾಯಮೂರ್ತಿಗಳಾದ ಎ.ಎನ್. ರೇ (ಸಿಜೆಐ), ಎಚ್.ಆರ್. ಖನ್ನಾ, ಎಚ್.ಎಂ. ಬೇಗ್, ವೈ.ವಿ. ಚಂದ್ರಚೂಡ್ ಮತ್ತು ಪಿ.ಎನ್. ಭಗವತಿ ಅವರಿದ್ದ ನ್ಯಾಯಪೀಠ ಈ ವಿಚಾರಣೆ ನಡೆಸಿತ್ತು. ತುರ್ತು ಪರಿಸ್ಥಿತಿ ಘೋಷಣೆಯಾದ ನಂತರದಲ್ಲಿ ರಾಷ್ಟ್ರಪತಿಯವರು, ಸರ್ಕಾರದ ನಿರ್ದೇಶನ ಆಧರಿಸಿ ಜೂನ್ 27ರಂದು ಆದೇಶವೊಂದನ್ನು ಹೊರಡಿಸಿದರು. ಸಂವಿಧಾನ ನೀಡಿರುವ ಕೆಲವು ಮೂಲಭೂತ ಹಕ್ಕುಗಳನ್ನು ಅಮಾನತಿನಲ್ಲಿ ಇರಿಸುವ ಆದೇಶ ಅದು. ಕಾನೂನಿನ ಎದುರು ಎಲ್ಲರೂ ಸಮಾನರು (ಸಂವಿಧಾನದ 14ನೆಯ ವಿಧಿ), ಜೀವಿಸುವ ಸ್ವಾತಂತ್ರ್ಯದಂತಹ (21ನೆಯ ವಿಧಿ) ಮೂಲಭೂತ ಹಕ್ಕುಗಳು ಕೂಡ ಅಮಾನತು ಆದವು. ಆಂತರಿಕ ಭದ್ರತೆಯ ನಿರ್ವಹಣೆ ಕಾಯ್ದೆಯ (ಮೀಸಾ) ಅಡಿಯಲ್ಲಿ ಬಂಧಿತರಾಗಿದ್ದವರು, ಈ ಆದೇಶವು ಸಂವಿಧಾನದ ಚೌಕಟ್ಟನ್ನೂ ಮೀರಿದ್ದು, ಇದನ್ನು ರದ್ದುಪಡಿಸಬೇಕು ಎಂದು ವಾದಿಸಿದರು.

ಈ ಪ್ರಕರಣದ ವಿಚಾರಣೆ ವೇಳೆ ಅಂದಿನ ಅಟಾರ್ನಿ ಜನರಲ್ ನೀರೆನ್ ಡೇ ಅವರು, 'ತುರ್ತು ಪರಿಸ್ಥಿತಿ ಜಾರಿಯಲ್ಲಿರುವಷ್ಟು ಕಾಲ ಯಾವ ಪ್ರಜೆಯೂ ಸಂವಿಧಾನದ 21ನೆಯ ವಿಧಿಯು ನೀಡಿರುವ ಹಕ್ಕುಗಳ ಜಾರಿಗೆ ಆಗ್ರಹಿಸಿ ನ್ಯಾಯಾಲಯದ ಕದ ತಟ್ಟುವಂತಿಲ್ಲ' ಎಂದು ವಾದಿಸಿದರು. ಇಂತಹ ವಾದ ಕೇಳಿದಾಗ ಪ್ರಜಾತಂತ್ರದ ಪರ ಇರುವ ಯಾರಿಗೇ ಆದರೂ ಆಘಾತವಾಗುತ್ತಿತ್ತು. ಆದರೆ, ನ್ಯಾಯಮೂರ್ತಿ ಖನ್ನಾ ಅವರನ್ನು ಹೊರತುಪಡಿಸಿ ಇತರ ನಾಲ್ವರು ನ್ಯಾಯಮೂರ್ತಿಗಳು ಅಟಾರ್ನಿ ಜನರಲ್ ವಾದವನ್ನು ಮೌನವಾಗಿ ಆಲಿಸಿದರು. ಆ ಸಂದರ್ಭದ ಬಗ್ಗೆ ನ್ಯಾಯಮೂರ್ತಿ ಖನ್ನಾ ಅವರು ತಮ್ಮ ಆತ್ಮಕಥೆಯಲ್ಲಿ (Neither Roses nor Thorns) ಬರೆದಿದ್ದಾರೆ. ಮಾನವ ಹಕ್ಕುಗಳ ಬಗ್ಗೆ ಬಹಳ ಮಾತನಾಡುತ್ತಿದ್ದ ತಮ್ಮ ಕೆಲವು ಸಹೋದ್ಯೋಗಿಗಳು 'ನಾಲಿಗೆ ಕಟ್ಟಿದಂತೆ ಕುಳಿತಿದ್ದರು', 'ಅವರ ಮೌನವು ಭಯ ಮೂಡಿಸುವಂತೆ ಇತ್ತು' ಎಂದು ಹೇಳಿದ್ದಾರೆ. ನೀರೆನ್ ಡೇ ವಾದಕ್ಕೆ ಅವರು ಪ್ರತಿಕ್ರಿಯಿಸದೆ ಇದ್ದುದು, ಬಹುಮತವು ಯಾವ ಕಡೆ ಇದೆ ಎಂಬುದನ್ನು ಸೂಚಿಸುವಂತಿತ್ತು. ಹೀಗಿದ್ದರೂ ಖನ್ನಾ ಅವರು ಅಟಾರ್ನಿ ಜನರಲ್ ಅವರ ವಾದಕ್ಕೆ ವಿರುದ್ಧವಾಗಿ ಪ್ರಶ್ನೆ ಹಾಕಲು ನಿರ್ಧರಿಸಿದರು. ನ್ಯಾಯಮೂರ್ತಿ ಖನ್ನಾ ಅವರು, ನೀರೆನ್ ಡೇ ಅವರನ್ನು ಪ್ರಶ್ನಿಸಿದರು. 'ಪೊಲೀಸ್ ಅಧಿಕಾರಿಯೊಬ್ಬ ವೈಯಕ್ತಿಕ ದ್ವೇಷದಿಂದಾಗಿ ಇನ್ನೊಬ್ಬನನ್ನು ಕೊಂದರೆ ನ್ಯಾಯ ಸಿಗುತ್ತದೆಯೇ' ಎಂದು ಕೇಳಿದರು. ಇದಕ್ಕೆ ನೀರೆನ್ ಡೇ ಉತ್ತರ ಸ್ಪಷ್ಟವಾಗಿತ್ತು ಎಂದು ಖನ್ನಾ ನೆನಪಿಸಿಕೊಂಡಿದ್ದಾರೆ. 'ಇಂತಹ ಪ್ರಕರಣಗಳಲ್ಲಿ, ತುರ್ತು ಪರಿಸ್ಥಿತಿ ಇರುವಷ್ಟು ಕಾಲ ನ್ಯಾಯಾಂಗದ ಮೂಲಕ ನ್ಯಾಯ ಕೇಳುವಂತಿಲ್ಲ' ಎಂದು ಉತ್ತರಿಸಿದರು ಡೇ! ಅಲ್ಲದೆ, 'ಈ ಮಾತು ನಿಮ್ಮ ಆತ್ಮಸಾಕ್ಷಿಯನ್ನು ಕಲಕಬಹುದು. ನನ್ನ ಆತ್ಮಸಾಕ್ಷಿಯನ್ನು ಕಲಕಿದೆ ಇದು. ಆದರೆ, ಆ ವಿಚಾರವಾಗಿ ನ್ಯಾಯಾಲಯದಲ್ಲಿ ಯಾವುದೇ ವಿಚಾರಣೆ ನಡೆಯುವಂತಿಲ್ಲ' ಎಂದು ಅವರು ಉತ್ತರಿಸಿದರು.

ಇದು ಅಟಾರ್ನಿ ಜನರಲ್ ಅವರ ಆತ್ಮಸಾಕ್ಷಿಗೆ ಆಘಾತ ಉಂಟುಮಾಡಿದ್ದರೂ, ಅದು ನ್ಯಾಯಪೀಠದ ಬಹುತೇಕರ ಆತ್ಮಸಾಕ್ಷಿಯನ್ನು ಕಲಕಲಿಲ್ಲ. ಸಿಜೆಐ ರೇ, ನ್ಯಾಯಮೂರ್ತಿಗಳಾದ ಬೇಗ್, ಚಂದ್ರಚೂಡ್ ಮತ್ತು ಭಗವತಿ ಅವರು, ಜೀವಿಸುವ ಸ್ವಾತಂತ್ರ್ಯವನ್ನು ಅಮಾನತಿನಲ್ಲಿ ಇರಿಸುವ ಸರ್ಕಾರದ ಆದೇಶವನ್ನು ಎತ್ತಿಹಿಡಿದರು. ಬಂಧಿತರಿಗೆ 'ಒಳ್ಳೆಯ ಆಹಾರ ಕೊಡಲಾಗುತ್ತದೆ, ಚೆನ್ನಾಗಿ ನೋಡಿಕೊಳ್ಳಲಾಗುತ್ತದೆ. ಅವರಿಗೆ ಸರಿಸುಮಾರಾಗಿ ಮಾತೃ ಸಮಾನ ಕಾಳಜಿ ತೋರಲಾಗುತ್ತದೆ' ಎಂದು ನ್ಯಾಯಮೂರ್ತಿ ಬೇಗ್ ಹೇಳಿದ್ದರು.

ಅಂದರೆ, ತುರ್ತು ಪರಿಸ್ಥಿತಿ ಎನ್ನುವುದು ಈ ರೀತಿ ಇರುತ್ತದೆ. ದೇಶದ ಪ್ರಜೆಗಳು ತಮ್ಮ ಮೂಲಭೂತ ಹಕ್ಕಾಗಿರುವ ಜೀವಿಸುವ ಸ್ವಾತಂತ್ರ್ಯ ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದರು. ದುರದೃಷ್ಟದ ಸಂಗತಿಯೆಂದರೆ, ಸುಪ್ರೀಂ ಕೋರ್ಟ್ ಇದಕ್ಕೆ ಅನುಮೋದನೆ ನೀಡಿತು! ಇದರ ಅರ್ಥವೇನು ಅಂದರೆ, ತುರ್ತು ಪರಿಸ್ಥಿತಿಯು ಅಧಿಕೃತ ಫ್ಯಾಸಿಸ್ಟ್ ಆಡಳಿತದ ಎಲ್ಲ ಗುಣಲಕ್ಷಣಗಳನ್ನು ಹೊಂದಿತ್ತು. ಹಾಗಾಗಿ, ಪ್ರಧಾನಿ ಮತ್ತು ಅವರ ಸಂಪುಟದ ಸಹೋದ್ಯೋಗಿಗಳ ವಿರುದ್ಧ ಕೆಲವು ನಾಗರಿಕರು, ಕೆಲವು ರಾಜಕಾರಣಿಗಳು ಪ್ರತಿದಿನವೂ ಮಾತು ಮತ್ತು ಬರಹಗಳ ಮೂಲಕ ದಾಳಿ ನಡೆಸುವುದು ಹಾಸ್ಯಾಸ್ಪದ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ತಮಗೆ ತೋಚಿದಂತೆ ಮಾತನಾಡುತ್ತಿದ್ದಾರೆ– ಅಲ್ಲಿ ಯಾವ ಸಭ್ಯತೆಯೂ ಇಲ್ಲವಾಗಿದೆ.

ಈಗ ಮತ್ತೆ ಹೇಬಿಯಸ್ ಕಾರ್ಪಸ್ ಅರ್ಜಿಯ ಕಡೆ ಮರಳೋಣ. ಇಂದಿರಾ ಗಾಂಧಿ ಅವರು ನ್ಯಾಯಮೂರ್ತಿ ಖನ್ನಾ ಅವರ ಸೇವಾ ಹಿರಿತನ ಕಡೆಗಣಿಸಿ, ನ್ಯಾಯಮೂರ್ತಿ ಬೇಗ್ ಅವರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿ ನೇಮಕ ಮಾಡಿದರು. ನ್ಯಾಯಮೂರ್ತಿಗಳಾದ ಚಂದ್ರಚೂಡ್ ಹಾಗೂ ಭಗವತಿ ಅವರೂ ದೇಶದ ಸುಪ್ರೀಂ ಕೋರ್ಟ್‌ನ ಅತ್ಯಂತ ಉನ್ನತ ಹುದ್ದೆಯನ್ನು ಅಲಂಕರಿಸಿದರು.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಇದ್ದವರ ಪಾಲಿಗೆ, ಅದರ ವಿರುದ್ಧ ಹೋರಾಟ ನಡೆಸಿದ್ದವರ ಪಾಲಿಗೆ ಆ ಕಾಲವು ಇದ್ದಿದ್ದು ಹೀಗೆ. ಇತರ ಹಕ್ಕುಗಳ ಬಗ್ಗೆ ಮಾತನಾಡುವುದು ಬದಿಗಿರಲಿ, ಅವರಿಗೆ ಜೀವಿಸುವ ಸ್ವಾತಂತ್ರ್ಯವೂ ಇರಲಿಲ್ಲ. ಹಾಗಾಗಿ, ತುರ್ತು ಪರಿಸ್ಥಿತಿಯ ಪರಿಣಾಮವನ್ನು ಮರೆಮಾಚುವ ಅಥವಾ ಅದರ ಕೆಟ್ಟ ಪರಿಣಾಮಗಳು ಕಡಿಮೆ ಎಂಬಂತೆ ಬಿಂಬಿಸುವ ಯಾವುದೇ ಯತ್ನವನ್ನು ವಿರೋಧಿಸಬೇಕು. ನಾವು ನಮ್ಮ ಪ್ರಜಾತಾಂತ್ರಿಕ ಹಾಗೂ ಸಾಂವಿಧಾನಿಕ ಆರೋಗ್ಯದ ಬಗ್ಗೆ ಕಾಳಜಿ ಹೊಂದಿದ್ದೇವೆ ಎಂದಾದರೆ ಈ ಕೆಲಸ ಮಾಡಬೇಕು.



ಚುರುಮುರಿ

ಗುಂಪಿನಲ್ಲಿ ಗೋವಿಂದ

• ಕೆ.ವಿ.ರಾಜಲಕ್ಷ್ಮಿ

ಮನೆಯಲ್ಲಿ ಬಿಗುವಿನ ವಾತಾವರಣ. ಪರೀಕ್ಷೆ ರಹಿತ, ಸಹಿತ ಉತ್ತೀರ್ಣ, ಗ್ರೇಡ್ ಕುರಿತು ಚರ್ಚೆ.

'ನಮಗೂ ಪರೀಕ್ಷೆ ಬರೆಸದೆಯೇ ಪ್ರಮೋಟ್ ಮಾಡಬೇಕಿತ್ತು. ಪಿಯು ಇನ್‌ಕಂಪ್ಲೀಟ್ ಬದಲಿಗೆ ಡಿಗ್ರಿಗೆ ಸೇರಿ ಬ್ರ್ಯಾಕೆಟ್‌ನಲ್ಲಿ ಹಾಕ್ಕೋಬಹುದಿತ್ತು, ಸ್ಟೇಟಸ್ ಚೇಂಜ್ ಆಗ್ತಿತ್ತು' ನನ್ನವಳ ಸಂಕಟ.

'ಆಗ ನನಗಿಂತ ಬೆಟರ್ ಬಕರಾ ಸಿಕ್ತಿದ್ನಾ?' ಛೇಡಿಸಿದೆ.

'ನೀವೇ ಬೆಸ್ಟ್ ಅನ್ನಿಸಿತ್ತು ನಮಗೆ, ಆ ಕಾಲಕ್ಕೆ' ಅತ್ತೆ ನಕ್ಕರು. ನಾನು ತೆಪ್ಪಗಾದೆ.

'ಈ ಬಾರಿ ಎಸ್‌ಎಸ್‌ಎಲ್‌ಸಿಗೆ ಎರಡೇ ಪೇಪರ್, ಅದೂ ಬಹು ಆಯ್ಕೆ ಪ್ರಶ್ನೆಗಳು...'

'ಗೊತ್ತಿರೋದಕ್ಕೆ ಸರಿಯಾದ ಉತ್ತರ, ಉಳಿದವಕ್ಕೆ ಇಂಕಿ-ಪಿಂಕಿ-ಪಾಂಕಿ ಲೆಕ್ಕದಲ್ಲಿ ಆಯ್ಕೆ ಮಾಡಿದರೆ ಆಯ್ತು!' ಪುಟ್ಟಿ ಕಣ್ಣರಳಿಸಿದಳು.

'ಯಾರನ್ನೂ ಫೇಲ್ ಮಾಡೋಲ್ಲ, ಪರೀಕ್ಷೆಗೆ ಕುಳಿತರೆ ಸಾಕು, ಗುಂಪಿನಲ್ಲಿ ಗೋವಿಂದ' ನಾನೆಂದೆ.

'ಹೋಗ್ಲಿ ಬಿಡಿ ಪರಿಸ್ಥಿತಿ ಹಾಗಿದೆ. ಈ ಕೊರೊನಾ ಮನುಷ್ಯನಿಗೆ ಏನೆಲ್ಲಾ ರೀತಿ ಪರೀಕ್ಷೆಗಳನ್ನು ಇಡ್ತಿದೆ ನೋಡಿ. ಅದನ್ನು ಮೀರಿ ಮುಂದುವರಿಯಬೇಕು' ಅತ್ತೆಯ ಶಾಂತನುಡಿ.

'ಅಪ್ಪಾ, ಪರೀಕ್ಷೆ ಬರೆಯೋವರಿಗೆಲ್ಲ ಲಸಿಕೆ ಕಡ್ಡಾಯ ಅಂದ್ರೆ ಒಳ್ಳೇದು... 18ರ ಮೇಲಿರೋ ನಮ್ಮ ವರ್ಗಕ್ಕೆ ಲಸಿಕೆ ಮರೀಚಿಕೆ ಆಗಿದೆ'.

'ಇನ್ನೇನ್ ಮತ್ತೆ ಬೆಳಕು ಹರಿಯೋಕ್ಕೆ ಮೊದಲೇ ಕ್ಯೂ ನಿಂತರೂ ಸರದಿ ಬರುವ ಮೊದಲೇ ಲಸಿಕೆ ಖಾಲಿ. ತಲೆಸುತ್ತು, ಜ್ವರ ಬಂತು, ಲಸಿಕೆ ಪರಿಣಾಮವಲ್ಲ... ಬಿಸಿಲಲ್ಲಿ ಗಂಟೆಗಟ್ಟಲೆ ನಿಂತಿದ್ದಕ್ಕೆ' ನನ್ನವಳ ಸಪೋರ್ಟು. 'ನಿಮ್ ಫ್ರೆಂಡ್‌ಗೆ ಹೇಳಿ ಏನಾದ್ರೂ ಮಾಡಬಾರದಾ?' ಅವಳ ಮಾತು ಮುಗಿಯುವಲ್ಲಿಗೆ ಕಂಠಿ ಪ್ರತ್ಯಕ್ಷ.

ಸಮಸ್ಯೆ ತಿಳಿಯುತ್ತಲೇ, 'ಅದಕ್ಕೇನಂತೆ, ನಮ್ಮ ಬಾಸ್ ಅಪಾರ್ಟ್‌ಮೆಂಟಲ್ಲಿ ನಾಳೆ ಲಸಿಕೆ ಹಾಕ್ತಾರೆ. ಇವತ್ತು ಎಷ್ಟು ಮಂದಿಗೆ ಅನ್ನೋ ಲಿಸ್ಟ್ ಕೊಡಬೇಕು. ನಾನೇ ಸಹಾಯಕ, ಶ್ರೀಮತಿನೂ ಅಲ್ಲೇ ಹಾಕಿಸ್ಕೊಳ್ತಿದ್ದಾಳೆ, ನಿಮ್ಮದೂ ಕೊಡಿ. ಗುಂಪಿನಲ್ಲಿ ಗೋವಿಂದ ಅನ್ನಿಸಿಬಿಟ್ಟರಾಯ್ತು...' ಕಂಠಿ ಆಕಳಿಸಿದ ಮೈಮುರಿಯುತ್ತ.

ಚರ್ಚೆ

ಬ್ರಾಹ್ಮಣ್ಯ: ಪ್ರಶ್ನೆ ಮತ್ತು ಪರಿಹಾರ

'ಸಮಾಜಶಾಸ್ತ್ರೀಯ ಪರಿಭಾಷೆಯನ್ನು ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಅನ್ವಯಿಸಿಕೊಂಡು ಅರ್ಥಮಾಡಿಕೊಳ್ಳುವುದೇ ಸಂಕುಚಿತ ನೋಟ'

ಜಾತಿ ತಾರತಮ್ಯ ಧೋರಣೆಗಳನ್ನು 'ಬ್ರಾಹ್ಮಣ್ಯ' ಎಂಬ ಹೆಸರಿನಿಂದ ಕರೆದಾಗ ಅದು ಬ್ರಾಹ್ಮಣರ ನಿಂದನೆಯಾಗುತ್ತದೆಯೇ ಎಂಬ ಪ್ರಶ್ನೆ ವಿಚಿತ್ರವಾಗಿದೆ. ಇಂದು ಕುರುಬ, ಕೊರಮ, ವಡ್ಡ, ಕ್ಷೌರಿಕ ಮುಂತಾದ ಎಲ್ಲ ಜಾತಿ, ವೃತ್ತಿ ವಾಚಕ ಶಬ್ದಗಳೂ ನಿಂದನಾತ್ಮಕ ಶಬ್ದಗಳಾಗಿ ಪರಿಣಮಿಸಿವೆ. ಸಹಜವಾಗಿಯೇ ಬ್ರಾಹ್ಮಣ್ಯವೂ ಇದಕ್ಕೆ ಹೊರತಲ್ಲ. ಆದ್ದರಿಂದ ಒಬ್ಬ ವ್ಯಕ್ತಿಯನ್ನು ನಿಂದಿಸುವಾಗ ಅವನ ಮೂಲವನ್ನು ಹಿಡಿದು ನಿಂದಿಸುವುದು ಸೂಕ್ತವೇ, ಸಾಮಾಜಿಕ ಸಭ್ಯತೆಯೇ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಾಗಿದೆ.

'ಭಯೋತ್ಪಾದನೆಗೆ ಧರ್ಮವಿಲ್ಲ ಎಂದು ನಾವು ಹೇಳುವಾಗ, ಅದು ಒಂದು ನಿರ್ದಿಷ್ಟ ಕೋಮಿನವರಿಗೆ ಸೀಮಿತವಾದುದಲ್ಲ ಎಂಬ ಇಂಗಿತವಿರುತ್ತದೆ. ಜಾತೀಯತೆಯ ಪ್ರಶ್ನೆ ಬಂದಾಗಲೂ ಇದೇ ನೀತಿ ಅನುಸರಿಸಬೇಕಲ್ಲವೇ?' ಎಂಬುದು ಬ್ರಾಹ್ಮಣರ ಪ್ರಶ್ನೆಯಾಗಿದೆ. ಆದರೆ ಬ್ರಾಹ್ಮಣರೆಲ್ಲರೂ ಪೂಜಿಸುವ ಆದಿಶಂಕರರು 'ಒಬ್ಬ ನಿಜವಾದ ಬ್ರಾಹ್ಮಣ ತನ್ನನ್ನು ಯಾವುದೇ ಜಾತಿ, ವರ್ಣದೊಂದಿಗೆ ಗುರುತಿಸಿಕೊಳ್ಳುವುದಿಲ್ಲ' ಎನ್ನುತ್ತಾರೆ. ಅಂದರೆ ಶಂಕರರ ಪ್ರಕಾರ, ಬ್ರಾಹ್ಮಣ್ಯದ ಸೊಲ್ಲೆತ್ತಿದಾಗ ಕೆರಳುವ ಬ್ರಾಹ್ಮಣರಾರೂ ನಿಜವಾದ ಬ್ರಾಹ್ಮಣರಲ್ಲ ಎಂದಾಗುತ್ತದೆ. ಜಾತಿ ತಾರತಮ್ಯಕ್ಕೆ ತಮ್ಮ ಕೊಡುಗೆ ಎಷ್ಟರಮಟ್ಟಿಗಿದೆ ಎಂಬುದನ್ನು ತಿಳಿಯಲು ಬ್ರಾಹ್ಮಣರು ದೊಡ್ಡ ಸಂಶೋಧನೆ ಮಾಡಬೇಕಿಲ್ಲ. ತಮ್ಮ ತಮ್ಮ ಕುಟುಂಬ, ಪರಿಸರದೊಳಗೇ ಅದನ್ನು ಕಂಡುಕೊಳ್ಳಬಹುದು.

ಆದ್ದರಿಂದ ಈ ವಿವಾದಕ್ಕೆ ಎರಡು ಪರಿಹಾರಗಳಿವೆ: ಒಂದು, ಬ್ರಾಹ್ಮಣ ವರ್ಗ ತಾನು ಯಾವುದೇ ಜಾತಿ ವರ್ಣಕ್ಕೆ ಸೇರಿಲ್ಲ ಎಂಬ ಆದಿಶಂಕರರ ವಿವೇಕದ ನೆರವಿನಿಂದ ಜಾತ್ಯತೀತ ವರ್ಗವಾಗಿ ವಿಕಾಸವಾಗಬೇಕಾಗುತ್ತದೆ. ಇಲ್ಲವೇ ಸಾಮಾಜಿಕ ತಾರತಮ್ಯದ ಬಗ್ಗೆ ವಿಚಾರ ಮಾಡುವ ವರ್ಗದವರು ಇದಕ್ಕೆ ಒಂದು ನಿರ್ದಿಷ್ಟ ಜಾತಿಯವರನ್ನು ಹೊಣೆ ಮಾಡಬಾರದೆಂಬ ಕನಿಷ್ಠ ಸಾಮಾಜಿಕ ಸಭ್ಯತೆಯನ್ನು ತಮ್ಮ ಚರ್ಚೆಯಲ್ಲಿ ಕಾಪಾಡಿಕೊಳ್ಳಬೇಕಾಗುತ್ತದೆ. ಈ ವಿವಾದವು ಈ ಎರಡು ವರ್ಗಗಳ ನಡುವೆ ಪರಸ್ಪರ ಗೌರವ, ಸೌಹಾರ್ದಭಾವಗಳ ಕೊರತೆ ಇದೆ ಎಂಬುದನ್ನು ಸೂಚಿಸುತ್ತದೆ. ಬ್ರಾಹ್ಮಣ್ಯದವರು ಕನಿಷ್ಠ ವಿವೇಕವನ್ನು ಮತ್ತು ಬ್ರಾಹ್ಮಣ್ಯದ ಟೀಕಾಕಾರರು ಕನಿಷ್ಠ ಸೌಜನ್ಯ, ಸೂಕ್ಷ್ಮತೆಯನ್ನು ಉಳಿಸಿಕೊಂಡಿದ್ದರೂ ಇಂಥವೆಲ್ಲ ಚರ್ಚೆಯ ವಸ್ತುವಾಗುತ್ತಿರಲಿಲ್ಲ.

ಟಿ.ಎನ್.ವಾಸುದೇವಮೂರ್ತಿ, ಬೆಂಗಳೂರು

ಮರೆಯಾದ ನೈಜಕಲ್ಪನೆ

ನಟ ಚೇತನ್ ಅವರ ಹೇಳಿಕೆಯಿಂದ ವ್ಯಗ್ರರಾದವರು ನ್ಯಾಯಾಲಯದ ಮೆಟ್ಟಿಲು ತುಳಿದಿರುವುದರಿಂದ ಮತ್ತೆ ಈಗ ಬ್ರಾಹ್ಮಣ, ಬ್ರಾಹ್ಮಣ್ಯ ಇತ್ಯಾದಿ ಪರಿಕಲ್ಪನೆಗಳು ವಾದ ವಿವಾದಗಳಿಗೆ ಸಿಲುಕಿ ನಲುಗುವಂತಾಗಿವೆ! ಈ ಭರಾಟೆಯಲ್ಲಿ ಬ್ರಾಹ್ಮಣ ಅಥವಾ ಬ್ರಾಹ್ಮಣ್ಯದ ನೈಜ ಕಲ್ಪನೆ ಮರೆಯಾಗಿ, ಇವುಗಳ ಹೆಸರಿನಡಿಯಲ್ಲಿ ಬದುಕುತ್ತಿದೆಯೆಂಬ ಸಮಾಜದ ಒಂದು ವರ್ಗದ ಮೇಲೆ ಎಲ್ಲರೂ ಮುಗಿಬೀಳುತ್ತಾರೆ.

'ಜಾತಿ' ಎಂಬುದು ಬೆನ್ನುಹತ್ತಿದ ಬೇತಾಳದಂತಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಸಿದ್ಧಾಂತ, ನಿಷ್ಠೆ ಎಂಬ ಪದಗಳು ಉದುರುತ್ತವೆ. ಆದರೆ ಸಿದ್ಧಾಂತಗಳನ್ನು ನಿಷ್ಠೆಯಿಂದ ಪರಿಪಾಲಿಸುವ ರಾಜಕೀಯ ವ್ಯಕ್ತಿಗಳು ಎಲ್ಲಿದ್ದಾರೆ? ಹಾಗೆಯೇ 'ನೈಜ ಬ್ರಾಹ್ಮಣ್ಯ'ದ ಪರಿಸ್ಥಿತಿ! ಮತ್ತೆ, ಜಾತಿ ಎನ್ನುವುದು ಬಂದುದು ನಂತರ. ಅಂದಿನ ವರ್ಣವ್ಯವಸ್ಥೆಯಲ್ಲಿ ಹೆಚ್ಚುಗಿಚ್ಚುಗಳ ಹುಚ್ಚಾಟ ಇರಲಿಲ್ಲ. 'ಬ್ರಹ್ಮಜ್ಞಾನ' ಪಡೆದವನು 'ಬ್ರಾಹ್ಮಣ' ಎನಿಸಿಕೊಳ್ಳಬಹುದಾಗಿತ್ತು. ಅದಕ್ಕೂ ಹುಟ್ಟಿಗೂ ಸಂಬಂಧ ಇರಲಿಲ್ಲ. ಅಪಕಲ್ಪನೆಗಳೆಲ್ಲ ನಂತರದ ಬೆಳವಣಿಗೆಗಳು- ಮೂಲೋದ್ದೇಶ ವಿರುದ್ಧದವು.

ಸ್ಪರ್ಧಾತ್ಮಕ ಸಮಾಜದಲ್ಲಿ ಮುಂದುವರಿಯುವವರು ಮತ್ತು ಹಿಂದಕ್ಕುಳಿಯುವವರು ಸಾಮಾನ್ಯ. ಆದರೆ ಬದುಕಿನ ಎಲ್ಲ ಕ್ಷೇತ್ರಗಳೂ ಎಲ್ಲರಿಗೂ ತೆರೆದಿರಬೇಕು, ಅವಕಾಶ ಎಲ್ಲರಿಗೂ ಲಭ್ಯವಾಗಬೇಕು. ಯಾವುದೋ ಕಾರಣಕ್ಕೆ ಹಿಂದೆ ಬೀಳುವಂತಾಗುವವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗಬೇಕು.

ಸಾಮಗ ದತ್ತಾತ್ರಿ, ಬೆಂಗಳೂರು



ಸಂಕುಚಿತತೆ ತರವೇ?

ಜಗತ್ತಿನ ಆರ್ಥಿಕ ಅಸಮಾನತೆಗೆ ಕಾರಣವಾಗಿರುವ ವಿದ್ಯಮಾನವನ್ನು ನಾವು ಬಂಡವಾಳಶಾಹಿ ವ್ಯವಸ್ಥೆ ಎಂದು ಗುರುತಿಸುತ್ತೇವೆ. ನಾಳೆಯಿಂದ ಈ ಪರಿಭಾಷೆ ಬಳಸಿದ ತಕ್ಷಣ 'ಬಂಡವಾಳಿಗರ ಸಂಘ'ವೊಂದು ಪೊಲೀಸರಿಗೆ ದೂರು ನೀಡುವುದು ಎಷ್ಟು ಅಪಹಾಸ್ಯ!

ಯುರೋಪಿನಲ್ಲಿ ಮೈಬಣ್ಣದ ಆಧಾರದಲ್ಲಿ ತಾರತಮ್ಯ ಮಾಡುವ ವಿದ್ಯಮಾನವನ್ನು ರೇಸಿಸಂ ಎಂದು ವಿಶ್ಲೇಷಿಸಲಾಗುತ್ತದೆ. ಈ ಪರಿಭಾಷೆ ಬಳಸಿದ ಮಾತ್ರಕ್ಕೆ ಅಲ್ಲಿನ ಬಿಳಿಯರು, ಬಳಸಿದ ವ್ಯಕ್ತಿಯ ಮೇಲೆ ದೂರು ದಾಖಲಿಸುವುದು ಎಷ್ಟು ಹಾಸ್ಯಾಸ್ಪದ!

ಭಾರತೀಯ ಸಂದರ್ಭದಲ್ಲಿ 'ಸಾಮಾಜಿಕ ಅಸಮಾನತೆ'ಗೆ ಕಾರಣವಾಗಿರುವ ವಿದ್ಯಮಾನವನ್ನು ಬ್ರಾಹ್ಮಣ್ಯ ಎಂದು ಗುರುತಿಸಲಾಗಿದೆ. ಈ ಸಮಾಜಶಾಸ್ತ್ರೀಯ ಪರಿಭಾಷೆ ಬಳಸಿದ ಮಾತ್ರಕ್ಕೆ, ಜಾತಿ ಸಂಘವೊಂದು ಅದಕ್ಕೆ ಪ್ರತಿಕ್ರಿಯಿಸುವುದು, ದೂರು ದಾಖಲಿಸುವುದು ಅಷ್ಟೇ ಹಾಸ್ಯಾಸ್ಪದ. ಈ ಪರಿಭಾಷೆಯಲ್ಲಿ ಸಮಸ್ಯೆ ಇದ್ದರೆ ಬೌದ್ಧಿಕ ಚರ್ಚೆಯ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಮುಖ್ಯವಾಗಿ ಬಂಡವಾಳಶಾಹಿ, ವರ್ಣಭೇದ ನೀತಿ, ಬ್ರಾಹ್ಮಣ್ಯ ಇವು ಆಯಾ ಸಮಾಜಗಳಲ್ಲಿನ ಅಸಮಾನತೆಗೆ ಕಾರಣವಾದ ವಿದ್ಯಮಾನವನ್ನು ಗುರುತಿಸಲು ಕಟ್ಟಿಕೊಂಡ ಸಮಾಜಶಾಸ್ತ್ರೀಯ ಪರಿಭಾಷೆಗಳು. ಇವುಗಳನ್ನು ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿಗೆ ಅನ್ವಯಿಸಿಕೊಂಡು ಅರ್ಥಮಾಡಿಕೊಳ್ಳುವುದೇ ಸಂಕುಚಿತ ನೋಟ. ಅದನ್ನು ಮೀರಿಯೂ ನಮಗೆ ಅವುಗಳ ಬಳಕೆ ತಪ್ಪು ಅನ್ನಿಸುತ್ತಿದ್ದರೆ ನಮ್ಮೊಳಗೂ ಆ ಭಾವಗಳು ಇವೆ ಎಂದೇ ಅರ್ಥ.

ಕಿರಣ್ ಎಂ. ಗಾಜನೂರು, ಕಲಬುರ್ಗಿ

ವಾಚಕರ ವಾಣಿ

ಚಿಣ್ಣರ ಪೋಷಕರಿಗೆ ಸಿಗಲಿ ಆದ್ಯತೆ

ಕೊರೊನಾ ಮೂರನೆಯ ಅಲೆಯು ಮಕ್ಕಳನ್ನು ಕಾಡಲಿದೆ ಎಂದು ತಜ್ಞರು ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ಚಿಕ್ಕಮಕ್ಕಳು ಯಾವುದೇ ಸಂದರ್ಭದಲ್ಲಿಯೂ ಪೋಷಕರನ್ನು ಬಿಟ್ಟು ಇರಲಾರರು. ಹೀಗಾಗಿ, ಚಿಕ್ಕಮಕ್ಕಳನ್ನು ಹೊಂದಿರುವ ಪೋಷಕರನ್ನು ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿ, ಆದ್ಯತೆ ಮೇಲೆ ಅವರೆಲ್ಲರಿಗೂ ಲಸಿಕೆ ಸಿಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ರಾಮಪ್ರಭಾ, ಬೆಂಗಳೂರು

ಹಣ ವಸೂಲಿ: ಸ್ವಾಗತಾರ್ಹ ಬೆಳವಣಿಗೆ

ದೇಶದಿಂದ ಪರಾರಿ ಆಗಿರುವ ಉದ್ಯಮಿಗಳಾದ ವಿಜಯ್ ಮಲ್ಯ, ನೀರವ್ ಮೋದಿ ಹಾಗೂ ಮೆಹುಲ್ ಚೋಕ್ಸಿ ಅವರಿಂದ ಬ್ಯಾಂಕ್‌ಗಳಿಗೆ ವಂಚನೆಯಾಗಿದೆ ಎನ್ನಲಾದ ಹಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ₹ 9 ಸಾವಿರ ಕೋಟಿ ವಸೂಲಿ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ. ಇವರು ದೇಶದ ನಾನಾ ಬ್ಯಾಂಕ್‌ಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಸಾಲ ಬಾಕಿ ಉಳಿಸಿಕೊಂಡಿರುವುದರಿಂದ ಇವರ ಸಂಪೂರ್ಣ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

ದೇಶದ ಬ್ಯಾಂಕಿಂಗ್ ವಲಯದ ಈ ಅತಿದೊಡ್ಡ 'ವಂಚನೆ' ಪ್ರಕರಣದಲ್ಲಿ ಮೂವರಿಗೂ ಜೈಲು ಶಿಕ್ಷೆಯಾಗಬೇಕು. ವಂಚನೆ ಬೆಳಕಿಗೆ ಬರುವ ಮುನ್ನವೇ ವಿದೇಶಕ್ಕೆ ಹಾರಿ ಹೋಗಿರುವ ಇಂತಹವರಿಂದ ನಾವು ನಿರೀಕ್ಷೆ ಮಾಡುವುದಾದರೂ ಏನನ್ನು?

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಜನನಾಯಕರ ಬಾಲಿಶ ವರ್ತನೆ

ಕೋವಿಡ್ ನಿಯಂತ್ರಣಕ್ಕೆ ಬರುತ್ತಿರುವ ಈ ಸಂದರ್ಭದಲ್ಲಿ ರಾಜ್ಯದಲ್ಲಿ ವಿರೋಧ ಪಕ್ಷ ಮಾಡಬೇಕಾದ ಕೆಲಸ ಬಹಳಷ್ಟಿರುತ್ತದೆ. ಆದರೆ ಅದನ್ನು ಮರೆತು ಕಾಂಗ್ರೆಸ್ ಪಕ್ಷದ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಬಗ್ಗೆ ಚರ್ಚೆ ನಡೆದಿರುವುದು ಸರಿಯಲ್ಲ. ಈ ಚರ್ಚೆಗೆ ಸಂಬಂಧಿಸಿದಂತೆ 'ಶಾಸಕಾಂಗ ಪಕ್ಷದ ನಾಯಕರು ಗಮನ ಹರಿಸುತ್ತಾರೆ' ಎಂದು ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆ ಇತ್ತಿದ್ದಾರೆ. ಶಾಸಕರು ತಮ್ಮ ಪರವಾಗಿ ನೀಡಿರುವ ಹೇಳಿಕೆಗೂ ತಮಗೂ ಸಂಬಂಧವಿಲ್ಲ ಎಂದು ಪಕ್ಷದ ಮುಖಂಡ ಸಿದ್ದರಾಮಯ್ಯ ಹೇಳಿದ್ದಾರೆ. ನಾಯಕರಲ್ಲಿ ಒಗ್ಗಟ್ಟಿಲ್ಲ ಎನ್ನುವುದು ಇದರಿಂದ ತಿಳಿಯುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪೆಟ್ರೋಲ್ ಬೆಲೆ ಗಗನಕ್ಕೆ ಏರಿದೆ. ರೈತರಿಗೆ ಬಿತ್ತನೆ ಬೀಜ, ಗೊಬ್ಬರ ಸರಿಯಾಗಿ ವಿತರಣೆಯಾಗುತ್ತಿಲ್ಲ, ಕೂಲಿಕಾರ್ಮಿಕರ ಪರಿಸ್ಥಿತಿ ಅಧೋಗತಿಗಿಳಿದಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ತಲುಪಿದೆ. ಇಂತಹ ಸಮಸ್ಯೆಗಳತ್ತ ಗಮನಹರಿಸುವುದು ಬಿಟ್ಟು, ಆಡಳಿತ ಪಕ್ಷದವರು ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ, ಹಾಗೆಯೇ ವಿರೋಧ ಪಕ್ಷದವರು ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದಂತೆ ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆ ವಿಚಾರದಲ್ಲಿ ಅನಗತ್ಯ ಗದ್ದಲ ಎಬ್ಬಿಸುತ್ತಿರುವುದು ದುರದೃಷ್ಟಕರ. ಈ ಕುರಿತು ಎರಡೂ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಲಿ. ಇದು ರಾಜಕಾರಣ ಮಾಡುವ ಸಮಯವಲ್ಲ ಎಂಬುದನ್ನು ಅರಿತು, ಕೊರೊನಾ ನಿಯಂತ್ರಣ ಕಾರ್ಯದಲ್ಲಿ ಎಲ್ಲರೂ ಪಕ್ಷಭೇದ ಮರೆತು ಶ್ರಮಿಸಲಿ.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಯುವಪೀಳಿಗೆಯ ವಿಷಯದಲ್ಲಿ ತಾತ್ಸಾರ ಬೇಡ

ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಯುವಜನರೇ ಹೆಚ್ಚು ಬಾಧಿತರಾಗಿದ್ದರ ಕುರಿತ ವರದಿ (ಪ್ರ.ವಾ., ಜೂನ್ 24) ಸಕಾಲಿಕವಾಗಿದೆ. ಕೋವಿಡ್ ಎರಡನೇ ಅಲೆ ಹೆಚ್ಚಾಗಿ ಯುವಜನರನ್ನೇ ಬಾಧಿಸಲು ಯುವಜನರ ಓಡಾಟ, ಕ್ಷೇತ್ರಕಾರ್ಯ ಎಷ್ಟು ಕಾರಣವೋ ಅದಕ್ಕಿಂತ ಹೆಚ್ಚು ಅವರ ಆರೋಗ್ಯದ ಕುರಿತು ಸರ್ಕಾರಕ್ಕೆ ಇರುವ ಮನೋಭಾವ ಕಾರಣ. ಅದೇ ಮನೋಭಾವವೇ ಯುವಜನರಿಗೆ ವಯಸ್ಸಿನ ಕಾರಣಕ್ಕೆ ಲಸಿಕೆ ವಿತರಣೆಯಲ್ಲಿ ತಾರತಮ್ಯ ಮಾಡಲು ಕಾರಣವಾಯಿತು.

'ಯುವಜನರು ದೇಶದ ಭವಿಷ್ಯ' ಎಂದು ರಾಜಕೀಯ ಭಾಷಣಗಳಲ್ಲಿ ಹೇಳುವ ರಾಜಕೀಯ ನಾಯಕರು, ಪ್ರತಿವರ್ಷ ಬಜೆಟ್‌ನಲ್ಲಿ ಯುವಜನರಿಗೆ, ಅವರ ಆರೋಗ್ಯಕ್ಕೆ ಎಷ್ಟು ಹಣ ಮೀಸಲು ಇಟ್ಟಿದ್ದೇವೆ, ಮೀಸಲು ಇಟ್ಟ ಅಲ್ಪಸ್ವಲ್ಪ ಹಣವನ್ನು ಎಷ್ಟರಮಟ್ಟಿಗೆ ಬಳಸಿದ್ದೇವೆ, ಹೇಗೆ ಬಳಸಿದ್ದೇವೆ ಎನ್ನುವುದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಲಸಿಕೆ ವಿತರಣೆಯಲ್ಲಿನ ವಯಸ್ಸಿನ ತಾರತಮ್ಯ ಮತ್ತು ಯುವಜನರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚು ಎಂಬ ತಾತ್ಸಾರ ಮನೋಭಾವವೇ ಇಂದಿನ ಈ ಪರಿಸ್ಥಿತಿಗೆ ಕಾರಣ. ಇನ್ನು ಮುಂದೆಯಾದರೂ ಈ ಮನೋಭಾವ ಬದಲಾಗಲಿ. ಯುವಜನರ ಅಭಿವೃದ್ಧಿಗೆ, ಅವರ ಆರೋಗ್ಯದ ರಕ್ಷಣೆಗೆ ಹೆಚ್ಚು ಗಮನ ಮತ್ತು ಅನುದಾನ ನೀಡಲಿ.

ನಂದನ್ ಖಂಡೇನಹಳ್ಳಿ, ಚಿತ್ರದುರ್ಗ

ಕೂಲಿಂಗ್ ಪೀರಿಯಡ್ ಕಡ್ಡಾಯವಾಗಲಿ

ಉತ್ತಮ ಕೆಲಸ ಮಾಡುವ ಅಧಿಕಾರಿ ವರ್ಗಕ್ಕೆ ಜನ ಮೆಚ್ಚುಗೆ ವ್ಯಕ್ತಪಡಿಸುವುದು ಸರ್ವೇ ಸಾಮಾನ್ಯ. ಆದರೆ ಇತ್ತೀಚೆಗೆ ಈ ಮೆಚ್ಚುಗೆಯು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಾ, ಲೈಕ್ ಹೆಚ್ಚುತ್ತಾ ಕೊನೆಯಲ್ಲಿ ಅಭಿಮಾನಿಗಳ ಬಳಗ ಅಥವಾ ಕ್ಲಬ್ ಪ್ರಾರಂಭವಾಗಿ, ಪರ-ವಿರೋಧ, ಕ್ರಿಯೆ- ಪ್ರತಿಕ್ರಿಯೆಗಳು ನಡೆಯುತ್ತಿರುತ್ತವೆ. ಹಾಗೆಯೇ ಈ ಮೆಚ್ಚುಗೆಯ ಅಮಲು ಏರುತ್ತಲೇ ಹೋಗುತ್ತದೆ. ಅಭಿಮಾನಿಗಳ ಬಳಗದ ಸದಸ್ಯರ ಸಂಖ್ಯೆ ಮತ್ತು ಅದರ ಒಲವು ಅರಿತ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಕಡೆಗೆ ಅಧಿಕಾರಿಗಳನ್ನು ಎಳೆಯಲು ಪ್ರಾರಂಭಿಸುತ್ತವೆ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್, ಸ್ಥಾನಮಾನಗಳನ್ನು ನೀಡುವುದಾಗಿ ಆಮಿಷ ಒಡ್ಡುತ್ತವೆ. ರಾಜಕೀಯ ಸೂಜಿಗಲ್ಲಿನ ಎಳೆತ ಎಂತಹ ಕಠೋರ ಅಧಿಕಾರಿಗಳನ್ನೂ ಸೋಲಿಸಿ ಬಿಡುತ್ತದೆ.

ಸರ್ಕಾರಿ ಹುದ್ದೆಯಲ್ಲಿದ್ದಾಗ ರಾಜಕೀಯ ಸೇರುವ ತವಕದಿಂದ ತಮ್ಮ ಅಧಿಕಾರವನ್ನು ಅವರು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಇದನ್ನು ತಪ್ಪಿಸಲು ಸರ್ಕಾರಿ ಸೇವೆಯಿಂದ ಬಿಡುಗಡೆ ಆದ ನಂತರ ಕನಿಷ್ಠ ಎರಡು ವರ್ಷ ಯಾವುದೇ ರಾಜಕೀಯ ಪಕ್ಷ ಸೇರದಂತೆ ಕೂಲಿಂಗ್ ಪೀರಿಯಡ್ ಕಡ್ಡಾಯ ಮಾಡಬೇಕು ಎಂದು ಬಿಜೆಪಿಯ ನಾಯಕ, ದಿವಂಗತ ಅರುಣ್ ಜೇಟ್ಲಿ ಅವರು ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದರು. ಆದರೆ ಬಿಜೆಪಿಯೇ ಅಧಿಕಾರಕ್ಕೆ ಬಂದಾಗ ಆ ವಿಷಯ ಮುನ್ನೆಲೆಗೆ ಬರಲೇ ಇಲ್ಲ. ಸರ್ಕಾರಿ ಹುದ್ದೆ ಮತ್ತು ಕಚೇರಿಯ ದುರ್ಬಳಕೆ ತಪ್ಪಿಸಲು ಕೂಲಿಂಗ್ ಪೀರಿಯಡ್ ಕಡ್ಡಾಯವಾಗಲಿ.

ಗಣಪತಿನಾಯ್ಕ, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅವಕಾಶ ಕೈಚೆಲ್ಲಿದ ಭಾರತ: ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಸೋಲು

ವಿರಾಟ್ ಕೊಹ್ಲಿ ಪಟ್ಟಕ್ಕೆ ಸಂಚಕಾರ?

ಡಬ್ಲ್ಯುಟಿಸಿ ಚಾಂಪಿಯನ್ ತಂಡವನ್ನು ಬೆಸ್ಟ್ ಆಫ್ ತ್ರೀ ಫೈನಲ್‌ಗಳಲ್ಲಿ ಆಡಿಸಿ ನಿರ್ಧರಿಸಬೇಕು. ಕೇವಲ ಒಂದು ಫೈನಲ್ ಸೂಕ್ತವಲ್ಲ

-ವಿರಾಟ್ ಕೊಹ್ಲಿ, ಭಾರತ ತಂಡದ ನಾಯಕ

ವಿರಾಟ್ ಕೊಹ್ಲಿ

ಕೇನ್ ವಿಲಿಯಮ್ಸನ್

• ಗಿರೀಶ ದೊಡ್ಡಮನಿ

ಆಡಿದ ಹದಿನಾಲ್ಕು ಟೆಸ್ಟ್‌ಗಳಲ್ಲಿಯೇ ಒಂದು ಸಾವಿರಕ್ಕೂ ಹೆಚ್ಚು ರನ್ ಪೇರಿಸಿದ ಮಯಂಕ್ ಅಗರವಾಲ್, 36 ಟೆಸ್ಟ್‌ಗಳಲ್ಲಿ ಎರಡು ಸಾವಿರಕ್ಕಿಂತ ಜಾಸ್ತಿ ರನ್‌ಗಳನ್ನು ಸಿಡಿಸಿದ ಕೆ.ಎಲ್. ರಾಹುಲ್ ಮತ್ತು ಗಾಯಗೊಂಡರೂ ಆರು ತಿಂಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ದಿಟ್ಟೆದೆಯಿಂದ ಹೋರಾಡಿ ತಂಡದ ಸೋಲು ತಪ್ಪಿಸಿದ್ದ ಹನುಮವಿಹಾರಿ...

ಅಜಿಂಕ್ಯ ರಹಾನೆ

ಈ ಮೂವರು ಪ್ರತಿಭಾವಂತ ಆಟಗಾರರು ಬುಧವಾರ ಸೌತಾಂಪ್ಟನ್‌ನ ಏಜಿಸ್ ಬೌಲ್ ಕ್ರೀಡಾಂಗಣದ ಪೆವಿಲಿಯನ್‌ನಲ್ಲಿ ಮುಖ ಬಾಡಿಸಿಕೊಂಡು ಕುಳಿತಿದ್ದರು. ನ್ಯೂಜಿಲೆಂಡ್ ವಿರುದ್ಧ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತ ತಂಡದ ಸೋಲಿಗೆ ಮೂಕ ಪ್ರೇಕ್ಷಕರಾಗಿದ್ದರು.

ಮಳೆಯಿಂದಾಗಿ ಎರಡು ದಿನಗಳ ಆಟ ನಡೆಯದ ಟೆಸ್ಟ್‌ನಲ್ಲಿ ಉಭಯ ತಂಡಗಳಿಗೂ ಗೆಲುವಿನ ಸಮಾನ ಅವಕಾಶ ಇದ್ದಿದ್ದಂತೂ ದಿಟ. ಕೊನೆಯ ದಿನ ಭಾರತಕ್ಕೆ ಸೋಲು ತಪ್ಪಿಸಿಕೊಂಡು ಡ್ರಾ ಮಾಡಿಕೊಳ್ಳುವ ಅವಕಾಶ ಇತ್ತು. ಆದರೆ, ಅತಿಯಾದ ರಕ್ಷಣಾತ್ಮಕ ಬ್ಯಾಟಿಂಗ್ ಮಾಡಲು ಹೋಗಿ ಎಡವಿತ್ತು. ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ನಾಯಕ ವಿರಾಟ್ ಕೊಹ್ಲಿ ವಿರುದ್ಧ ಟ್ರೋಲ್‌ಗಳ ಮಹಾಪೂರವೇ ಉಕ್ಕಿ ಹರಿಯುತ್ತಿದೆ. ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಬ್ರ್ಯಾಂಡ್ ಮೌಲ್ಯವುಳ್ಳ ಕ್ರಿಕೆಟಿಗನೆಂಬ ಖ್ಯಾತಿಯ ಕೊಹ್ಲಿ, ಹಿಂದೆಂದೂ ಕಾಣದಷ್ಟು ಟೀಕೆಗಳನ್ನು ಎದುರಿಸುವಂತಾಗಿದೆ.

‘ಕ್ರೀಡಾಂಗಣದಲ್ಲಿ ನೃತ್ಯದ ಹೆಜ್ಜೆಗಳನ್ನು ಹಾಕುವುದರಿಂದ ಮತ್ತು ಕಿಡಿನುಡಿಗಳನ್ನು ಕೂಗುವುದರಿಂದ ಐಸಿಸಿ ಟ್ರೋಫಿ ಜಯಿಸುವುದು ಸಾಧ್ಯವಿಲ್ಲ’ ಎಂದು ಮಹೇಂದ್ರಸಿಂಗ್ ಧೋನಿಯ ಐಸಿಸಿ ಟ್ರೋಫಿ ವಿಜಯಗಳು ಮತ್ತು ಕೊಹ್ಲಿಯ ಹಾವಭಾವ, ನೃತ್ಯದ ಝಲಕ್‌ಗಳ ಚಿತ್ರಗಳನ್ನು ಹಾಕಲಾಗಿದೆ. ಇದಷ್ಟೇ ಅಲ್ಲ. ಫೈನಲ್ ಸೋಲಿಗೆ ವಿರಾಟ್ ಮತ್ತು ರವಿಶಾಸ್ತ್ರಿಯೇ ಹೊಣೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

2017ರಲ್ಲಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ತಂಡವು ಸೋತಿತ್ತು. ಆಗ ಕೋಚ್ ಆಗಿದ್ದ ಅನಿಲ್ ಕುಂಬ್ಳೆ ಮತ್ತು ಕೊಹ್ಲಿ ನಡುವಿನ ವಿರಸವೇ ದೊಡ್ಡ ಸುದ್ದಿಯಾಗಿತ್ತು. 2019ರಲ್ಲಿ ಇಂಗ್ಲೆಂಡ್‌ನಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಪರಾಭವಗೊಂಡಾಗ ಧೋನಿ ರನೌಟ್ ಹೆಚ್ಚು ಸದ್ದು ಮಾಡಿತ್ತು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಇದುವರೆಗೂ ವಿರಾಟ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಶಸ್ತಿ ಗೆದ್ದಿಲ್ಲ. ಆಗೆಲ್ಲ ಕೇಳಿಬರದಷ್ಟು ಟೀಕೆಗಳು ಈ ಸಲ ಸಿಡಿದಿವೆ. ಅದಕ್ಕೆ ಕಾರಣಗಳೂ ಇವೆ.

ಡಬ್ಲ್ಯುಟಿಸಿಯಲ್ಲಿ ಭಾರತೀಯರ ಸಾಧನೆಗಳು (2019–2021)

ಬ್ಯಾಟಿಂಗ್

ಆಟಗಾರ	ಪಂದ್ಯ	ರನ್	ಶತಕ	ಅರ್ಧಶತಕ
ಅಜಿಂಕ್ಯ ರಹಾನೆ	18	1159	3	6
ರೋಹಿತ್ ಶರ್ಮಾ	12	1094	4	2
ವಿರಾಟ್ ಕೊಹ್ಲಿ	15	934	2	5
ಚೇತೇಶ್ವರ್ ಪೂಜಾರ	18	841	0	9
ರಿಷಭ್ ಪಂತ್	12	707	1	4

ಬೌಲಿಂಗ್

ಆಟಗಾರ	ಪಂದ್ಯ	ವಿಕೆಟ್	ಶ್ರೇಷ್ಠ (ಇನಿಂಗ್ಸ್)
ಆರ್. ಅಶ್ವಿನ್	14	71	145ಕ್ಕೆ7
ಮೊಹಮ್ಮದ್ ಶಮಿ	11	40	35ಕ್ಕೆ5
ಇಶಾಂತ್ ಶರ್ಮಾ	12	39	22ಕ್ಕೆ5
ಜಸ್‌ಪ್ರೀತ್ ಬೂಮ್ರಾ	10	34	27ಕ್ಕೆ6
ರವೀಂದ್ರ ಜಡೇಜ	11	29	62ಕ್ಕೆ4

ಅಶ್ವಿನ್

71 ವಿಕೆಟ್ ಪಡೆದ ಬೌಲರ್ ಆರ್. ಅಶ್ವಿನ್

1675 ರನ್ ಗಳಿಸಿದ ಬ್ಯಾಟ್ಸ್‌ಮನ್ ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್

31 ಸಿಕ್ಸರ್ ದಾಖಲಿಸಿದ ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್

186 ಬೌಂಡರಿ ಹೊಡೆದ ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್

ಆಯ್ಕೆಯಲ್ಲಿ ಎಡವಿದರೆ?

ಕೋವಿಡ್ ಕಾಲದ ಬಯೋಬಬಲ್ ವ್ಯವಸ್ಥೆಯಲ್ಲಿ ಆಡುವ ಸವಾಲನ್ನು ನಿಭಾಯಿಸಲು ದೊಡ್ಡ ಬಳಗವನ್ನೇ ಫೈನಲ್‌ಗೆ ಆಯ್ಕೆ ಮಾಡಲಾಗಿತ್ತು. ಡಬ್ಲ್ಯುಟಿಸಿಯ ಭಾಗವೇ ಆಗಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತದ ಐತಿಹಾಸಿಕ ಜಯಕ್ಕೆ ಕಾರಣರಾಗಿದ್ದ ಯುವ ಆಟಗಾರರೂ ಇದ್ದರು. ಅನುಭವಿಗಳೂ ಇದ್ದರು. ಆದರೆ, ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್ ಅವರಂತಹ ಹೋರಾಟ ಮನೋಭಾವದ ಮಧ್ಯಮ ವೇಗಿಗಳಿಗೆ ಆದ್ಯತೆ ಕೊಡಲಿಲ್ಲ. ಇಶಾಂತ್ ಶರ್ಮಾ ಅವರ ಅನುಭವಕ್ಕೆ ಮಣೆ ಹಾಕಲಾಯಿತು.

ಇನ್ನು ಬ್ಯಾಟಿಂಗ್‌ನಲ್ಲಿ ಎಳೆಯ ಹುಡುಗ ಶುಭಮನ್ ಗಿಲ್ ಅವರಿಗೆ ಅವಕಾಶ ನೀಡಿ, ಕರ್ನಾಟಕದ ಇಬ್ಬರು ಬ್ಯಾಟ್ಸ್‌ಮನ್‌ಗಳನ್ನು ಬೆಂಚ್‌ನಲ್ಲಿ ಕೂರಿಸಲಾಯಿತು. 2019ರಲ್ಲಿ ವೆಸ್ಟ್ ಇಂಡೀಸ್ ಪ್ರವಾಸದ ನಂತರ ರಾಹುಲ್‌ಗೆ ಟೆಸ್ಟ್‌ನಲ್ಲಿ ಆಡುವ ಅವಕಾಶವನ್ನೇ ನೀಡಿಲ್ಲ. ಆಸ್ಟ್ರೇಲಿಯಾದ ಸರಣಿಯಲ್ಲಿ ಹೆಚ್ಚು ರನ್ ಗಳಿಸದ ಕಾರಣಕ್ಕೆ ಮಯಂಕ್ ಕೂಡ ಅವಕಾಶವಂಚಿತರಾದರು. ಆದರೆ, ರೋಹಿತ್ ಶರ್ಮಾ ಮತ್ತು ಗಿಲ್ ಎರಡೂ ಇನಿಂಗ್ಸ್‌ಗಳಲ್ಲಿ ವಿಫಲರಾದರು. ರೋಹಿತ್ ಜೊತೆಗೆ ಗಿಲ್‌ಗಿಂತ ಹೆಚ್ಚು ಅನುಭವಿಗಳಾಗಿರುವ ರಾಹುಲ್ ಅಥವಾ ಮಯಂಕ್ ಉತ್ತಮ ಜೊತೆಯಾಗುವ ಸಾಧ್ಯತೆ ಇತ್ತು.

ಸುಮಾರು ಒಂದೂವರೆ ವರ್ಷದಿಂದ ಶತಕವನ್ನೇ ಸಿಡಿಸದ ವಿರಾಟ್ ಕೊಹ್ಲಿ, ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕದ ಸಮೀಪ ತಲುಪಿದ್ದರು. ಆದರೆ ಎರಡನೇ ಇನಿಂಗ್ಸ್‌ನಲ್ಲಿ ಅವರ ಆಟದ ಅಗತ್ಯವಿತ್ತು.

ಕೆ.ಎಲ್. ರಾಹುಲ್

ಅವರು ಮತ್ತು ಪೂಜಾರ ಆರನೇ ದಿನದಂದು ಹೆಚ್ಚು ಓವರ್‌ಗಳನ್ನು ಆಡಿದ್ದರೆ, ತಂಡವನ್ನು ಸೋಲಿನಿಂದ ಪಾರು ಮಾಡಬಹುದಿತ್ತು.

ರಿಷಭ್ ಪಂತ್ 41ರನ್‌ಗಳನ್ನು ಗಳಿಸಿದ್ದು ದಿಟ್ಟ ಆಟವಾಗಿತ್ತು. ಆದರೆ ‘ನಿರ್ಭಿಡೆ ಮತ್ತು ನಿಷ್ಕಾಳಜಿ ನಡುವೆ ಇರುವ ತೆಳುವಾದ ಗೆರೆಯನ್ನು ಅರಿಯಬೇಕು. ರಿಷಭ್ ಈ ಗೆರೆಯನ್ನು ಉಲ್ಲಂಘಿಸಿದ್ದಾರೆ’ ಎಂದು ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಚಾಟಿ ಬೀಸಿದ್ದಾರೆ. ಕಿವೀಸ್ ಬೌಲರ್‌ಗಳ ಶಿಸ್ತಿನ ದಾಳಿಯನ್ನು ರಿಷಭ್ ಜವಾಬ್ದಾರಿಯುತವಾಗಿ ಆಡಬೇಕಿತ್ತು. ಸಂದರ್ಭಕ್ಕೆ ಅಗತ್ಯವಾಗಿದ್ದನ್ನು ತಂಡಕ್ಕೆ ನೀಡಬೇಕಿತ್ತು ಎಂಬುದು ಅವರ ಮಾತಿನ ತಾತ್ಪರ್ಯ.

ರವೀಂದ್ರ ಜಡೇಜ ಕೂಡ ತಮ್ಮ ನೈಜ ಆಟದೊಂದಿಗೆ ರಾಜಿ ಮಾಡಿಕೊಂಡು ತಳವೂರಲು ಪ್ರಯತ್ನಿಸಿದರು. ಅಶ್ವಿನ್ ಬೌಲಿಂಗ್‌ನಲ್ಲಿ ಮಿಂಚಿದರೂ ಬ್ಯಾಟಿಂಗ್‌ನಲ್ಲಿ ಹೆಚ್ಚು ರನ್ ಗಳಿಸಲಿಲ್ಲ. ಇದ್ದುದರಲ್ಲಿ ಬೌಲಿಂಗ್ ಪಡೆಯೇ ಪರವಾಗಿಲ್ಲವೆನ್ನುವಂತೆ ಆಡಿತು.

ಅಪಕ್ವ ನಾಯಕತ್ವ

ಭಾರತ ತಂಡದ ನಾಯಕತ್ವ ಬದಲಾವಣೆಯ ಕುರಿತ ಚರ್ಚೆಯೂ ಈಗ ಮುನ್ನೆಲೆಗೆ ಬಂದಿದೆ.

ಮೈದಾನದಲ್ಲಿ ದೊಡ್ಡ ಜಯ ಸಾಧನೆಗೆ ಸ್ಥಿತಪ್ರಜ್ಞೆ, ತಾಳ್ಮೆ, ಶಾಂತಚಿತ್ತತೆ ಮತ್ತು ತೀಕ್ಷ್ಣವಾದ ಬುದ್ಧಿಮತ್ತೆ ಇರಬೇಕು. ಧೋನಿ, ಕೇನ್ ವಿಲಿಯಮ್ಸನ್ ಇದಕ್ಕೆ ಉತ್ತಮ ಉದಾಹರಣೆ ಎಂಬ ಟ್ವೀಟ್‌ಗಳೂ ಓಡಾಡುತ್ತಿವೆ. ಸಂದರ್ಭಕ್ಕೆ ತಕ್ಕಂತೆ ಬೌಲರ್‌ಗಳನ್ನು ನಿಯೋಜಿಸುವುದು, ಫೀಲ್ಡಿಂಗ್ ಪ್ಲೇಸ್‌ಮೆಂಟ್ ಮಾಡುವುದು ಒಂದು ಕಲೆ. ಡಿಆರ್‌ಎಸ್ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿಯೂ ಕೊಹ್ಲಿ ಪರಿಣತಿ ಸಾಧಿಸಿಲ್ಲವೆನ್ನುವುದೂ ಸುಳ್ಳಲ್ಲ.

ಬುಧವಾರದ ಆಟದಲ್ಲಿ ಅಂಪೈರ್ ತೀರ್ಪು ಮರುಪರಿಶೀಲನೆ ವ್ಯವಸ್ಥೆ(ಯುಡಿಆರ್‌ಎಸ್) ಪರಿಶೀಲನೆಯಲ್ಲಿ ನ್ಯೂಜಿಲೆಂಡ್ ಆಟಗಾರ ನಾಟೌಟ್ ಆಗಿರುವುದು ಸ್ಪಷ್ಟವಾದಾಗಲೂ ಕೊಹ್ಲಿ ಸಿಡಿಮಿಡಿಗೊಂಡಿದ್ದು ಟಿವಿಯಲ್ಲಿ ಕಂಡಿತ್ತು. ಮೂರನೇ ಅಂಪೈರ್ ತೀರ್ಪು ಸರಿ ಇತ್ತು!

ಈ ಎಲ್ಲ ಕಾರಣಗಳಿಂದಾಗಿ ಈಗ ನಾಯಕತ್ವದ ಬದಲಾವಣೆಯ ಚರ್ಚೆ ಜೋರಾಗಿಯೇ ನಡೆಯುತ್ತಿದೆ. ಕನ್ನಡಿಗ ಕೆ.ಎಲ್. ರಾಹುಲ್, ಆಸ್ಟ್ರೇಲಿಯಾದಲ್ಲಿ ಸರಣಿ ಜಯದ ರೂವಾರಿ ಅಜಿಂಕ್ಯ ರಹಾನೆ ಮತ್ತು ಐಪಿಎಲ್‌ನ ಯಶಸ್ವಿ ನಾಯಕ ರೋಹಿತ್ ಶರ್ಮಾ ಅವರ ಹೆಸರುಗಳು ಕೇಳಿಬರುತ್ತಿವೆ. ಈ ಮೂವರಲ್ಲೂ ಒಂದು ಸಾಮ್ಯತೆ ಇದೆ. ಶಾಂತಚಿತ್ತದ ನಡವಳಿಕೆ ಇವರಿಗೆ ಸಿದ್ಧಿಸಿದೆ.

ನಾಯಕನಾದವನು ಒಂದೊಮ್ಮೆ ಬ್ಯಾಟಿಂಗ್‌ನಲ್ಲಿ ದೊಡ್ಡ ಸಾಧನೆ ಮಾಡದಿದ್ದರೂ ಪಂದ್ಯದ ಫಲಿತಾಂಶ, ತತ್‌ಕ್ಷಣದ ನಿರ್ಣಯಗಳನ್ನು ತೆಗೆದುಕೊಳ್ಳುವ ಚಾಕಚಕ್ಯತೆ ಮತ್ತು ಒತ್ತಡ ನಿರ್ವಹಣೆಯ ತಂತ್ರಗಾರಿಕೆ ಮಾಡುವಂತಿರಬೇಕು. ಸಹಆಟಗಾರರ ಸಾಮರ್ಥ್ಯ ಅರಿತಿರಬೇಕು. ಅವರನ್ನು ಸಂದರ್ಭಕ್ಕೆ ತಕ್ಕಂತೆ ದುಡಿಸಿಕೊಳ್ಳಬೇಕು. ಜೊತೆಗೆ ಎಲ್ಲರನ್ನೂ ಹುರಿದುಂಬಿಸುವ ಕಲೆಯೂ ಇರಬೇಕು ಎಂಬುದು ಯಾವುದೇ ತಂಡ ಕ್ರೀಡೆಯಲ್ಲಿರುವ ಅಲಿಖಿತ ನಿಯಮ.

ಆದರೆ, ಬಿಸಿಸಿಐ ವಿರಾಟ್ ಕೊಹ್ಲಿಯನ್ನು ಬಿಟ್ಟುಕೊಡುವ ಸಾಧ್ಯತೆ ಕಡಿಮೆ. ಟಿ20 ವಿಶ್ವಕಪ್‌ಗೆ ಇನ್ನು ಕೆಲವೇ ದಿನಗಳು ಉಳಿದಿರುವ ಹೊತ್ತಿನಲ್ಲಿ ಅಂತಹ ದೊಡ್ಡ ನಿರ್ಧಾರ ತೆಗೆದುಕೊಳ್ಳಬಹುದೇ ಕಾದು ನೋಡಬೇಕು.

ಐಸಿಸಿ ಟ್ರೋಫಿಗೆ ಬರ?

ಭಾರತ ತಂಡವು 2014ರಿಂದ ಇಲ್ಲಿಯವರೆಗೆ ಒಂದೂ ಐಸಿಸಿ ಟ್ರೋಫಿಯನ್ನು ಜಯಿಸಿಲ್ಲ. 2013ರಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು.

2015ರಲ್ಲಿ ಏಕದಿನ ವಿಶ್ವಕಪ್ ಮತ್ತು 2016ರಲ್ಲಿ ವಿಶ್ವ ಟಿ20 ಚಾಂಪಿಯನ್‌ಷಿಪ್‌ನಲ್ಲಿ ಭಾರತವು ಸೋತಿತ್ತು. ಆ ಎರಡೂ ಟೂರ್ನಿಗಳಲ್ಲಿ ತಂಡವನ್ನು ಧೋನಿ ಮುನ್ನಡೆಸಿದ್ದರು.

ಕೊಹ್ಲಿ ಪೂರ್ಣಾವಧಿ ನಾಯಕರಾದ ನಂತರ 2017ರ ಚಾಂಪಿಯನ್ಸ್ ಟ್ರೋಫಿ ಫೈನಲ್, 2019ರ ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಭಾರತ ಸೋತಿದೆ. ಇದೀಗ ಡಬ್ಲ್ಯುಟಿಸಿ ಫೈನಲ್ ನಲ್ಲಿಯೂ ನಿರಾಶೆ ಅನುಭವಿಸಿದೆ.

ಕೂಲ್ ಕ್ಯಾಪ್ಟನ್ ಕೇನ್ ಹೋರಾಟದ ಕೆಚ್ಚು

• ವಿಕ್ರಂ ಕಾಂತಿಕೆರೆ

ಅದು, ಕಲಾತ್ಮಕ ಮತ್ತು ದಿಟ್ಟತನದ ಆಟಕ್ಕೆ ಹೆಸರಾಗಿರುವ ಬ್ಯಾಟ್ಸ್‌ಮನ್ ಸ್ಟೀಫನ್ ಫ್ಲೆಮಿಂಗ್ ಕಾಲ. ದಿಗ್ಗಜ ಆಟಗಾರರಾದ ಜೆಫ್ ಹೊವರ್ತ್, ಕೆನ್ ರೂಥರ್‌ಫಾರ್ಡ್, ಜೆಫ್ ಕ್ರೋವ್, ಜಾನ್ ರೈಟ್ ಮುಂತಾದವರ ಸಾರಥ್ಯದಲ್ಲಿ ಮುನ್ನಡೆದಿದ್ದ ನ್ಯೂಜಿಲೆಂಡ್ ಕ್ರಿಕೆಟ್ ತಂಡಕ್ಕೆ ವಿಶ್ವಕಪ್ ಗೆಲ್ಲಲು ಸಾಧ್ಯವಾಗದ ಕೊರಗನ್ನು ಫ್ಲೆಮಿಂಗ್ ನೀಗಿಸುವರು ಎಂದೇ ಕ್ರಿಕೆಟ್ ಜಗತ್ತು ನಂಬಿದ್ದ ಸಂದರ್ಭ.

ಆದರೆ 10 ವರ್ಷ ತಂಡವನ್ನು ಮುನ್ನಡೆಸಿದ ಸ್ಟೀಫನ್ ಫ್ಲೆಮಿಂಗ್ ಅವಧಿಯಲ್ಲೂ ತಂಡದ ಹಣೆಬರಹ ಬದಲಾಗಲಿಲ್ಲ. 2019ರ ವಿಶ್ವಕಪ್ ಟೂರ್ನಿಯಲ್ಲೂ ತಂಡ ಅಂತಿಮ ಕ್ಷಣದಲ್ಲಿ ಮುಗ್ಗರಿಸಿ ಪ್ರಶಸ್ತಿ ಕೈಚೆಲ್ಲಿತು. ಆದರೆ ಆ ವಿಶ್ವಕಪ್‌ನಲ್ಲಿ ತೋರಿದ ಸಾಮರ್ಥ್ಯ, ವಿಶೇಷವಾಗಿ ರೋಚಕ ಸೂಪರ್ ಓವರ್ ಮತ್ತು ಬೌಂಡರಿ ಕೌಂಟ್‌ವರೆಗೆ ಸಾಗಿದ ಫೈನಲ್‌ನಲ್ಲಿ ಕೊನೆಯವರೆಗೂ ನರ ಬಿಗಿಹಿಡಿದುಕೊಂಡು ಕಾದಾಡಿದ ರೀತಿ ಅದ್ಭುತವಾಗಿತ್ತು. ಅದರ ಹಿಂದಿನ ಶಕ್ತಿ ಕೇನ್ ವಿಲಿಯಮ್ಸನ್.

ಹೊರಗೆ ಸೌಮ್ಯವಾಗಿ ಕಂಡರೂ ಒಳಗೆ ಹೋರಾಟದ ಕೆಚ್ಚು ತುಂಬಿರುವ ಕೇನ್ ವಿಲಿಯಮ್ಸನ್ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲೂ ತಂಡವನ್ನು ಮುನ್ನಡೆಸಿದ ರೀತಿ ಅಮೋಘ. ಮಳೆ ಕಾಡಿದ್ದರಿಂದ ಫಲಿತಾಂಶ ಹೊರಹೊಮ್ಮುವ ಸಾಧ್ಯತೆಯೇ ಇಲ್ಲ ಎಂದುಕೊಂಡಿದ್ದ ಫೈನಲ್ ಪಂದ್ಯದಲ್ಲಿ ಅವರು ತಂಡಕ್ಕೆ ಐತಿಹಾಸಿಕ ಪ್ರಶಸ್ತಿಯನ್ನು ಕಾಣಿಕೆಯಾಗಿ ನೀಡಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಆರಂಭದಿಂದಲೇ ಸರಿಯಾದ ಲೆಕ್ಕಾಚಾರದೊಂದಿಗೆ ಕೇನ್ ಕಣಕ್ಕೆ ಇಳಿದಿದ್ದರು. ಮೊದಲ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಸೋತಿದ್ದರೂ ಕೇನ್ ಬಳಗ ಪುಟಿದೆದ್ದು ಎರಡನೇ ಪಂದ್ಯದಲ್ಲಿ ಅದೇ ತಂಡಕ್ಕೆ ಇನಿಂಗ್ಸ್ ಸೋಲಿನ ಹೊಡೆತ ನೀಡಿತ್ತು. ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಸರಣಿಯಲ್ಲಿ ಪ್ರಖರ ಹೊಡೆತ ತಿಂದ ತಂಡ ಚೇತರಿಸಿಕೊಂಡದ್ದು ಭಾರತ ಎದುರಿನ ಎರಡು ಪಂದ್ಯಗಳ ಸರಣಿಯಲ್ಲಿ. ಎರಡೂ ಪಂದ್ಯಗಳಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ತಂಡ ವೆಸ್ಟ್ ಇಂಡೀಸ್ ಮತ್ತು ಪಾಕಿಸ್ತಾನದ ವಿರುದ್ಧವೂ ಜಯದ ನಾಗಾಲೋಟ ಮುಂದುವರಿಸಿತ್ತು. ಫೈನಲ್‌ಗೂ ಮೊದಲು ಇಂಗ್ಲೆಂಡ್‌ನಲ್ಲಿ ನಡೆದ ಎರಡು ಪಂದ್ಯಗಳ ಟೆಸ್ಟ್ ಸರಣಿಯ ‘ಅಭ್ಯಾಸದ ಬಲ’ವೂ ಭಾರತದ ಎದುರಿನ ಫೈನಲ್‌ನಲ್ಲಿ ಕಾದಾಡಲು ಬೇಕಾದ ಕಸುವು ತುಂಬಿತ್ತು.

ಕ್ರಿಕೆಟ್ ಆಟಗಾರ ತಂದೆ ಮತ್ತು ವಾಲಿಬಾಲ್ ಆಟಗಾರ್ತಿ ತಾಯಿಯ ಛಲವನ್ನು ನೋಡುತ್ತ ಬೆಳೆದ ಕೇನ್ 17ನೇ ವಯಸ್ಸಿನಲ್ಲಿ ಕ್ರಿಕೆಟ್ ಅಂಗಣಕ್ಕೆ ಇಳಿದವರು. ಹೀಗಾಗಿ ಈ ಕ್ರೀಡೆಯ ಒಳ–ಹೊರಗು ಅವರಿಗೆ ಚೆನ್ನಾಗಿ ಗೊತ್ತು. ಯಶಸ್ವಿ ನಾಯಕತ್ವಕ್ಕೆ ಅದು ಪೂರಕವಾಗಿ ಕೆಲಸ ಮಾಡಿದೆ. 2014ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಶತಕ ಸಿಡಿಸಿ ಅಪರೂಪದ ಸರಣಿ ಜಯಕ್ಕೆ ಕಾರಣವಾಗಿದ್ದ ಕೇನ್, ಟೆಸ್ಟ್ ಆಡುವ ಎಲ್ಲ ದೇಶಗಳ ವಿರುದ್ಧ ಶತಕ ಗಳಿಸಿರುವ ಗರಿಮೆಯನ್ನೂ ನ್ಯೂಜಿಲೆಂಡ್ ಪರವಾಗಿ ಅತಿ ಹೆಚ್ಚು ಟೆಸ್ಟ್ ಶತಕ ಗಳಿಸಿದ ಆಟಗಾರ ಎಂಬ ದಾಖಲೆಯನ್ನೂ ಹೊಂದಿದ್ದಾರೆ.

ರಾಜಕೀಯ ನಾಯಕರ ಜತೆ ಸಭೆ

ಜಮ್ಮು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮೋದಿ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜಮ್ಮು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮರಳಿ ನೀಡುತ್ತೇವೆ ಸಂಸತ್ತಿನಲ್ಲಿ ಭರವಸೆ ನೀಡಿದ್ದೆವು. ಆ ಮಾತಿಗೆ ನಾವು ಬದ್ಧರಾಗಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದ್ದಾರೆ’ ಎಂದು ಜಮ್ಮು ಕಾಶ್ಮೀರ ರಾಜಕೀಯ ಪಕ್ಷಗಳ ನಾಯಕರು ಹೇಳಿದ್ದಾರೆ.

ಮೋದಿ ಅವರ ಜತೆ ದೆಹಲಿಯಲ್ಲಿ ನಡೆದ ಸುದೀರ್ಘ ಚರ್ಚೆಯ ನಂತರ ಮಾಧ್ಯಮ ಪ್ರತಿನಿಧಿಗಳಿಗೆ ರಾಜಕೀಯ ಪಕ್ಷಗಳ ನಾಯಕರು ಈ ಮಾಹಿತಿ ನೀಡಿದ್ದಾರೆ. 2019ರ ಆಗಸ್ಟ್ 5ರಂದು ಜಮ್ಮು ಕಾಶ್ಮೀರದ ರಾಜ್ಯದ ಸ್ಥಾನಮಾನವನ್ನು ರದ್ದುಪಡಿಸಿದ ನಂತರ, ಅಲ್ಲಿನ ರಾಜಕೀಯ ನಾಯಕರು ಮತ್ತು ಕೇಂದ್ರ ಸರ್ಕಾರದ ಜತೆ ನಡೆದ ಮೊದಲ ಸಭೆ ಇದು.

ಸಭೆಗೆ ಯಾವುದೇ ಕಾರ್ಯಸೂಚಿಯನ್ನು ಕೇಂದ್ರ ಸರ್ಕಾರವು ನಿಗದಿ ಮಾಡಿರಲಿಲ್ಲ. ಆದರೆ ನಮ್ಮ ಬೇಡಿಕೆಗಳಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಜಮ್ಮು ಕಾಶ್ಮೀರದ ನಾಯಕರು ಮತ್ತು ಗುಪ್ಕಾರ್ ಕೂಟದ ನಾಯಕರು ಹೇಳಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಜಮ್ಮು ಕಾಶ್ಮೀರದ ಎಲ್ಲಾ ನಾಯಕರೂ, ರಾಜ್ಯದ ಸ್ಥಾನಮಾನವನ್ನು ಮರಳಿ ನೀಡಬೇಕು ಎಂದು ಒತ್ತಾಯಿಸಿದರು.

‘ಈ ಸಭೆಯಲ್ಲಿ ಜಮ್ಮು ಕಾಶ್ಮೀರದ ಭವಿಷ್ಯದ ಬಗ್ಗೆ ಚರ್ಚೆ ನಡೆಸಿದೆವು. ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಅಲ್ಲಿ ಪ್ರಜಾಪ್ರಭುತ್ವದ ಪ್ರಕ್ರಿಯೆಗಳು ನಡೆಯಬೇಕು. ಶಾಂತಿಯುತವಾಗಿ ನಡೆಯುವ ಚುನಾವಣೆಯು, ರಾಜ್ಯದ ಸ್ಥಾನವನ್ನು ಮರಳಿ ನೀಡುವಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಗಿದೆ. ಪ್ರಜಾಪ್ರಭುತ್ವದ ಪ್ರಕ್ರಿಯೆಗಳನ್ನು ನಡೆಸಲು ಮತ್ತು ಸಂವಿಧಾನಕ್ಕೆ ಬದ್ಧವಾಗಿರಲು ಸಭೆಯಲ್ಲಿ ಭಾಗಿಯಾಗಿದ್ದ ಎಲ್ಲರೂ ಒಪ್ಪಿದ್ದಾರೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

‘ಜಮ್ಮು-ಕಾಶ್ಮೀರದಲ್ಲಿ ಜನರು, ಅದರಲ್ಲೂ ಯುವಕರು ರಾಜಕೀಯಕ್ಕೆ ಬರಬೇಕು. ಆಗ ಮಾತ್ರ ಅವರ ಆಕಾಂಕ್ಷೆಗಳು ಈಡೇರುತ್ತವೆ ಎಂದು ಅಲ್ಲಿನ ರಾಜಕೀಯ ನಾಯಕರಿಗೆ ಹೇಳಿದ್ದೇನೆ’ ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ, ಪಕ್ಷದ ನಾಯಕ ಒಮರ್ ಅಬ್ದುಲ್ಲಾ, ಕಾಂಗ್ರೆಸ್‌ನ ಗುಲಾಂ ನಬಿ ಆಜಾದ್ ಮತ್ತು ತಾರಾ ಚಾಂದ್, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, ಬಿಜೆಪಿಯ ನಿರ್ಮಲ್ ಸಿಂಗ್ ಮತ್ತು ಕವಿಂದರ್ ಗುಪ್ತಾ, ಸಿಪಿಎಂನ ಮೊಹಮ್ಮದ್ ಯೂಸಫ್ ತಾರಿಗಾಮಿ, ಜೆಕೆಎಪಿ ಮುಖ್ಯಸ್ಥ ಅಲ್ತಾಫ್ ಬುಖಾರಿ, ಪೀಪಲ್ಸ್ ಕಾನ್ಫರೆನ್ಸ್‌ನ ಸಜ್ಜದ್ ಲೋನ್, ಪ್ಯಾಂಥರ್ಸ್ ಪಾರ್ಟಿಯ ಭೀಮ್ ಸಿಂಗ್ ಸಭೆಯಲ್ಲಿ ಭಾಗಿಯಾಗಿದ್ದರು.

ಜಮ್ಮು-ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಮರಳಿ ನೀಡುವ ಹಾದಿಯಲ್ಲಿ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಮತ್ತು ಚುನಾವಣೆ ಮಹತ್ವದ ಮೈಲುಗಲ್ಲಾಗಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ದೆಹಲಿಯಲ್ಲಿ ನಡೆದ ಸಭೆಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಮತ್ತು ಜಮ್ಮುಕಾಶ್ಮೀರದ ಸರ್ವಪಕ್ಷಗಳ ನಾಯಕರು ಪರಸ್ಪರ ನಮಸ್ಕರಿಸಿದರು — ಪಿಟಿಐ ಚಿತ್ರ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದ ಮೊದಲ ಆರೋಗ್ಯ ಸಚಿವೆ ಅಮೃತ್ ಕೌರ್ ಅವರದ್ದು ಎಂದು ಹೇಳಲಾದ ಎರಡು ಚಿತ್ರಗಳು ಫೇಸ್‌ಬುಕ್‌ನಲ್ಲಿ ಕೆಲವು ದಿನಗಳಿಂದ ವೈರಲ್ ಆಗಿವೆ. ಆದರೆ 2020ರ ಅಕ್ಟೋಬರ್‌ನಿಂದಲೂ ಈ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿವೆ. ‘ದೇಶದ ಅತಿದೊಡ್ಡ ಏಮ್ಸ್ ಆಸ್ಪತ್ರೆಯು ಕೌರ್ ಅವರ ಕೊಡುಗೆ. ಈಗಿನ ಯಾವ ಸಚಿವರ ಜೊತೆಗೂ ಅವರನ್ನು ಹೋಲಿಸಲಾಗದು’ ಎಂಬ ಒಕ್ಕಣೆ ಇರುವ ಪೋಸ್ಟರ್‌ಗಳು ಹರಿದಾಡುತ್ತಿವೆ.

ಈ ಚಿತ್ರಗಳನ್ನು ಆಲ್ಟ್ ನ್ಯೂಸ್ ಹಾಗೂ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಗಳು ಪರಿಶೀಲಿಸಿವೆ. ಒಂದು ಚಿತ್ರದಲ್ಲಿರುವುದು ಬರಹಗಾರ್ತಿ ಹಾಗೂ ಲೇಡಿಸ್ ಕಂಪಾರ್ಟ್‌ಮೆಂಟ್ ಸಂಸ್ಥಾಪಕಿ ಅವಂತಿಕಾ ಮೆಹ್ತಾ. ಫೋಟೋಶೂಟ್‌ಗಾಗಿ ಸೆರೆಹಿಡಿದ ಚಿತ್ರದಲ್ಲಿ ಅವರು ಕೌರ್ ತರಹ ಕಾಣಿಸಿದ್ದಾರೆ. ಸ್ವತಃ ಅವಂತಿಕಾ ಇದನ್ನು ಟ್ವೀಟ್ ಮಾಡಿ ತಿಳಿಸಿದ್ದಾರೆ. ಎರಡನೇ ಚಿತ್ರದಲ್ಲಿರುವವರು ಕಪುರ್ತಲಾದ ಮಹಾರಾಜ ಜಗ್ಜೀತ್ ಸಿಂಗ್ ಅವರ ಪುತ್ರಿ ರಾಜಕುಮಾರಿ ಅಮೃತ್ ಕೌರ್. ಎರಡೂ ಚಿತ್ರಗಳಲ್ಲಿರುವುದು ಮೊದಲ ಆರೋಗ್ಯ ಸಚಿವೆ ಅಮೃತ್ ಕೌರ್ ಅಲ್ಲ ಎಂಬುದು ಸ್ಪಷ್ಟಗೊಂಡಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಹಬಾಳ್ವೆಯ ಸೊಗಸು

ಪ್ರತ್ಯೇಕಸುಖವಲ್ಪದುದು, ಗಳಿಗೆತೋರ್ಕೆಯದು |
ಆತ್ಮವಿಸ್ತಾರವಾಗಿಪುದೆ ನಿತ್ಯಸುಖ ||
ವ್ಯಕ್ತಿಜೀವನದ ಸೊಂಪು ಸಮಷ್ಟಿಜೀವನದಿ |
ಒಟ್ಟು ಬಾಳ್ವುದ ಕಲಿಯೊ – ಮಂಕುತಿಮ್ಮ
|| 432 ||

ಪದ-ಅರ್ಥ: ಪ್ರತ್ಯೇಕ ಸುಖವಲ್ಪದುದು = ಪ್ರತ್ಯೇಕಸುಖ(ಏಕಾಂಗಿಯಾಗಿ ಪಡುವ ಸುಖ) + ಅಲ್ಪದುದು(ಅಲ್ಪವಾದದ್ದು), ಸೊಂಪು = ಸುಖ, ತೃಪ್ತಿ, ಸಮಷ್ಟಿಜೀವನ = ಸಹಜೀವನ, ಜೊತೆಯಾಗಿ ಬಾಳುವುದು.

ವಾಚ್ಯಾರ್ಥ: ಏಕಾಂಗಿಯಾಗಿ ಪಡುವ ಸುಖ ಒಂದು ಕ್ಷಣದ್ದು ಮಾತ್ರ. ನಮಗೆ ಆತ್ಮವಿಸ್ತಾರವಾಗುವುದೇ ನಿತ್ಯಸುಖ. ವ್ಯಕ್ತಿ ಸಹಜೀವನದಲ್ಲಿ ಬದುಕಿದಾಗಲೇ ನಿಜವಾದ ಸುಖ. ಹಾಗೆ ಒಟ್ಟಾಗಿ ಬಾಳುವುದನ್ನು ಕಲಿ.

ವಿವರಣೆ: ಗುರುದೇವ ರವೀಂದ್ರನಾಥ ಠಾಕೂರರ ಗೀತಾಂಜಲಿಯಲ್ಲಿ ಪುಟ್ಟ ಕಥೆಯೊಂದು ಬರುತ್ತದೆ. ಮನುಷ್ಯನೊಬ್ಬ ತಾನು ವಿಶೇಷವಾಗಿರಬೇಕು, ವಿಶಿಷ್ಟವಾಗಿರಬೇಕು ಎಂದುಕೊಂಡು ಎಲ್ಲರನ್ನು ದೂರವಿಡಲು ತನ್ನ ಸುತ್ತ ಕೋಟೆಗೋಡೆಯೊಂದನ್ನು ಕಟ್ಟತೊಡಗಿದ. ಕೋಟೆ ಮುಗಿದಾಗ, ಆತ ಗಮನಿಸಿದ. ತನ್ನ ಸುತ್ತಲೂ ಕಟ್ಟಿದ ಕೋಟೆಯಲ್ಲಿ ತಾನೊಬ್ಬನೇ ಬಂಧಿಯಾಗಿದ್ದಾನೆ. ರಾಜನಾಗಲು ಹೋಗಿ ಕೈದಿಯಾಗಿದ್ದ. ಇದೊಂದು ತುಂಬ ಸಾಂಕೇತಿಕವಾದದ್ದು. ತಾನೊಬ್ಬನೇ ಇರಬೇಕು, ತಾನು ವಿಶೇಷ ಎಂದುಕೊಳ್ಳುವವರೆಲ್ಲ ಒಂದು ರೀತಿಯಲ್ಲಿ ತಮ್ಮ ಚಿಂತನೆಗಳ ಬಂಧಿಯಾಗುತ್ತಾರೆ, ಏಕಾಂಗಿಯಾಗುತ್ತಾರೆ. ಹೀಗೆ ಪ್ರತ್ಯೇಕ ಸುಖವನ್ನು ಬಯಸುವವರಿಗೆ ದೊರೆಯುವ ಸಂತೋಷ ಅತ್ಯಲ್ಪವಾದದ್ದು. ಮತ್ತೊಬ್ಬರ ಸಂಪರ್ಕವಿಲ್ಲದೆ, ಅವರೊಂದಿಗೆ ಸಹಚಿಂತನೆ ನಡೆಸದ ಜೀವಿಯ ಆತ್ಮವಿಸ್ತಾರವಾಗುವುದು ಕಷ್ಟ. ಕೆಲವೇ ಕೆಲವು ತಪಸ್ವಿಗಳನ್ನು ಬಿಟ್ಟರೆ ಮನುಷ್ಯನ ಆತ್ಮವಿಸ್ತಾರವಾಗುವುದು ಪ್ರಪಂಚದೊಡನೆ ವ್ಯಕ್ತಿಯ ಸತತವಾದ ಸಂಪರ್ಕದಿಂದ, ಸಂವಹನದಿಂದ. ಒಂದು ಬಾರಿ ಈ ಕೊಡುಕೊಳ್ಳುವಿಕೆ ನಿಂತುಹೋದರೆ ಆತ್ಮವಿಕಸನ ನಿಂತುಹೋಗುತ್ತದೆ.

ಯೋಗಿ ಯು.ಜಿ. ಕೃಷ್ಣಮೂರ್ತಿಯವರನ್ನು ಒಬ್ಬರು ಕೇಳಿದರು, ‘ಮನುಷ್ಯನ ಬದುಕಿನಲ್ಲಿ ಅತ್ಯಂತ ಕಷ್ಟದ ಸ್ಥಿತಿ ಯಾವುದು?’ ಯು.ಜಿ. ಒಂದೇ ಮಾತಿನಲ್ಲಿ ಹೇಳಿದರು ‘ಒಂಟಿತನ’. ಈ ಒಂಟಿತನ ಪ್ರಪಂಚವನ್ನು ಇನ್ನಿಲ್ಲದಂತೆ ಕಾಡುತ್ತದೆ. ಬ್ರಿಟನ್‌ನಲ್ಲಿ ಇದು ಯಾವ ಪ್ರಮಾಣದಲ್ಲಿ ಕಾಡುತ್ತಿದೆಯೆಂದರೆ, ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ‘ಮಿನಿಸ್ಟರ್ ಫಾರ್ ಲೋನ್ಲಿನೆಸ್’ ಅಂದರೆ ‘ಏಕಾಂಗಿತನದ ಸಚಿವ’ ಹುದ್ದೆಯನ್ನು ಸೃಷ್ಟಿಸಿದ್ದರು. ಪ್ರಧಾನಿ ತೆರೆಸಾ ಮೇ ರವರು ಇದನ್ನು ‘ಆಧುನಿಕ ಜೀವನದ ಕಟುವಾಸ್ತವ’ ಎಂದು ಬಣ್ಣಿಸಿದ್ದರು. ಈ ಸಮಸ್ಯೆ ಮುಂದುವರೆದ ರಾಷ್ಟ್ರಗಳಾದ ಜರ್ಮನಿ, ಅಮೆರಿಕಗಳಲ್ಲಿ ಬಹಳವಾಗಿದೆ. ಈಗ ರಾಷ್ಟ್ರಪತಿಗಳ ಸಲಹೆಗಾರರಾದ ಭಾರತೀಯ ಮೂಲದ ಡಾ. ವಿವೇಕ ಮೂರ್ತಿಯವರು, ಅಮೆರಿಕದ ಶೇಕಡ 40 ರಷ್ಟು ತರುಣ-ತರುಣಿಯರು ಒಂಟಿತನದಿಂದ ಬಳಲುತ್ತಿದ್ದಾರೆಂದು ಹಾರ್ವರ್ಡ್ ಬಿಸಿನೆಸ್ ರಿವ್ಯೂಗೆ ಬರೆದ ಲೇಖನದಲ್ಲಿ ತಿಳಿಸಿದ್ದಾರೆ. ಏಕಾಂಗಿತನ ಹೆಚ್ಚಾದಂತೆ, ಸಿಗರೇಟು, ಮಾದಕವಸ್ತುಗಳು ಮತ್ತು ದುಷ್ಟಕೂಟಗಳಲ್ಲಿ ಅವರು ಸೇರಿಕೊಳ್ಳುವುದು ಅಪಾಯ ಎಂದಿದ್ದಾರೆ.

ಅದಕ್ಕೇ ಕಗ್ಗ ಒಂದು ಸುಂದರ ಉಪದೇಶವನ್ನು ನೀಡುತ್ತದೆ. ಮೇಲೆ ಹೇಳಿದ ಅನಾಹುತಗಳು ಕಡಿಮೆಯಾಗುವುದು ವ್ಯಕ್ತಿ ಸಮುದಾಯದಲ್ಲಿದ್ದಾಗ. ವ್ಯಕ್ತಿ ಜೀವನದ ಸೊಗಸು ಕಾಣುವುದು ಸಮಷ್ಟಿ ಜೀವನದಲ್ಲಿಯೇ. ನಾವು ಸಹಜೀವನವನ್ನು ಅಪ್ಪಿಕೊಳ್ಳಬೇಕು. ಒಟ್ಟು ಬಾಳುವುದನ್ನು ಕಲಿಯಬೇಕು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಜೂನ್ 25, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರ ಪ್ರತಿಪದೆ. ಗಂ. 40-23 (ರಾ. 10-12) ಶುಕ್ರವಾರ ನಿತ್ಯ ನಕ್ಷತ್ರ ಮೂಲ ಗಂ. 4-2 (ಬೆ. 7-40) ಬ್ರಹ್ಮ ನಾಮ ಯೋಗ ಗಂ. 46-58 ಬಾಲವ ಕರಣ ಗಂ. 13-4 ವಿಷ ಗಂ. 0-14 ಪುರ್ವಿಷ ಗಂ. 26-49 ಅಮೃತ ಗಂ. 49-36 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-59 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 6, 9

ಮೇಷ: ಹೊಸದೊಂದು ಕಾರ್ಯದಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಇದ್ದು ಯಶಸ್ಸನ್ನು ಕಾಣುವಿರಿ. ಉತ್ತಮ ಸಂಪಾದನೆಯನ್ನು ನಿರೀಕ್ಷಿಸಬಹುದು. ಕಳ್ಳಕಾಕರ ಕೈಚಳಕಕ್ಕೆ ಬಲಿಯಾಗದಂತೆ ಎಚ್ಚರಿಕೆ ವಹಿಸಿ.

ವೃಷಭ: ನಿಶಕ್ತಿಯಿಂದಾಗಿ ಆಲಸ್ಯ ತಲೆದೋರುವ ಸಾಧ್ಯತೆ. ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ. ಬಂಧುಗಳ ಆಪತ್ತಿನಲ್ಲಿ ನೆರವಾಗಲಿದ್ದೀರಿ.

ಮಿಥುನ: ಉತ್ತಮವಾದ ದಿನ. ಬರಬೇಕಾದ ಬಾಕಿ ಹಣ ಹಣ ನಿಮ್ಮ ಪಾಲಿಗೆ ಬರಲಿದೆ. ಕೋರ್ಟು ಕಚೇರಿ ಕೆಲಸಗಳು ಪ್ರಗತಿ ಕಾಣುವವು. ಹಿರಿಯರ ಆರೋಗ್ಯದಲ್ಲಿ ಸ್ಥಿರತೆಯನ್ನು ಕಾಣಬಹುದು.

ಕರ್ಕಾಟಕ: ಮೇಲಧಿಕಾರಿಗಳಿಂದ ಹೆಚ್ಚಿನ ಒತ್ತಡ ಬರುವ ಸಾಧ್ಯತೆ. ಕೆಲಸದಲ್ಲಿ ಅತ್ಯಂತ ಜಾಗರೂಕರಾಗಿರುವುದು ಉತ್ತಮ. ಕಾರ್ಯಕ್ಷೇತ್ರದಲ್ಲಿ ಬದಲಾವಣೆಯ ಸಾಧ್ಯತೆ.

ಸಿಂಹ: ಪ್ರಜಾಪ್ರತಿನಿಧಿಗಳಿಗೆ ಮಾನಹಾನಿಯಾಗುವ ಸಂದರ್ಭಗಳು ಎದುರಾಗುವ ಸಾಧ್ಯತೆ. ಪ್ರಯಾಣದಲ್ಲಿ ತೊಂದರೆಗಳನ್ನು ಎದುರಿಸಬೇಕಾದೀತು. ಈ ದಿನ ಅಷ್ಟೊಂದು ಸಂತಸ ಕಂಡು ಬಾರದು.

ಕನ್ಯಾ: ದಾಯಾದಿಗಳ ಮತ್ಸರದ ಕಿಡಿ ಪ್ರಜ್ವಲನಗೊಳ್ಳುವ ಸಾಧ್ಯತೆ. ವ್ಯವಹಾರದಲ್ಲಿ ತಕ್ಕಮಟ್ಟಿನ ಚೇತರಿಕೆ. ವಿದ್ಯಾರ್ಥಿಗಳಿಗೆ ಉನ್ನತ ಅಧ್ಯಯನದ ವಿಷಯದಲ್ಲಿ ಗೊಂದಲದ ಸಾಧ್ಯತೆ.

ತುಲಾ: ಶತ್ರುವಿನ ಯೋಜನೆಗಳನ್ನು ಧ್ವಂಸ ಮಾಡುವತ್ತ ತಂತ್ರ ರೂಪಿಸುವಿರಿ. ರಾಜಕೀಯದಲ್ಲಿ ನಿಮ್ಮತನವನ್ನು ಕಾಣುವಿರಿ. ಕಾರ್ಯನಿಮಿತ್ತ ದೂರದ ಪ್ರಯಾಣ ಕೈಗೊಳ್ಳುವ ಸಾಧ್ಯತೆ.

ವೃಶ್ಚಿಕ: ನಿಮ್ಮ ನಡೆ ನುಡಿಯಿಂದಾಗಿ ಆಗಂತುಕರ ಮನ ಗೆಲ್ಲುವಿರಿ. ಮಹಿಳೆಯರಿಗೆ ಉತ್ತಮವಾದ ದಿನವಾಗಿದ್ದು, ವಸ್ತ್ರಾಭರಣ ಖರೀದಿಸುವ ಸಾಧ್ಯತೆ. ಸಂಗಾತಿಯೊಂದಿಗೆ ವಿಶ್ವಾಸದ ನಡೆ.

ಧನು: ಹೊಸ ವಸ್ತ್ರಾಭರಣ ಖರೀದಿಸುವ ಸಾಧ್ಯತೆ. ಸರ್ಕಾರಿ ನೌಕರರಿಗೆ ಅತ್ಯಂತ ಒತ್ತಡದ ಕೆಲಸ ಕಾರ್ಯಗಳು ಎದುರಾಗುವ ಸಾಧ್ಯತೆ. ಅನ್ಯರ ಆಸ್ತಿಗಾಗಿ ಹೋರಾಡುವ ಮನಸ್ಸು ಮಾಡುವಿರಿ.

ಮಕರ: ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಅತ್ಯಂತ ತುರ್ತಿನ ದಿನ. ಔಷಧ ವ್ಯಾಪಾರಸ್ಥರಿಗೆ, ಹಕೀಮರಿಗೆ, ವೈದ್ಯರಿಗೆ ಉತ್ತಮ ಆದಾಯದೊಂದಿಗೆ ಗೌರವವೂ ಲಭ್ಯವಾಗುವ ಸಾಧ್ಯತೆ.

ಕುಂಭ: ದುಗುಡದ ನಡುವೆಯೂ ಉತ್ತಮ ಕಾರ್ಯ ನಿರ್ವಹಿಸಲಿದ್ದೀರಿ. ಚಿನ್ನ, ಬೆಳ್ಳಿ ಆಭರಣ ವ್ಯಾಪಾರಸ್ಥರಿಗೆ ಲಾಭದ ಸಾಧ್ಯತೆ ಕಂಡುಬರುತ್ತಿಲ್ಲ. ದೇವತಾ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ.

ಮೀನ: ವಿಹಾರ ವಿನೋದಗಳಿಂದ ದಿನವನ್ನು ಉಲ್ಲಾಸಮಯವಾಗಿಸಿಕೊಳ್ಳುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ದೂರಪ್ರಯಾಣದಲ್ಲಿ ಅತ್ಯಂತ ಎಚ್ಚರಿಕೆಯಿಂದಿರುವುದು ಒಳಿತು.

ನಿಮ್ಮ ಜನ್ಮದಿನ 25-ಜೂನ್ ಈ ದಿನ ಅತ್ಯಂತ ಶುಭಕರ. ತಡೆ ಇಲ್ಲದೇ ನಡೆಯುವ ಕೆಲಸ ಕಾರ್ಯಗಳು. ವ್ಯವಹಾರದಲ್ಲಿ ಯಶಸ್ಸು ನಿಮ್ಮದಾಗಲಿದೆ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ತಕ್ಕಮಟ್ಟಿನ ಯಶಸ್ಸು. ಹೊಸ ನಿವೇಶನ, ಮನೆ ಮುಂತಾದ ಆಸ್ತಿ ವ್ಯವಹಾರದಲ್ಲಿ ಯಶಸ್ಸು. ಮನೆಯವರ ಆರೋಗ್ಯದಲ್ಲಿ ಸದಾ ಕಿರಿಕಿರಿ ಉಂಟಾದೀತು.

ಪದಬಂಧ 4638

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರಜೆಗಳ ಒಡೆಯ (4)
3.ಪದದಲ್ಲಿರುವ ಪುಸ್ತಕದ ಸರ್ಗ (4)
4.ಮನ್ಮಥನ ಪತ್ನಿ (2)
5.ಜಾಸ್ತಿ ದುಡ್ಡುಳ್ಳ ವ್ಯಕ್ತಿ (4)
7.ತಿರುಗಿದಾಗ ಕಾಣಿಸಿಕೊಂಡಿತೇ ಈ ದೆವ್ವ? (2)
8.ಬಟ್ಟೆಯ ಅಗಲ (2)
9.ಹಿಡಿತದಿಂದ ಖರ್ಚು ಮಾಡುವಿಕೆ (4)
11.ಅಗ್ನಿ ಇಲ್ಲಿದೆ (2)
13.ಅತಿಯಾದ ಸಿಟ್ಟು (4)
14.ಮಲಯ ಪರ್ವತದಲ್ಲಿ ಹುಟ್ಟಿದ ಶ್ರೀಗಂಧ (4)

ಮೇಲಿಂದ ಕೆಳಕ್ಕೆ

1.ಪ್ರತಿಭೆಯಲ್ಲಿರುವ ಕಾಂತಿ (2)
2.ಈತ ಕಾಲಾಳು (3)
3.ಪಣದಲ್ಲಿನ ಅಳತೆ (4)
4.ಯುದ್ಧಭೂಮಿಯಿದು (4)
5.ಯೌವ್ವನ ಹೀಗೆ ಬಂದಿದೆ (3)
6.ಕೆನ್ನೆಗೆ ಹೊಡೆದ ಏಟು (4)
10.ನಿಷ್ಪ್ರಯೋಜಕ ಮಾತು (4)
11.ಕೊನೆಗೆ ಬಲವಿಟ್ಟು ನೀಡಿದ ಉತ್ತೇಜನ (3)
12.ಗಂಡು ಕೋಳಿಯಿದು (2)



4637ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಳ್ಳೆದೆ 2.ಆಮ್ಲಜನಕ 4. ಸಾಕ್ಷಾತ್ಕಾರ 6.ವದಂ 7.ತಮ 9.ದಿವಾನ 11.ತಲ 13.ನವಣೆ 14.ಕರವಾಲ 15.ಮಂಗಳವಾದ್ಯ 16.ಭೂಮಿಕೆ

ಮೇಲಿಂದ ಕೆಳಕ್ಕೆ: 1.ಅಹಿಂಸಾವ್ರತ 3.ನವದಂಪತಿ 5.ರಶೀದಿ 8.ಮದುವಣಿಗ 10.ನರಕ 12.ಲವಲವಿಕೆ

ಸುಡೊಕು 5024

				5		7		2
		3	6		7			
		7		3		6		9
	6			1		8		7
7		9	5				1	
	8			9		3		5
	7		3		1			
5				2			7	3
	3		9		5		6	8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5023 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಕಾರ್ಮಿಕರಿಗೆ ಹುಳ ಹಿಡಿದ ಬೇಳೆ, ಮುಗ್ಗಲು ಅಕ್ಕಿ ವಿತರಣೆ: ಆರೋಪ

ಕಳಪೆ ಆಹಾರ ಕಿಟ್ ನೀಡಿ ₹300 ಕಮಿಷನ್ ಲೂಟಿ?

• ಗುರು ಪಿ.ಎಸ್.

ಬೆಂಗಳೂರು: ಕಾರ್ಮಿಕರಿಗೆ ಹುಳ ಹಿಡಿದ ಬೇಳೆ, ಮುಗ್ಗಲು ಅಕ್ಕಿ, ಕಪ್ಪುಗಟ್ಟಿದ ಉಪ್ಪಿನಂತಹ ಆಹಾರ ಪದಾರ್ಥಗಳ ಕಿಟ್ ವಿತರಿಸಿ ಪ್ರತಿ ಕಿಟ್‌ನಲ್ಲಿ ₹300 ಕಮಿಷನ್ ಹೊಡೆಯಲಾಗಿದೆ ಎಂದು ಕಾರ್ಮಿಕ ಸಂಘಟನೆಗಳು ಆರೋಪಿಸಿದ್ದು, ಈ ಕುರಿತು ತನಿಖೆಗೆ ಒತ್ತಾಯಿಸಿವೆ.

ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕಾರ್ಮಿಕ ಇಲಾಖೆಯ ವಿರುದ್ಧ ಕಾರ್ಮಿಕರು ಗಂಭೀರ ಆರೋಪ ಮಾಡಿದ್ದಾರೆ.

‘ಕಳಪೆ ದಿನಸಿ ಪದಾರ್ಥಗಳನ್ನು ನೀಡಿರುವುದಲ್ಲದೆ, ಹೆಚ್ಚು ದುಡ್ಡು ವ್ಯಯಿಸಲಾಗಿದೆ. ಇವೇ ಪದಾರ್ಥಗಳು ಚಿಲ್ಲರೆ ಮಾರುಕಟ್ಟೆಯಲ್ಲಿ ಅಕ್ಕಿ ಸಹಿತ ₹667 ಆಗುತ್ತದೆ. ಆದರೆ, ಮಂಡಳಿಯು ನೀಡಿರುವ ಆಹಾರದ ಕಿಟ್‌ಗೆ, ಅಕ್ಕಿ ಬಿಟ್ಟು ₹823 ನೀಡಲಾಗಿದೆ. ಕೆಜಿಗೆ ₹23ರಂತೆ ಐದು ಕೆಜಿ ಅಕ್ಕಿ ಸೇರಿ ಒಂದು ಕಿಟ್‌ಗೆ ₹938 ಖರ್ಚು ಮಾಡಲಾಗಿದೆ. ಅಂದರೆ, ಪ್ರತಿ ಕಿಟ್‌ನಲ್ಲಿ ₹300ಕ್ಕೂ ಹೆಚ್ಚು ಕಮಿಷನ್ ಪಡೆಯಲಾಗಿದ್ದು, ಈ ಬಗ್ಗೆ ತನಿಖೆ ನಡೆಸಬೇಕು’ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿ ಸಂಚಾಲಕ ಕೆ.ಮಹಾಂತೇಶ್ ಒತ್ತಾಯಿಸಿದರು.

ಕಿಟ್ ಜೊತೆಗೆ ವಿತರಿಸಲಾಗಿರುವ ಕಳಪೆ ತೊಗರಿ ಬೇಳೆ

5 ಕೆಜಿ ಅಕ್ಕಿ, 2 ಕೆಜಿ ಗೋಧಿ ಹಿಟ್ಟು, ತಲಾ 1 ಕೆಜಿ ಬೇಳೆ, ರವೆ, ಅವಲಕ್ಕಿ, ಉಪ್ಪು, ಸಕ್ಕರೆ, 1 ಲೀಟರ್ ಅಡುಗೆ ಎಣ್ಣೆ ಸೇರಿದಂತೆ ಒಟ್ಟು ಹತ್ತು ಪದಾರ್ಥಗಳ ಕಿಟ್ ನೀಡಲಾಗುತ್ತಿದೆ. ಸದ್ಯ, ಇಂತಹ 3.80 ಲಕ್ಷ ಕಿಟ್‌ಗಳನ್ನು ಸಿದ್ಧಪಡಿಸಿ ವಿತರಿಸಲಾಗುತ್ತಿದೆ. ಒಟ್ಟು 5 ಲಕ್ಷದಿಂದ 6 ಲಕ್ಷ ಕಿಟ್‌ಗಳನ್ನು ವಿತರಿಸುವ ಉದ್ದೇಶವನ್ನು ಮಂಡಳಿ ಹೊಂದಿದೆ.

ಕಿಟ್‌ನಲ್ಲಿ 10 ಕೆಜಿ ಅಕ್ಕಿ ಇರಬೇಕು ಎಂದೂ ಆರ್ಥಿಕ ಇಲಾಖೆಯ ಷರತ್ತು ವಿಧಿಸಿತ್ತು. ಆದರೆ, ಒಂದು ಕಿಟ್‌ನಲ್ಲಿ 5 ಕೆಜಿ ಮಾತ್ರ ನೀಡಲಾಗುತ್ತಿದೆ.



ಉಪ್ಪು ಸೇರಿದಂತೆ ಯಾವುದೂ ಸರಿ ಇಲ್ಲ. ಈ ಅಕ್ಕಿಯಿಂದ ಮಾಡಿದ ಅನ್ನ ತಿನ್ನಲಾಗುತ್ತಿಲ್ಲ. ಹಣವಾದರೂ ಕೊಟ್ಟಿದ್ದರೆ ನಾವೇ ದಿನಸಿ ಕೊಳ್ಳುತ್ತಿದ್ದೆವು

ಪ್ರಸಾದ್ ನಾರಾಯಣನ್, ಕಾರ್ಮಿಕ

ನನಗೆ ಬಂದ ಕಿಟ್ ಮಾತ್ರ ಕಳಪೆಯಾಗಿದೆ ಎಂದುಕೊಂಡಿದ್ದೆ. ಸುಮಾರು 300 ಜನರಿಗೂ ಕಳಪೆ ದಿನಸಿಯನ್ನೇ ವಿತರಿಸಲಾಗಿದೆ. ಬಳಸಲು ಸಾಧ್ಯವಿಲ್ಲ

ಶೇಖರ್, ಕಾರ್ಮಿಕ

‘ದಿನಸಿ ಪದಾರ್ಥಗಳನ್ನು ವಿತರಿಸುವ ಬದಲು, ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ವರ್ಗಾಯಿಸಬೇಕು ಎಂದು ಕಳೆದ ವರ್ಷವೇ ಕೇಂದ್ರ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಿದೆ. ಆಹಾರ ಪದಾರ್ಥ ವಿತರಣೆಗೆ ಯಾವುದೇ ಟೆಂಡರ್ ಕರೆಯಬಾರದು, ಕರೆದಿದ್ದರೂ ಅದನ್ನು ರದ್ದುಗೊಳಿಸಬೇಕು ಎಂದೂ ಸೂಚಿಸಿದೆ. ಆದರೆ, ಆರು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ’ ಎಂದು ಮಹಾಂತೇಶ್ ಹೇಳಿದರು.

ಶೆಫ್‌ಟಾಕ್ , ಅದಮ್ಯ ಚೇತನ, ಆರ್ಟ್ ಆಫ್ ಲಿವಿಂಗ್, ರೇಯಾನ್ ಎಂಟರ್‌ಪ್ರೈಸಸ್, ಪ್ರತಿಗಿಂಗ ಎಂಟರ್‌ಪ್ರೈಸಸ್, ವೈಟ್ ಪೆಟಲ್ಸ್ ಸಂಸ್ಥೆಗಳು ಗುತ್ತಿಗೆ ಪಡೆದಿವೆ.

‘ಕಾರ್ಮಿಕರ ಖಾತೆಗಳಿಗೆ ತಲಾ ₹10 ಸಾವಿರ ಹಾಕುವಂತೆ ಮನವಿ ಮಾಡಿದ್ದೆವು. ಇದರಿಂದ ಆಯಾ ಭಾಗದಲ್ಲಿ ಆರ್ಥಿಕ ಚಟುವಟಿಕೆ ಚುರುಕುಗೊಳ್ಳಲೂ ಸಹಾಯವಾಗುತ್ತದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಕಾರ್ಮಿಕ ಮುಖಂಡರೊಬ್ಬರು ಹೇಳಿದರು.

’ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ವಿತರಿಸಲು ಆಯಾ ಶಾಸಕರಿಗೆ 10 ಸಾವಿರ ದಿನಸಿ ಕಿಟ್ ವಿತರಿಸಲು ಕಾರ್ಮಿಕ ಇಲಾಖೆ ಮುಂದಾಗಿದೆ. ಹೀಗಾದರೆ, ಶಾಸಕರ ಬೆಂಬಲಿಗರಿಗೇ ಕಿಟ್‌ಗಳು ಹೋಗುವ ಸಾಧ್ಯತೆ ಇದೆ. ಕಳೆದ ಬಾರಿ ಕೆಲವು ಶಾಸಕರು ಈ ಕಿಟ್‌ಗಳನ್ನೂ ವಿತರಿಸಿರಲಿಲ್ಲ. ಅವುಗಳು ಹಾಗೇ ಕೊಳೆತು ಹೋಗಿದ್ದವು’ ಎಂದೂ ಅವರು ಹೇಳಿದರು.

ಸ್ಪಷ್ಟ ಉತ್ತರ ಬರಲೇ ಇಲ್ಲ !



ಶಿವರಾಮ್ ಹೆಬ್ಬಾರ್

ದಿನಸಿ ಪದಾರ್ಥಗಳ ಗುಣಮಟ್ಟದ ಬಗ್ಗೆ, ಹೆಚ್ಚು ಬೆಲೆ ನಿಗದಿ ಮಾಡಿರುವ ಬಗ್ಗೆ ಸಚಿವರಾಗಲಿ, ಅಧಿಕಾರಿಗಳಾಗಲಿ ಸ್ಪಷ್ಟ ಉತ್ತರ ನೀಡಲಿಲ್ಲ. ಸಭೆಯಲ್ಲಿದ್ದೇವೆ ಎಂದು ಚುಟುಕಾಗಿ ಉತ್ತರಿಸಿ, ಕರೆ ಕಡಿತಗೊಳಿಸಿದರು.

‘ಬೇಳೆ ಮತ್ತಿತರ ಪದಾರ್ಥಗಳ ಗುಣಮಟ್ಟ ಸರಿಯಾಗಿಲ್ಲ ಎಂಬ ದೂರುಗಳ ಬಗ್ಗೆ ಶೀಘ್ರವೇ ಪರಿಶೀಲನೆ ನಡೆಸಿ, ಕ್ರಮ ಕೈಗೊಳ್ಳಲಾಗುವುದು’ ಎಂದು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಹೇಳಿದರು.

‘ತೊಗರಿ ಬೇಳೆ ಸರಿ ಇಲ್ಲ ಎಂಬ ದೂರು ಬಂದ ಕೂಡಲೇ ಸರಿ ಪಡಿಸಲಾಗಿದೆ. ಆ ಬೇಳೆಯನ್ನು ಬದಲಿಸಿ, ಬೇರೆ ಬೇಳೆ ನೀಡುವ ವ್ಯವಸ್ಥೆ ಮಾಡಲಾಗಿದೆ. ಆಯಾ ಕ್ಷೇತ್ರದಲ್ಲಿನ ಕಾರ್ಮಿಕರ ಸಂಖ್ಯೆ ಪರಿಗಣಿಸಿ, ಶಾಸಕರಿಗೆ ತಲಾ 10 ಸಾವಿರ ಕಿಟ್ ನೀಡುವ ಚಿಂತನೆ ಇದೆ’ ಎಂದು ಬೆಂಗಳೂರು ವಿಭಾಗದ ಉಪ ಕಾರ್ಮಿಕ ಆಯುಕ್ತ ಉಮೇಶ್ ತಿಳಿಸಿದರು. ‘ಯಾವುದೋ ಒಂದು ಲೋಡ್ ಲಾರಿಯಲ್ಲಿ ಮಾತ್ರ ಕಳಪೆ ತೊಗರಿ ಬೇಳೆ ಪೂರೈಕೆಯಾಗಿದೆ. ತಕ್ಷಣಕ್ಕೆ ಅದನ್ನು ಬದಲಾಯಿಸಿದ್ದೇವೆ. ರಾಜ್ಯದ ಬೇರೆ ಕಡೆಯಿಂದ ಯಾವುದೇ ದೂರು ಬಂದಿಲ್ಲ. ಇನ್ನು, ಟೆಂಡರ್ ಕರೆದೇ ಗುತ್ತಿಗೆ ನೀಡಲಾಗಿದೆ. ಯಾವ ಸಂಸ್ಥೆಗಳು ಕಡಿಮೆ ದರ ನಮೂದಿಸಿದ್ದವೋ, ಅದೇ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ’ ಎಂದು ಮಂಡಳಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಅಕ್ರಂ ಪಾಷಾ ಹೇಳಿದರು.

ಸುದ್ದಿ 2 ನಿಮಿಷ

ಶಿಕ್ಷಕರಿಗೆ ಲಸಿಕೆ: ಜಿಲ್ಲಾಧಿಕಾರಿಗಳಿಗೆ ಸುರೇಶ್ ಕುಮಾರ್ ಸೂಚನೆ

ಬೆಂಗಳೂರು: 'ಜುಲೈ ಮೂರನೇ ವಾರದಲ್ಲಿ ನಡೆಯಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗೆ ಆದ್ಯತೆಯಲ್ಲಿ ಕೋವಿಡ್ ಲಸಿಕೆ ನೀಡಲು ಅಗತ್ಯ ತೆಗೆದುಕೊಳ್ಳಬೇಕು’ ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಸೂಚಿಸಿದ್ದಾರೆ.

‘ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗಿ ಆಗಲಿರುವವರ ಪಟ್ಟಿಯನ್ನು ಆಯಾ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ನೀಡಲಿದ್ದಾರೆ. ಅವರೆಲ್ಲರಿಗೂ ಪರೀಕ್ಷೆಗೂ ಮೊದಲೇ ಲಸಿಕೆ ಸಿಗುವಂತೆ ಕ್ರಮ ವಹಿಸಬೇಕು’ ಎಂದು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಅವರು ತಿಳಿಸಿದ್ದಾರೆ.

‘ಅಂತರ ಕಾಪಾಡಿಕೊಳ್ಳುವ ಉದ್ದೇಶದಿಂದ ಈ ಬಾರಿ 6 ಸಾವಿರಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಹೀಗಾಗಿ ಹೆಚ್ಚಿನ ಶಿಕ್ಷಕರು, ಅಧಿಕಾರಿಗಳು, ಸಿಬ್ಬಂದಿ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ’ ಎಂದೂ ಹೇಳಿದ್ದಾರೆ.

ಶಿಕ್ಷಕರ ಬಿಡುಗಡೆಗೆ ಸೂಚನೆ: ಎಸ್ಸೆಸ್ಸೆಲ್ಸಿ ಪರೀಕ್ಷಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬೇಕಿರುವುದರಿಂದ ಶಿಕ್ಷಕರನ್ನು ಕೋವಿಡ್ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸುರೇಶ್ ಕುಮಾರ್ ನಿರ್ದೇಶನ ನೀಡಿದ್ದಾರೆ.

‘ಶಿಕ್ಷಕರು ಕೋವಿಡ್ ಲಸಿಕೆ ಪಡೆಯುವ ಜೊತೆಗೆ, ಪರೀಕ್ಷಾ ಪೂರ್ವ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು. ಅಲ್ಲದೆ, ಶೈಕ್ಷಣಿಕ ಚುಟುವಟಿಕೆ ಕೂಡಾ ಆರಂಭವಾಗಿದೆ. ಶಾಲೆಗಳಲ್ಲಿ ಮಕ್ಕಳ ದಾಖಲಾತಿ ನಡೆಯುತ್ತಿದೆ. ಹೀಗಾಗಿ, ಕೋವಿಡ್ ಕರ್ತವ್ಯದಿಂದ ತಕ್ಷಣ ಬಿಡುಗಡೆಗೊಳಿಸಬೇಕು’ ಎಂದಿದ್ದಾರೆ.

ಮೊಳಕಾಲ್ಮುರು: ಕಪ್ಪು ಶಿಲೀಂಧ್ರದಿಂದ ವೃದ್ಧನ ಸಾವು

ಮೊಳಕಾಲ್ಮುರು: ಕಪ್ಪು ಶಿಲೀಂಧ್ರ ರೋಗದಿಂದ ಬಳಲುತ್ತಿದ್ದ ತಾಲ್ಲೂಕಿನ ಗುಂಡ್ಲೂರು ಗ್ರಾಮದ 65 ವರ್ಷದ ವೃದ್ಧರೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ರಾತ್ರಿ ಮೃತಪಟ್ಟಿದ್ದಾರೆ.

ಸೋಂಕು ಕಂಡುಬಂದ ಹಿನ್ನೆಲೆಯಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೋಂಕಿನ ಪ್ರಮಾಣ ಹೆಚ್ಚಾಗಿದ್ದರಿಂದ ಬದುಕುಳಿಯುವ ಸಾಧ್ಯತೆ ಕಡಿಮೆ ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದರಿಂದ ಗ್ರಾಮಕ್ಕೆ ಕರೆದುಕೊಂಡು ಬರಲಾಗಿತ್ತು. ಬಳಿಕ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಅಭಿನವ್ ತಿಳಿಸಿದರು.

ಮೂಗು, ಕಿವಿ ಹಾಗೂ ಮಿದುಳಿಗೆ ಕಪ್ಪು ಶಿಲೀಂಧ್ರದ ಸೋಂಕು ವ್ಯಾಪಿಸಿದ್ದರಿಂದ ಮೃತಪಟ್ಟಿದ್ದಾರೆ ಎಂದು ಡಾ.ಅಭಿನವ್ ತಿಳಿಸಿದರು.

ಕೋವಿಡ್–19: ದೃಢ ಪ್ರಮಾಣ ಶೇ 2.46ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 3,979 ಮಂದಿ ಕೋವಿಡ್ ಪೀಡಿತರಾಗಿರುವುದು ಗುರುವಾರ ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.10 ಲಕ್ಷಕ್ಕೆ ಇಳಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.61 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.46 ರಷ್ಟಕ್ಕೆ ಇಳಿದಿದೆ. ಸುಮಾರು ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ದೃಢ ಪ್ರಮಾಣ ಇದಾಗಿದೆ. ರಾಜ್ಯದ 29 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿದೆ. ಬೆಂಗಳೂರಿನಲ್ಲಿ 969 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಸಂಖ್ಯೆ 14 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.23 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 138 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 3.46ರಷ್ಟು ವರದಿಯಾಗಿದೆ. ರಾಜ್ಯದ 25 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 22 ಮಂದಿ ಮೃತಪಟ್ಟಿದ್ದಾರೆ. ದಕ್ಷಿಣ ಕನ್ನಡದಲ್ಲಿ 15, ಬೆಂಗಳೂರಿನಲ್ಲಿ 14, ಧಾರವಾಡ ಹಾಗೂ ಬಳ್ಳಾರಿಯಲ್ಲಿ ತಲಾ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 34,425ಕ್ಕೆ ತಲುಪಿದೆ.

ಸೋಂಕಿತರಲ್ಲಿ 9,768 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.78 ಲಕ್ಷ ದಾಟಿದೆ.

ಮೈಸೂರು: ಮೂರು ‘ಡೆಲ್ಟಾ’ ಪ್ರಕರಣ ಪತ್ತೆ

ಮೈಸೂರು: ಮೈಸೂರಿನಲ್ಲಿ ಕೊರೊನಾ ವೈರಾಣುವಿನ ರೂಪಾಂತರಗೊಂಡಿರುವ ‘ಡೆಲ್ಟಾ ಪ್ಲಸ್’ ತಳಿಯ ಮತ್ತೆ ಮೂರು ಪ್ರಕರಣಗಳು ವರದಿಯಾಗಿವೆ.

‘ಕೋವಿಡ್ ಪರೀಕ್ಷೆಗೆ ಜಿಲ್ಲೆಯಲ್ಲಿ ಸಂಗ್ರಹಿಸಲಾದ ಗಂಟಲ ದ್ರವ ಮಾದರಿಗಳಲ್ಲಿ 20 ಮಾದರಿಗಳನ್ನು ಮೇ 13 ರಂದು ಬೆಂಗಳೂರಿನ ನಿಮ್ಹಾನ್ಸ್‌ಗೆ ಕಳುಹಿಸಿಕೊಡಲಾಗಿತ್ತು. ಇವುಗಳಲ್ಲಿ ನಾಲ್ಕು ಮಾದರಿಗಳಲ್ಲಿ ‘ಡೆಲ್ಟಾ’ ರೂಪಾಂತರಿ ತಳಿ ಸೋಂಕು ಇರುವುದು ದೃಢಪಟ್ಟಿದೆ’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್ ತಿಳಿಸಿದರು.

ಇದರಲ್ಲಿ ಮೂರು ಮಾದರಿಗಳು ‘ಡೆಲ್ಟಾ’ದ ಬಿ1.617.2 ತಳಿ ಆಗಿವೆ. ಒಂದು ಮಾದರಿ ‘ಡೆಲ್ಟಾ ಪ್ಲಸ್’ ಬಿ1.617.1 ತಳಿಯದ್ದು ಎಂಬುದು ದೃಢಪಟ್ಟಿದೆ. ಎಲ್ಲ ಸೋಂಕಿತರು ಗುಣಮುಖರಾಗಿದ್ದಾರೆ. ರೂಪಾಂತರಗೊಂಡ ವೈರಾಣು ಹರಡದಂತೆ ಈಗಾಗಲೇ ಜಿಲ್ಲೆಯಲ್ಲಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಡೆಲ್ಟಾ ಪ್ಲಸ್ ಎದುರಿಸಲು ತುರ್ತು ಕ್ರಮ ಅಗತ್ಯ
ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ

ಬೆಂಗಳೂರು: ಕೋವಿಡ್ ಎರಡನೇ ಅಲೆ ಮುಗಿಯುವ ಮೊದಲೇ ಡೆಲ್ಟಾ ಪ್ಲಸ್ ಎಂಬ ಇನ್ನಷ್ಟು ತೀವ್ರವಾದ ರೂಪಾಂತರಿ ವೈರಾಣು ಹರಡುವ ಭೀತಿ ಸೃಷ್ಟಿಯಾಗಿದೆ. ಅದನ್ನು ನಿಭಾಯಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಹಲವು ರೀತಿಯ ಕ್ರಮಗಳನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳಬೇಕು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

‘ದೇಶದ ಶೇ 80ರಷ್ಟು ಜನರಿಗೆ ಲಸಿಕೆ ನೀಡುವವರೆಗೆ ಅಂತರರಾಷ್ಟ್ರೀಯ ವಿಮಾನಗಳನ್ನು ನಿರ್ಬಂಧಿಸಬೇಕು. ಡೆಲ್ಟಾ ಪ್ಲಸ್ ಪತ್ತೆಯಾದ ಸ್ಥಳಗಳಲ್ಲಿ ನಿಗಾ ವಹಿಸಿ ಇತರರಿಗೆ ಹರಡದಂತೆ ನೋಡಿಕೊಳ್ಳಬೇಕು. ಕೇಂದ್ರ– ರಾಜ್ಯ ಸರ್ಕಾರಗಳು ವ್ಯಾಪಕವಾಗಿ ಮತ್ತು ಉಚಿತವಾಗಿ ಸಾರ್ವಜನಿಕ ಆಂದೋಲನಗಳ ಮೂಲಕ ಲಸಿಕೆ ನೀಡಬೇಕು. ಲಸಿಕೆ ಉತ್ಪಾದಕ ಕಂಪನಿಗಳು ಪ್ರತಿ ದಿನ ಸರ್ಕಾರಕ್ಕೆ ಮತ್ತು ಖಾಸಗಿಯವರಿಗೆ ನೀಡಿದ ಲಸಿಕೆಗಳ ಕುರಿತು ಪ್ರಕಟಣೆ ಹೊರಡಿಸಬೇಕು’ ಎಂದು ಅವರು ಹೇಳಿದ್ದಾರೆ.

ಸಿದ್ದರಾಮಯ್ಯ

‘ಖಾಸಗಿ ಆಸ್ಪತ್ರೆಗಳು ಕಂಪನಿಗಳಿಂದ ಲಸಿಕೆಗಳನ್ನು ಸ್ವೀಕರಿಸಿ, ಗರಿಷ್ಠ 10 ದಿನ ಮಾತ್ರ ದಾಸ್ತಾನಿರಿಸಿಕೊಳ್ಳಬೇಕೆಂದು ಆದೇಶ ಹೊರಡಿಸುವಂತೆ ತಜ್ಞರು ಶಿಫಾರಸು ಮಾಡಿದ್ದಾರೆ. ಈ ಕೆಲಸ ತುರ್ತಾಗಿ ಆಗಬೇಕು. ಮುಂದಿನ ಮೂರು- ನಾಲ್ಕು ತಿಂಗಳಲ್ಲಿ ಲಸಿಕೆ ಹಾಕುವಷ್ಟು ಪ್ರಮಾಣದಲ್ಲಿ ಉತ್ಪಾದಿಸಲು ಲಸಿಕೆಗಳ ಮೇಲಿನ ಪೇಟೆಂಟು ಕಿತ್ತು ಹಾಕಬೇಕು’ ಎಂದು ಸಲಹೆ ನೀಡಿದ್ದಾರೆ.

‘ಇದೇ 30ರಂದು ಮೋದಿ ‘ಕೋವಿನ್ ಗ್ಲೋಬಲ್ ಕಾನ್‌ಕ್ಲೇವ್’ ನಡೆಸಲು ಉದ್ದೇಶಿಸಿದ್ದಾರೆಂಬ ಮಾಹಿತಿ ಇದೆ. ದೇಶ ಕೋವಿಡ್ ಎದುರಿಸಿದ ರೀತಿಗಳನ್ನು ಈ ಸಮಾವೇಶದಲ್ಲಿ ತಿಳಿಸುವುದಾಗಿ ಹೇಳಿದ್ದಾರೆ. ಇದಂತೂ ಅತ್ಯಂತ ನಾಚಿಕೆಗೇಡಿನ ವಿಷಯ. ತಮ್ಮ ಸಾಧನೆಗಳ ಜಾಗತಿಕ ಸಮಾವೇಶ ನಡೆಸುವ ಬದಲು, ಲಸಿಕೆ ಮೇಲಿನ ಪೇಟೆಂಟುಗಳನ್ನು ತೆಗೆದು ಹಾಕುವಂತೆ ವಿಶ್ವದ ನಾಯಕರ ಮೇಲೆ ಒತ್ತಡ ಹೇರಬೇಕು’ ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ನರ್ಸರಿ ಕೆಲಸದಲ್ಲಿ ಅನುಭವ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಹೆಸರುಘಟ್ಟ, ಬೆಂಗಳೂರು . ವಸತಿ ಉಚಿತ. 7349251305/ 7349251309.

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ_ಸಮಸ್ಯೆ ಯಾವುದೇಯಿದ್ದರೂ ಶ್ರೀ_ಭದ್ರಕಾಳಿದೇವಿಯ ಬಲಿಷ್ಠ_ಪೂಜೆಯಿಂದ ಗ್ಯಾರಂಟಿ_ಪರಿಹಾರ. ವಿಶೇಷ_ಸೂಚನೆ: ನಮ್ಮ_ಮೋಡಿ_ಸಿದ್ಧಾಂತ ತಪ್ಪದು. ಸ್ತ್ರೀ_ಮೋಡಿ, ಪುರುಷ_ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಪ್ರವಾಸಿಗರಿಗೆ ಮುಕ್ತ ಹಂಪಿ ಸ್ಮಾರಕಗಳ ವೀಕ್ಷಣೆಯನ್ನು ಗುರುವಾರದಿಂದ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗಿದೆ. ಮೊದಲ ದಿನವೇ ವಿವಿಧ ಕಡೆಗಳಿಂದ ಬಯಲು ವಸ್ತು ಸಂಗ್ರಹಾಲಯಕ್ಕೆ ಪ್ರವಾಸಿಗರು ಭೇಟಿ ಕೊಟ್ಟು ಸ್ಮಾರಕಗಳನ್ನು ಕಣ್ತುಂಬಿಕೊಂಡರು. ಹಂಪಿಯ ವಿಜಯ ವಿಠಲ ದೇವಸ್ಥಾನದ ಸಪ್ತಸ್ವರ ಮಂಟಪ, ಕಲ್ಲಿನ ರಥದ ಕುರಿತು ಹಂಪಿ ಮಾರ್ಗದರ್ಶಿ ವಿ. ಶ್ರೀನಿವಾಸ್ ಅವರು ವಿವರಿಸುವಾಗ ಪ್ರವಾಸಿಗರು ತದೇಕ ಚಿತ್ತದಿಂದ ಆಲಿಸಿದರು

ಚಿತ್ರ: ರಾಚಯ್ಯ ಎಸ್. ಸ್ಥಾವರಿಮಠ

‘ಮೊದಲ ಡೋಸ್ ಲಸಿಕೆ ಬಳಿಕ ಕಾಲೇಜು ಆರಂಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹದಿನೆಂಟು ವರ್ಷ ದಾಟಿದ ಕಾಲೇಜು ವಿದ್ಯಾರ್ಥಿಗಳು, ಬೋಧಕ ಹಾಗೂ ಸಹಾಯಕ ಸಿಬ್ಬಂದಿಗೆ ಆದ್ಯತೆ ಮೇಲೆ ಕೋವಿಡ್ ಲಸಿಕೆ ನೀಡಲಾಗುವುದು. ಮೊದಲ ಡೋಸ್ ಲಸಿಕೆ ಹಾಕಿದ ನಂತರ ಕಾಲೇಜುಗಳಲ್ಲಿ ನೇರ ತರಗತಿಗಳನ್ನು ಆರಂಭಿಸುವ ಬಗ್ಗೆ ನಿರ್ಧರಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ಟ್ವೀಟ್ ಮಾಡಿರುವ ಅವರು, ‘ಸಂಬಂಧಪಟ್ಟ ಅಧಿಕಾರಿಗಳ ಸಮನ್ವಯದೊಂದಿಗೆ ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಲಸಿಕೆ ಅಭಿಯಾನ ಕೈಗೊಳ್ಳಲಾಗುವುದು. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಲಸಿಕೆ ಹಾಕಿದ ನಂತರ ಪದವಿ ತರಗತಿಗಳನ್ನು ಆರಂಭಿಸುವ ಬಗ್ಗೆ ಚರ್ಚಿಸಲಾಯಿತು. ಆಯಾ ಕಾಲೇಜುಗಳಲ್ಲಿಯೇ ಲಸಿಕೆ ಅಭಿಯಾನ ಕೈಗೊಳ್ಳಲಾಗುವುದು’ ಎಂದಿದ್ದಾರೆ.

‘ಲಸಿಕೆ ಪಡೆಯಲು ಆಯಾ ಸಂಸ್ಥೆಗಳಲ್ಲಿ ನೀಡಲಾಗುವ ದೃಢೀಕರಣ ಪತ್ರ ಹಾಜರುಪಡಿಸಬೇಕು. ಪ್ರತಿ ಕಾಲೇಜಿನ ಮುಖ್ಯಸ್ಥರು ಹಾಗೂ ಇನ್ನೊಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗುವುದು. ಈ ಲಸಿಕೀಕರಣಕ್ಕೆ ಪ್ರತ್ಯೇಕ ಮಾರ್ಗಸೂಚಿ (ಎಸ್‌ಒಪಿ) ಇರಲಿದೆ. ಅದರಂತೆಯೇ ಲಸಿಕೀಕರಣ ನಡೆಸಲಾಗುವುದು. ನೋಡಲ್ ಅಧಿಕಾರಿಗಳು ಆಯಾ ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲ ಅರ್ಹರಿಗೂ ತಪ್ಪದೇ ಲಸಿಕೆ ಹಾಕಿಸುವಂತೆ ಸೂಚಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಲಸಿಕೆ ಕೊಡಲಿ ಬಿಡಲಿ ಕಲಿಕೆ ನಿಲ್ಲುವುದಿಲ್ಲ. ಲಸಿಕೆ ಪಡೆದ ಬಳಿಕ ವಿದ್ಯಾರ್ಥಿಗಳು ನೇರವಾಗಿ ತರಗತಿಗಳಿಗೆ ಹಾಜರಾಗಬಹುದು ಅಥವಾ ಆನ್‌ಲೈನ್ ತರಗತಿಗೆಗಾದರೂ ಹಾಜರಾಗಬಹುದು. ಹಾಜರಾತಿ ಮಾತ್ರ ಕಡ್ಡಾಯ’ ಎಂದು ಅಶ್ವತ್ಥನಾರಾಯಣ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎರಡು ದಿನಗಳ ಅಂತರದಲ್ಲಿ ತಂದೆ– ತಾಯಿ ಸಾವು

‘ಅಂಗವಿಕಲನಾಗಿರುವ ನನಗೆ ದಿಕ್ಕೇ ತೋಚದಾಗಿದೆ’

• ಅನಿತಾ ಎಚ್.

ದಾವಣಗೆರೆ: ‘ಅಂಗವಿಕಲನಾಗಿರುವ ನನಗೆ ಮತ್ತು ನನ್ನ ತಮ್ಮನಿಗೆ ಅಪ್ಪ, ಅಮ್ಮನೇ ಎಲ್ಲ. ಅವರಿಲ್ಲದ ಬದುಕನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ. ಲಕ್ಷಾಂತರ ರೂಪಾಯಿ ವ್ಯಯಿಸಿದರೂ ಅವರನ್ನು ಬದುಕಿಸಿಕೊಳ್ಳಲು ಆಗಲಿಲ್ಲ. ಒಂದೆಡೆ ಬದುಕಿನ ಸವಾಲು, ಇನ್ನೊಂದೆಡೆ ಸಾಲದ ಶೂಲ. ಎಲ್ಲವನ್ನೂ ಹೇಗೆ ನಿಭಾಯಿಸುವುದು ದಿಕ್ಕೇ ತೋಚದಾಗಿದೆ’

ದಾವಣಗೆರೆ ಜಿಲ್ಲೆಯ ತ್ಯಾವಣಿಗೆ ಗ್ರಾಮದಲ್ಲಿ ಕೊರೊನಾದಿಂದ ಮೃತಪಟ್ಟ ಶಿಕ್ಷಕ ಬಿ. ಅಜ್ಜಪ್ಪ (56), ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಹನುಮಮ್ಮ ಅಜ್ಜಪ್ಪ (48) ದಂಪತಿ ಅವರ ಹಿರಿಯ ಪುತ್ರ ದರ್ಶನ್ ಅವರ ಮಾತಿದು.

‘ಅಪ್ಪ ಚಿಕ್ಕಗಂಗೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಜತೆಗೆ ಕೋವಿಡ್ ಕರ್ತವ್ಯಕ್ಕೂ ಅವರನ್ನು ನಿಯೋಜಿಸಲಾಗಿತ್ತು. ಕೆಲಸದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿದ್ದರು. ತಪ್ಪಾದರೆ ಮೇಲಿಂದ ಪ್ರಶ್ನೆ ಮಾಡುತ್ತಾರೆ ಎಂದು ಸ್ವತಃ ಮುತುವರ್ಜಿ ವಹಿಸುತ್ತಿದ್ದರು. ಕೊರೊನಾ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದ ಅಪ್ಪನಿಗೇ ನೆಗಡಿ, ಕೆಮ್ಮು ಕಾಣಿಸಿಕೊಂಡಾಗ ಮಾಮೂಲಿ ಸಮಸ್ಯೆ ಎಂದು ಗ್ರಾಮದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮತ್ತೆ ಕೆಲಸಕ್ಕೆ ಹೋಗುತ್ತಿದ್ದರು. ಒಂದು ದಿನ ರಾತ್ರಿ ಇದ್ದಕ್ಕಿದ್ದಂತೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತು. ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಬೆಡ್ ಸಿಗದೆ ಪರದಾಡಬೇಕಾಯಿತು. ಕೊನೆಗೆ ಬಾಪೂಜಿ ಆಸ್ಪತ್ರೆಯಲ್ಲಿ ಬೆಡ್ ವ್ಯವಸ್ಥೆಯಾಯಿತು. ನಂತರ ಸಿಟಿ ಮೆಡಿಕಲ್ ಆಸ್ಪತ್ರೆಗೂ ಸೇರಿಸಿದೆವು’ ಎಂದು ದರ್ಶನ್ ಚಿಕಿತ್ಸೆಗಾಗಿ ಪಟ್ಟ ಪಡಿಪಾಟಲನ್ನುವಿವರಿಸಿದರು.

ಮಕ್ಕಳ ಆಸರೆ ಕಸಿದ ಕೊರೊನಾ

‘ಆ ಮಧ್ಯೆ ಅಮ್ಮನಿಗೂ ನೆಗಡಿ, ಕೆಮ್ಮು ಕಾಣಿಸಿಕೊಂಡಿತು. ಅವರನ್ನೂ ಅಪ್ಪ ಇದ್ದ ಆಸ್ಪತ್ರೆಗೇ ದಾಖಲಿಸಿದ್ದೆವು. ಆದರೆ, ಒಂದೇ ವಾರದಲ್ಲಿ ಅಮ್ಮ ತೀರಿಕೊಂಡರು. ಅಪ್ಪನನ್ನಾದರೂ ಬದುಕಿಸಿಕೊಳ್ಳೋಣವೆಂದು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿಗೆ ಕರೆದೊಯ್ದ ಎರಡೇ ದಿನಗಳಲ್ಲಿ ಅಪ್ಪನೂ ತೀರಿಕೊಂಡರು. ಅಪ್ಪ, ಅಮ್ಮನನ್ನು ಬದುಕಿಸಿಕೊಳ್ಳಲಿಕ್ಕಾಗಿ ಸಾಲ ಮಾಡಿ ಲಕ್ಷಾಂತರ ರೂಪಾಯಿ ವ್ಯಯಿಸಿದರೂ ಪ್ರಯೋಜನವಾಗಲಿಲ್ಲ. ಈಗ ದುಡಿಯುವ ಕೈ, ತುತ್ತು ನೀಡುವ ಕೈ ಎರಡನ್ನೂ ಕಳೆದುಕೊಂಡಿದ್ದೇವೆ. ಸದ್ಯ ಚಿಕ್ಕಮ್ಮ (ತಾಯಿ ತಂಗಿ), ದೊಡ್ಡಪ್ಪ (ತಂದೆಯವರ ಅಣ್ಣ) ಜತೆಗಿದ್ದಾರೆ. ಮುಂದೆ ಹೇಗೆಂಬ ಚಿಂತೆ ಕಾಡುತ್ತಿದೆ’ ಎಂದು ದರ್ಶನ್ ದುಃಖಿಸಿದರು.

‘ಶಿಕ್ಷಕರಾಗಿದ್ದ ಅಪ್ಪನಿಗೆ ತಮ್ಮ ಮಕ್ಕಳೂ ಚೆನ್ನಾಗಿ ಓದಬೇಕು ಎಂಬ ಆಸೆ ಇತ್ತು. ನಾನು ಮತ್ತು ತಮ್ಮ ಚೇತನ್ ಡಿಪ್ಲೊಮಾ ಕೋರ್ಸ್ ಪೂರ್ಣಗೊಳಿಸದೇ ಇದ್ದಿದ್ದಕ್ಕೆ ಬೇಸರವೂ ಆಗಿತ್ತು. ಆದರೆ, ನಾನು ಚಿಕ್ಕವನಿರುವಾಗಲೇ ಪೋಲಿಯೊಗೆ ತುತ್ತಾಗಿದ್ದೆ. ಅಪ್ಪನೂ ಕರ್ತವ್ಯದಲ್ಲಿ ಇದ್ದಿದ್ದರಿಂದ ಮನೆಯ ಅಗತ್ಯಗಳಿಗಾಗಿ ತಮ್ಮ ತಿರುಗಾಡುವುದು ಅನಿವಾರ್ಯವಾಗಿತ್ತು. ಹೀಗಾಗಿ ಓದುವ ವಿಷಯವಾಗಿ ನಮ್ಮ ಮೇಲೆ ಎಂದೂ ಒತ್ತಡ ಹೇರಲಿಲ್ಲ. ಕಣ್ಣ ಮುಂದೆ ಚೆನ್ನಾಗಿದ್ದರೆ ಸಾಕು ಎಂದು ಬಯಸುತ್ತಿದ್ದರು. ಅಮ್ಮನೂ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಈ ಹಿಂದಿನ ಅವಧಿಯಲ್ಲಿ ಉತ್ತಮ ಸೇವೆ ಸಲ್ಲಿಸಿದ್ದರು’ ಎಂದು ಸ್ಮರಿಸಿದರು.

ಹನುಮಮ್ಮ ಅವರು ಜೂನ್ 7ರಂದು, ಅಜ್ಜಪ್ಪ 9ರಂದು ಮೃತಪಟ್ಟರು.

ಪರಿಹಾರ ಹಣ ಬಿಡುಗಡೆಗೆ ಮನವಿ

ನನ್ನ ಅಕ್ಕ ಮತ್ತು ಭಾವ ಅವರ ಚಿಕಿತ್ಸೆಗಾಗಿ ಮಕ್ಕಳು ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದಾರೆ. ಅಲ್ಲದೇ ಈ ಮುಂಚೆ ಮನೆ ಕಟ್ಟಲಿಕ್ಕಾಗಿ ಖಾಸಗಿ, ಸಹಕಾರ ಬ್ಯಾಂಕ್‌ಗಳಲ್ಲಿ ಮಾಡಿದ್ದ ಸಾಲ ಬಾಕಿ ಇದೆ. ಕೋವಿಡ್ ಕರ್ತವ್ಯದ ವೇಳೆ ಮೃತಪಟ್ಟರೆ ಸರ್ಕಾರದಿಂದ ನೀಡುವ ಪರಿಹಾರ ಹಣವನ್ನು ಆದಷ್ಟು ಬೇಗ ದೊರಕಿಸಿಕೊಟ್ಟರೆ ಸಹಾಯವಾಗುತ್ತದೆ. ದರ್ಶನ್ ಅಂಗವಿಕಲನಾಗಿದ್ದು, ಅನುಕಂಪದ ಆಧಾರದಲ್ಲಿ ಉದ್ಯೋಗ ಕಲ್ಪಿಸಬೇಕು.

ಶಾರದಾ, ದರ್ಶನ್ ಅವರ ಚಿಕ್ಕಮ್ಮ

ಯಾದಗಿರಿ: ಜಿಲ್ಲೆಯಲ್ಲಿ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಯಾದಗಿರಿ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುರುವಾರ ಉತ್ತಮ ಮಳೆಯಾಗಿದೆ. ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಇತ್ತು.

ಮಳೆಯಿಂದ ರೈತರಿಗೆ ಅನುಕೂಲವಾಗಿದೆ. ಕೆಲ ಕಡೆ ಮಳೆ ಇಲ್ಲದಿದ್ದರಿಂದ ಬಿತ್ತಿರುವ ಬೀಜಕ್ಕೆ ತೇವಾಂಶದ ಕೊರತೆಯಾಗಿತ್ತು. ಇದು ರೈತರಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಮಳೆಯಿಂದ ಸಮಸ್ಯೆ ನಿವಾರಣೆಯಾದಂತೆ ಆಗಿದೆ.

ಸುರಪುರದಲ್ಲಿ ಒಂದು ಗಂಟೆ ಸಾಧಾರಣ ಮಳೆಯಾಗಿದೆ. ಶಹಾಪುರದಲ್ಲಿ ಕೆಲ ಹೊತ್ತು ಉತ್ತಮ ಮಳೆಯಾಗಿದೆ. ಸೈದಾಪುರ, ಗುರುಮಠಕಲ್‌ನಲ್ಲಿ ತುಂತುರು ಮಳೆಯಾಗಿದೆ. ತಾಲ್ಲೂಕಿನ ಅಲ್ಲಿಪುರ, ಹತ್ತಿಕುಣಿ ಗ್ರಾಮದಲ್ಲಿ ಉತ್ತಮ ಮಳೆ ಸುರಿದಿದೆ.

ಪ್ರಜಾವಾಣಿ facebook LIVE
FB.com/prajavani.net

ಸರಣಿ ಚಿಂತನೆ
ಕೊರೊನಾ ಕಾಡಿದ ಸಮಯ ಆಗಿದ್ದು - ಆಗಬೇಕಾದ್ದು

ವಿಷಯ: ನತದೃಷ್ಟ ಶಾಲಾ ಮಕ್ಕಳು



ಡಾ. ನಿರಂಜನಾರಾಧ್ಯ ವಿ.ಪಿ. ಅಭಿವೃದ್ಧಿ ಶಿಕ್ಷಣ ತಜ್ಞ ಹಾಗೂ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಹರಿಕಾರ
ಇಂದು ಸಂಜೆ 6.30 ರಿಂದ
ನಿರ್ವಹಣೆ: ಶ್ರೀನಿವಾಸ ಜಿ. ಕಪ್ಪಣ್ಣ

ನಾಳೆ 6.00 ರಿಂದ
ಶನಿವಾರ, 26 ನೇ ಜೂನ್
ಬಿ. ಸುರೇಶ ಅವರಿಂದ ಚಿಂತನೆ
ಬಣ್ಣ ಕಳಚಿದ ಚಿತ್ರ / ಕಿರುತೆರೆ ಕಲಾವಿದರು

12ನೇ ತರಗತಿ: ರಾಜ್ಯ ಶಿಕ್ಷಣ ಮಂಡಳಿಗಳಿಗೆ ಸುಪ್ರೀಂಕೋರ್ಟ್ ಸೂಚನೆ

‘ಜುಲೈ 31ರಂದು ಫಲಿತಾಂಶ ಪ್ರಕಟಿಸಿ’

ನವದೆಹಲಿ (ಪಿಟಿಐ): 12ನೇ ತರಗತಿ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕಾಗಿ 10 ದಿನಗಳಲ್ಲಿ ಯೋಜನೆಯನ್ನು ರೂಪಿಸಬೇಕು ಎಂದು ಎಲ್ಲ ರಾಜ್ಯಗಳ ಶಿಕ್ಷಣ ಮಂಡಳಿಗಳಿಗೆ ಸುಪ್ರೀಂಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಆಂತರಿಕ ಮೌಲ್ಯಮಾಪನ ಫಲಿತಾಂಶವನ್ನು ಜುಲೈ 31 ರೊಳಗೆ ಪ್ರಕಟಿಸಬೇಕು ಎಂದು ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಹಾಗೂ ದಿನೇಶ್ ಮಾಹೇಶ್ವರಿ ಅವರಿರುವ ನ್ಯಾಯಪೀಠ ಸೂಚಿಸಿತು.

ಎಲ್ಲ ರಾಜ್ಯಗಳಿಗಾಗಿ ಏಕರೂಪದ ಮೌಲ್ಯಮಾಪನ ಯೋಜನೆ ಇರಲು ಸಾಧ್ಯವಿಲ್ಲ. ಏಕರೂಪ ಮೌಲ್ಯಮಾಪನ ಯೋಜನೆ ರೂಪಿಸುವಂತೆ ಆದೇಶವನ್ನೂ ನೀಡುವುದಿಲ್ಲ. ಪ್ರತಿ ರಾಜ್ಯದ ಶಿಕ್ಷಣ ಮಂಡಳಿಯು ಸ್ವಾಯತ್ತತೆ ಹೊಂದಿದ್ದು, ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನದೇ ಆದ ಮೌಲ್ಯಮಾಪನ ವಿಧಾನವನ್ನು ರೂಪಿಸಲು ಅವು ಮುಕ್ತವಾಗಿವೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

‘ಸಿಬಿಎಸ್‌ಇ ಹಾಗೂ ಸಿಐಎಸ್‌ಇಗೆ ಜುಲೈ 31ರೊಳಗೆ ಆಂತರಿಕ ಮೌಲ್ಯಮಾಪನ ಫಲಿತಾಂಶವನ್ನು ಘೋಷಿಸಲು ಗಡುವು ನೀಡಲಾಗಿದೆ. ರಾಜ್ಯಗಳ ಶಿಕ್ಷಣ ಮಂಡಳಿಗಳು ಸಹ ಇದೇ ಗಡುವಿನ ಒಳಗಾಗಿ ಆಂತರಿಕ ಮೌಲ್ಯಮಾಪನ ಫಲಿತಾಂಶವನ್ನು ಪ್ರಕಟಿಸಬೇಕು’ ಎಂದು ನ್ಯಾಯಪೀಠ ಸೂಚನೆ ನೀಡಿತು.

ಕೋವಿಡ್ -19 ಪಿಡುಗಿನ ಹಿನ್ನೆಲೆಯಲ್ಲಿ, ಬೋರ್ಡ್ ಪರೀಕ್ಷೆಗಳನ್ನು ನಡೆಸದಂತೆ ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಈ ಆದೇಶ ನೀಡಿದೆ.

‘ಪ್ರತಿ ಮಂಡಳಿಯು ತಮ್ಮದೇ ಆದ ಯೋಜನೆಯನ್ನು ರೂಪಿಸಬಹುದು. ಆದರೆ, ಆಯಾ ಮಂಡಳಿಯು ರೂಪಿಸುವ ಯೋಜನೆಯ ನಿಖರತೆ ಮತ್ತು ಸಿಂಧುತ್ವವನ್ನು ತಾನು ಅನುಮೋದಿಸುವುದಿಲ್ಲ’ ಎಂದೂ ನ್ಯಾಯಪೀಠ ಹೇಳಿತು.

ವಿಡಿಯೊ-ಕಾನ್ಫರೆನ್ಸಿಂಗ್ ಮೂಲಕ ವಿಚಾರಣೆ ನಡೆಯಿತು. ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ 12ನೇ ತರಗತಿ ಪರೀಕ್ಷೆಗಳನ್ನು ರಾಜ್ಯಗಳ ಶಿಕ್ಷಣ ಮಂಡಳಿಗಳು ರದ್ದು ಮಾಡಿವೆ. ಹೀಗಾಗಿ, ಈಗ ಏಕರೂಪ ಮೌಲ್ಯಮಾಪನ ಯೋಜನೆಯನ್ನು ರೂಪಿಸುವಂತೆ ರಾಜ್ಯಗಳಿಗೆ ಸೂಚಿಸಬಹುದು ಎಂದು ಅರ್ಜಿದಾರರ ಪರ ವಕೀಲರು ನ್ಯಾಯಪೀಠಕ್ಕೆ ಮನವಿ ಮಾಡಿದ್ದರು.

ಇಂದು ವಿದ್ಯಾರ್ಥಿಗಳೊಂದಿಗೆ ಸಚಿವ ಪೋಖ್ರಿಯಾಲ್ ಸಂವಾದ

ನವದೆಹಲಿ (ಪಿಟಿಐ): ಕೇಂದ್ರ ಶಿಕ್ಷಣ ಸಚಿವ ರಮೇಶ ಪೋಖ್ರಿಯಾಲ್ ಅವರು ಜೂನ್ 25ರಂದು ಸಾಮಾಜಿಕ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವರು. 10 ಹಾಗೂ 12ನೇ ತರಗತಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ಅವರು ಸಂಜೆ 4ಕ್ಕೆ ಉತ್ತರಿಸುವರು ಎಂದು ಮೂಲಗಳು ಹೇಳಿವೆ.

ಕೋವಿಡ್ ನಂತರದ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆಗಾಗಿ ಅವರು ದೆಹಲಿಯ ಏಐಐಎಂಎಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

‘ಪರೀಕ್ಷೆಗೆ ಸಂಬಂಧಿಸಿದಂತೆ ಸಾಕಷ್ಟು ಜನ ವಿದ್ಯಾರ್ಥಿಗಳು ತಮ್ಮ ಆತಂಕ ವ್ಯಕ್ತಪಡಿಸಿದ್ದು, ತಮ್ಮ ಪ್ರಶ್ನೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಇನ್ನೂ ನಿಮ್ಮ ಪ್ರಶ್ನೆಗಳಿದ್ದರೆ ಟ್ವಿಟರ್, ಫೇಸ್‌ಬುಕ್ ಅಥವಾ ಇ-ಮೇಲ್ ಮೂಲಕ ನನ್ನ ಗಮನಕ್ಕೆ ತನ್ನಿ’ ಎಂದು ಅವರು ಸರಣಿ ಟ್ವೀಟ್‌ಗಳ ಮೂಲಕ ತಿಳಿಸಿದ್ದಾರೆ.

ಆಂಧ್ರಪ್ರದೇಶ: ‘ಸುಪ್ರೀಂ’ ನಿರ್ದೇಶನ ಆಧರಿಸಿ 10, 12ನೇ ಪರೀಕ್ಷೆ ರದ್ದು

ಹೈದರಾಬಾದ್: ಕೋವಿಡ್ ಪರಿಸ್ಥಿತಿಯ ನಡುವೆಯೇ ವಾರ್ಷಿಕ ಪರೀಕ್ಷೆಯನ್ನು ಆಯೋಜಿಸಲು ಮಾಡಿಕೊಂಡಿರುವ ಸಿದ್ಧತೆಗಳ ಕುರಿತು ಸುಪ್ರೀಂ ಕೋರ್ಟ್ ಕಟುವಾಗಿ ಪ್ರಶ್ನಿಸಿದ ಹಿಂದೆಯೇ, ಆಂಧ್ರಪ್ರದೇಶ ಸರ್ಕಾರ ಪ್ರಸಕ್ತ ಶೈಕ್ಷಣಿಕ ವರ್ಷದ 10 ಮತ್ತು 12ನೇ ತರಗತಿಯ ಪರೀಕ್ಷೆಗಳನ್ನು ರದ್ದುಪಡಿಸಲು ತೀರ್ಮಾನಿಸಿದೆ.

ಆಂಧ್ರಪ್ರದೇಶ ಸರ್ಕಾರ ಪರೀಕ್ಷೆ ನಡೆಸಲು ಮುಂದಾಗಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಗುರುವಾರ ನಡೆಸಿತು. ಕೋವಿಡ್ ಕಾರಣದಿಂದ ಎಲ್ಲ ಮಂಡಳಿಗಳು ಪರೀಕ್ಷೆ ರದ್ದುಪಡಿಸಿ, ಆಂತರಿಕ ಮೌಲ್ಯಮಾಪನಕ್ಕೆ ಮುಂದಾಗಿವೆ. ಸರ್ಕಾರ ಹೇಗೆ ಪರೀಕ್ಷೆ ನಡೆಸಲು ನಿರ್ಧರಿಸಿತು ಎಂದು ಪ್ರಶ್ನಿಸಿತು.

ಕೋವಿಡ್‌ನಿಂದಾಗಿ ಕಳೆದ ಎರಡು ತಿಂಗಳು ಮೂಡಿದ್ದ ಆರೋಗ್ಯ ಕ್ಷೇತ್ರದ ಸಂಕಷ್ಟ ಮತ್ತು ಸಂಭವನೀಯ ಮೂರನೇ ಅಲೆ ಎಚ್ಚರಿಕೆಯನ್ನು ಉಲ್ಲೇಖಿಸಿದ ಕೋರ್ಟ್, ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಏನಾದರೂ ಅವಘಡ ಸಂಭವಿಸಿದ್ದಲ್ಲಿ ತಲಾ ₹ 1 ಕೋಟಿ ಪರಿಹಾರ ನೀಡಲು ಆದೇಶಿಸಬೇಕಾದಿತು ಎಂದೂ ಎಚ್ಚರಿಸಿತ್ತು.

ಸುರಕ್ಷಿತವಾಗಿ ಪರೀಕ್ಷೆಯನ್ನು ಆಯೋಜಿಸಲು ಪ್ರತಿ ಕೊಠಡಿಗೆ 15–10 ವಿದ್ಯಾರ್ಥಿಗಳಂತೆ 34 ಸಾವಿರ ಕೊಠಡಿಗಳ ಅಗತ್ಯವಿದೆ. ಇಷ್ಟು ಕೊಠಡಿಗಳನ್ನು ಹೇಗೆ ಸರ್ಕಾರ ಹೊಂದಿಕೆ ಮಾಡಲಿದೆ ಎಂದು ಕೋರ್ಟ್ ಇದೇ ಸಂದರ್ಭದಲ್ಲಿ ಆಶ್ಚರ್ಯ ವ್ಯಕ್ತಪಡಿಸಿತ್ತು.

ರಾಜ್ಯದಲ್ಲಿ 12ನೇ ತರಗತಿ ಪರೀಕ್ಷೆ ಬರೆಯುವ 5,19,510 ವಿದ್ಯಾರ್ಥಿಗಳಿದ್ದಾರೆ. ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಗರಿಷ್ಠ 15ರಿಂದ 18 ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು ಎಂದು ಆಂಧ್ರಪ್ರದೇಶ ಪರ ವಕೀಲರು ಪೀಠದ ಗಮನಕ್ಕೆ ತಂದಿದ್ದರು.

‘ಪರೀಕ್ಷೆಯನ್ನು ನಡೆಸಬೇಕು ಎಂಬ ಕಾರಣಕ್ಕೆ ನಡೆಸುವುದು ಸರಿಯಲ್ಲ. ಇದು 5 ಲಕ್ಷ ವಿದ್ಯಾರ್ಥಿಗಳು ಮತ್ತು ಸಹಸ್ರಾರು ಪರೀಕ್ಷಾ ಮೇಲ್ವಿಚಾರಕರೂ ಸೇರಿದಂತೆ ಲಕ್ಷಾಂತರ ಪರೀಕ್ಷಾ ಸಿಬ್ಬಂದಿಯ ಜೀವದ ಪ್ರಶ್ನೆಯಾಗಿದೆ’ ಎಂದು ಪೀಠ ಖಾರವಾಗಿ ಹೇಳಿತ್ತು.

ಅಲ್ಲದೆ, ಕೋವಿಡ್ ಮೂರನೇ ಅಲೆ ಎದುರಾದರೆ, ರಾಜ್ಯ ಸರ್ಕಾರ ಯಾವ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿದೆ ಎಂದೂ ಪೀಠ ಪ್ರಶ್ನಿಸಿತ್ತು.

ಈ ಎಲ್ಲ ವಿಷಯಗಳನ್ನು ಒಳಗೊಂಡಂತೆ ಶುಕ್ರವಾರದೊಳಗೆ ಸಮಗ್ರ ವರದಿಯನ್ನು ಸಲ್ಲಿಸುವಂತೆ ಪೀಠ ಸೂಚಿಸಿತು. ಕೋವಿಡ್ ವಸ್ತುಸ್ಥಿತಿಯನ್ನು ಗಮನಿಸಿ ದೇಶದ ಹಲವು ರಾಜ್ಯಗಳು ಈಗಾಗಲೇ 12ನೇ ತರಗತಿ ಪರೀಕ್ಷೆ ನಡೆಸುವ ನಿರ್ಧಾರದಿಂದ ಹಿಂದೆ ಸರಿದು, ಪರೀಕ್ಷೆಗಳನ್ನು ರದ್ದುಗೊಳಿಸಿರುವುದನ್ನುಕೂಡ ಪೀಠ ಬೊಟ್ಟುಮಾಡಿ ತೋರಿಸಿತ್ತು.

ದೇವರೇ ಕಾಪಾಡಪ್ಪ ಪೌರ್ಣಿಮೆಯ ವಿಶೇಷ ದಿನದಂದು ಮುಂಬೈನಲ್ಲಿ ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ಅರಳಿಮರಕ್ಕೆ ಗುರುವಾರ ಪೂಜೆ ಸಲ್ಲಿಸಿದರು– ಪಿಟಿಐ ಚಿತ್ರ

ಸ್ಥಳೀಯ ಆಟಿಕೆ ಖರೀದಿಸಿ: ಪ್ರಧಾನಿ ಕರೆ

ನವದೆಹಲಿ (ಪಿಟಿಐ): ‘ಸ್ಥಳೀಯ ಆಟಿಕೆಗಳನ್ನು ಖರೀದಿಸಿ ’ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ದೇಶದ ಜನರಿಗೆ ಕರೆ ನೀಡಿದರು.

‘ಟಾಯ್‌ಕಥಾನ್ -2021’ರಲ್ಲಿ ಭಾಗವಹಿಸಿದ್ದವರೊಂದಿಗೆ ಗುರುವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿದ ಅವರು, ದೇಶದಲ್ಲಿ ಶೇ 80ರಷ್ಟು ಆಟಿಕೆಗಳು ವಿದೇಶಗಳಿಂದ ಆಮದಾಗುತ್ತಿದ್ದು, ಕೋಟ್ಯಂತರ ರೂಪಾಯಿ ವಿದೇಶಕ್ಕೆ ರವಾನೆಯಾಗುತ್ತಿದೆ. ಈ ಸ್ಥಿತಿ ಬದಲಾಗಬೇಕಾದ ಅಗತ್ಯವಿದೆ ಎಂದರು.

ಸುಮಾರು 100 ಶತಕೋಟಿ ಡಾಲರ್‌ಗಳಷ್ಟಿರುವ ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಪಾಲು ಕೇವಲ 1.5 ಶತಕೋಟಿ ಡಾಲರ್ ಎಂದು ಮೋದಿ ಮಾಹಿತಿ ನೀಡಿದರು.

ಆಟಿಕೆಗಳ ಮಹತ್ವದ ಕುರಿತು ಮಾತನಾಡಿದ ಪ್ರಧಾನಿ, ‘ಮಗುವಿಗೆ ಮನೆಯೇ ಮೊದಲ ಪಾಠಶಾಲೆಯಾದರೆ, ಆಟಿಕೆಗಳೇ ಮೊದಲ ಪುಸ್ತಕ ಮತ್ತು ಮೊದಲ ಗೆಳೆಯರು’ ಎಂದು ಬಣ್ಣಿಸಿದರು.

‘ನಮ್ಮ ಗಮನವು ಹೊಸ ಆಟಿಕೆಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಇರಬೇಕು. ಭಾರತೀಯತೆಯ ಪ್ರತಿಯೊಂದು ಅಂಶವನ್ನು ಆಸಕ್ತಿದಾಯಕ, ಸಂವಾದಾತ್ಮಕ ರೀತಿಯಲ್ಲಿ ಪ್ರಸ್ತುತಪಡಿಸುವಂತೆ ಆಟಿಕೆಗಳನ್ನು ಸಿದ್ಧಪಡಿಸಬೇಕು’ ಎಂದು ಅವರು ಆಟಿಕೆಗಳನ್ನು ಸಿದ್ಧಪಡಿಸುವವರ ಕುರಿತು ಹೇಳಿದರು.

‘ಟಾಯ್‌ಕಥಾನ್ -2021’ ಅನ್ನು ಶಿಕ್ಷಣ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಸಚಿವಾಲಯ, ಜವಳಿ ಸಚಿವಾಲಯ, ವಾರ್ತಾ ಮತ್ತು ಪ್ರಸಾರ ಇಲಾಖೆ ಜಂಟಿಯಾಗಿ ಆಯೋಜಿಸಿವೆ. ಜನಸಮೂಹದ ಮೂಲಕ ನವೀನ ಆಟಿಕೆ ಮತ್ತು ಆಟಗಳ ವಿಚಾರಗಳನ್ನು ತಿಳಿದುಕೊಳ್ಳುವುದು ಇದರ ಹಿಂದಿನ ಉದ್ದೇಶ.

2021ರ ಜನವರಿ 5ರಿಂದ ಆರಂಭವಾಗಿದ್ದ ಟಾಯ್‌ಕಥಾನ್‌ನಲ್ಲಿ ದೇಶದಾದ್ಯಂತ 1.2 ಲಕ್ಷ ಜನರ ಭಾಗವಹಿಸಿದ್ದರು. ಈ ಪೈಕಿ 17,000 ಜನರು ಯೋಜನೆಗಳನ್ನು ಸಲ್ಲಿಸಿದ್ದರು. ಅದರಲ್ಲಿ 1,567 ಜನರ ಯೋಜನೆಗಳು ಅಂತಿಮ ಹಂತಕ್ಕೆ ತಲುಪಿದ್ದವು. ಮೂರು ದಿನಗಳ ಆನ್‌ಲೈನ್ ಟಾಯ್‌ಕಥಾನ್ ಜೂನ್ 22ರಿಂದ ಆರಂಭವಾಗಿದ್ದು ಜೂನ್ 24 (ಗುರುವಾರ) ಕೊನೆಯ ದಿನವಾಗಿದೆ.

ಮಾನಹಾನಿ ಪ್ರಕರಣ: ಕೋರ್ಟ್‌ಗೆ ಹಾಜರಾದ ರಾಹುಲ್

ಸೂರತ್ (ಪಿಟಿಐ): ಗುಜರಾತ್ ಶಾಸಕರೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಮಾನಹಾನಿ ಮೊಕದ್ದಮೆಗೆ ಸಂಬಂಧಿಸಿದಂತೆ ಅಂತಿಮ ಹೇಳಿಕೆ ದಾಖಲಿಸಲು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಗುರುವಾರ ಸೂರತ್‌ನ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರಾದರು.

‘ಮೋದಿ ಸರ್‌ನೇಮ್’ಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಅವರು ಈ ಹಿಂದೆ ಮಾಡಿದ್ದ ಟೀಕೆಗೆ ಸಂಬಂಧಿಸಿದಂತೆ ಸೂರತ್‌ನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಅವರು 2019ರ ಏಪ್ರಿಲ್‌ನಲ್ಲಿ ರಾಹುಲ್ ವಿರುದ್ಧ ಐಪಿಸಿ ಕಲಂ 499 ಮತ್ತು 500ರ ಅಡಿಯಲ್ಲಿ ದೂರು ದಾಖಲಿಸಿದ್ದರು.

ಸೂರತ್‌ನ ಸಿಜೆಎಂ ಎ.ಎನ್.ದೇವ್ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ಅಂತಿಮ ಹೇಳಿಕೆಯನ್ನು ದಾಖಲಿಸಲು ಜೂನ್ 24ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ರಾಹುಲ್ ಗಾಂಧಿ ಅವರಿಗೆ ನಿರ್ದೇಶನ ನೀಡಿದ್ದರು.

ಕರ್ನಾಟಕದ ಕೋಲಾರದಲ್ಲಿ 2019ರ ಏಪ್ರಿಲ್ 13ರಂದು ನಡೆದ ಚುನಾವಣಾ ರ‍್ಯಾಲಿಯಲ್ಲಿ ರಾಹುಲ್ ಗಾಂಧಿ ಅವರು, ‘ನೀರವ್ ಮೋದಿ, ಲಲಿತ್ ಮೋದಿ, ನರೇಂದ್ರ ಮೋದಿ.... ಅವರೆಲ್ಲರೂ ಮೋದಿ ಉಪನಾಮವನ್ನೇ ಹೇಗೆ ಹೊಂದಿದ್ದಾರೆ? ಎಲ್ಲ ಕಳ್ಳರು ಮೋದಿಯನ್ನು ಸಾಮಾನ್ಯ ಉಪನಾಮವಾಗಿ ಹೇಗೆ ಹೊಂದಿದ್ದಾರೆ?’ ಎಂದಿದ್ದರು. ಆಗ ರಾಹುಲ್ ಅವರು ಎಐಸಿಸಿ ಅಧ್ಯಕ್ಷರಾಗಿದ್ದರು.

ಪವಾರ್ ಜೊತೆ ರಾಹುಲ್ ಕೈಜೋಡಿಸಲಿ: ಸೇನಾ

ಪ್ರಜಾವಾಣಿ ವಾರ್ತೆ

ಮುಂಬೈ (ಪಿಟಿಐ): ಕೇಂದ್ರದಲ್ಲಿ ಆಡಳಿತಾರೂಢ ಬಿಜೆಪಿಯನ್ನು ಎದುರಿಸಲು ಎಲ್ಲಾ ವಿರೋಧಪಕ್ಷಗಳನ್ನು ಒಗ್ಗೂಡಿಸುವ ಕೆಲಸವನ್ನು ಆರಂಭಿಸಿರುವ ಎನ್‌ಸಿಪಿ ಮುಖ್ಯಸ್ಥ ಪವಾರ್ ಅವರೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೈಜೋಡಿಸಬೇಕು ಎಂದು ಶಿವಸೇನಾ ಗುರುವಾರ ಹೇಳಿದೆ.

‘ದೇಶದ ಪರಿಸ್ಥಿತಿ ಕೈಮೀರಿ ಹೋಗಿದೆ. ಈ ಬಗ್ಗೆ ಜನರಿಗೆ ಕೋಪ ಇದೆಯಾದರೂ, ದುರ್ಬಲ ಪ್ರತಿಪಕ್ಷದಿಂದ ತಮಗೇನೂ ತೊಂದರೆಯಿಲ್ಲ ಎಂಬ ವಿಶ್ವಾಸದಲ್ಲಿ ಬಿಜೆಪಿ ಇದೆ. ರಾಹುಲ್ ಅವರು ನಿರಂತರವಾಗಿ ಕೇಂದ್ರದ ವಿರುದ್ಧ ಟೀಕೆ ಮಾಡುತ್ತಾರೆ. ಆದರೆ ಅದು ಟ್ವಿಟರ್‌ಗೆ ಸೀಮಿತವಾಗಿದೆ’ ಎಂದು ಶಿವಸೇನಾ ಮುಖವಾಣಿ ‘ಸಾಮ್ನಾ’ ಸಂಪಾದಕೀಯ ಅಭಿಪ್ರಾಯಪಟ್ಟಿದೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಪ್ರಮುಖ ವಿರೋಧ ಪಕ್ಷಗಳ ಮುಖಂಡರ ಜೊತೆ ಮಂಗಳವಾರ ಮಾತುಕತೆ ನಡೆಸಿದ್ದರು. ಇದು ತೃತೀಯ ರಂಗದ ಸಭೆ ಎಂದೇ ವಿಶ್ಲೇಷಿಸಲಾಗಿತ್ತು. ಆದರೆ ಇದು ಸಮಾನ ಮನಸ್ಕರ ಮಾತುಕತೆ ಎಂದು ಮುಖಂಡರು ಹೇಳಿದ್ದರು.

‘ಶರದ್ ಪವಾರ್ ಅವರು ಎಲ್ಲ ವಿರೋಧ ಪಕ್ಷಗಳನ್ನು ಒಂದುಗೂಡಿಸಲು ಮುಂದಾಗಿದ್ದಾರೆ. ಕಾಂಗ್ರೆಸ್ ಪಕ್ಷವು ಪ್ರತಿಪಕ್ಷಗಳನ್ನು ಮುನ್ನಡೆಸುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು. ಆದರೆ ಆ ಪಕ್ಷಕ್ಕೆ ರಾಷ್ಟ್ರೀಯ ಅಧ್ಯಕ್ಷರೇ ಇಲ್ಲ’ ಎಂದು ಸೇನಾ ಹೇಳಿದೆ.

‘ಯುಪಿಎ ಎಂಬ ಮೈತ್ರಿಕೂಟ ಇದೆ. ಆದರೆ ದೇಶವು ಪ್ರಬಲ ಹಾಗೂ ಸಂಘಟಿತ ವಿರೋಧ ಪಕ್ಷವನ್ನು ಹೊಂದಿದೆಯೇ ಎಂಬುದು ಈಗಲೂ ಪ್ರಶ್ನೆಯಾಗಿದೆ. ವಿರೋಧ ಪಕ್ಷದ ನಾಯಕರ ಚಹಾ ಪಾರ್ಟಿಯನ್ನು ರಾಹುಲ್ ಗಾಂಧಿ ಅವರು ಆಯೋಜಿಸಬೇಕಾಗಿತ್ತು. ಆದರೆ ಶರದ್ ಪವಾರ್ ಅದನ್ನು ಮಾಡಿದರು. ಇದು ನಿಜವಾದ ಪ್ರತಿಪಕ್ಷದ ನಡೆಯನ್ನು ತೋರಿಸುತ್ತದೆ’ ಎಂದು ಹೇಳಿದೆ.

ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಪಡೆದ ಪವಾರ್ ನೇತೃತ್ವದ ಸಭೆಯಲ್ಲಿ ಮಹತ್ವದ ಬೆಳವಣಿಗೆಯೇನೂ ಆಗಿಲ್ಲ. ದೇಶ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಪರಿಹರಿಸುವ ದೂರದೃಷ್ಟಿ ಸರ್ಕಾರಕ್ಕೆ ಇಲ್ಲ ಎಂಬುದರ ಬಗ್ಗೆ ಅಲ್ಲಿ ಚರ್ಚೆ ನಡೆಯಿತು. ಈ ಬಗ್ಗೆ ರಾಷ್ಟ್ರೀಯ ಮಂಚ್ ಸರ್ಕಾರದ ಗಮನ ಸೆಳೆಯಲಿದೆ. ಈ ಸಭೆ ನಡೆದ ಕಾರಣ, ರಾಷ್ಟ್ರೀಯ ಮಂಚ್ ಎಂಬ ವೇದಿಕೆ ಇದೆ ಎಂಬುದು ಬೆಳಕಿಗೆ ಬಂದಿತು’ ಎಂದು ಪತ್ರಿಕೆ ವ್ಯಂಗ್ಯ ಧಾಟಿಯಲ್ಲಿ ಹೇಳಿದೆ.

‘ಬಲವಾದ ವಿರೋಧಪಕ್ಷವು ಸಂಸದೀಯ ಪ್ರಜಾಪ್ರಭುತ್ವದ ಇಂದಿನ ಅಗತ್ಯ. ಆದರೆ, ಅಂತಹ ವಿರೋಧಿ ಒಕ್ಕೂಟವು ರಾಷ್ಟ್ರಮಟ್ಟದಲ್ಲಿ ಅಸ್ತಿತ್ವದಲ್ಲಿಲ್ಲ. ಆದರೆ, ಕೆಲವು ಪ್ರಾದೇಶಿಕ ಪಕ್ಷಗಳು ಬಿಜೆಪಿ ವಿರುದ್ಧ ತೊಡೆತಟ್ಟಿ ಚುನಾವಣೆಯಲ್ಲಿ ಅದನ್ನು ಸೋಲಿಸಿವೆ’ ಎಂದು ಸಾಮ್ನಾ ಅಭಿಪ್ರಾಯಪಟ್ಟಿದೆ.

‘ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಈ ಹಿಂದೆ ರಾಷ್ಟ್ರೀಯ ನಾಯಕರಾಗಲು ಯತ್ನಿಸಿ ವಿಫಲರಾಗಿದ್ದಾರೆ. ಅವರು ಎಂದಿಗೂ ಅದರಲ್ಲಿ ಯಶಸ್ವಿಯಾಗುವುದಿಲ್ಲ’ ಎಂದು ಮಹಾರಾಷ್ಟ್ರ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಹೇಳಿದ್ದಾರೆ.

ಇಸ್ರೇಲ್ ಎಂಬೆಸ್ಸಿ ಬಳಿ ಸ್ಫೋಟ ಪ್ರಕರಣ: ಕಾರ್ಗಿಲ್‌ನ ನಾಲ್ವರ ಬಂಧನ

ನವದೆಹಲಿ: ರಾಜಧಾನಿಯಲ್ಲಿ ಇಸ್ರೇಲ್ ರಾಜತಾಂತ್ರಿಕ ಕಚೇರಿ ಎದುರು ಈ ವರ್ಷದ ಜನವರಿ ತಿಂಗಳಲ್ಲಿ ಸಂಭವಿಸಿದ್ದ ಲಘು ತೀವ್ರತೆಯ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಕಾರ್ಗಿಲ್‌ನ ನಾಲ್ವರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ಈ ಕುರಿತ ಹೇಳಿಕೆ ನೀಡಿರುವ ದೆಹಲಿ ಪೊಲೀಸ್ ಇಲಾಖೆಯ ವಕ್ತಾರರು, ರಾಷ್ಟ್ರ ರಾಜಧಾನಿಯಲ್ಲಿ ಭಯೋತ್ಪಾದಕ ಚಟುವಟಿಕೆ ಹಾಗೂ ಇದಕ್ಕಾಗಿ ಸಂಚು ನಡೆಸಿದ ಆರೋಪದಡಿ ಇಸ್ರೇಲ್ ರಾಜತಾಂತ್ರಿಕ ಕಚೇರಿ ಬಳಿ ನಡೆದಿದ್ದ ಸ್ಫೋಟಕ್ಕೆ ಸಂಬಂಧಿಸಿ ನಾಲ್ವರನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ಬಂಧಿತರನ್ನು ನಜೀರ್ ಹುಸೇನ್ (26), ಜುಲ್ಫೀಕರ್ ಅಲಿ ವಜೀರ್ (25), ಅಯಾಜ್ ಹುಸೇನ್ (28), ಮುಜಾಮಿಲ್ ಹುಸೇನ್ (25) ಎಂದು ಗುರುತಿಸಲಾಗಿದೆ. ಈ ಎಲ್ಲರೂ ಕಾರ್ಗಿಲ್‌ನ ತಾಂಗ್ ಗ್ರಾಮದ ನಿವಾಸಿಗಳು.

ಸ್ಫೋಟ ಪ್ರಕರಣ ಕುರಿತು ದೆಹಲಿ ಪೊಲೀಸ್‌ನ ವಿಶೇಷ ಘಟಕ ಮೊಕದ್ದಮೆ ದಾಖಲಿಸಿದ್ದರೂ, ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ತನಿಖೆ ಒಪ್ಪಿಸಲಾಗಿತ್ತು. ಸ್ಫೋಟ ಸಂಭವಿಸಿದ್ದ ಸ್ಥಳವು ವಿಜಯ್ ಚೌಕಕ್ಕೆ ಸುಮಾರು 2 ಕಿ.ಮೀ ದೂರದಲ್ಲಿ ಇದ್ದು, ರಾಜಕೀಯ ಮತ್ತು ಸೇನೆಯ ಮುಖಂಡರು ಇದನ್ನು ಗಂಭೀರವಾಗಿ ಪರಿಗಣಿಸಿದ್ದರು.

ಇಸ್ರೇಲ್ ರಾಜತಾಂತ್ರಿಕ ಕಚೇರಿಯ ಎದುರು ಜನವರಿ 29ರಂದು ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ ಯಾರಿಗೂ ಪೆಟ್ಟಾಗಿರಲಿಲ್ಲ. ಸಮೀಪದ ಎಪಿಜೆ ಅಬ್ದುಲ್ ಕಲಾಂ ರಸ್ತೆಯಲ್ಲಿ ನಿಲುಗಡೆ ಮಾಡಿದ್ದ ಮೂರು ವಾಹನಗಳು ಜಖಂಗೊಂಡಿದ್ದವು.

ಕೋವಿಡ್ ಲಸಿಕೆ ವೇಗ ಹೆಚ್ಚಿಸಲು ಒತ್ತಡ: ಸೋನಿಯಾ ಸೂಚನೆ

ನವದೆಹಲಿ (ಪಿಟಿಐ): ದೇಶದಾದ್ಯಂತ ನಡೆಯುತ್ತಿರುವ ಲಸಿಕೆ ಅಭಿಯಾನದ ವೇಗದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಕಾಂಗ್ರೆಸ್ ಸೋನಿಯಾ ಗಾಂಧಿ ಅವರು, ಕೋವಿಡ್‌ನ ಮೂರನೇ ಅಲೆ ಎದುರಿಸಲು ಅಗತ್ಯ ಸಿದ್ಧತೆಯಾಗಬೇಕು ಮತ್ತು ಮಕ್ಕಳ ಆರೋಗ್ಯ ರಕ್ಷಣೆಗೂ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಮತ್ತು ಉಸ್ತುವಾರಿಗಳ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ‘ದೇಶದಲ್ಲಿ ನಿತ್ಯ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ನೀಡಬೇಕು. ಈ ವರ್ಷಾಂತ್ಯಕ್ಕೆ ಶೇ 75ರಷ್ಟು ಜನರಿಗೆ ಕೋವಿಡ್ ಲಸಿಕೆ ನೀಡುವಂತಾಗಬೇಕು. ಈ ಸಂಬಂಧ ಲಸಿಕೆ ನೀಡುವ ಪ್ರಕ್ರಿಯೆಯ ವೇಗ ಹೆಚ್ಚಿಸುವಂತೆ ಕೇಂದ್ರ ಸರ್ಕಾರದ ಮೇಲೆ ಪಕ್ಷದ ಕಾರ್ಯಕರ್ತರು ಒತ್ತಡ ಹೇರುವುದನ್ನು ಮುಂದುವರಿಸಬೇಕು‘ ಎಂದು ಕರೆ ನೀಡಿದರು.

‘ನಮ್ಮ ಪಕ್ಷ ಒತ್ತಡ ಹಾಕಿದ್ದರಿಂದಲೇ ಕೇಂದ್ರ ಸರ್ಕಾರ ಲಸಿಕೆ ನೀಡಿಕೆಯ ವೇಗ ಹೆಚ್ಚಿಸಿದೆ. ಆ ಒತ್ತಡ ಹಾಕುವ ಪ್ರಕ್ರಿಯೆ ಮುಂದುವರಿಯಬೇಕು‘ ಎಂದು ಹೇಳಿದರು.

ಎಚ್–1ಬಿ ವೀಸಾ ಮರು ಅರ್ಜಿ ಸಲ್ಲಿಕೆಗೆ ಅಮೆರಿಕ ಅವಕಾಶ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾಗಾಗಿ ಮತ್ತೆ ಅರ್ಜಿಯನ್ನು ಸಲ್ಲಿಸಲು ಅಮೆರಿಕದಲ್ಲಿ ಉದ್ಯೋಗದ ನಿರೀಕ್ಷೆಯಲ್ಲಿರುವ ವಿದೇಶಗಳ ನೌಕರರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಫೆಡರಲ್ ಏಜೆನ್ಸಿ ತಿಳಿಸಿದೆ.

ಈ ಮೊದಲು ನೋಂದಣಿ ಹಂತದಲ್ಲಿಯೇ ಅರ್ಜಿ ತಿರಸ್ಕರಿಸಿದ್ದಲ್ಲಿ ಅಂತಹವರು ಈಗ ಮರು ಅರ್ಜಿ ಸಲ್ಲಿಸಬಹುದಾಗಿದೆ. ಭಾರತೀಯ ಐ.ಟಿ ವೃತ್ತಿಪರರಿಂದ ಎಚ್–1ಬಿ ವೀಸಾಗೆ ಹೆಚ್ಚಿನ ಬೇಡಿಕೆ ಇದೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ರಾಜೇಶ್ವರಿ ಶಂಕರ್,** ಬೆಂಗಳೂರು	15,000
2	**ಯಶೋದಮ್ಮ ಎಸ್.,** 170, ಆರ್.ವಿ.ರಸ್ತೆ, ಬೆಂಗಳೂರು	15,000
3	**ಸಿ.ಕಮಲಾ ಗಣೇಶ್,** ನಂ.1162, 9ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ನಾಗಪುರ, ಬೆಂಗಳೂರು	10,001
4	**ನಿರ್ಮಲಾ ವಿಜಯರಾಘವನ್,** ನಂ. 766/1, 3ನೇ ಅಡ್ಡರಸ್ತೆ, ಸುಣ್ಣದಕೇರಿ, ಕೆ.ಆರ್.ಮೊಹಲ್ಲಾ, ಮೈಸೂರು	10,000
5	**ಪದ್ಮಾ ವೆಂಕಟಸುಬ್ಬಯ್ಯ,** ಮೈಸೂರು	10,000
6	**ಲಕ್ಷ್ಮಿ ವಿ.ಹೆಬ್ಬಾಳೆ,** ಮೈಸೂರು	10,000
7	**ಎ.ಆರ್.ನರಸಿಂಹಸ್ವಾಮಿ,** 372/373, ಧನುಷ್ ಪ್ಯಾರಡೈಸ್, ಎಫ್ ನಂ 4., 5ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ವಿಜಯ ಬ್ಯಾಂಕ್ ಲೇಔಟ್, ಬಿಲ್ಲೇಕಹಳ್ಳಿ, ಬೆಂಗಳೂರು	10,000
8	**ಪ್ರದೀಪ್ ಕುಮಾರ್ ಎನ್.** ನಂ.95, 17ನೇ ಅಡ್ಡರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು	10,000
9	**ರಾಜೇಶ್ವರಿ ಸಂಬರಗಿರಿಮಠ್,** ಬೆಂಗಳೂರು	10,000
10	**ಎ.ಆರ್.ಎಸ್.ಭಟ್ಟ,** ನಂ.814, ಗಂಗೆ ರಸ್ತೆ, ಇ & ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು	10,000
11	**ಸುಧನ್ಯಎಂ.,** ನಂ. 2615, ಹೊಂಗಿರಣ ನಿಲಯ, ಮಾನಸ ಕಾಲೇಜು ಎದುರು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ	10,000
12	**ಬಿ.ಸಿ.ಕೃಷ್ಣ,** ನಂ. 224/16, 8ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆ, ಬಿಇಎಂಎಲ್ 5ನೇ ಹಂತ, ರಾಜರಾಜೇಶ್ವರಿ ನಗರ, ಬೆಂಗಳೂರು	5,001
13	**ಬಸವರಾಜು ಸಿ.,** ನಂ.570, 15ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ಪದ್ಮನಾಭನಗರ, ಬೆಂಗಳೂರು	5,000
14	**ರಾಜೀವ್ ವಿ.ಎಸ್.,** ಬಸವನಗುಡಿ, ಬೆಂಗಳೂರು	5,000
15	**ಅನುರಾಧಾ ಮುರಳೀಧರನ್,** ಬೆಂಗಳೂರು	5,000
16	**ಶಶಿಧರ್ ಎಸ್.ಎನ್.,** ನಂ.1738, ಸರ್ ಎಂ.ವಿ. ಲೇಔಟ್, 5ನೇ ಬ್ಲಾಕ್, ಉಲ್ಲಾಳ ಮುಖ್ಯರಸ್ತೆ, ಬೆಂಗಳೂರು	5,000
17	**ರಾಜಲಕ್ಷ್ಮಿ ಪರಮೇಶ್ವರ,** ನಂ.66, ಅಭಿನವ, 2ನೇ ಅಡ್ಡರಸ್ತೆ, ಬಿ.ಬ್ಲಾಕ್, ಗಾಂಧಿನಗರ, ಶಿವಮೊಗ್ಗ	5,000
18	**ಎಚ್.ವಿ.ವೆಂಕಟೇಶಮೂರ್ತಿ,** ಮೈಸೂರು	5,000
19	**ಶೈಲಜಾ ಕುಂಬ್ಳೆ,** ಮೈಸೂರು	5,000
20	**ಅಮರೇಶ್ ಬಿ.ಎನ್.,** ಎಲ್‌ಐಜಿ 5, ವಾಸವಿ ನಗರ, ರಾಯಚೂರು	5,000
21	**ಪದ್ಮಜಾ ರಾಜೇಶ್,** ಸಿ–403, ಮಹಾವೀರ ಗಾರ್ಡೇನಿಯ ಅಪಾರ್ಟ್‌ಮೆಂಟ್ಸ್, 32ನೇ ಅಡ್ಡರಸ್ತೆ, ಕುಮಾರಸ್ವಾಮಿ ಲೇಔಟ್, 1ನೇ ಹಂತ, ಬೆಂಗಳೂರು	5,000
22	**ಆಶಾ ಜಗನ್ನಾಥ್,** ನಂ.6, ಚಿಕ್ಕಣ್ಣ ಗಾರ್ಡನ್ಸ್,, ಶಂಕರಪುರಂ, ಬೆಂಗಳೂರು	3,000
23	**ರಾಮಪ್ರಸಾದ್ ಜಿ.ಎಸ್.,** 324/ಎ, ನೆಲಮಹಡಿ, 25ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು	3,000
24	**ಕಾಂತೇಶ್ ಗಂಟೆಪ್ಪನವರ,** 15, ವಾಯುಪುತ್ರ ಬಡಾವಣೆ, ಸಾಯಿನಗರ ರಸ್ತೆ, ಹುಬ್ಬಳ್ಳಿ	2,500
25	**ಮುರಳಿ ಮೋಹನ್,** ಬೆಂಗಳೂರು	2,500
26	**ಪಿ.ರವಿಕುಮಾರ್,** ಅನುಗ್ರಹ ನಿಲಯ, ಗಣಪತಿ ದೇವಸ್ಥಾನದ ಎದುರು, ಕಲ್ಯಾಣ ನಗರ, ಚಿಕ್ಕಮಗಳೂರು	2,002
27	**ಮುನಿವೆಂಕಟರಾಜು,** 2652, 25ನೇ ಸಿ.ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಎಚ್.ಎಸ್.ಆರ್.ಲೇಔಟ್, ಸೆಕ್ಟರ್ 1, ಬೆಂಗಳೂರು	2,001
28	**ಎಸ್.ಪ್ರಸಾದ್,** ಮಲ್ಲಿಕಾರ್ಜುನ ಲೇಔಟ್, ಜೆ.ಪಿ.ನಗರ, ವಾಟರ್ ಟ್ಯಾಂಕ್ ಸಮೀಪ, ಬೇಲೂರು	2,001
29	**ವೈ.ಆರ್.ವಿಶ್ವೇಶ್ವರಯ್ಯ,** ನಿವೃತ್ತ ಮುಖ್ಯಶಿಕ್ಷಕರು, ಆಚಾರ್ ಸ್ಟ್ರೀಟ್, ತರೀಕೆರೆ	2,000
30	**ಎನ್.ರಾಘವನ್,** 472, 15ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು	2,000
31	**ಯು.ಎಸ್.ಪ್ರಭಾಕರ್,** ನಂ. 9/7, ಯಶಸ್ವಿ, 5ನೇ ಅಡ್ಡರಸ್ತೆ, ಕೆಇಬಿ ರಸ್ತೆ, ಇಟ್ಟಮಡು ಲೇಔಟ್, ಬನಶಂಕರಿ 3ನೇಹಂತ, ಬೆಂಗಳೂರು	2,000
32	**ಸನ್ಮತಿ ಎಂಟರ್‌ಪ್ರೈಸಸ್** (ಪ್ರೊ: ಅಜಿತ್ ಎಸ್), 1307, ಸನ್ಮತಿ, 24ನೇ ಅಡ್ಡರಸ್ತೆ, 28ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು	2,000
33	**ಎಸ್.ಎನ್.ಮೂರ್ತಿ & ನಾಗಲಕ್ಷ್ಮಿ, ಬಿಜಿ**–06, ಸುಪ್ರಭಾತ ಅಪಾರ್ಟ್‌ಮೆಂಟ್,ವಸಂತಪುರ ಮುಖ್ಯರಸ್ತೆ, ಬೆಂಗಳೂರು	2,000
34	**ರೀನೇಶ್ ಸಿ.ಆರ್.,** ನಂ.485, ಗ್ರೌಂಡ್ ಫ್ಲೋರ್, 5ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಜೆ.ಪಿ.ನಗರ 7ನೇ ಹಂತ, ಬೆಂಗಳೂರು	1,500
35	**ಶೈಲಜಾ ಕೆ.ಆರ್.,** ಸುಂಕದಕಟ್ಟೆ, ಬೆಂಗಳೂರು	1,500
36	**ಟಿ.ಆರ್.ಶ್ರೀನಿವಾಸಯ್ಯ,** ನಂ.32282, ಪ್ರೆಸ್ಟೀಜ್ ಫಾಲ್ಕನ್ ಸಿಟಿ, 2ನೇ ಟವರ್, 28ನೇ ಮಹಡಿ, ಕೋಣನಕುಂಟೆ ಕ್ರಾಸ್, ಕನಕಪುರ ಮುಖ್ಯರಸ್ತೆ, ಬೆಂಗೂರು	1,500
37	**ಸಗಣೇ ಗೌಡ,** ನಂ.1101,18ನೇ ಅಡ್ಡರಸ್ತೆ, 7ನೇ ಸೆಕ್ಟರ್, ಎಚ್.ಎಸ್.ಆರ್.ಲೇಔಟ್, ಬೆಂಗಳೂರು	1,101
38	**ಎಸ್.ಎಸ್.ಕೊಳ್ಳಿ,** ಕ್ವಾಟರ್ಸ್ ನಂ. 2, ಎಸ್‌ಬಿಐ ಬಿಲ್ಡಿಂಗ್ ಮೇಲೆ, ಸಂಜೀವಿನಿ ಆಸ್ಪತ್ರೆ ಎದುರು, ಬಿ.ಎಚ್.ರಸ್ತೆ, ತೋರಣಗಲ್ಲು, ಸಂಡೂರು ತಾಲ್ಲೂಕು, ಬಳ್ಳಾರಿ	1,100
39	**ಕುಂದನ್ ಎನ್.ಪಿ.,** ಬೆಂಗಳೂರು	1,020
40	**ಲಾರ್ಸನ್ ಡಿಸಿಲ್ವಾ,** ನೆಲಮಹಡಿ, ಕಣ್ಣೂರಮ್ಮ ನಿಲಯ, 3ನೇ ಅಡ್ಡರಸ್ತೆ, ಕಣ್ಣೂರಮ್ಮ ಲೇಔಟ್, ದೇವಿನಗರ, ಬೆಂಗಳೂರು	1,003,
41	**ಸಿ.ತಾರಂಕ್ ಅಯ್ಯಪ್ಪ,** ಅಲತ್‌ಮಾಡ್ ಎಸ್ಟೇಟ್, ಪಿ.ಬಿ.ನಂ. 60, ಸುಂಟಿಕೊಪ್ಪ ಪೋಸ್ಟ್, ಕೊಡಗು	1,001
42	**ಶಿವಕುಮಾರ್.ಡಿ.ಎಸ್.** ಎ.ಪಿ.ರಸ್ತೆ, ಸೀಬಿನಕೆರೆ ಪೋಸ್ಟ್, ತೀರ್ಥಹಳ್ಳಿ	1,001
43	**ವಿ.ಎನ್.ಸುಬ್ರಹ್ಮಣ್ಯಂ,** 2318, ಎಚ್‌ಎಎಲ್ 3ನೇ ಹಂತ, ವಿಮಾನಪುರ ಪೋಸ್ಟ್, ಬೆಂಗಳೂರು	1,001
44	**ಎಚ್.ಎಸ್.ಸತ್ಯನಾರಾಯಣಾಚಾರ್,** 15, 4ನೇ ಅಡ್ಡರಸ್ತೆ,ಹನುಮಯ್ಯ ಬಡಾವಣೆ, ಎಸ್‌ಆರ್‌ಕೆ ಇಂಡಿಯನ್ ಸ್ಕೂಲ್ ಸಮೀಪ, ಕೊಡಿಗೇಹಳ್ಳಿ, ಬೆಂಗಳೂರು	1,001
45	**ಕಲ್ಪನಾ ಆರ್.ಐ.,** ಎಲ್‌ಐಸಿ ಆಫ್ ಇಂಡಿಯಾ, ಬ್ರಾಂಚ್ ಆಫೀಸ್, ಕ್ಲಬ್ ರೋಡ್, ಹುಬ್ಬಳ್ಳಿ	1,000
46	**ಪ್ರಸಾದ್ ಎಲ್.ಎನ್,** ನಂ. 23, ಮಿತ್ರ, ಎಲ್/ಒ ಪ್ರಗತಿನಗರ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು	1,000
47	**ಐ.ಎಂ.ಚಚಡಿ,** 100, ಮಾತೃಶ್ರೀ ನಿಲಯ, ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ, ಧಾರವಾಡ	1,000
48	**ಶಿವಶಂಕರ್ ಬಿ.ಎನ್.,** 204, 6ನೇ ಬ್ಲಾಕ್, ಸ್ಕೈಲೈನ್ ಸಿಟಿ, ಸ್ಕೈಲೈನ್ ಅಪಾರ್ಟ್‌ಮೆಂಟ್ಸ್, ಚಂದ್ರಾ ಲೇಔಟ್, ಬೆಂಗಳೂರು	1,000
49	**ಗಜೇಂದ್ರ ಪ್ರಕಾಶ್,** 323, 7ನೇ ಅಡ್ಡರಸ್ತೆ, ಹೆಬ್ಬಾಳ್ 2ನೇ ಹಂತ, ಮೈಸೂರು	1,000
50	**ಪಿ.ಚಂದ್ರಶೇಖರರಾವ್,** ವಿದ್ಯಾರಣ್ಯಪುರ, ಬೆಂಗಳೂರು	1,000
51	**ಡಾ.ಸಿದ್ದಲಿಂಗಸ್ವಾಮಿ ಹಿರೇಮಠ,** 88, ಮದರ್ ಲ್ಯಾಂಡ್ ಕ್ರೌನ್ ಲೇಔಟ್, ಮೈಸೂರು	1,000
52	**ಎಸ್.ಆರ್.ಚಂದ್ರಿಕಾ,** 1631, 80 ಅಡಿರಸ್ತೆ, ಬನಶಂಕರಿ 1ನೇ ಹಂತ, ಬೆಂಗಳೂರು	1,000
53	**ಗಾಯತ್ರಿ ದೇವಿ ಎಲ್.ಕೆ.ಎನ್,** ಎಫ್‌ಎ 694, ಸೆಂಟ್ರಲ್ ಟೌನ್‌ಶಿಪ್, ಎಚ್‌ಎಎಲ್ (ಬಿಸಿ), ಓಲ್ಡ್ ಏರ್‌ಪೋರ್ಟ್ ರಸ್ತೆ, ಬೆಂಗಳೂರು	1,000
54	**ಎಚ್.ಆರ್.ರಮೇಶ್ ಕುಮಾರ್,** 870, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ:	1,20,70,673

ಶುರುವಾಗಿದೆ ಕೇಂದ್ರ ಸಂಪುಟ ಪುನರ್‌ರಚನೆ ಕಸರತ್ತು

ಬಿ.ವೈ. ರಾಘವೇಂದ್ರ ಸೇರ್ಪಡೆಗೆ ವರಿಷ್ಠರ ಒತ್ತು?

● ಸಿದ್ದಯ್ಯ ಹಿರೇಮಠ

ನವದೆಹಲಿ: ಸಂಸತ್‌ನ ಮುಂಗಾರು ಅಧಿವೇಶನಕ್ಕೆ ತುಸು ಮೊದಲು ಕೇಂದ್ರ ಸಂಪುಟದ ಪುನರ್‌ರಚನೆಯ ಸಾಧ್ಯತೆ ದಟ್ಟವಾಗಿದೆ. ಈ ಸುಳಿವು ದೊರೆಯುತ್ತಿದ್ದಂತೆಯೇ ಸಚಿವ ಸ್ಥಾನದ ಕನಸು ಕಾಣುತ್ತಿರುವ ರಾಜ್ಯದ ಸಂಸದರಲ್ಲೂ ನಿರೀಕ್ಷೆಗಳು ಗರಿಗೆದರಿವೆ.

ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ ಅಂಗಡಿ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ತಮ್ಮಲ್ಲೇ ಒಬ್ಬರಿಗೆ ಅವಕಾಶ ದೊರೆಯಬಹುದು ಎಂಬ ಲೆಕ್ಕಾಚಾರ ರಾಜ್ಯ ಬಿಜೆಪಿ ಸಂಸದರದ್ದಾಗಿದೆ.

ರಾಜ್ಯದಿಂದ ಬಿಜೆಪಿಯ 25 ಸಂಸದರು ಆಯ್ಕೆಯಾಗಿದ್ದು, ಪ್ರಲ್ಹಾದ ಜೋಶಿ ಹಾಗೂ ಡಿ.ವಿ. ಸದಾನಂದಗೌಡ ಅವರಿಬ್ಬರೂ ಸಂಪುಟ ದರ್ಜೆ ಸಚಿವರಾಗಿದ್ದಾರೆ. ಈ ಬಾರಿಯ ಸಂಪುಟ ವಿಸ್ತರಣೆ ವೇಳೆ ಒಬ್ಬರು ಅಥವಾ ಇಬ್ಬರಿಗೆ ಸಚಿವ ಸ್ಥಾನ ಸಿಗಲಿದೆ ಎಂಬ ನಿರೀಕ್ಷೆಯೂ ಇದೆ.

ಲಾಬಿಗೆ ಅವಕಾಶ ಇಲ್ಲದ್ದರಿಂದ ಹಾಗೂ ಸ್ಥಾನಮಾನ ನೀಡುವ ವಿಷಯದಲ್ಲಿ ಬಿಜೆಪಿ ವರಿಷ್ಠರು ಗುಟ್ಟನ್ನೇ ಬಿಟ್ಟುಕೊಡದ್ದರಿಂದ ತಮ್ಮ ಆಕಾಂಕ್ಷೆಯನ್ನು ಬಹಿರಂಗಪಡಿಸದ ಕೆಲವರು, ರಾಜ್ಯ ಖಾತೆ ಅಥವಾ ಸ್ವತಂತ್ರ ಖಾತೆಯ ಸಚಿವ ಸ್ಥಾನ ದೊರೆಯಬಹುದು ಎಂಬ ವಿಶ್ವಾಸ ಹೊಂದಿದ್ದಾರೆ.

ಆದರೆ, ಸಚಿವ ಸ್ಥಾನಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ, ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಹೆಸರು ಕೇಳಿಬರುತ್ತಿರುವುದು ರಾಜ್ಯ ರಾಜಕೀಯದಲ್ಲಿ ಸಂಭವನೀಯ ಬೆಳವಣಿಗೆ ಉಂಟಾಗಲಿದೆ ಎಂಬುದಕ್ಕೆ ಪುಷ್ಟಿ ನೀಡಿದೆ.

‘ಯಡಿಯೂರಪ್ಪ ಅವರ ‘ಸಮ್ಮತಿ’ಯ ಮೇರೆಗೇ ಕೇಂದ್ರ ಸಂಪುಟಕ್ಕೆ ರಾಘವೇಂದ್ರ ಅವರ ಸೇರ್ಪಡೆಯಾಗಲಿದೆ. ಒಂದೊಮ್ಮೆ ಅವರಿಗೆ ಸಚಿವ ಸ್ಥಾನ ದೊರೆತಲ್ಲಿ, 3 ತಿಂಗಳೊಳಗೆ ರಾಜ್ಯದ ನಾಯಕತ್ವ ಬದಲಾವಣೆ ನಿಶ್ಚಿತ’ ಎಂಬ ಮಾತು ರಾಜ್ಯ ಬಿಜೆಪಿ ಅಂಗಳದಲ್ಲಿ ಕೇಳಿಬರುತ್ತಿದೆ.

‘ಕೇಂದ್ರ ಸಂಪುಟಕ್ಕೆ ರಾಘವೇಂದ್ರ ಸೇರ್ಪಡೆಯು ವರಿಷ್ಠರು ಇತ್ತೀಚಿನ ದಿನಗಳಲ್ಲಿ ಯಡಿಯೂರಪ್ಪ ಅವರೊಂದಿಗೆ ನಡೆಸಿರುವ ಮಾತುಕತೆಯ ಪರಿಣಾಮ’ ಎಂದೂ ಹೇಳಲಾಗುತ್ತಿದೆ. ಸಹಜವಾಗಿಯೇ ಇದು ಯಡಿಯೂರಪ್ಪ ವಿರೋಧಿ ಬಣದ ಸಂತಸಕ್ಕೆ ಕಾರಣವಾಗಿದೆ.

‘ಅನೇಕ ಹಿರಿಯರು ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ. ಆದರೂ ಎರಡನೇ ಬಾರಿ ಸಂಸದರಾಗಿರುವ ರಾಘವೇಂದ್ರ ಕೇಂದ್ರ ಸಚಿವರಾದಲ್ಲಿ ಅದು, ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಅವರ ನಿರ್ಗಮನದ ಸ್ಪಷ್ಟ ಸೂಚನೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ರಾಜ್ಯದ ಸಂಸದರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಹಿರಿತನ ಅಥವಾ ಪ್ರಬಲ ಸಮುದಾಯವನ್ನು ಪರಿಗಣಿಸಿ ಸಚಿವ ಸ್ಥಾನ ನೀಡಲಾಗುತ್ತದೆ ಎಂಬ ಮಾತು ಮೋದಿ ಆಡಳಿತದಲ್ಲಿ ಹುಸಿಯಾಗಿದೆ. ಯಾರೂ ನಿರೀಕ್ಷೆಯನ್ನೇ ಮಾಡದವರಿಗೆ ಸಚಿವ ಸ್ಥಾನ ನೀಡಿದ ಉದಾಹರಣೆಗಳಿವೆ. ಈಗ ಯಾರು ಸಚಿವರಾಗುವರು ಎಂಬುದು ವರಿಷ್ಠರ ಲೆಕ್ಕಾಚಾರ ಅವಲಂಬಿಸಿದೆ ಎಂದು ಅವರು ಹೇಳಿದರು.

ಕಳೆದ 15 ದಿನಗಳಿಂದ ಸಂಪುಟ ಸಹೋದ್ಯೋಗಿಗಳ ಸಾಧನೆಯ ಮೌಲ್ಯಮಾಪನ ನಡೆಸುತ್ತಿರುವ ಮೋದಿ, ತಲಾ 10 ಜನ ಸಚಿವರೊಂದಿಗೆ ಎರಡೆರಡು ಬಾರಿ ಸಮಾಲೋಚನೆ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ. ಜುಲೈ 15ರ ಆಸುಪಾಸಿನಲ್ಲಿ ಸಂಪುಟ ಪುನರ್‌ರಚನೆ ಆಗಲಿದ್ದು, ಕೆಲವು ನಿಷ್ಕ್ರಿಯ ಸಚಿವರನ್ನು ಸಂಪುಟದಿಂದ ಕೈಬಿಡುವ ಸಾಧ್ಯತೆ ಇದೆ ಎಂದು ಪಕ್ಷದ ಉನ್ನತ ಮೂಲಗಳು ಖಚಿತಪಡಿಸಿವೆ.

ಒಂದಿಬ್ಬರಿಗೆ ಅವಕಾಶ ಸಾಧ್ಯತೆ

ಸತತ 4 ಬಾರಿ ಗೆದ್ದಿರುವ ಬಾಗಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ್, ಹಾವೇರಿಯಿಂದ 3 ಬಾರಿ ಆಯ್ಕೆಯಾಗಿರುವ ಶಿವಕುಮಾರ್ ಉದಾಸಿ, 2ನೇ ಬಾರಿ ಲೋಕಸಭೆ ಪ್ರವೇಶಿಸಿರುವ ಬೀದರ್‌ನ ಭಗವಂತ್ ಖೂಬಾ, ಕಾಂಗ್ರೆಸ್‌ನ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಜಯಿಸಿರುವ ಕಲಬುರ್ಗಿ ಸಂಸದ ಡಾ.ಉಮೇಶ ಜಾಧವ್ ಅವರಲ್ಲಿ ಒಂದಿಬ್ಬರಿಗೆ ಸಚಿವ ಸ್ಥಾನ ದೊರೆಯಬಹುದೆಂಬ ನಿರೀಕ್ಷೆಯಲ್ಲಿದ್ದಾರೆ.

ಉಡುಪಿ- ಚಿಕ್ಕಮಗಳೂರು ಸಂಸದೆ, ಸಂಘ ಪರಿವಾರದ ಹಿನ್ನೆಲೆಯ ಶೋಭಾ ಕರಂದ್ಲಾಜೆ ಅವರೂ ಮಹಿಳಾ ಕೋಟಾ ಅಡಿ ಮೋದಿ ಸಂಪುಟಕ್ಕೆ ಸೇರಬೇಕೆಂಬ ಆಕಾಂಕ್ಷೆ ಹೊಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಅನಿಶ್ಚಿತ ಸ್ಥಿತಿಗೆ ಚೀನಾ ಸೇನೆ ನಿಯೋಜನೆ ಕಾರಣ’

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಅಂತರರಾಷ್ಟ್ರೀಯ ಗಡಿಯುದ್ದಕ್ಕೂ ಚೀನಾ ಕಳೆದ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಸೇನೆಯನ್ನು ನಿಯೋಜಿಸಿದ್ದೇ ಅನಿಶ್ಚಿತ ಪರಿಸ್ಥಿತಿ ಮೂಡಲು ಹಾಗೂ ಈ ವಲಯದಲ್ಲಿ ಶಾಂತಿ, ಸೌಹಾರ್ದಕ್ಕೆ ಧಕ್ಕೆಯಾಗಲು ಕಾರಣವಾಯಿತು ಎಂದು ಭಾರತ ಗುರುವಾರ ಬಲವಾಗಿ ಪ್ರತಿಪಾದಿಸಿತು.

ಗಡಿ ಭಾಗದಲ್ಲಿ ಸೇನೆಯನ್ನು ನಿಯೋಜಿಸುವುದು ರಕ್ಷಣೆಯ ದೃಷ್ಟಿಯಿಂದ ಸಾಮಾನ್ಯವಾದುದು ಎಂಬ ಚೀನಾ ಹೇಳಿಕೆಯ ಹಿಂದೆಯೇ ಭಾರತವು ಈ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದೆ.

ಕಳೆದ ವರ್ಷ ಚೀನಾ ಕೈಗೊಂಡ ಕ್ರಮಗಳೇ ವಾಸ್ತವ ಗಡಿ ರೇಖೆಯುದ್ದಕ್ಕೂ (ಎಲ್‌ಎಸಿ) ಯಥಾಸ್ಥಿತಿ ರಕ್ಷಣೆಗೆ ಕ್ರಿಯೆಗೆ ಧಕ್ಕೆಯಾಯಿತು ಎಂಬುದು ಗೊತ್ತಿರುವ ಸಂಗತಿಯೇ. ಇದರಿಂದ ಶಾಂತಿ, ಸೌಹಾರ್ದ ಸ್ಥಿತಿಗೂ ಅಡಚಣೆ ಆಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರರಾದ ಅರಿಂದಮ್ ಬಾಗ್ಚಿ ಅವರು ಹೇಳಿದರು.

ತಾಪರ್ ವಿರುದ್ಧ ಮತ್ತೊಂದು ಪ್ರಕರಣ

ನವದೆಹಲಿ (ಪಿಟಿಐ): ಯೆಸ್ ಬ್ಯಾಂಕ್ ಮತ್ತು ಇತರೆ ಒಕ್ಕೂಟದ ಬ್ಯಾಂಕ್‌ಗಳಲ್ಲಿ ₹ 2,435 ಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಗುರುವಾರ, ಸಿಜಿ ಪವರ್ ಮತ್ತು ಇಂಡಸ್ಟ್ರಿಯಲ್ ಸಲ್ಯೂಷನ್ಸ್‌ನ ಅಧ್ಯಕ್ಷ ಗೌತಮ್ ತಾಪರ್ ವಿರುದ್ಧ ಮತ್ತೊಂದು ಪ್ರಕರಣವನ್ನು ದಾಖಲಿಸಿದೆ.

ಪ್ರಕರಣವನ್ನು ದಾಖಲಿಸಿದ ಹಿಂದೆಯೇ ಮುಂಬೈ, ದೆಹಲಿ, ಗುರಗಾಂವ್‌ನಲ್ಲಿ ವಿವಿಧ ಆರು ಕಡೆ ತಪಾಸಣೆಯನ್ನು ನಡೆಸಿತು. ತಾಪರ್ ವಿರುದ್ಧ ಈಗಾಗಲೇ ಇಂತಹ ಹಲವು ವಂಚನೆ ಪ್ರಕರಣಗಳ ಸಂಬಂಧ ತನಿಖೆ ನಡೆಯುತ್ತಿದೆ. ಸಿ.ಜಿ ಪವರ್ ಅಂಡ್ ಇಂಡಸ್ಟ್ರಿಯಲ್ ಸಲ್ಯೂಷನ್ಸ್ ಈ ಮೊದಲು ಕ್ರಾಂಪ್ಟನ್ ಗ್ರೀವ್ಸ್ ಲಿಮಿಟೆಡ್ ಆಗಿತ್ತು.

ಯೆಸ್‌ಬ್ಯಾಂಕ್‌ನಲ್ಲಿ ಇತ್ತೀಚೆಗೆ ನಡೆದಿರುವ ₹ 466 ಕೋಟಿ ವಂಚನೆ ಮತ್ತು ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದ ಈಗ ತಾಪರ್ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಸಂಬಂಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು 11 ಬ್ಯಾಂಕ್‌ಗಳು ಇರುವ ಬ್ಯಾಂಕ್ ಒಕ್ಕೂಟದ ಪರವಾಗಿ ದೂರು ನೀಡಿತ್ತು.

ಮಹಿಳೆ ಸಾವು: ಡೆಲ್ಟಾ ಪ್ಲಸ್ ದೃಢ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದಲ್ಲಿ ಕೊರೊನಾ ವೈರಸ್ ರೂಪಾಂತರಿ ತಳಿ ‘ಡೆಲ್ಟಾ ಪ್ಲಸ್’ ಸೋಂಕು ಐವರಲ್ಲಿ ದೃಢಪಟ್ಟಿದ್ದು, ಅವರಲ್ಲಿ ಒಬ್ಬರು ಮಹಿಳೆ ಮೃತಪಟ್ಟಿದ್ದಾರೆ ಎಂದು ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ವಿಶ್ವಾಸ್ ಸರಂಗ್ ಗುರುವಾರ ತಿಳಿಸಿದರು.

ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದ ಇತರ ನಾಲ್ವರ ಆರೋಗ್ಯ ಸ್ಥಿತಿ ಉತ್ತಮವಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಮರಣ ಹೊಂದಿದ ವ್ಯಕ್ತಿ ಉಜ್ಜೈನಿ ಮೂಲದವರಾಗಿದ್ದು, ಅವರು ಲಸಿಕೆ ಪಡೆದಿರಲಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಆರ್ಚರಿ: ಫೈನಲ್‌ಗೆ ದೀಪಿಕಾ–ಅತನು

ಪ್ಯಾರಿಸ್ (ಪಿಟಿಐ): ಅತನು ದಾಸ್ ಮತ್ತು ದೀಪಿಕಾಕುಮಾರಿ ದಂಪತಿಯು ಇಲ್ಲಿ ನಡೆಯುತ್ತಿರುವ ವಿಶ್ವಕಪ್ (ಸ್ಟೇಜ್ 3) ಆರ್ಚರಿಯ ಮಿಶ್ರ ವಿಭಾಗದ ಫೈನಲ್ ಪ್ರವೇಶಿಸಿದ್ದಾರೆ. ಆ ಮೂಲಕ ಭಾರತಕ್ಕೆ ಮೊದಲ ಪದಕ ಗೆದ್ದುಕೊಡುವ ಭರವಸೆ ಮೂಡಿಸಿದ್ದಾರೆ.

ಗುರುವಾರ ನಡೆದ ಸುತ್ತಿನಲ್ಲಿ ಭಾರತದ ಜೋಡಿಯು 5–3 ರಿಂದ ಸ್ಪೇನ್ ಜೋಡಿಯನ್ನು ಮಣಿಸಿತು. ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ದೀಪಿಕಾ–ದಾಸ್ ಜೋಡಿಯು ನೆದರ್ಲೆಂಡ್ಸ್ ಸವಾಲನ್ನು ಎದುರಿಸಲಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ದೀಪಿಕಾ ವೈಯಕ್ತಿಕ ವಿಭಾಗದ ಸೆಮಿಫೈನಲ್‌ಗೂ ಪ್ರವೇಶಿಸಿದ್ದಾರೆ.

ಇದರೊಂದಿಗೆ ಈ ಟೂರ್ನಿಯಲ್ಲಿ ಅವರಿಂದ ಎರಡು ಪದಕಗಳ ಸಾಧನೆಯಾಗುವ ಅವಕಾಶ ಒದಗಿದೆ.

ಮಿಶ್ರ ವಿಭಾಗದಲ್ಲಿ ದೀಪಿಕಾ–ದಾಸ್ ಜೋಡಿಯು ಅರ್ಹತಾ ಸುತ್ತಿನಲ್ಲಿ ಐದನೇ ರ‍್ಯಾಂಕ್ ಪಡೆದಿತ್ತು. ಮೊದಲ ಸುತ್ತಿನಲ್ಲಿ ಬೈ ಲಭಿಸಿತ್ತು.

ಅತನು ದಾಸ್

ದೀಪಿಕಾ ಕುಮಾರಿ

ಗುರುವಾರ ನಡೆದ ಆರಂಭಿಕ ಸುತ್ತಿನಲ್ಲಿ ಸ್ಪೇನ್ ದೇಶದ ಡೇನಿಯಲ್ ಕ್ಯಾಸ್ಟ್ರೊ ಮತ್ತು ಐನೆಸ್ ಡಿ ವೆಲಾಸ್ಕೊ ಅವರಿಂದ ಭಾರತೀಯ ಜೋಡಿಯು ಕಠಿಣ ಸ್ಪರ್ಧೆ ಎದುರಿಸಿತು.ಸ್ಪೇನ್ ಜೋಡಿಯು 38–36 ರಿಂದ ಮುನ್ನಡೆ ಸಾಧಿಸಿತು. ತಿರುಗೇಟು ನೀಡಿದ ಭಾರತದ ಜೋಡಿಯು ನಿರಂತರವಾಗಿ ನಿಖರ ಗುರಿ (9–9–9–10) ಸಾಧನೆ ಮಾಡಿ, ಸಮ ಬಲದ ಸ್ಪರ್ಧೆಯೊಡ್ಡಿತು. ಮೂರನೇ ಸೆಟ್‌ನಲ್ಲಿ ಮೂರು ಬಾರಿ ಸಂಪೂರ್ಣ ಹತ್ತು ಮತ್ತೊಂದರಲ್ಲಿ ಒಂಬತ್ತು ಅಂಕ ಗಳಿಸಿ ಗೆದ್ದಿತು.

‘ಈ ಗೆಲುವು ನಮಗೆ ಮಹತ್ವದ್ದಾಗಿತ್ತು. ಗುರಿ ನಿಖರವಾಗಿತ್ತು. ನಮ್ಮಿಬ್ಬರಲ್ಲಿ ಉತ್ತಮ ಸಂವಹನ ಮತ್ತು ಹೊಂದಾಣಿಕೆ ಇದೆ. ಇಬ್ಬರೂ ವೃತ್ತಿಪರ ಆರ್ಚರಿಪಟುಗಳಾಗಿ ತಂಡವನ್ನು ಬಲಿಷ್ಠಗೊಳಿಸಿದ್ದೇವೆ’ ಎಂದು ದೀಪಿಕಾ ಹೇಳಿದರು.

ಬಯೊಬಬಲ್ ತೊರೆದ ಭಾರತದ ಆಟಗಾರರು

ಬೆಂಗಳೂರು: ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಸೋತಿರುವ ಭಾರತ ತಂಡದ ಆಟಗಾರರು ಗುರುವಾರ ಬಯೊಬಬಲ್ ತೊರೆದಿದ್ದಾರೆ.

ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೂ ಮೊದಲು ಅಭ್ಯಾಸ ಪಂದ್ಯಗಳನ್ನು ಆಡಲು ಅವಕಾಶವಿಲ್ಲ. ದಿನಗಟ್ಟಲೆ ಕ್ವಾರಂಟೈನ್‌ನಲ್ಲಿ ಇರುವುದನ್ನು ತಪ್ಪಿಸಿಕೊಳ್ಳಲು ಈ ನಿರ್ಧಾರಕ್ಕೆ ಬರಲಾಗಿದೆ.

ಟೆಸ್ಟ್ ಸರಣಿ ಆರಂಭವಾಗಲು ಇನ್ನೂ ಒಂದು ತಿಂಗಳು ಇದೆ. ಅಷ್ಟರಲ್ಲಿ ಸ್ಥಳೀಯ ತಂಡಗಳ ಜೊತೆ ಅಭ್ಯಾಸ ಪಂದ್ಯಗಳನ್ನು ಆಡಲು ಅವ ಕಾಶ ಸಿಗುವ ನಿರೀಕ್ಷೆ ಇತ್ತು. ಅದು ಸಾಧ್ಯವಾಗಲಿಲ್ಲ. ಹೀಗಾಗಿ ಮೂರು ವಾರ ಬಯೊಬಬಲ್‌ನಿಂದ ಹೊರಗಿರಲಿದ್ದಾರೆ.

ಜುಲೈ 14ರಂದು ಆಟಗಾರರು ನಾಟಿಂಗ್‌ಹ್ಯಾಂಗೆ ವಾಪಸಾಗಲಿದ್ದಾರೆ. ನಂತರ ತಂಡದ ಒಳಗೇ ಎರಡು ತಂಡಗಳನ್ನು ಮಾಡಿ ಪಂದ್ಯಗಳನ್ನು ಆಡಲಿದ್ದಾರೆ.

ರಾಷ್ಟ್ರೀಯ ಅಥ್ಲೆಟಿಕ್ಸ್ ಇಂದಿನಿಂದ

ದ್ಯುತಿ ಚಾಂದ್

ಹಿಮಾ ದಾಸ್

ಪಟಿಯಾಲ(ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅವಕಾಶ ಪಡೆಯಲು ಅಥ್ಲೀಟ್‌ಗಳಾದ ದ್ಯುತಿ ಚಾಂದ್ ಮತ್ತು ಹಿಮಾ ದಾಸ್ ಅವರಿಗೆ ಶುಕ್ರವಾರ ಆರಂಭವಾಗಲಿರುವ ಅಂತರರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಕೊನೆಯ ಅವಕಾಶವಾಗಲಿದೆ.

ವಿಶ್ವ ಅಥ್ಲೆಟಿಕ್ಸ್‌ನಿಂದ ‘ಬಿ’ ಕೆಟಗರಿ ಮಾನ್ಯತೆ ಪಡೆದಿರುವ ಸ್ಪರ್ಧೆ ಇದಾಗಿದೆ. ದೇಶದ ಪ್ರಮುಖ ಅಥ್ಲೀಟ್‌ಗಳು ಇಲ್ಲಿ ಕಣಕ್ಕಿಳಿಯುವರು. ಒಲಿಂಪಿಕ್ಸ್ ಅರ್ಹತಾ ಮಟ್ಟವನ್ನು ಮುಟ್ಟುವ ಅವಕಾಶವೂ ಇಲ್ಲಿದೆ.

ಈ ಕೂಟವನ್ನು ಬೆಂಗಳೂರಿನಲ್ಲಿ ಆಯೋಜನೆ ಮಾಡಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್ ಪರಿಸ್ಥಿತಿ ಕಾರಣದಿಂದ ಪ್ರಯಾಣದ ನಿರ್ಬಂಧಗಳು ಮತ್ತು ತೊಂದರೆಗಳನ್ನು ನಿವಾರಿಸಲು ಪಟಿಯಾಲದಲ್ಲಿಯೇ ನಡೆಸಲಾಗುತ್ತಿದೆ.

ಹೋದ ಸೋಮವಾರ ಇಲ್ಲಿ ನಡೆದ ಇಂಡಿಯನ್ ಗ್ರ್ಯಾನ್‌ಪ್ರೀ 4 ರೇಸ್‌ನಲ್ಲಿ ದ್ಯುತಿ ಚಾಂದ್ ಅವರು ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಸ್ವಲ್ಪ ಅಂತರದಿಂದ ಒಲಿಂಪಿಕ್ಸ್ ಅರ್ಹತಾ ಮಟ್ಟವನ್ನು ತಪ್ಪಿಸಿಕೊಂಡಿದ್ದರು. ಅವರು 11.15 ಸೆಕೆಂಡುಗಳಲ್ಲಿ ಗುರಿ ತಲುಪಬೇಕಿತ್ತು. ಕೂದಲೆಳೆಯ ಅಂತರದಲ್ಲಿ ಹಿಂದುಳಿದಿದ್ದರು. ಆದರೆ ಇಲ್ಲಿ ಅವರು ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದರು.

ಗಾಯದಿಂದ ಚೇತರಿಸಿಕೊಂಡಿರುವ ಹಿಮಾ ದಾಸ್ ಐಜಿಪಿ ಕೂಟದಲ್ಲಿ ಮಹಿಳೆಯರ 200 ಮೀಟರ್ಸ್ ಓಟದಲ್ಲಿ 20.88 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆದರೆ ಒಲಿಂಪಿಕ್ಸ್ ಅರ್ಹತೆ ಪಡೆಯಲು ಅವರು 20.80 ಸೆಕೆಂಡುಗಳಲ್ಲಿ ಗುರಿ ಸಾಧಿಸಬೇಕಿತ್ತು.

ಹಿಮಾ, ದ್ಯುತಿ, ಅರ್ಚನಾ ಸುಚಿಂದ್ರನ್ ಮತ್ತು ಎಸ್. ಧನಲಕ್ಷ್ಮೀ ಅವರು ಇರುವ 4X100 ಮೀ ರಿಲೆ ತಂಡವು ಕೂಡ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸುವ ನಿರೀಕ್ಷೆಯಲ್ಲಿದೆ.

ಅನಾಸ್ ಯಾಹ್ಯಾ, ಅಮೋಜ್ ಜೇಕಬ್, ಆರೋಗ್ಯರಾಜೀವ ಮತ್ತು ನೊಹ್ ನಿರ್ಮಲ್ ಟಾಮ್ ಅವರಿರುವ ಪುರುಷರ ತಂಡವು 4X400 ಮೀಟರ್ ವಿಭಾಗದಲ್ಲಿ ಸ್ಪರ್ಧೆಗಿಳಿಯಲಿದೆ.

ಪೋರ್ಚುಗಲ್‌ಗೆ ರೊನಾಲ್ಡೊ ಆಸರೆ

ಫುಟ್‌ಬಾಲ್: ಅತಿಹೆಚ್ಚು ಗೋಲು ದಾಖಲೆ ಮುರಿಯಲು ಒಂದೇ ಹೆಜ್ಜೆ ಬಾಕಿ

ಪ್ಯಾರಿಸ್ (ಎಎಫ್‌ಪಿ): ಪೆನಾಲ್ಟಿ ಅವಕಾಶಗಳಲ್ಲಿ ಎರಡು ಗೋಲುಗಳನ್ನು ಗಳಿಸಿದ ಕ್ರಿಸ್ಟಿಯಾನೊ ರೊನಾಲ್ಡೊ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಅತಿಹೆಚ್ಚು ಗೋಲು ಗಳಿಸಿದ ದಾಖಲೆಯನ್ನು ಸಮಗಟ್ಟಿದರು. ಈ ಮೂಲಕ ಪೋರ್ಚುಗಲ್ ತಂಡ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಲು ನೆರವಾದರು.

ಬುಧವಾರ ರಾತ್ರಿ ನಡೆದ ಫ್ರಾನ್ಸ್ ಎದುರಿನ ‘ಎಫ್’ ಗುಂಪಿನ ಪಂದ್ಯದಲ್ಲಿ ರೊನಾಲ್ಡೊ ಸಾಧನೆಯ ಬಲದಿಂದ ಪೋರ್ಚುಗಲ್ 2–2ರ ಡ್ರಾ ಸಾಧಿಸಿತು. ಹಂಗೇರಿ ವಿರುದ್ಧದ ಪಂದ್ಯದಲ್ಲಿ 2–2ರ ಡ್ರಾ ಸಾಧಿಸಿದ ಜರ್ಮನಿ ಕೂಡ ಅಂತಿಮ 16ರ ಘಟ್ಟ ಪ್ರವೇಶಿಸಿತು.

31ನೇ ನಿಮಿಷದಲ್ಲಿ ಗಳಿಸಿದ ಪೆನಾಲ್ಟಿ ಅವಕಾಶದಲ್ಲಿ ರೊನಾಲ್ಡೊ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಆದರೆ ಮೊದಲಾರ್ಧದ ಇಂಜುರಿ ಅವಧಿಯಲ್ಲಿ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ಕರೀಂ ಬೆನ್ಸೆಮಾ ಫ್ರಾನ್ಸ್‌ಗೆ ಸಮಬಲ ಗಳಿಸಿಕೊಟ್ಟರು. ವಿರಾಮದ ನಂತರದ ಎರಡನೇ ನಿಮಿಷದಲ್ಲಿ

ಗೋಲು ಗಳಿಸಿ ಸಂಭ್ರಮಿಸಿದ ಕ್ರಿಸ್ಟಿಯಾನೊ ರೊನಾಲ್ಡೊ –ಎಎಫ್‌ಪಿ ಚಿತ್ರ

ಅವರು ಮತ್ತೊಂದು ಗೋಲು ಗಳಿಸಿ ತಂಡ ಮುನ್ನಡೆ ಮುನ್ನಡೆ ಸಾಧಿಸುವಂತೆ ಮಾಡಿದರು. 60ನೇ ನಿಮಿಷದಲ್ಲಿ ಪೋರ್ಚುಗಲ್‌ಗೆ ಮತ್ತೊಂದು ಪೆನಾಲ್ಟಿ ಲಭಿಸಿತು. ರೊನಾಲ್ಡೊ ಚೆಂಡನ್ನು ಗುರಿ ಮುಟ್ಟಿಸಿ ಸಮಬಲ ತಂದುಕೊಟ್ಟರು.

ಇದು ಈ ಬಾರಿ ಅವರು ಗಳಿಸಿದ ಐದನೇ ಗೋಲಾಗಿದೆ. ಇದರೊಂದಿಗೆ ಯೂರೊ ಕಪ್‌ನಲ್ಲಿ ಅವರು ಗಳಿಸಿದ ಗೋಲುಗಳ ಸಂಖ್ಯೆ 14ಕ್ಕೇರಿತು. ಇರಾನ್‌ನ ಸ್ಟ್ರೈಕರ್ ಅಲಿ ದಯಿ ಗಳಿಸಿದ ಗರಿಷ್ಠ 109 ಗೋಲುಗಳ ದಾಖಲೆಯನ್ನು ರೊನಾಲ್ಡೊ ತಮ್ಮ 178ನೇ ಪಂದ್ಯದಲ್ಲಿ ಸಮಗಟ್ಟಿದರು.

ಹಂಗೇರಿಗೆ ಆರಂಭಿಕ ಮುನ್ನಡೆ

ಜರ್ಮನಿ ಎದುರಿನ ಪಂದ್ಯದಲ್ಲಿ ಆ್ಯಡಂ ಜಲಾಯ್ 11ನೇ ನಿಮಿಷದಲ್ಲಿ ಚೆಂಡನ್ನು ಗುರಿ ತಲುಪಿಸಿ ಹಂಗೇರಿಗೆ ಮುನ್ನಡೆ ಗಳಿಸಿಕೊಟ್ಟರು. ಸಮಬಲ ಸಾಧಿಸಲು ಜರ್ಮನಿ 66ನೇ ನಿಮಿಷದ ವರೆಗೆ ಕಾಯಬೇಕಾಯಿತು. ಕಾವಿ ಹವೆಜ್ ಗೋಲು ಗಳಿಸಿ ಸಂಭ್ರಮಿಸಿದರು. ಆದರೆ ಎರಡೇ ನಿಮಿಷಗಳಲ್ಲಿ ಆ್ಯಂಡ್ರೆಸ್ ಶಾಟೆರ್ ಗಳಿಸಿದ ಗೋಲಿನ ಮೂಲಕ ಹಂಗೇರಿ ಮತ್ತೆ ಮುನ್ನಡೆ ಸಾಧಿಸಿತು. ಲಿಯಾನ್ ಗೊರೆಸ್ಕಾ 84ನೇ ನಿಮಿಷದಲ್ಲಿ ಗಳಿಸಿದ ಗೋಲಿನೊಂದಿಗೆ ಜರ್ಮನಿ ನಿಟ್ಟುಸಿರು ಬಿಟ್ಟಿತು.

ಶುಕ್ರವಾರ ವಿಶ್ರಾಂತಿ ದಿನವಾಗಿದ್ದು ಶನಿವಾರ ಮೊದಲ ಪ್ರೀ ಕ್ವಾರ್ಟ್‌ ಫೈನಲ್‌ನಲ್ಲಿ ವೇಲ್ಸ್ ಮತ್ತು ಡೆನ್ಮಾರ್ಕ್ ತಂಡಗಳು ಸೆಣಸಲಿವೆ. ಮರುದಿನ ಇಟಲಿ ಮತ್ತು ಆಸ್ಟ್ರಿಯಾ, ನೆದರ್ಲೆಂಡ್ಸ್ ಮತ್ತು ಜೆಕ್ ಗಣರಾಜ್ಯ ನಡುವೆ ಪಂದ್ಯ ನಡೆಯಲಿದೆ. ಬೆಲ್ಜಿಯಂ ಮತ್ತು ಪೋರ್ಚುಗಲ್ ಪಂದ್ಯ 28ರಂದು ನಡೆಯಲಿದ್ದು ಅದೇ ದಿನ ಕ್ರೊವೇಷ್ಯಾ ಮತ್ತು ಸ್ಪೇನ್ ಮುಖಾಮುಖಿಯಾಗಲಿವೆ. ಫ್ರಾನ್ಸ್–ಸ್ವಿಟ್ಜರ್ಲೆಂಡ್, ಇಂಗ್ಲೆಂಡ್–ಜರ್ಮನಿ ಪಂದ್ಯ 29ರಂದು, ಸ್ವೀಡನ್–ಉಕ್ರೇನ್ ಪಂದ್ಯ 30ರಂದು ನಡೆಯಲಿದೆ.

ಸುದ್ದಿ 2 ನಿಮಿಷ

ವಿಕಿಂಗ್ ಟೆನಿಸ್: ಸಾನಿಯಾ–ಬೆಥನಿ ಜೋಡಿಗೆ ಸೋಲು

ಈಸ್ಟ್‌ಬೋರ್ನ್, ಇಂಗ್ಲೆಂಡ್ (ಎಎಫ್‌ಪಿ): ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ಬೆಥನಿ ಮಟೆಕ್ ಸ್ಯಾಂಡ್ಸ್ ಜೋಡಿ ಇಲ್ಲಿ ನಡೆಯುತ್ತಿರುವ ವಿಕಿಂಗ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ. ಶ್ರೇಯಾಂಕ ರಹಿತ ಸಾನಿಯಾ ಮತ್ತು ಬೆಥಾನಿ ಅವರನ್ನು ಕ್ರಿಸ್ಟಿನಾ ಮೆಕಾಲೆ ಮತ್ತು ಸಬ್ರಿನಾ ಸಾಂತಮರಿಯಾ 6–3, 6–4ರಲ್ಲಿ ಮಣಿಸಿದರು. ಡಬಲ್ಸ್‌ನಲ್ಲಿ ಆರು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದಿರುವ ಸಾನಿಯಾ ಈ ಬಾರಿ ವಿಂಬಲ್ಡನ್ ಟೂರ್ನಿಯಲ್ಲೂ ಬೆಥಾನಿ ಜೊತೆ ಆಡಲಿದ್ದಾರೆ. **ಮೊಂಫಿಲ್ಸ್‌ಗೆ ಸೋಲು:** ಮ್ಯಾಕ್ಸ್ ಪರ್ಸೆಲ್ ಮತ್ತೊಮ್ಮೆ ಮಿಂಚಿದರು. ಅಗ್ರ ಶ್ರೇಯಾಂಕದ ಗಯೆಲ್ ಮೊಂಫಿಲ್ಸ್ ಅವರನ್ನು ಮಣಿಸಿದ ಮ್ಯಾಕ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. 28ನೇ ಶ್ರೇಯಾಂಕದ ಆಸ್ಟ್ರೇಲಿಯಾ ಆಟ ಗಾರ 6-4, 5-7, 6-4ರಲ್ಲಿ ಜಯ ಗಳಿಸಿದರು. ಕಜಕಸ್ತಾನದ ಎಲಿನಾ ರೈಬಕಿ ನಾ ಎರಡನೇ ಶ್ರೇಯಾಂಕಿತೆ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಎದುರು 6-4, 7-6 (3)ರಲ್ಲಿ ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಎಸ್ಟೋನಿಯಾದ ಅನೆಟ್ ಕೊಂಟವೇಟ್ ಮೂರನೇ ಶ್ರೇಯಾಂಕದ ಕೆನಡಾ ಆಟಗಾರ್ತಿ ಬಿಯಾಂಕ ಆ್ಯಂಡ್ರುಸ್ಕು ಅವರನ್ನು 6-3, 6-3ರಲ್ಲಿ ಮಣಿಸಿದರು. ರಷ್ಯಾದ ದಾರಿಯಾ ಕಸಕಿನಾ ನಾಲ್ಕನೇ ಶ್ರೇಯಾಂಕದ ಇಗಾ ಸ್ವಟೆಕ್ ವಿರುದ್ಧ 4-6, 6-0, 6-1ರಲ್ಲಿ ಜಯ ಗಳಿಸಿದರು. ಬೆಲಾರಸ್‌ನ ಅಗ್ರ ಶ್ರೇಯಾಂಕದ ಅರಿನಾ ಸಬಲೆಂಕಾ 6-4, 6-1ರಲ್ಲಿ ಅಮೆರಿಕದ ಅಲಿಸಾನ್ ರಿಸ್ಕೆ ಅವರನ್ನು ಸೋಲಿಸಿದರು.

ಶೂಟಿಂಗ್: ಸೌರಭ್‌ಗೆ ಕಂಚು

ಒಸಿಜೆಕ್,ಕ್ರೊವೇಷ್ಯಾ (ಪಿಟಿಐ): ಭಾರತದ ಸೌರಭ್ ಚೌಧರಿ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಗುರುವಾರ ಕಂಚಿನ ಪದಕ ಗೆದ್ದುಕೊಂಡರು. ಪುರುಷರ 10 ಮೀಟರ್ಸ್ ಏರ್ ಪಿಸ್ತೂಲು ವಿಭಾಗದ ಅರ್ಹತಾ ಸುತ್ತಿನಲ್ಲಿ 581 ಸ್ಕೋರು ಗಳಿಸಿದ್ದ 19 ವರ್ಷದ ಸೌರಭ್ ಫೈನಲ್‌ನಲ್ಲಿ 220 ಸ್ಕೋರು ಕಲೆ ಹಾಕಿದರು. ಇದೇ ವಿಭಾಗದಲ್ಲಿ ಅಭಿಷೇಕ್ ವರ್ಮಾ 179.3 ಸ್ಕೋರು ಗಳಿಸಿ ಐದನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಉಳಿದ ವಿಭಾಗಗಳಲ್ಲಿ ಭಾರತದ ಪ್ರಮುಖ ಶೂಟರ್‌ಗಳು ನಿರಾಸೆ ಅನುಭವಿಸಿದರು. ಮನು ಭಾಕರ್ ಮತ್ತು ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಕ್ರಮವಾಗಿ ಮಹಿಳೆಯರ 10 ಮೀ ಏರ್ ಪಿಸ್ತೂಲು ಮತ್ತು ಪುರುಷರ 10 ಮೀಟರ್ಸ್ ರೈಫಲ್ಸ್ ವಿಭಾಗದಲ್ಲಿ ಏಳನೇ ಸ್ಥಾನ ಗಳಿಸಿದರು.

ದೀಪಕ್ ಕುಮಾರ್ ಮತ್ತು ದಿವ್ಯಾಂಶ್ ಸಿಂಗ್ ಪನ್ವರ್ ಕ್ರಮವಾಗಿ 14 ಮತ್ತು 25ನೇ ಸ್ಥಾನದೊಂದಿಗೆ ಅರ್ಹತಾ ಸುತ್ತಿನಿಂದ ಹೊರಬಿದ್ದರು. ಮಹಿಳೆಯರ 10 ಮೀಟರ್ಸ್ ಏರ್ ರೈಫಲ್ ವಿಭಾಗದಲ್ಲಿ ಅಂಜುಮ್ ಮೋದ್ಗಿಲ್, ಅಪೂರ್ವಿ ಚಾಂಡೇಲಾ ಮತ್ತು ಇಳವೆನ್ನಿಲ ವಾಳರಿವನ್ ಫೈನಲ್ ಪ್ರವೇಶಿಸುವಲ್ಲಿ ಸಫಲರಾಗಲಿಲ್ಲ.

ಅಪೂರ್ವಿ 624.2 ಸ್ಕೋರುಗಳೊಂದಿಗೆ 24ನೇ ಸ್ಥಾನ ಗಳಿಸಿದರೆ ಅಂಜುಮ್ 42ನೇ ಸ್ಥಾನಕ್ಕೆ ಕುಸಿದರು. ಅವರು ಗಳಿಸಿದ ಸ್ಕೋರು 622.3. ಇಳವೆನ್ನಿಲ 55ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಟಿ20 ಕ್ರಿಕೆಟ್ ಸರಣಿ: ಇಂಗ್ಲೆಂಡ್ ಶುಭಾರಂಭ

ಕಾರ್ಡಿಫ್, ಇಂಗ್ಲೆಂಡ್ (ಎಎಫ್‌ಪಿ): ಇಂಗ್ಲೆಂಡ್ ಬೌಲರ್‌ಗಳ ಕರಾರುವಾಕ್ ದಾಳಿಗೆ ಬೆದರಿದ ಶ್ರೀಲಂಕಾ ಕಡಿಮೆ ಮೊತ್ತಕ್ಕೆ ಪತನ ಕಂಡಿತು. ಜೋಸ್ ಬಟ್ಲರ್ ಭರ್ಜರಿ ಬ್ಯಾಟಿಂಗ್ ಮೂಲಕ ಮಿಂಚಿದರು. ಇದರಿಂದಾಗಿ ಇಂಗ್ಲೆಂಡ್ ಎಂಟು ವಿಕೆಟ್‌ಗಳಿಂದ ಜಯ ಗಳಿಸಿ ಟಿ20 ಸರಣಿಯಲ್ಲಿ ಶುಭಾರಂಭ ಮಾಡಿತು.

ಸೋಫಿಯಾ ಗಾರ್ಡನ್‌ನಲ್ಲಿ ಬುಧವಾರ ನಡೆದ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಎಂಟು ವಿಕೆಟ್‌ಗಳಿಂದ ಜಯ ಗಳಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಏಳು ವಿಕೆಟ್‌ಗಳಿಗೆ 129 ರನ್ ಗಳಿಸಿತ್ತು. ಆವಿಷ್ಕಾ ಫೆರ್ನಾಂಡೊ ಶೂನ್ಯಕ್ಕೆ ಔಟಾದರೂ ಧನುಷ್ಕಾ ಗುಣತಿಲಕ ಮತ್ತು ನಾಯಕ ಕುಶಾಲ್ ಪೆರೇರ 28 ರನ್‌ಗಳ ಜೊತೆಯಾಟವಾಡಿದರು. ಧನುಷ್ಕಾ ಔಟಾದ ನಂತರ ವಿಕೆಟ್‌ಗಳು ಉರುಳಿದವು. ದಾಸುನ್ ಶನಕ ಏಕಾಂಗಿ ಹೋರಾಟ ನಡೆಸಿ 44 ಎಸೆತಗಳಲ್ಲಿ 50 ರನ್ ಗಳಿಸಿದ್ದರಿಂದ ಪ್ರವಾಸಿ ತಂಡಕ್ಕೆ ಗೌರವಾರ್ಹ ಮೊತ್ತ ಗಳಿಸಲು ಸಾಧ್ಯವಾಯಿತು. ಅವರು ಮೂರು ಬೌಂಡರಿ ಮತ್ತು ಎರಡು ಸಿಕ್ಸರ್ ಸಿಡಿಸಿದರು.

ಲೆಗ್ ಸ್ಪಿನ್ನರ್ ಆದಿಲ್ ರಶೀದ್ ಮತ್ತು ವೇಗಿ ಸ್ಯಾಮ್ ಕರನ್ ದಾಳಿಗೆ ನಲುಗಿದ ಶ್ರೀಲಂಕಾ ರನ್ ಗಳಿಸಲು ಪರದಾಡಿತು. 2015ರ ನಂತರ ಮೊದಲ ಬಾರಿ ಟಿ20 ಪಂದ್ಯ ಆಡಿದ ಕ್ರಿಸ್ ವೋಕ್ಸ್ ವಿಕೆಟ್ ಗಳಿಸಲಿಲ್ಲವಾದರೂ ಮೂರು ಓವರ್‌ಗಳಲ್ಲಿ 14 ರನ್ ಮಾತ್ರ ನೀಡಿ ಎದುರಾಳಿಗಳನ್ನು ನಿಯಂತ್ರಿಸಿದರು.

ಜೋಸ್ ಬಟ್ಲರ್ –ರಾಯಿಟರ್ಸ್ ಚಿತ್ರ

ವಿಶ್ವ ಟಿ20 ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿರುವ ಇಂಗ್ಲೆಂಡ್‌ಗೆ 130 ರನ್‌ಗಳ ಗೆಲುವಿನ ಗುರಿ ಬೆನ್ನತ್ತಲು ಕಷ್ಟವಾಗಲಿಲ್ಲ. ಇನ್ನೂ 17 ಎಸೆತಗಳು ಇರುವಾಗಲೇ ತಂಡ ಗೆಲುವಿನ ದಡ ಸೇರಿತು. ಎಂಟು ಬೌಂಡರಿ ಮತ್ತು ಒಂದು ಸಿಕ್ಸರ್ ಗಳಿಸಿದ ಬಟ್ಲರ್ 55 ಎಸೆತಗಳಲ್ಲಿ 68 ರನ್ ಗಳಿಸಿದರು. ಮೊದಲ ವಿಕೆಟ್‌ಗೆ ಜೇಸನ್ ರಾಯ್ ಜೊತೆ ಅವರು 80 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 129 (ಧನುಷ್ಕಾ ಗುಣತಿಲಕ 19, ಕುಶಲ್ ಪೆರೇರ 30, ದಾಸುನ್ ಶನಕ 50; ಸ್ಯಾಮ್ ಕರನ್ 25ಕ್ಕೆ2, ಮಾರ್ಕ್ ವುಡ್ 33ಕ್ಕೆ1, ಕ್ರಿಸ್ ಜೋರ್ಡಾನ್ 29ಕ್ಕೆ1, ಲಿಯಾಮ್ ಲಿವಿಂಗ್‌ಸ್ಟನ್ 9ಕ್ಕೆ1, ಆದಿಲ್ ರಶೀದ್ 17ಕ್ಕೆ2); ಇಂಗ್ಲೆಂಡ್: 17.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 130 (ಜೇಸನ್ ರಾಯ್ 36, ಜೋಸ್ ಬಟ್ಲರ್ ಔಟಾಗದೆ 68, ಜಾನಿ ಬೆಸ್ಟೊ ಔಟಾಗದೆ 13; ದುಶ್ಮಂತ ಚಮೀರ 24ಕ್ಕೆ1, ಇಸುರು ಉಡಾನ 30ಕ್ಕೆ1). ಫಲಿತಾಂಶ: ಇಂಗ್ಲೆಂಡ್‌ಗೆ 8 ವಿಕೆಟ್‌ಗಳ ಜಯ; ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ.

‘ಕೈಗೆಟಕುವಂತೆ ಇರಲಿ ತೈಲ ಬೆಲೆ’

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಕೈಗೆಟಕುವಂತೆ ಇರಬೇಕು ಎಂದು ಭಾರತವು ಪೆಟ್ರೋಲಿಯಂ ಉತ್ಪನ್ನಗಳ ರಫ್ತುದಾರ ದೇಶಗಳ ಒಕ್ಕೂಟವಾದ ‘ಒಪೆಕ್’ಗೆ ಒತ್ತಾಯ ಮಾಡಿದೆ. ಅಲ್ಲದೆ, ಒಪೆಕ್ ಸದಸ್ಯ ದೇಶಗಳು ಕಚ್ಚಾ ತೈಲ ಉತ್ಪಾದನೆಯಲ್ಲಿ ಮಾಡಿರುವ ಕಡಿತವನ್ನು ತೆರವು ಮಾಡಬೇಕು ಎಂದೂ ಹೇಳಿದೆ.

ಕೇಂದ್ರ ಇಂಧನ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಒಪೆಕ್ ಮಹಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಸನುಸಿ ಬರ್ಕಿಂಡೊ ಅವರ ಜೊತೆ ವರ್ಚುವಲ್ ಮಾಧ್ಯಮದ ಮೂಲಕ ಗುರುವಾರ ಮಾತುಕತೆ ನಡೆಸಿದರು. ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 75 ಡಾಲರ್‌ಗಿಂತ ಜಾಸ್ತಿ ಆಗಿರುವುದರ ಬಗ್ಗೆ ಪ್ರಧಾನ್ ಅವರು ಕಳವಳ ವ್ಯಕ್ತಪಡಿಸಿದರು.

ಧರ್ಮೇಂದ್ರ ಪ್ರಧಾನ್

ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ತೈಲ ಬೆಲೆಯು ಕೈಗೆಟಕುವ ಮಟ್ಟದಲ್ಲಿ ಇರಬೇಕಾದುದರ ಮಹತ್ವವನ್ನು ಪ್ರಧಾನ್ ಅವರು ಹೇಳಿದ್ದಾರೆ’ ಎಂದು ಸಭೆಯ ನಂತರ ಒಪೆಕ್ ಹೇಳಿಕೆ ನೀಡಿದೆ. ‘ಬೆಲೆ ಹೆಚ್ಚಾಗುತ್ತಿರುವುದರ ಬಗ್ಗೆ ಪ್ರಧಾನ್ ಅವರು ಕಳವಳ ವ್ಯಕ್ತಪಡಿಸಿದ್ದಾರೆ. ತೈಲ ಬೆಲೆ ಹೆಚ್ಚಾಗಿರುವುದು ದೇಶದಲ್ಲಿ ಹಣದುಬ್ಬರ ಜಾಸ್ತಿ ಆಗುವಂತೆ ಮಾಡಿದೆ ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ’ ಎಂದು ಇಂಧನ ಸಚಿವಾಲಯದ ಹೇಳಿಕೆ ವಿವರಿಸಿದೆ.

ತೈಲ ಬೆಲೆ ಏರಿಕೆ: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಗುರುವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕ್ರಮವಾಗಿ 26 ಪೈಸೆ ಹಾಗೂ 27 ಪೈಸೆಯಷ್ಟು ಹೆಚ್ಚಿಸಿದ್ದು, ಪೆಟ್ರೋಲ್ ಬೆಲೆಯು ಚೆನ್ನೈನಲ್ಲಿ ₹ 99ರ ಗಡಿ ಸಮೀಪಿಸಿದೆ. ಈಗ ಅಲ್ಲಿ ಪೆಟ್ರೋಲ್ ಬೆಲೆ ₹ 98.88 ಆಗಿದೆ.

ದೆಹಲಿಯಲ್ಲಿ ಪೆಟ್ರೋಲ್ ಬೆಲೆಯು ₹ 97.76, ಡೀಸೆಲ್ ಬೆಲೆಯು ₹ 88.30 ಆಗಿದೆ. ಮೇ 4ರ ನಂತರ ಪೆಟ್ರೋಲ್ ಬೆಲೆಯು ₹ 7.36ರಷ್ಟು, ಡೀಸೆಲ್ ಬೆಲೆಯು ₹ 7.77ರಷ್ಟು ಜಾಸ್ತಿ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,686
ಇಂದಿನ ಅಂತ್ಯ	15,790
▲	103
ದಿನದ ಗರಿಷ್ಠ	15,821

ವಿನಿಮಯ ದರ

$ ಡಾಲರ್	74.18
£ ಪೌಂಡ್	103.57
€ ಯುರೊ	88.58
¥ ಯೆನ್ (100ಕ್ಕೆ)	66.93

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1410 (1430)
ಸೋಯಾ (ರಿಫೈನ್ಡ್)	₹1295 (1305)
ಸೂರ್ಯಕಾಂತ (ರಿಫೈನ್ಡ್)	₹1340 (1310)
ಪಾಮೋಲಿನ್	₹1155 (1165)

ಇಂಧನ ಕ್ಷೇತ್ರದಲ್ಲಿ ರಿಲಯನ್ಸ್‌ನಿಂದ ₹ 75 ಸಾವಿರ ಕೋಟಿ ಹೂಡಿಕೆ

ಮುಂಬೈ (ಪಿಟಿಐ): ಹೊಸ ಇಂಧನ ಉದ್ದಿಮೆಗಳಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಒಟ್ಟು ₹ 75 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಗುರುವಾರ ಪ್ರಕಟಿಸಿದೆ.

ಕಂಪನಿಯ ಈ ಹೂಡಿಕೆಯ ಮೂಲಕ ಸೌರ ವಿದ್ಯುತ್ ಉತ್ಪಾದನೆಯಲ್ಲಿ ಬಳಸುವ ಸಾಧನಗಳ ತಯಾರಿಕಾ ಘಟಕ ಆರಂಭಿಸಲಿದೆ, ಬ್ಯಾಟರಿ ಕಾರ್ಖಾನೆ ಶುರು ಮಾಡಲಿದೆ ಎಂದು ಕಂಪನಿಯ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರಿಗೆ ತಿಳಿಸಿದರು.

2030ರೊಳಗೆ ಕಂಪನಿಯು ಒಟ್ಟು 100 ಗಿಗಾವಾಟ್ ಸೌರ ವಿದ್ಯುತ್ ಉತ್ಪಾದನಾ ಘಟಕವನ್ನು ಆರಂಭಿಸಲಿದೆ.



ಮುಕೇಶ್ ಅಂಬಾನಿ

‘2035ರೊಳಗೆ ರಿಲಯನ್ಸ್ ಶೂನ್ಯ ಪ್ರಮಾಣದಲ್ಲಿ ಇಂಗಾಲ ಹೊರಸೂಸುವ ಕಂಪನಿ ಆಗಲಿದೆ ಎಂದು ಹಿಂದಿನ ವರ್ಷ ನಾನು ಘೋಷಿಸಿದ್ದೆ. ಈ ಗುರಿಯನ್ನು ತಲುಪಲು ಸಿದ್ಧಪಡಿಸಿರುವ ಕಾರ್ಯಯೋಜನೆಯನ್ನು ನಾನು ನಿಮ್ಮ ಮುಂದೆ ಇರಿಸುತ್ತಿದ್ದೇನೆ. ಜಗತ್ತಿನ ಆರ್ಥಿಕ ಬೆಳವಣಿಗೆಗೆ ಮೂರು ಶತಮಾನಗಳಿಂದ ಚಾಲಕ ಶಕ್ತಿಯಾಗಿದ್ದ ಪಳೆಯುಳಿಕೆ ಇಂಧನಗಳ ಬಳಕೆ ಹೆಚ್ಚು ಕಾಲ ಮುಂದುವರಿಯಲಾರದು’ ಎಂದು ಅಂಬಾನಿ ಅವರು ಹೇಳಿದರು.

ವಿದ್ಯುತ್ ಮಾತ್ರವೇ ಅಲ್ಲದೆ, ವಾಹನಗಳಲ್ಲಿ ಇಂಧನವಾಗಿ ಬಳಕೆ ಮಾಡಬಹುದಾದ ಹೈಡ್ರೋಜನ್ ಉತ್ಪಾದನೆಯಲ್ಲಿ ಕೂಡ ತೊಡಗಿಸಿಕೊಳ್ಳುವ ಇರಾದೆ ಕಂಪನಿಗೆ ಇದೆ.

ಕೋವಿಡ್: ಬೆಲೆ ತಗ್ಗಿಸದವರ ವಿರುದ್ಧ ಸಾಕ್ಷ್ಯ ಕಲೆಹಾಕಲು ಸೂಚನೆ

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ಚಿಕಿತ್ಸೆಯಲ್ಲಿ ಬಳಸುವ ಅಗತ್ಯ ವಸ್ತುಗಳ ಬೆಲೆಯನ್ನು ಇಳಿಕೆ ಮಾಡಿರದ ಪೂರೈಕೆದಾರರ ವಿರುದ್ಧ ಸಾಕ್ಷ್ಯ ಕಲೆಹಾಕುವಂತೆ ರಾಷ್ಟ್ರೀಯ ಲಾಭಕೋರತನ ವಿರೋಧಿ ಪ್ರಾಧಿಕಾರವು (ಎನ್‌ಎಎ) ತೆರಿಗೆ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಈಚೆಗೆ ನಡೆದ ಜಿಎಸ್‌ಟಿ ಮಂಡಳಿ ಸಭೆಯು, ಕೋವಿಡ್ ಚಿಕಿತ್ಸೆಯಲ್ಲಿ ಬಳಸುವ ಕೆಲವು ಅಗತ್ಯ ವಸ್ತುಗಳು, ಔಷಧಗಳ ಮೇಲಿನ ತೆರಿಗೆ ಪ್ರಮಾಣವನ್ನು ತಗ್ಗಿಸಿದೆ. ತೆರಿಗೆ ಪ್ರಮಾಣದಲ್ಲಿ ಆಗಿರುವ ಇಳಿಕೆಗೆ ತಕ್ಕಂತೆ ಪೂರೈಕೆದಾರರು ವಸ್ತುಗಳ ಬೆಲೆಯನ್ನು ತಗ್ಗಿಸಬೇಕು ಎಂದು ಎನ್‌ಎಎ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

24-06-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9000-9050
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1440)
ಒಂದು ವಾರದ ಡೆಲಿವರಿ	1415 (1435)
ಸೋಯಾ ಕಚ್ಚಾ	1255 (1260)
ಪಾಮ್ ವಾರದ ಡೆಲಿವರಿ	1153 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,000 (47,100)
ಬೆಳ್ಳಿ ಕೆ.ಜಿ
68,150 (68,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42000
ಹಳತು	42500-52000
ಚಿತ್ರದುರ್ಗ	
ಆಪಿ	42639-43069
ಬೆಟ್ಟೆ	33819-34299
ರಾಶಿ	42129-42579
ಕೆಂಪುಗೋಟು	27709-28110
ಕಾರ್ಕಳ	
ಹೊಸತು	36000-42100
ಹಳತು	46000-52000
ಕೊಪ್ಪ	
ಬೆಟ್ಟೆ	37118-44201
ಗೊರಬಲು	26308-32599
ರಾಶಿ	32118-43209
ಸರಕು	43000-70195
ಕುಮಟಾ	
ಚಿಪ್ಪು	23299-31669
ಕೋಕ	14509-28299
ಹಳೆಚಾಲಿ	41269-42300
ಹೊಸಚಾಲಿ	35369-38319
ಪುತ್ತೂರು	
ಕೋಕ	9500-25000
ಹೊಸತು	29500-42100
ಸಾಗರ	
ಬಿಳಿಗೋಟು	22099-32499
ಚಾಲಿ	28599-36389
ಕೋಕ	20099-32399
ಕೆಂಪುಗೋಟು	24129-34699
ರಾಶಿ	36099-42909
ಸಿಪ್ಪೆಗೋಟು	9119-21589
ಶಿವಮೊಗ್ಗ	
ಬೆಟ್ಟೆ	40000-44899
ಗೊರಬಲು	18000-33899
ರಾಶಿ	37809-43100
ಸರಕು	48000-76896
ಸಿದ್ದಾಪುರ	
ಬಿಳಿಗೋಟು	24219-32219
ಚಾಲಿ	36089-38099
ಕೋಕ	20619-31319
ಕೆಂಪುಗೋಟು	28869-32089
ರಾಶಿ	41099-42189
ತಟ್ಟಿಬೆಟ್ಟೆ	33949-35309
ಶಿರಸಿ	
ಬೆಟ್ಟೆ	31223-40699
ಬಿಳಿಗೋಟು	16099-33472
ಚಾಲಿ	23699-38599
ರಾಶಿ	38099-43099
ಯಲ್ಲಾಪುರ	
ಬಿಳಿಗೋಟು	26899-33699
ಚಾಲಿ	33969-38950
ಕೋಕ	21100-31699
ಕೆಂಪುಗೋಟು	28899-33919
ರಾಶಿ	39539-45679
ತಟ್ಟಿಬೆಟ್ಟೆ	34299-39009
ಸುಳ್ಯ	
ಕೋಕ	10000-25000
ಹೊಸತು	30000-42000
ಹಳತು	42000-52000
ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700- 800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150 -1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	380
ರೇಷ್ಮೆಗೂಡು	
ರಾಮನಗರ	
ಮಿಶ್ರ ತಳಿ (ಸಿ.ಬಿ)	270-396
ದ್ವಿತಳಿ (ಬಿ.ವಿ)	275-480
ಕೊಬ್ಬರಿ	
ಅರಸೀಕೆರೆ	15500-16200

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11,000	10,850	10,775	153.15
ಎಸಿ	4,760	4,300	4,125	
ಆರ್‌ಪಿ	5,400	5,350	5,375	ಲಂಡನ್
ಆರ್‌ಸಿ	3,125	3,150	3,175	1593

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ